ಗೊರಗುಂಟೆಪಾಳ್ಯದಲ್ಲಿ ಪ್ರಯಾಣಿಕರ ಯಾತನೆಗೆ ಸ್ಪಂದಿಸಿದ ಪಿಎಸ್‌ಐ

'ಮೊಬೈಲ್ ಶೌಚಾಲಯ' ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೊರಗುಂಟೆಪಾಳ್ಯದಲ್ಲಿ ಜನರು ಅನುಭವಿಸುತ್ತಿರುವ ಶೌಚಾಲಯ ಸಮಸ್ಯೆ ಬಗೆಹರಿಸುವಂತೆ 100 ದಿನ ನಿರಂತರವಾಗಿ ಅಭಿಯಾನ ನಡೆಸಿದರೂ ಬಿಬಿಎಂಪಿ ಅಧಿಕಾರಿಗಳು ಸ್ಪಂದಿಸದಿದ್ದರಿಂದ, ಪಿಎಸ್‌ಐ ಶಾಂತಪ್ಪ ಜಡೆಮ್ಮನವರ್ ಹಾಗೂ ತಂಡದವರು ತಮ್ಮ ಖರ್ಚಿನಲ್ಲೇ 'ಮೊಬೈಲ್ ಶೌಚಾಲಯ' ನಿರ್ಮಿಸಿ ಬಳಕೆಗೆ ಮುಕ್ತಗೊಳಿಸಿದ್ದಾರೆ.

ಗೊರಗುಂಟೆಪಾಳ್ಯದ ಬಸ್ ತಂಗುದಾಣಕ್ಕೆ ಹೊಂದಿಕೊಂಡ ಜಾಗದಲ್ಲಿ ಮೊಬೈಲ್ ಶೌಚಾಲಯದ ವಾಹನ ನಿಲ್ಲಿಸಲಾಗಿದ್ದು, ಇದಕ್ಕೆ ಬೇಕಾದ ನೀರಿನ ವ್ಯವಸ್ಥೆಯೂ ವಾಹನದಲ್ಲಿದೆ.

ಬುಧವಾರ ಬೆಳಿಗ್ಗೆ ನಡೆದ ಸರಳ ಕಾರ್ಯಕ್ರಮದಲ್ಲಿ ತೃತೀಯ ಲಿಂಗಿಯೊಬ್ಬರು ಶೌಚಾಲಯವನ್ನು ಉದ್ಘಾಟಿಸಿದರು. ತಮ್ಮನ್ನು ದೂರವಿಡಲು ಇಚ್ಛಿಸುವವರ ನಡುವೆ ಇಂಥ ಕೆಲಸಕ್ಕೆ ಆಹ್ವಾನಿಸಿದ್ದಕ್ಕೆ ತೃತೀಯ ಲಿಂಗಿ ಭಾವುಕರಾದರು.

ವಾಹನದಲ್ಲಿ 10 ಶೌಚಗೃಹಗಳಿದ್ದು, ಗೊರಗುಂಟೆಪಾಳ್ಯ ತಂಗುದಾಣಕ್ಕೆ ಬಂದು ಹೋಗುವ ಪ್ರಯಾಣಿಕರಿಗೆ ಇದರಿಂದ ಅನುಕೂಲ ಆಗಲಿದೆ. ಶೌಚಾಲಯ ತುಂಬಿದ ನಂತರ, ಅದನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ವ್ಯವಸ್ಥೆಯಿದೆ. ಶೌಚಾಲಯ ನಿರ್ವಹಣೆ ಜವಾಬ್ದಾರಿಯನ್ನು ಕೆಲ ಸ್ವಯಂಸೇವಕರು ವಹಿಸಿಕೊಂಡಿದ್ದಾರೆ. ಪಿಎಸ್‌ಐ ಕೆಲಸಕ್ಕೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ತುಮಕೂರು, ಚಿತ್ರದುರ್ಗ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಸೇರಿ ಉತ್ತರ ಕರ್ನಾಟಕದ ಜಿಲ್ಲೆಗಳು ಹಾಗೂ ಉತ್ತರ ಭಾರತದ ರಾಜ್ಯಗಳಿಂದ ಬೆಂಗಳೂರಿಗೆ ಬರುವ ವಾಹನಗಳು ಗೊರಗುಂಟೆಪಾಳ್ಯ ಮಾರ್ಗವಾಗಿ ಹಾದು ಹೋಗುತ್ತವೆ. ಪ್ರಯಾಣಿಕರು ಇಳಿಯುವ ಹಾಗೂ ಹತ್ತುವ ಪ್ರಮುಖ ಸ್ಥಳ ಇದಾಗಿದೆ. ಇಂಥ ಸ್ಥಳದಲ್ಲಿ ವ್ಯವಸ್ಥಿತ ಶೌಚಾಲಯ ಇಲ್ಲದಿದ್ದರಿಂದ, ಮಲ–ಮೂತ್ರ ವಿಸರ್ಜನೆಗಾಗಿ ಜನರು ಯಾತನೆ ಅನುಭವಿಸುತ್ತಿದ್ದರು' ಎಂದು ಪಿಎಸ್‌ಐ ಶಾಂತಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಮಹಿಳೆಯರು ಹಾಗೂ ವೃದ್ಧರು, ಮಲ ಹಾಗೂ ಮೂತ್ರ ವಿಸರ್ಜನೆಗಾಗಿ ಕಿ.ಮೀ.ಗಟ್ಟಲೇ ಹೋಗಬೇಕಾಗಿತ್ತು. ಕೆಲ ಪುರುಷರು, ರಸ್ತೆ ಬದಿಗಳಲ್ಲೇ ಮೂತ್ರ ವಿಸರ್ಜನೆ ಮಾಡಿ ಪರಿಸರವನ್ನು ಕಲುಷಿತಗೊಳಿಸುತ್ತಿದ್ದರು. ಇದರಿಂದಾಗಿ ತಂಗುದಾಣದಲ್ಲಿ ದುರ್ನಾತ ಬರುತ್ತಿತ್ತು. ಸಾರ್ವಜನಿಕರು ಮೂಗು ಮುಚ್ಚಿಕೊಂಡು ನಿಲ್ಲುವ ಸ್ಥಿತಿಯೂ ಬಂದಿತ್ತು' ಎಂದೂ ಹೇಳಿದರು.

'ಗೊರಗುಂಟೆಪಾಳ್ಯ ತಂಗುದಾಣ ಬಳಿ ಶೌಚಾಲಯ ನಿರ್ಮಿಸಬೇಕೆಂದು ಒತ್ತಾಯಿಸಿ ಸಾಮಾಜಿಕ ಮಾಧ್ಯಮಗಳ ಮೂಲಕ ಅಭಿಯಾನ ಆರಂಭಿಸಲಾಗಿತ್ತು. 'ಸ್ವಚ್ಛತೆಯೇ ಸ್ವರಾಜ್' ಎನ್ನುವ ಗಾಂಧೀಜಿ ತತ್ವ ಹಾಗೂ 'ಸ್ವಚ್ಛ ಭಾರತ' ಧ್ಯೇಯದಡಿ 100 ದಿನ ಅಭಿಯಾನ ನಡೆಸಿ ಜಾಗ ಸೂಚಿಸಿದರೂ ಬಿಬಿಎಂಪಿ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಸ್ಪಂದಿಸಲಿಲ್ಲ. ಹೀಗಾಗಿ, ಮೊಬೈಲ್ ಶೌಚಾಲಯ ನಿರ್ಮಿಸಿ ತಂದಿಟ್ಟಿದ್ದೇವೆ' ಎಂದೂ ತಿಳಿಸಿದರು.

ಗೊರಗುಂಟೆಪಾಳ್ಯ ಬಸ್ ತಂಗುದಾಣ ಬಳಿ ಇರಿಸಲಾಗಿರುವ ಮೊಬೈಲ್ ಶೌಚಾಲಯದ ಎದುರು ಪಿಎಸ್‌ಐ ಶಾಂತಪ್ಪ ಜಡೆಮ್ಮನವರ್ – ಪ್ರಜಾವಾಣಿ ಚಿತ್ರ

'2 ಶೌಚಗೃಹ ತೃತೀಯ ಲಿಂಗಿಗಳಿಗೆ'

'ಗೊರಗುಂಟೆಪಾಳ್ಯ ವೃತ್ತ ಹಾಗೂ ಇತರೆಡೆ ತೃತೀಯ ಲಿಂಗಿಗಳು ಹೆಚ್ಚಾಗಿ ಓಡಾಡುತ್ತಾರೆ. ಅವರು ಸಹ ಶೌಚಾಲಯ ಸಮಸ್ಯೆ ಎದುರಿಸುತ್ತಿದ್ದಾರೆ. ಹೀಗಾಗಿ, 10 ಶೌಚಗೃಹಗಳ ಪೈಕಿ ಎರಡು ಶೌಚಗೃಹಗಳನ್ನು ತೃತೀಯ ಲಿಂಗಿಗಳಿಗೆ ಮೀಸಲಿಡಲಾಗಿದೆ' ಎಂದು ಪಿಎಸ್‌ಐ ಶಾಂತಪ್ಪ ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ ವ್ಯಾಪ್ತಿಯ ಸರ್ಕಾರಿ ಕಲಾ ಕಾಲೇಜು

ಸ್ನಾತಕೋತ್ತರ ಪರೀಕ್ಷೆ: ಸಾಮೂಹಿಕ ನಕಲು

• ಆದಿತ್ಯ ಕೆ.ಎ.



ಬೆಂಗಳೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ನಕಲು ಚೀಟಿ ಪರೀಶಿಲಿಸಿದ ಜಾಗ್ರತದಳದ ಸಿಬ್ಬಂದಿ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯ ವ್ಯಾಪ್ತಿಯ ಸರ್ಕಾರಿ ಕಲಾ ಕಾಲೇಜಿನಲ್ಲಿ (ಅಂಬೇಡ್ಕರ್ ರಸ್ತೆ) ಬುಧವಾರ ನಡೆದ ಸ್ನಾತಕೋತ್ತರ ಪರೀಕ್ಷೆಯಲ್ಲಿ ಸಾಮೂಹಿಕ ನಕಲು ನಡೆದಿರುವುದು ಬೆಳಕಿಗೆ ಬಂದಿದೆ.

ಅರ್ಥಶಾಸ್ತ್ರ (ಅಡ್ವಾನ್ಸ್ಡ್ ಮ್ಯಾಕ್ರೋ ಎಕನಾಮಿಕ್ಸ್ 1), ರಾಜ್ಯಶಾಸ್ತ್ರ ಹಾಗೂ ಸಮಾಜಶಾಸ್ತ್ರ ವಿಭಾಗದ ಪ್ರಥಮ ಸೆಮಿಸ್ಟರ್ ಪರೀಕ್ಷೆಗಳಲ್ಲಿ ನಕಲು ನಡೆದಿದೆ.

ಜೆರಾಕ್ಸ್ ಪ್ರತಿ, ನೋಟ್‌ಬುಕ್ ಹಾಳೆಗಳನ್ನೇ ಪರೀಕ್ಷಾ ಕೊಠಡಿಗೆ ಕೊಂಡೊಯ್ದು ಉತ್ತರ ಬರೆಯುತ್ತಿದ್ದ ವಿದ್ಯಾರ್ಥಿಗಳು, ಪರೀಕ್ಷಾ ಜಾಗೃತ ದಳದ (ಸ್ಕ್ವಾಡ್) ಸಿಬ್ಬಂದಿಗೆ ಸಿಕ್ಕಿಬಿದ್ದರೂ ಅಕ್ರಮ ಎಸಗಿದ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಂಡಿಲ್ಲ. ಇದು ಚರ್ಚೆಗೆ ಕಾರಣವಾಗಿದೆ.

ಪ್ರಜಾವಾಣಿ ವಿಶೇಷ

ವಿದ್ಯಾರ್ಥಿಯೊಬ್ಬ 49 ಚೀಟಿಗಳನ್ನು ತಂದು ನಕಲು ಮಾಡುತ್ತಿದ್ದ. ಕೊಠಡಿಯಲ್ಲಿ ಮೊಬೈಲ್ ಸಹ ಪತ್ತೆಯಾಗಿದೆ. ವಿಜಯ ಕಾಲೇಜಿನ ಕೃಷ್ಣಮೂರ್ತಿ ಹಾಗೂ ಮೋಹನ್ ಅವರು ದಿಢೀರ್ ಪರಿಶೀಲನೆಗೆ ತೆರಳಿದಾಗ ಈ ಅಕ್ರಮಗಳು ನಡೆದಿರುವುದು ಪತ್ತೆಯಾಗಿವೆ.

ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಳ್ಳದಂತೆ ಕಾಲೇಜಿನ ಪ್ರಾಧ್ಯಾಪಕರೇ ಮನವಿ ಮಾಡುತ್ತಿರುವ ವಿಡಿಯೊ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಕಾಲೇಜಿನಲ್ಲಿ ಪರೀಕ್ಷೆಗಳು ನಡೆಯುತ್ತಿದ್ದರೂ ಪ್ರಾಂಶುಪಾಲರು ಕಾಲೇಜಿನಲ್ಲಿ ಇರಲಿಲ್ಲ ಎಂಬ ಆರೋಪವಿದೆ. ಅವರು ಸ್ನೇಹಿತರೊಬ್ಬರ ಮನೆಯಲ್ಲಿ ನಿಗದಿಯಾಗಿದ್ದ ಸಮಾರಂಭಕ್ಕೆ ತೆರಳಿದ್ದರು. ಕಾಲೇಜಿನಲ್ಲಿ ಯಾರಿಗೂ ಜವಾಬ್ದಾರಿ ವಹಿಸಿರಲಿಲ್ಲ ಎಂದು 'ಪ್ರಜಾವಾಣಿ'ಗೆ ಮೂಲಗಳು ತಿಳಿಸಿವೆ.

'ಇವರೆಲ್ಲರೂ ಭವಿಷ್ಯದಲ್ಲಿ ಉಪನ್ಯಾಸಕರಾಗಿ ಬರುತ್ತಾರೆ. ಸಾಮೂಹಿಕ ನಕಲು ನಡೆಸಿ ಉತ್ತೀರ್ಣರಾದರೆ ಹೇಗೆ' ಎಂದು ಸಾಮಾಜಿಕ ಕಾರ್ಯಕರ್ತರೊಬ್ಬರು ಪ್ರಶ್ನಿಸಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಜೂನ್ 13ರಿಂದ ಪರೀಕ್ಷೆಗಳು ಆರಂಭವಾಗಿದ್ದವು. ಮೊದಲ ದಿನ ಬೆಳಿಗ್ಗೆ 10ಕ್ಕೆ ಆರಂಭವಾಗಬೇಕಿದ್ದ ಪರೀಕ್ಷೆ 11.30ಕ್ಕೆ ಆರಂಭವಾಗಿದ್ದು ಅನುಮಾನಕ್ಕೆ ಕಾರಣವಾಗಿದೆ.

'ಮೊದಲ ದಿನದ ಕೆಲವು ವಿಷಯದ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದವು. ಬದಲಿ ಪ್ರಶ್ನೆಪತ್ರಿಕೆ ಒದಗಿಸುವ ಕಾರಣಕ್ಕೆ ಪರೀಕ್ಷೆ ವಿಳಂಬವಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಮಧ್ಯಾಹ್ನ 1ಕ್ಕೆ ಮುಕ್ತಾಯವಾಗಬೇಕಿದ್ದ ಪರೀಕ್ಷೆ 2.30ಕ್ಕೆ ಮುಕ್ತಾಯಗೊಂಡಿತ್ತು. ಮಧ್ಯಾಹ್ನ 3.30ರ ವೇಳೆಗೆ ಉತ್ತರ ಪತ್ರಿಕೆಗಳನ್ನು ಕೊಂಡೊಯ್ಯಲಾಗಿತ್ತು. ಈ ವಿಷಯವು ಬಹಿರಂಗವಾಗದಂತೆ, ಸಿಂಡಿಕೇಟ್ ಸದಸ್ಯರಿಗೂ ತಿಳಿಯದಂತೆ ವಿ.ವಿ ಎಚ್ಚರಿಕೆ ವಹಿಸಿತ್ತು.

'ಈ ಘಟನೆಯ ಕುರಿತು ಸಮಗ್ರ ತನಿಖೆ ನಡೆಸಬೇಕು' ಎಂಬ ಆಗ್ರಹ ಕೇಳಿಬಂದಿದೆ.

ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರದಲ್ಲಿ ಬುಧವಾರ ಜಗ್ಗಿ ವಾಸುದೇವ್ ಮಾತನಾಡಿದರು. ಶಾಸಕ ಶರಣು ಸಲಗರ ಇದ್ದಾರೆ

'ಮಣ್ಣಿದ್ದರೆ ಮಾತ್ರ ಬದುಕು'

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಮಣ್ಣಿದ್ದರೆ ಮಾತ್ರ ಮಾನವ ಬದುಕಬಲ್ಲ. ಮಣ್ಣಿನಿಂದಲೇ ಸರ್ವಸ್ವ' ಎಂದು ಈಶಾ ಫೌಂಡೇಶನ್‌ನ ಸದ್ಗುರು ಜಗ್ಗಿ ವಾಸುದೇವ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ರಾಜೇಶ್ವರದಲ್ಲಿ ಬುಧವಾರ ಈಶಾ ಫೌಂಡೇಶನ್ ವತಿಯಿಂದ ನಡೆದ ಬೈಕ್ ಯಾತ್ರೆಯ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು, 'ಗಿಡ–ಮರಗಳನ್ನು ಬೆಳೆದು ಪರಿಸರ ಸಂರಕ್ಷಣೆಗೆ ಕೋರಲಾಗುತ್ತದೆ. ಆದರೆ, ಮಣ್ಣು ಇಲ್ಲದಿದ್ದರೆ ಮರಗಳು ಬೆಳೆಯುವುದು ಹೇಗೆ? ಹಸಿರು ಇಲ್ಲದಿದ್ದರೆ ಆಮ್ಲಜನಕ ಇಲ್ಲವಾಗಿ ಉಸಿರು ನಿಲ್ಲುತ್ತದೆ. ಎಲ್ಲದಕ್ಕೂ ಮಣ್ಣೇ ಆಧಾರ' ಎಂದರು.

'ಮೊದಲು ರಸಗೊಬ್ಬರ ಬಳಸದ ಕಾರಣ ಮಣ್ಣು ಫಲವತ್ತಾಗಿರುತ್ತಿತ್ತು. ಎರೆಹುಳು, ಇತರೆ ಉಪಯೋಗಿ ಜೀವಿಗಳು ಬೆಳೆದು ಮಣ್ಣಿನಲ್ಲಿ ಎಲ್ಲ ತರದ ಪೌಷ್ಟಿಕಾಂಶ ಇರುತ್ತಿತ್ತು. ಕಾಲ ಕ್ರಮೇಣ ಮಣ್ಣಿನಲ್ಲಿ ಜೀವ ಇಲ್ಲದಂತಾಗುತ್ತಿದೆ' ಎಂದರು.

'ಮಣ್ಣಿನ ಸಂರಕ್ಷಣೆಗಾಗಿ ನಾನು ಬೈಕ್ ಮೇಲೆ ಲಂಡನ್‌ನಿಂದ ಯಾತ್ರೆ ಆರಂಭಿಸಿ 3000 ಕಿ.ಮೀ ಕ್ರಮಿಸಿ ಭಾರತಕ್ಕೆ ಬಂದು ಕರ್ನಾಟಕ ಪ್ರವೇಶಿಸಿದ್ದೇನೆ. ಇದು ಮಹಾತ್ಮ ಬಸವಣ್ಣನವರ ನಾಡು. ಅವರು ದೇಹವೇ ದೇಗುಲ ಎಂದಿದ್ದಾರೆ. ಅದರಂತೆ ನಮ್ಮಲ್ಲಿಯೇ ದೇವರಿದ್ದಾನೆ' ಎಂದು ಹೇಳಿದರು.

ಡಿ.ರೂಪಾ ವಿರುದ್ಧದ ಮಾನನಷ್ಟ ಮೊಕದ್ದಮೆ ರದ್ದು

ಬೆಂಗಳೂರು: ಐಪಿಎಸ್ ಅಧಿಕಾರಿ ಡಿ.ರೂಪಾ ವಿರುದ್ಧ ನಿವೃತ್ತ ಡಿಜಿಪಿ ಎಚ್.ಎನ್. ಸತ್ಯನಾರಾಯಣ ರಾವ್ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಡಿ.ರೂಪಾ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ವಿಚಾರಣಾ ನ್ಯಾಯಾಲಯದಲ್ಲಿನ ಪ್ರಕರಣ ರದ್ದುಪಡಿಸಿ ಆದೇಶಿಸಿದೆ.

'ದೂರುದಾರ ಸತ್ಯನಾರಾಯಣ ರಾವ್ ಅವರು ರೂಪಾ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿಲ್ಲ. ರೂಪಾ ಅವರು ಸತ್ಯನಾರಾಯಣ್ ರಾವ್ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿ ಇಲಾಖೆಯ ಮುಖ್ಯಸ್ಥರಿಗೆ ಬರೆದಿರುವ ಪತ್ರವು ಅಧಿಕೃತ ಕರ್ತವ್ಯ ನಿರ್ವಹಣೆಯ ಭಾಗವಾಗಿದೆ. ಹೀಗಾಗಿ, ಪ್ರಕರಣದ ವಿಚಾರಣೆ ಮುಂದುವರಿಸಲು ವಿಚಾರಣಾ ನ್ಯಾಯಾಲಯಕ್ಕೆ ಅನುಮತಿ ನೀಡಿದರೆ ಅದು ಕಾನೂನಿನ ದುರ್ಬಳಕೆಯಾಗಲಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ರಾಜ್ಯ ಕಾರಾಗೃಹಗಳ ಇಲಾಖೆ ಡಿಜಿಐ ಆಗಿದ್ದ ಡಿ.ರೂಪಾ 2017ರ ಜುಲೈ 12ರಂದು ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಿ, ಅಂದು ಕಾರಾಗೃಹ ಇಲಾಖೆ ಡಿಜಿಪಿಯಾಗಿದ್ದ ಎಚ್.ಎನ್. ಸತ್ಯನಾರಾಯಣ ರಾವ್ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದರು. ಭ್ರಷ್ಟಾಚಾರ ಪ್ರಕರಣಗಳಲ್ಲಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿದ್ದ ಎಐಎಡಿಎಂಕೆ ನಾಯಕಿ ಶಶಿಕಲಾ ಅವರಿಗೆ ವಿಶೇಷ ಸೌಲಭ್ಯ ಕಲ್ಪಿಸಲು ಸತ್ಯನಾರಾಯಣ ರಾವ್ ₹2 ಕೋಟಿ ಲಂಚ ಪಡೆದಿದ್ದಾರೆ' ಎಂದು ರೂಪಾ ನೀಡಿದ್ದ ವರದಿಯಲ್ಲಿ ಆರೋಪಿಸಲಾಗಿತ್ತು.

ಸತ್ಯನಾರಾಯಣ ರಾವ್ 2017ರ ಜುಲೈ 31ರಂದು ಸೇವೆಯಿಂದ ನಿವೃತ್ತರಾಗಿದ್ದರು. ಬಳಿಕ 'ರೂಪಾ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ. ಇದರಿಂದ ನನ್ನ ಘನತೆಗೆ ಧಕ್ಕೆ ಉಂಟಾಗಿದೆ' ಎಂದು ಆರೋಪಿಸಿ ನಗರದ 9ನೇ ಎಸಿಎಂಎಂ ನ್ಯಾಯಾಲಯದಲ್ಲಿ ₹20 ಕೋಟಿ ಮೊತ್ತಕ್ಕೆ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/30/2021–22/558 ದಿನಾಂಕ: 14–06–2022

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 157 ಬಿಎಂಆರ್ 2005 ದಿನಾಂಕ: 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29–01–2009 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉದ್ದೇಶಕ್ಕಾಗಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಭೂಉಪಯೋಗ ನಿಗದಿಪಡಿಸಲು ಕೋರಿರುವ ಉದ್ದೇಶ
1	ಶ್ರೀಮತಿ ಸುಮನ. ಎಲ್.ಎಸ್ ಕೋಂ ಪ್ರದೀಪ್. ಎಂ.ಸಿ	ಯಲಹಂಕ	ಜಾಲ	ದೊಡ್ಡಜಾಲ ಅಮಾನಿಕೆರೆ	101/2	0–18	ಉದ್ಯಾನವನ	ವಸತಿ

ಸಹಿ/–

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/916/ಅಡ್ವರ್ಟೋರ್/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ದೇಶದ 43 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿನ ಖಾಲಿ ಹುದ್ದೆಗಳ ಭರ್ತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯುತ್ತಿದೆ. ಪರೀಕ್ಷೆ ಮತ್ತು ಅಧ್ಯಯನ ಸಿದ್ಧತೆ ಕುರಿತ ಮಾಹಿತಿ ಇಲ್ಲಿದೆ



ಆಳ-ಅಗಲ
10ನೇ ತರಗತಿ ಸಮಾಜ ವಿಜ್ಞಾನ-1 ಪ್ರಮುಖ ಬದಲಾವಣೆಗಳು

ಕ್ಯಾಮೆರಾ ಕಣ್ಗಾವಲಿನಲ್ಲಿ ಇಂದಿನಿಂದ ಸಿಇಟಿ ಪರೀಕ್ಷೆ 10

ರಾಷ್ಟ್ರಪತಿ ಚುನಾವಣೆ: ಇದೇ 20-21ಕ್ಕೆ ಮತ್ತೆ ಸಭೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,541	15,692	₹52,170 (ಬೆಂಗಳೂರು)	₹61,600 (ಬೆಂಗಳೂರು)	78.22

EXCEL ACADAMICS®
Bengaluru
IIT-Main & Advanced | NEET | BITS | AIIMS | JIPMER | CET | COMED-K
Postal Coaching For PUC + CET / NEET / IIT-JEE / AIIMS / JIPMER Contact 9036357499
Administrative Office : - EXCEL ACADAMICS
#326, Opp. People Tree Hospital, Sheshadripuram College Road, Yelahanka New Town, Bengaluru - - 560 064, KARNATAKA
Scholarship & Fee concession available for Meritorious Students
REGISTRATIONS OPEN
NEET CRASH COURSE
18.6.2022 SATURDAY
II PUC/12th, +2 Studying Students
NEET IIT-JEE / CET
LONG TERM COURSE
10.8.2022 WEDNESDAY
(Repeaters Course) 2022-23
II PUC/12th, +2 Passed Out Students
CELEBRATING 13 SUCCESSFUL YEARS
EXCEL ACADAMICS
THE BEST INSTITUTE IN INDIA
SUCCESSFULLY CONDUCTING "DAILY TEST" FOR NEET / IIT-JEE / CET ASPIRANTS
Separate Deluxe Hostel for Boys and Girls
7676-91-7777, 95136 57041, 9535656277

ಇ.ಡಿ. ವಿಚಾರಣೆ ವಿರುದ್ಧ ಪ್ರತಿಭಟನೆ ವೇಳೆ ಕಾಂಗ್ರೆಸ್ ಕಚೇರಿಗೆ ನುಗ್ಗಿದ ಪೊಲೀಸರು

ದೆಹಲಿ ಪೊಲೀಸ್ ವರ್ತನೆಗೆ ಆಕ್ರೋಶ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ.) ರಾಹುಲ್ ಗಾಂಧಿ ಅವರನ್ನು ವಿಚಾರಣೆಗೆ ಒಳಪಡಿಸುವುದನ್ನು ವಿರೋಧಿಸಿ, ಕಾಂಗ್ರೆಸ್ ಮೂರನೇ ದಿನವೂ ಪ್ರತಿಭಟನೆ ಮುಂದುವರಿಸಿತು. ಪ್ರತಿಭಟನೆ ನಡೆಸುತ್ತಿದ್ದ ಕಾರ್ಯಕರ್ತರು ಮತ್ತು ನಾಯಕರನ್ನು ವಶಕ್ಕೆ ಪಡೆಯಲು ಪೊಲೀಸರು ಪಕ್ಷದ ಕಚೇರಿ ಆವರಣಕ್ಕೆ ನುಗ್ಗಿದ್ದು, ಇದಕ್ಕೆ ತೀವ್ರ ಆಕ್ರೋಶ ವ್ಯಕ್ತವಾಯಿತು.

'ದೆಹಲಿ ಪೊಲೀಸರು ಬಿಜೆಪಿಯ ಖಾಸಗಿ ಪಡೆಯಂತೆ ವರ್ತಿಸಿದ್ದಾರೆ' ಎಂದು ಕಾಂಗ್ರೆಸ್ ನಾಯಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೆಹಲಿ ಪೊಲೀಸರು ಕಾಂಗ್ರೆಸ್ ಕಚೇರಿಯ ಗೇಟನ್ನು ಒದ್ದು ಒಳನುಗ್ಗುತ್ತಿರುವ ಮತ್ತು ಪಕ್ಷದ ಕಾರ್ಯಕರ್ತರನ್ನು ಒದೆಯುತ್ತಿರುವ ದೃಶ್ಯಗಳಿರುವ ವಿಡಿಯೊವನ್ನು ಕಾಂಗ್ರೆಸ್ ಟ್ವೀಟ್ ಮಾಡಿದೆ. ಪ್ರತಿಭಟನೆಯನ್ನು ವರದಿ ಮಾಡುತ್ತಿದ್ದ ವರದಿಗಾರರನ್ನೂ ಪೊಲೀಸರು ದೂರಕ್ಕೆ ತಳ್ಳುತ್ತಿರುವ ದೃಶ್ಯಗಳೂ ವಿಡಿಯೊಗಳಲ್ಲಿ ದಾಖಲಾಗಿವೆ.

'ದೇಶದ ಅತ್ಯಂತ ಹಳೆಯ ರಾಜಕೀಯ ಪಕ್ಷದ ಕಚೇರಿಗೆ ದೆಹಲಿ ಪೊಲೀಸರು ಬಲವಂತದಿಂದ ಪ್ರವೇಶಿಸಿದ್ದಾರೆ. ಪಕ್ಷದ ಕಚೇರಿಯ ಬಾಗಿಲುಗಳನ್ನು ಒದ್ದು ಒಳನುಗ್ಗುವ ಮೂಲಕ ಪೊಲೀಸರು, ನಮ್ಮ ಹಿರಿಯರು ಹೋರಾಡಿ ರೂಪಿಸಿದ ಪ್ರಜಾಪ್ರಭುತ್ವವನ್ನು ಉರುಳಿಸಿದ್ದಾರೆ. ಬಿಜೆಪಿಯು ಇಂದು ಪ್ರಜಾಪ್ರಭುತ್ವದ ಕೊಲೆ ಮಾಡಿದೆ. ಇದಕ್ಕಿಂತ ಕರಾಳ ಸ್ಥಿತಿ ಮತ್ತೊಂದಿಲ್ಲ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಟ್ವೀಟ್ ಮಾಡಿದ್ದಾರೆ.

11ನೇ ಪುಟ ನೋಡಿ

ನವದೆಹಲಿಯಲ್ಲಿ ಬುಧವಾರ ಎಐಸಿಸಿ ಕಚೇರಿಯ ಹೊರಗೆ ಪ್ರತಿಭಟನೆ ನಡೆಸುತ್ತಿದ್ದ ಕಾಂಗ್ರೆಸ್ ಮಹಿಳಾ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು – ಪಿಟಿಐ ಚಿತ್ರ

ಶುಕ್ರವಾರ ವಿಚಾರಣೆ

ಈ ಪ್ರಕರಣಕ್ಕೆ ಸಂಬಂಧಿಸಿ ಮೂರನೇ ದಿನವಾದ ಬುಧವಾರವೂ ರಾಹುಲ್ ಗಾಂಧಿ ಅವರನ್ನು ಇ.ಡಿ. ವಿಚಾರಣೆಗೆ ಒಳಪಡಿಸಿತ್ತು. ಬುಧವಾರ ಬೆಳಿಗ್ಗೆ 11.30ಕ್ಕೆ ವಿಚಾರಣೆಗೆ ಹಾಜರಾದ ರಾಹುಲ್ ಸಂಜೆಯವರೆಗೆ ಇ.ಡಿ. ಕಚೇರಿಯಲ್ಲಿ ಇದ್ದರು. ಮೂರು ದಿನವೂ ಸೇರಿ, ಅವರು ಒಟ್ಟು 30 ಗಂಟೆಗೂ ಹೆಚ್ಚು ಹೊತ್ತು ವಿಚಾರಣೆ ಎದುರಿಸಿದ್ದಾರೆ. ಈಗ ಮತ್ತೆ ಶುಕ್ರವಾರ ವಿಚಾರಣೆಗೆ ಹಾಜರಾಗುವಂತೆ ಅವರಿಗೆ ಇ.ಡಿ. ಸಮನ್ಸ್ ನೀಡಿದೆ.

ಏಯ್, ಸರ್ವಾಧಿಕಾರಿಯೇ, ನೀನು ಗೂಂಡಾಗಿರಿಯನ್ನೇ ಮಾಡಬೇಕೆಂದರೆ ಪ್ರಧಾನಿ ಹುದ್ದೆಯಿಂದ ಮೊದಲು ಇಳಿ. ನಂತರ ಜನರ ಮುಂದೆ ಹೋಗು
ಕಾಂಗ್ರೆಸ್ ಟ್ವೀಟ್

ಬಿಜೆಪಿ ಸರ್ಕಾರದ ಒಳ್ಳೆಯ ದಿನಗಳು ಜಗಜ್ಜಾಹೀರಾಗಿವೆ. ವಿರೋಧ ಪಕ್ಷಗಳ ನಾಯಕರನ್ನು ಹತ್ತಿಕ್ಕಲು ಬಿಜೆಪಿ ಸರ್ಕಾರ ಇ.ಡಿ.ಯನ್ನು ಬಳಸಿಕೊಳ್ಳುತ್ತಿದೆ
ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕಲುಷಿತ ನೀರು: ಪತ್ತೆಯಾಗದ ಮೂಲ

6 ಜನ ಸತ್ತರೂ ಸುಧಾರಿಸದ ನೀರು ಶುದ್ಧೀಕರಣ ವ್ಯವಸ್ಥೆ

● ನಾಗರಾಜ ಚಿನಗುಂಡಿ

ರಾಯಚೂರು: ಇಲ್ಲಿನ ಜನರಿಗೆ ನಗರಸಭೆ ಪೂರೈಸುವ ಕುಡಿಯುವ ನೀರು ಬಣ್ಣಬಣ್ಣಗಳಿಂದ ಕೂಡಿದೆ! ಕೊಳೆಗೇರಿ ಪ್ರದೇಶದ ಜನರು ಇದೇ ನೀರು ಕುಡಿದು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ. ಈಗಾಗಲೇ ಆರು ಮಂದಿ ಮೃತಪಟ್ಟಿದ್ದಾರೆ.

ತುಂಗಭದ್ರಾ ನದಿಯಿಂದ ಕಾಲುವೆ ಮೂಲಕ ರಾಂಪುರ ಕೆರೆಯಲ್ಲಿ ಸಂಗ್ರಹವಾಗುವ ನೀರು ತಿಳಿ ನೀಲಿ ಬಣ್ಣದಿಂದ ಕೂಡಿದೆ. ಕೆರೆಯಿಂದ ಶುದ್ಧೀಕರಣ ಘಟಕಕ್ಕೆ ಹರಿಯುವ ನೀರು ತಿಳಿ ಹಸಿರು ಬಣ್ಣಕ್ಕೆ ತಿರುಗುತ್ತದೆ. ಅಲ್ಲಿಂದ ಓವರ್‌ಹೆಡ್ ಟ್ಯಾಂಕ್‌ಗಳಿಗೆ ತುಂಬಿಸಲಾಗುತ್ತದೆ. ಅಲ್ಲಿಂದ ಮನೆಗಳಿಗೆ ತಲುಪುವಷ್ಟರಲ್ಲಿ ನೀರು ಹಳದಿ ಹಾಗೂ ಗಾಢ ಹಸಿರು ಬಣ್ಣಕ್ಕೆ ತಿರುಗಿರುತ್ತದೆ.

ಕಲುಷಿತ ನೀರು ಪೂರೈಕೆಯಿಂದ ನಗರದಲ್ಲಿ 15 ದಿನಗಳ ಅಂತರದಲ್ಲಿ ಆರು ಮಂದಿ ಸಾವನ್ನಪ್ಪಿದ್ದಾರೆ. ಮೃತರ ಕುಟುಂಬಕ್ಕೆ ನಗರಸಭೆ ₹10 ಲಕ್ಷ ಪರಿಹಾರ ಘೋಷಿಸಿದ್ದು, ಮೂರು ಕುಟುಂಬಕ್ಕೆ ಇದು ತಲುಪಿದೆ.

5ನೇ ಪುಟ ನೋಡಿ

'ಮೇಲ್ನೋಟದ ಪರಿಶೀಲನೆ'

ರಾಯಚೂರು ನಗರದಲ್ಲಿ ಕಲುಷಿತ ನೀರು ಪೂರೈಕೆಯಾಗಲು ಕಾರಣಗಳೇನು ಎಂಬುದನ್ನು ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಮೇಲ್ನೋಟಕ್ಕೆ ಮಾತ್ರ ಪರಿಶೀಲಿಸುತ್ತಿದ್ದಾರೆ.

'ನಗರದ 33 ಓವರ್‌ಹೆಡ್ ಟ್ಯಾಂಕ್‌ಗಳ ನಿರ್ವಹಣೆಗೆ ಸಿಬ್ಬಂದಿಯಿಲ್ಲ. ನೀರು ಶುದ್ಧೀಕರಣ ಘಟಕದಲ್ಲಿ ತರಬೇತಿ ಪಡೆದ ಸಿಬ್ಬಂದಿಯಿಲ್ಲ. ಎಲ್ಲಿ ನೀರು ಕೊಡಬೇಕು ಮತ್ತು ಕೊಡಬಾರದು ಎಂದು ನೀರಿನ ಹೆಸರಿನಲ್ಲಿ ರಾಜಕೀಯ ನಡೆಯುತ್ತದೆ. ನಮಗೆ ಶುದ್ಧ ನೀರು ಪೂರೈಸುವ ಜವಾಬ್ದಾರಿಯನ್ನು ಯಾರೂ ತೆಗೆದುಕೊಳ್ಳುತ್ತಿಲ್ಲ' ಎಂದು ಜನರು ಬೇಸರ ವ್ಯಕ್ತಪಡಿಸುತ್ತಾರೆ.

ಭೋವಿ ನಿಗಮದ ಎಂ.ಡಿ ಲೀಲಾವತಿ ಬಂಧನ

ಲೀಲಾವತಿ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆಯ ಉದ್ಯಮಶೀಲತಾ ಯೋಜನೆಯ ₹ 150 ಕೋಟಿ ಅನುದಾನವನ್ನು ದುರ್ಬಳಕೆ ಮಾಡಿಕೊಂಡ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ತನಿಖೆಗೆ ಅಸಹಕಾರ ತೋರಿದ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಲೀಲಾವತಿ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬುಧವಾರ ಬಂಧಿಸಿದೆ.

2018-19, 2019-20 ಮತ್ತು 2020-21ನೇ ಸಾಲಿನಲ್ಲಿ ಉದ್ಯಮಶೀಲತಾ ಯೋಜನೆಯ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಮಂಜೂರಾದ ಮೊತ್ತಕ್ಕಿಂತಲೂ ಹೆಚ್ಚು ಜಮೆ ಮಾಡಿರುವುದು ಹಾಗೂ ನಕಲಿ ಫಲಾನುಭವಿಗಳ ಪಟ್ಟಿಯನ್ನು ಸೃಷ್ಟಿಸಿ ₹ 150 ಕೋಟಿ ಅವ್ಯವಹಾರ ನಡೆಸಿರುವ ಆರೋಪದ ಮೇಲೆ ಲೀಲಾವತಿ ಹಾಗೂ ನಿಗಮದ ಪ್ರಧಾನ ವ್ಯವಸ್ಥಾಪಕರೂ ಆಗಿರುವ ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯವಸ್ಥಾಪಕ ನಾಗರಾಜಪ್ಪ ವಿರುದ್ಧ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ನಿವಾಸಿಯೊಬ್ಬರು ಎಸಿಬಿಗೆ ದೂರು ನೀಡಿದ್ದರು.

5ನೇ ಪುಟ ನೋಡಿ

ಎರಡು ಕ್ಷೇತ್ರ ಕಳೆದುಕೊಂಡ ಜೆಡಿಎಸ್; ಕಾಂಗ್ರೆಸ್ ಗಳಿಕೆ

ಹೊರಟ್ಟಿ, ಹುಕ್ಕೇರಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನ ನಾಲ್ಕು ಕ್ಷೇತ್ರಗಳಿಗೆ ನಡೆದ ಚುನಾವಣೆ ಪೈಕಿ ಮೂರು ಕ್ಷೇತ್ರಗಳ ಫಲಿತಾಂಶ ಬುಧವಾರ ಘೋಷಣೆಯಾಗಿದ್ದು, ಜೆಡಿಎಸ್ ತೊರೆದು ಈ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಬಸವರಾಜ ಹೊರಟ್ಟಿ ಎಂಟನೇ ಬಾರಿ ವಿಜಯ ಸಾಧಿಸಿ ದಾಖಲೆ ಬರೆದಿದ್ದಾರೆ.

ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಪ್ರಕಾಶ್ ಹುಕ್ಕೇರಿ ಜಯ ಗಳಿಸಿದ್ದಾರೆ.

ಈ ಹಿಂದೆ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಬಿಜೆಪಿಯ ಅರುಣ ಶಹಾಪುರ ಸೋಲನುಭವಿಸಿದ್ದಾರೆ.

ವಾಯವ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯ ಹಣಮಂತ ನಿರಾಣಿ ಜಯ ಗಳಿಸಿದ್ದಾರೆ. ಜೆಡಿಎಸ್‌ನ ಕೆ.ಟಿ. ಶ್ರೀಕಂಠೇಗೌಡ ಪ್ರತಿನಿಧಿಸುತ್ತಿದ್ದ ದಕ್ಷಿಣ ಪದವೀಧರರ ಕ್ಷೇತ್ರಗಳ ಮತ ಎಣಿಕೆಯು ಪತ್ರಿಕೆ ಮುದ್ರಣಕ್ಕೆ ಹೋಗುವವರೆಗೂ ಮುಂದುವರಿದಿತ್ತು.



ಬಸವರಾಜ ಹೊರಟ್ಟಿ



ಪ್ರಕಾಶ ಹುಕ್ಕೇರಿ

11ನೇ ಪುಟ ನೋಡಿ

ಪ್ರಮುಖ ಸುದ್ದಿಗಳು
ಮನೆ ನೆಲಸಮ: ಸುಪ್ರೀಂಕೋರ್ಟ್ ವಿಚಾರಣೆ ಇಂದು 11

5ಜಿ ತರಂಗಾಂತರ ಹರಾಜಿಗೆ ಸಂಪುಟ ಸಮ್ಮತಿ

ನವದೆಹಲಿ (ಪಿಟಿಐ): ಅತ್ಯಂತ ವೇಗದ ಇಂಟರ್ನೆಟ್ ಸೇವೆ ಒದಗಿಸುವ 5ಜಿ ತರಂಗಾಂತರಗಳ ಹರಾಜು ಪ್ರಕ್ರಿಯೆಗೆ ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಅಲ್ಲದೆ, ನಿರ್ದಿಷ್ಟ ಪ್ರದೇಶಗಳಲ್ಲಿ ಖಾಸಗಿ 5ಜಿ ದೂರಸಂಪರ್ಕ ಜಾಲ ಆರಂಭಿಸಲು ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಗಳಿಗೆ ಕೇಂದ್ರ ಸಂಪುಟವು ಸಮ್ಮತಿ ಸೂಚಿಸಿದೆ.

5ಜಿ ತರಂಗಾಂತರಗಳ ಹರಾಜು ಪ್ರಕ್ರಿಯೆಯು ಜುಲೈ 26ರಿಂದ ಶುರುಗಾಗಲಿದೆ. 10

'ಅಗ್ನಿವೀರ'ರಿಗೆ ವಿಶೇಷ ಪದವಿ ಕೋರ್ಸ್

ನವದೆಹಲಿ: ಕೇಂದ್ರ ಸರ್ಕಾರದ 'ಅಗ್ನಿಪಥ' ಯೋಜನೆ ಅಡಿಯಲ್ಲಿ ಸೇನೆಗೆ ಸೇರುವ 'ಅಗ್ನಿವೀರ'ರಿಗೆ ಕೌಶಲ ಆಧಾರಿತ ಮೂರು ವರ್ಷಗಳ ವಿಶೇಷ ಪದವಿ ಕೋರ್ಸ್ ಅನ್ನು ಕೇಂದ್ರ ಶಿಕ್ಷಣ ಸಚಿವಾಲಯ ಆರಂಭಿಸಲಿದೆ.

ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ (ಇಗ್ನೊ) ಈ ಪದವಿ ಕೋರ್ಸ್ ಅನ್ನು ಆರಂಭಿಸಲಿದೆ. ಇದಕ್ಕೆ ಭಾರತ ಮತ್ತು ವಿದೇಶಗಳಲ್ಲಿ ಮಾನ್ಯತೆ ದೊರೆಯಲಿದೆ. 11

ಚಿನಕುರಳಿ
ಪ್ರಕಾಶ್ ಶೆಟ್ಟಿ

ಹೃದಯ ಶ್ರೀಮಂತ ಶಾಮನೂರು

ಜಾಹೀರಾತು ವಿಶೇಷ

ಮಾನವತೆಯ ಸೆಲೆ, ಅಭಿವೃದ್ಧಿಯ ಹರಿಕಾರ

ಡಾ. ಎಚ್.ಎಸ್. ಮಂಜುನಾಥ ಕುರ್ಕಿ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

'ಹುಟ್ಟು ಸಹಜವಾಗಿರಬಹುದು ಆದರೆ, ಬದುಕು ಮಾತ್ರ ಇತಿಹಾಸ ಸೃಷ್ಟಿಸಬೇಕು' ಎಂಬ ಸ್ವಾಮಿ ವಿವೇಕಾನಂದರ ನುಡಿಯಂತೆ 'ಅಗೆದಷ್ಟು ಮುಗಿಯದ ಮೊಗೆದಷ್ಟು ಸಿಗುವ' ಸಾಧನೆಯ ಗಣಿ ನಮ್ಮೂರಿನ ಧಣಿ. 91 ವಸಂತಗಳ ಸಾರ್ಥಕ ಬದುಕನ್ನು ನಡೆಸಿ, 2022 ಜೂನ್ 16ರಂದು 92ನೇ ವರ್ಷಕ್ಕೆ ಪದಾರ್ಪಣೆ ಮಾಡಲಿರುವ 'ಅಮೃತ ಪುರುಷ' ಡಾ.ಶಾಮನೂರು ಶಿವಶಂಕರಪ್ಪನವರು. ಶ್ರೀಯುತರ ಸಮಯಪ್ರಜ್ಞೆ, ದೂರದೃಷ್ಟಿ, ಆಡಳಿತಾತ್ಮಕ ನೈಪುಣ್ಯ ಮತ್ತು ಕೃತ್ಯರ್ತ್ವದಿಂದಾಗಿ ಸದಾ ಸ್ಮರಣೆಯರಾಗಿ, ಅಂತರರಾಷ್ಟ್ರೀಯವಾಗಿ ಗೌರವ ಪಾತ್ರಕ್ಕೊಳಗಾಗಿರುವ ಶ್ರೇಷ್ಠ ಚೇತನ.

ದಾವಣಗೆರೆ ದಾನಿಗಳ ನಗರ, ವಾಣಿಜ್ಯನಗರ, ವಿದ್ಯಾನಗರ, ಸಾಂಸ್ಕೃತಿಕ ನಗರ ಎಂದೆಲ್ಲ ಖ್ಯಾತಿ ಪಡೆದು ಎರಡನೇ ರಾಜಧಾನಿಯಾಗುವ ಅರ್ಹತೆ ಪಡೆದಿದೆ. ಒಂದು ಕಾಲದಲ್ಲಿ ಅಕ್ಕಿ, ಹತ್ತಿ, ಎಣ್ಣೆ ಮಿಲ್ಲುಗಳಿಂದಾಗಿ 'ಕರ್ನಾಟಕದ ಮ್ಯಾಂಚೆಸ್ಟರ್' ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. 1970ರ ದಶಕದ ಸಂಗತಿ ಇದು. ಇದೇ ಅವಧಿಯಲ್ಲಿ ಶಾಮನೂರು ಶಿವಶಂಕರಪ್ಪನವರ ರಾಜಕೀಯ ರಂಗಪ್ರವೇಶವಾಯಿತು. 1969ರಲ್ಲಿ ನಗರಸಭಾ ಸದಸ್ಯರಾಗಿ, 1971ರಲ್ಲಿ ನಗರಾಧ್ಯಕ್ಷರಾಗಿ ಆಯ್ಕೆಯಾದಾಗ ನಗರದ ಸರ್ವಾಂಗೀಣ ಅಭಿವೃದ್ಧಿಯ ಹೊಣೆ ಅವರ ಮೇಲೆ ಬಿದ್ದಿತ್ತು. 1980ರ ದಶಕದಲ್ಲಿ ಎಲ್ಲಾ ಮಿಲ್ಲುಗಳು ಮುಚ್ಚುವ ಸ್ಥಿತಿಗೆ ತಲುಪಿತು. 1958ರಲ್ಲಿ ಪ್ರಾರಂಭಿಸಿದ ಬಾಪೂಜಿ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ 1971ರಲ್ಲಿ ಆಯ್ಕೆಯಾದ ಶಿವಶಂಕರಪ್ಪನವರು ತಮ್ಮ ಸೇವೆಯ ಆದ್ಯತೆಯಾಗಿ ಅನಕ್ಷರತೆ, ಅನಾರೋಗ್ಯ ಮತ್ತು ಆರ್ಥಿಕ ದಾರಿದ್ರ್ಯ ನಿವಾರಣೆಗೆ ಪಟಣತೊಟ್ಟರು. ತಮ್ಮ ಅಂಗಡಿಯ ಮೂಲಕ ವ್ಯಾಪಾರ ವಹಿವಾಟಿನ ಸ್ವರೂಪವನ್ನು ವ್ಯಾಪಕಗೊಳಿಸಿದರು. ಎ.ಪಿ.ಎಂ.ಸಿ. ಮಾರುಕಟ್ಟೆಗೆ ವಿವಿಧ ದವಸ-ಧಾನ್ಯಗಳು ಬರುವಂತೆ ಮಾಡಿದರು. ರೈಸ್ ಮಿಲ್ಲುಗಳ ಒಕ್ಕೂಟಕ್ಕೆ ತಾವೇ ಅಧ್ಯಕ್ಷರಾಗಿ ಮಿಲ್ಲುಗಳನ್ನು ಬಲಪಡಿಸಿದರು. ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಿ ರೈತರ ಆರ್ಥಿಕ ಬದುಕಿಗೆ ಆಶ್ರಯದಾತರಾದರು. 'ಬಾಪೂಜಿ ಸಹಕಾರ ಬ್ಯಾಂಕ್' ಸ್ಥಾಪಿಸಿ, ಶಾಖೆಗಳನ್ನು ತೆರೆದು ವಾಣಿಜ್ಯ-ವ್ಯಾಪಾರೋದ್ಯಮಗಳಿಗೆ ಸ್ವಾವಲಂಬಿ ಆರ್ಥಿಕ ಬದುಕನ್ನು ಕಟ್ಟಿಕೊಳ್ಳಲು ಸಾಲ ನೀಡುವ ಮೂಲಕ ಇಡೀ ದಾವಣಗೆರೆ ಜಿಲ್ಲೆಯ ಸರ್ವಾಂಗೀಣ ಬೆಳವಣಿಗೆಗೆ ಕಾರಣರಾಗಿದ್ದಾರೆ.

ಶಾಮನೂರು ಶಿವಶಂಕರಪ್ಪನವರು ಬಾಪೂಜಿ ವಿದ್ಯಾಸಂಸ್ಥೆಯ ಅಧಿಕಾರ ವಹಿಸಿಕೊಂಡಾಗ ನಾಲ್ಕೈದು ಅಂಗ ಸಂಸ್ಥೆಗಳಿದ್ದವು. ತಮ್ಮ ಇಚ್ಛಾಶಕ್ತಿ, ಯೋಗ್ಯ ನಿರ್ಧಾರ ಹಾಗೂ ಸತತ ಪ್ರಯತ್ನದಿಂದಾಗಿ ಜ್ಞಾನದ ಅನೇಕ ಅಂಗಸಂಸ್ಥೆಗಳನ್ನು ಸ್ಥಾಪಿಸಿದರು. ಜಾಗತೀಕರಣ, ಆಧುನಿಕ ತಂತ್ರಜ್ಞಾನ, ವಿಜ್ಞಾನಕ್ಕೆ ಅನುಗುಣವಾಗಿ ಮತ್ತು ಸಮಕಾಲೀನ ಸಮಾಜದ ಆಶೋತ್ತರಗಳಿಗೆ ಅನುಗುಣವಾಗಿ ಶಿಕ್ಷಣವನ್ನು ಬಾಪೂಜಿ ವಿದ್ಯಾಸಂಸ್ಥೆ ನೀಡುತ್ತಾ ಇದೆ. ನರ್ಸರಿ, ಪ್ರಾಥಮಿಕ ಶಿಕ್ಷಣ ಹಂತದಿಂದ ಸ್ನಾತಕ-ಸ್ನಾತಕೋತ್ತರ ಮತ್ತು ಸೂಪರ್ ಸ್ಪೆಷಾಲಿಟಿಯವರೆಗೂ ಶಿಕ್ಷಣ ಸಂಸ್ಥೆಗಳನ್ನು ತೆರೆದಿದೆ. ವೈದ್ಯಕೀಯ, ದಂತ ವೈದ್ಯಕೀಯ, ಫಾರ್ಮಸಿ, ನರ್ಸಿಂಗ್, ಎಂಜಿನಿಯರಿಂಗ್, ಪಾಲಿಟೆಕ್ನಿಕ್, ಮ್ಯಾನೇಜ್‌ಮೆಂಟ್ ಶಿಕ್ಷಣ, ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ದೈಹಿಕ ಶಿಕ್ಷಣ ಹೀಗೆ 56 ಅಂಗ ಸಂಸ್ಥೆಗಳನ್ನು ಹೊಂದಿದ್ದು, 20 ಸಾವಿಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, 16 ವಸತಿನಿಲಯಗಳಲ್ಲಿ 4,000 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸೌಲಭ್ಯ ಪಡೆದಿದ್ದಾರೆ. 5 ಸಾವಿರಕ್ಕಿಂತ ಹೆಚ್ಚು ಕುಟುಂಬಗಳು ಬಾಪೂಜಿ ವಿದ್ಯಾಸಂಸ್ಥೆಯಲ್ಲಿ ನೇರವಾಗಿ ಆಶ್ರಯ ಪಡೆದಿದ್ದಾರೆ. ಪರೋಕ್ಷವಾಗಿ ಲಕ್ಷಾಂತರ ಜನರು ಬದುಕನ್ನು ಕಟ್ಟಿಕೊಂಡಿದ್ದಾರೆ. ಈ ಮೂಲಕ ಆರ್ಥಿಕವಾಗಿ, ಸಾಮಾಜಿಕವಾಗಿ ತತ್ತರಿಸಿದ್ದ ದಾವಣಗೆರೆಗೆ ನೈಜ ಆತ್ಮಬಲವನ್ನು ತಂದುಕೊಟ್ಟಿದ್ದಾರೆ.

ಮಹಿಳೆಯರ ಸಬಲೀಕರಣಕ್ಕೆ ಜ್ಞಾನ ಉಣಬಡಿಸಲು ಎ.ವಿ. ಕಮಲಮ್ಮ ಮಹಿಳಾ ಕಾಲೇಜನ್ನು ಸ್ಥಾಪಿಸಿದರು. ಉನ್ನತ ಶಿಕ್ಷಣ ಪ್ರತಿಯೊಬ್ಬ ಸಾಮಾನ್ಯ ವಿದ್ಯಾರ್ಥಿಗೆ ದೊರೆಯಲು ತೋಳಹುಣಸೆ ಬಳಿ 75 ಎಕರೆ ಜಮೀನು ದಾನಮಾಡಿ ದಾವಣಗೆರೆ ವಿಶ್ವವಿದ್ಯಾಲಯದ ಸ್ಥಾಪನೆಗೆ ಪ್ರಮುಖ ಕಾರಣರಾದರು. ತಮ್ಮ ಅಂಗಸಂಸ್ಥೆಗಳಲ್ಲಿ ಪಠ್ಯ-ಪಠ್ಯೇತರ ಚಟುವಟಿಕೆಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಆಧುನಿಕ ಸ್ಪರ್ಶ ನೀಡಿದ್ದಾರೆ. ಇತ್ತೀಚೆಗೆ 'ಎಸ್.ಎಸ್. ಜನಕಲ್ಯಾಣ ಟ್ರಸ್ಟ್' ಸ್ಥಾಪಿಸಿ ಇದರ ಮೂಲಕ ಪತ್ರಕರ್ತರ ಮಕ್ಕಳಿಗೆ ಮತ್ತು ಸಾಮಾನ್ಯ ಜನರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೋಟಿಗಟ್ಟಲೆ ಹಣವನ್ನು ಪ್ರೋತ್ಸಾಹಧನವಾಗಿ ನೀಡುತ್ತಿದ್ದಾರೆ. ಈ ಸಂಸ್ಥೆಯಲ್ಲಿ ದುಡಿಯುತ್ತಿರುವ ಎಲ್ಲಾ ನೌಕರರು ಅಭಿನಂದನಾರ್ಹರು.

ಶಾಮನೂರು ಶಿವಶಂಕರಪ್ಪನವರು ತಮ್ಮ ತಂದೆ-ತಾಯಿಯಿಂದ ಸಂಸ್ಕಾರ ಪಡೆದವರು. ಶ್ರೀಯುತರಿಗೆ ದೈವಭಕ್ತಿ, ಗುರುಲಿಂಗ ಜಂಗಮರೆಂದರೆ ಅಪಾರ ಭಕ್ತಿ-ಗೌರವ, ಜಾತ್ಯತೀತ ವ್ಯಕ್ತಿತ್ವ, ಸಮಾಜಸೇವೆ, ಸಾಂಸ್ಕೃತಿಕ ಕಲೆ ಮುಂತಾದ ಕೆಲಸಗಳಿಗೆ 'ದೇಹಿ' ಎಂದು ದಾನ ಕೇಳಿದ ವ್ಯಕ್ತಿ ಮತ್ತು ಸಂಸ್ಥೆಗಳಿಗೆ 'ದಾನ ನೀಡಿದ ದಣಿಯದ ದಾಸೋಹಿ'. 'ಬದುಕು ತನಗಾಗಿ ಮಾತ್ರವಲ್ಲ ಸಮಾಜದ ಒಳಿತಿಗಾಗಿ' ಎಂದು ಭಾವಿಸಿದವರು.

ಪ್ರಸ್ತುತ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿರುವ, ಅವರು ಕೆಪಿಸಿಸಿಯ ಕಾಯಂ ಖಜಾಂಚಿಗಳು, ಮಾಜಿ ಸಚಿವರು, ಮಾಜಿ ಲೋಕಸಭಾ ಸದಸ್ಯರು ಆಗಿದ್ದರು, ಹಾಲಿ ವಿಧಾನಸಭಾ ಸದಸ್ಯರು (ದಕ್ಷಿಣ ಕ್ಷೇತ್ರ) ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರಾಗಿದ್ದಾರೆ. 1992ರಲ್ಲಿ 61ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಅರ್ಥಪೂರ್ಣವಾಗಿ ನಡೆಸಿದ ಕೀರ್ತಿ ಇವರದು.

ಶಾಮನೂರು ಶಿವಶಂಕರಪ್ಪ ಅವರು ಬಾಳ ಸಂಗಾತಿ ಪಾರ್ವತಮ್ಮ ಜೊತೆಗಿದ್ದ ಕ್ಷಣ (ಸಂಗ್ರಹ ಚಿತ್ರ: ಎಚ್.ಬಿ. ಮಂಜುನಾಥ್)

ಶ್ರೀಯುತರಲ್ಲಿರುವ ಅಚ್ಚುಕಟ್ಟುತನ, ವಸ್ತುನಿಷ್ಠೆ, ವಾಸ್ತವತೆ, ಶಿಸ್ತು, ಸಭ್ಯ ಸಹೃದಯತೆ ಮತ್ತು ಸ್ನೇಹಮಯ ಗುಣಗಳು ಇನ್ನೊಬ್ಬರನ್ನು ನಾಚಿಸುತ್ತವೆ. Its good to read History, but better to Create History ಎಂಬ ನುಡಿಯಂತೆ 20ನೇ ಶತಮಾನದ ಶ್ರೇಷ್ಠ ಇತಿಹಾಸ ಪುರುಷ 21ನೇ ಶತಮಾನದಲ್ಲೂ ಶ್ರೇಷ್ಠರಾಗಿರಲಿ. ಇಂತಹ ಅಜಾತಶತ್ರು, ಮಹಾಮಾನವತಾವಾದಿಗೆ ಭಗವಂತ ಆಯುರಾರೋಗ್ಯ ಕರುಣಿಸಲಿ ಮತ್ತು ಶತಾಯುಷಿಗಳಾಗಿ ಬಾಳಲಿ ಎಂದು ಶುಭ ಹಾರೈಸೋಣ.

ದಾವಣಗೆರೆಗೆ ಮೇರುಪರ್ವತ ಇದ್ದಂತೆ

ಈ ಶತಮಾನದಲ್ಲಿ ದಾವಣಗೆರೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರಂತಹ ವ್ಯಕ್ತಿ ಸಿಗುವುದಿಲ್ಲ. ಅವರೊಂದು ಮೇರುಪರ್ವತ. ಯಾವುದಕ್ಕೂ ಹೋಲಿಸಲು ಆಗುವುದಿಲ್ಲ. ಬೆಂಗಳೂರನ್ನು ಕೆಂಪೇಗೌಡರು ನಿರ್ಮಾಣ ಮಾಡಿದ ರೀತಿ ದಾವಣಗೆರೆಯ ನಿರ್ಮಾತೃ. ಒಂದು ಕಾಲದಲ್ಲಿ ಜವಳಿ ಉದ್ಯಮ, ಕಾಟನ್ ಮಿಲ್‌ಗಳು, ಕಿರ್ಲೋಸ್ಕರ್ ಅಂತಹ ಕಂಪನಿಗಳು ಮುಚ್ಚಿಹೋದ ಮೇಲೆ ಹಲವಾರು ಜನ ಉದ್ಯೋಗ ಕಳೆದುಕೊಂಡರು. ಆ ವೇಳೆ ಶಾಮನೂರು ಶಿವಶಂಕರಪ್ಪ ಅವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಉದ್ಯೋಗ ನೀಡಿದರು. ಬಾಪೂಜಿ ಶಿಕ್ಷಣ ಸಂಸ್ಥೆಗಳಲ್ಲಿ 4 ಸಾವಿರಕ್ಕೂ ಹೆಚ್ಚು ಮಂದಿ ಉದ್ಯೋಗಿಗಳು ಇದ್ದಾರೆ.

ಅಥಣಿ ವೀರಣ್ಣ, ಚೇರ್ಮನ್, ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್.

ಶಾಮನೂರು ಶಿವಶಂಕರಪ್ಪ ಸರಳಜೀವಿ

ಒಬ್ಬ ವ್ಯಕ್ತಿ ಇಷ್ಟು ಸಾಧನೆ ಮಾಡಿರುವುದು ಅಪರೂಪ. ಶಾಮನೂರು ಶಿವಶಂಕರಪ್ಪ ಅವರು ಸಂಸದರಾಗಿ, ಶಾಸಕರಾಗಿ, ಸಚಿವರಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು. ವೀರಶೈವ, ಲಿಂಗಾಯತ ಬೇರೆ ಬೇರೆ ಅಲ್ಲ. ಎರಡೂ ಒಂದೇ ಎಂದು ಗಟ್ಟಿ ನಿಲುವು ತಳೆದರು. ಮಿತ ಆಹಾರ, ಉತ್ತಮ ಆಲೋಚನೆ ಅವರ ಆರೋಗ್ಯದ ಗುಟ್ಟು. ಯಾವುದೇ ಕೆಲಸವಾದರೂ ಪ್ರಯತ್ನ, ಧೈರ್ಯ ಹಾಗೂ ದೂರದೃಷ್ಟಿ ಇಟ್ಟುಕೊಂಡು ಕೆಲಸ ಮಾಡುತ್ತಾರೆ. ಲಿಂಗಾಯತ ಧರ್ಮದವರಷ್ಟೇ ಅಲ್ಲ. ಎಲ್ಲಾ ಜಾತಿ, ಧರ್ಮದವರಿಗೆ ದಾನ, ಧರ್ಮಗಳ ದೇವಾಲಯಗಳಿಗೆ ದಾನ, ಧರ್ಮ ಮಾಡಿದ್ದಾರೆ. ಎಷ್ಟೇ ಶ್ರೀಮಂತರಾದರೂ ಹಿಂದೆ ಇದ್ದ ಬಡತನವನ್ನು ಅವರು ನೆನಪಿಸಿಕೊಳ್ಳುವ ಸರಳ ಜೀವಿ. ತಾಳ್ಮೆ ಅವರ ದೊಡ್ಡ ಶಕ್ತಿ.

ಅಣಬೇರು ರಾಜಣ್ಣ, ಹೋಟೆಲ್ ಉದ್ಯಮಿ.

ದಾವಣಗೆರೆ ಜನರ ಪಾಲಿಗೆ ದೇವಮಾನವ

ಬೇರೆ ರಾಜಕಾರಣಿಗಳು ಸ್ವಾರ್ಥಕ್ಕಾಗಿ, ಚುನಾವಣೆಯಲ್ಲಿ ಖರ್ಚು ಮಾಡಿದ ಹಣವನ್ನು ವಾಪಸ್ ಪಡೆಯಲು ರಾಜಕಾರಣಕ್ಕೆ ಹೋಗುತ್ತಾರೆ. ಆದರೆ ಶಾಮನೂರು ಅವರು ಸೇವೆ ಮಾಡಲು ರಾಜಕಾರಣಕ್ಕೆ ಬಂದಿದ್ದಾರೆ. ಶಾಮನೂರು ಅವರು ಆರೋಗ್ಯದಿಂದ ಲವಲವಿಕೆಯಿಂದ ಇರಲು ದೈವ ಕೃಪೆ ಕಾರಣ. ಕೊರೊನಾ ಸಂಕಷ್ಟ ಕಾಲದಲ್ಲಿ ಲಸಿಕೆ ಸಿಗುವುದು ಕಷ್ಟವಾಗಿತ್ತು. ಆ ಸಂದರ್ಭ ಅವರು ತುಂಬಾ ಕಷ್ಟಪಟ್ಟು ₹ 10 ಕೋಟಿ ವೆಚ್ಚದಲ್ಲಿ ಲಸಿಕೆ ತಂದು ಜನರಿಗೆ ಕೊಡಿಸಿದರು. ವಿರೋಧ ಪಕ್ಷದವರೂ ಶಾಮನೂರು ಶಿವಶಂಕರಪ್ಪ ಅವರನ್ನು ಪ್ರೀತಿಯಿಂದ ಕಾಣುತ್ತಾರೆ. ಅವರೊಬ್ಬ ಅಜಾತ ಶತ್ರು. ದಾವಣಗೆರೆಯ ಜನರ ಪಾಲಿಗೆ ಅವರು ದೇವಮಾನವ.

ಸುರಭಿ ಶಿವಕುಮಾರ್, ಸಿನಿಮಾ ಸಿರಿ ಅಧ್ಯಕ್ಷ

ಇಳಿವಯಸ್ಸಿನಲ್ಲೂ ದಣಿವರಿಯದ ಕೆಲಸ

ಶಾಮನೂರು ಶಿವಶಂಕರಪ್ಪ ಅವರು ಶಾಂತ ಸ್ವಭಾವದವರು. ಜಾತಿ, ಮತ ಭೇದವಿಲ್ಲದೇ ಎಲ್ಲಾ ಸಮುದಾಯಕ್ಕೂ ಸಹಾಯ ಮಾಡಿದ್ದಾರೆ. ಎಲ್ಲಾ ಸಮುದಾಯದವರನ್ನು ಒಂದೇ ರೀತಿ ನೋಡಿದ್ದಾರೆ. ಅವರು ಕೊಡುಗೈ ದಾನಿ. ರಾಜಕೀಯದಲ್ಲಿ ಸಚಿವರಾಗಿ ಸಾರ್ವಜನಿಕರ ಸೇವೆ ಮಾಡಿದ್ದಾರೆ. ಇಳಿವಯಸ್ಸಿನಲ್ಲಿ ದಣಿವರಿಯದೇ ಕೆಲಸ ಮಾಡುತ್ತಿರುವ ಶಾಮನೂರು ಅವರ ವ್ಯಕ್ತಿತ್ವ ದೊಡ್ಡದು.

ಡಾ.ಸುರೇಂದ್ರ ಶೆಟ್ಟಿ, ನೇತ್ರ ತಜ್ಞರು

ಎಸ್.ಎಸ್. ಅವರದು ಪರಿಪೂರ್ಣ ವ್ಯಕ್ತಿತ್ವ

ಶಾಮನೂರು ಶಿವಶಂಕರಪ್ಪ ಅವರು ಶ್ರಮಜೀವಿ. ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ಗುಣ ಅವರದು. ಎಲ್ಲರ ಜೊತೆಯಲ್ಲೂ ಬೆರೆಯುತ್ತಾರೆ. ದೈವಭಕ್ತಿ, ವ್ಯವಧಾನ ಹೊಂದಿರುವ ಅವರದು ಪರಿಪೂರ್ಣ ವ್ಯಕ್ತಿತ್ವ. ಇಡೀ ದಿವಸ ಚಟುವಟಿಕೆಯಿಂದ ಇರುತ್ತಾರೆ. ಅವರ ದೂರದೃಷ್ಟಿಯ ಫಲವಾಗಿ ಇಂದು ದಾವಣಗೆರೆ ಅಭಿವೃದ್ಧಿ ಕಂಡಿದೆ. ಅಭಿವೃದ್ಧಿ ವಿಷಯದಲ್ಲಿ ಯಾರೇ ಅಡ್ಡಿಪಡಿಸಿದರೂ ಅದನ್ನು ಲೆಕ್ಕಿಸುವುದಿಲ್ಲ.

ದಿನೇಶ್ ಕೆ.ಶೆಟ್ಟಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ

ದಾವಣಗೆರೆಯ ದೇವತಾ ಮನುಷ್ಯ

ಶಾಮನೂರು ದೇವತಾ ಮನುಷ್ಯ ಇದ್ದಂತೆ. ಬಡವರಿಗೆ ದಾನ ಧರ್ಮ ಮಾಡಿದ್ದಾರೆ. ದೈವ ಭಕ್ತಿ, ಸ್ನೇಹಿತರು ಜೊತೆಗೆ ಇರಬೇಕು. ಅವರಿಗೆ ಉಪಚರಿಸಿದ ರೀತಿಯಲ್ಲೇ ಅವರ ಸ್ನೇಹಿತರಿಗೂ ಉಪಚಾರ ಮಾಡಬೇಕು. ದಾವಣಗೆರೆಯಲ್ಲಿ ಸೌಹಾರ್ದ ನೆಲೆಸಲು ಶಾಮನೂರು ಕಾರಣಕರ್ತರು. ಹಿಂದೂ ಮುಸ್ಲಿಮರನ್ನು ಒಂದೇ ರೀತಿ ಕಾಣುತ್ತಿದ್ದಾರೆ. ಎರಡು ಸಮುದಾಯಗಳ ನಡುವೆ ಗಲಾಟೆ ನಡೆಯದಂತೆ ಸಮಯಪ್ರಜ್ಞೆ ಮೆರೆದಿದ್ದಾರೆ.

ಎಸ್.ಕೆ. ವೀರಣ್ಣ, ದಾವಣಗೆರೆ–ಹರಿಹರ ಅರ್ಬನ್ ಬ್ಯಾಂಕ್ ಉಪಾಧ್ಯಕ್ಷರು.

ಜಾತ್ಯತೀತ ತತ್ವ ಪಾಲಿಸುವ ವ್ಯಕ್ತಿತ್ವ

ಶಾಮನೂರು ಶಿವಶಂಕರಪ್ಪ ಅವರು ಯಾರಿಗೂ ಜಾತಿ, ಭೇದ ಮಾಡಿಲ್ಲ. ಇದು ಅವರ ದೊಡ್ಡ ವ್ಯಕ್ತಿತ್ವ. ಅವರ ಶೈಕ್ಷಣಿಕ ಸಂಸ್ಥೆಗಳಲ್ಲಿ ಎಲ್ಲಾ ಜಾತಿ, ವರ್ಗದವರಿಗೂ ಸೀಟುಗಳನ್ನು ಕೊಟ್ಟಿದ್ದಾರೆ. ಉದ್ಯೋಗ ನೀಡಿದ್ದಾರೆ. ಅವರು ಜಾತಿ ನೋಡಿ ಯಾವ ಕೆಲಸವನ್ನೂ ಮಾಡಿಲ್ಲ. ಉದಾರ ಮನಸ್ಸಿನ, ಜಾತ್ಯತೀತ ವ್ಯಕ್ತಿತ್ವ.

ಡಾ.ದೀಪಕ್ ಬೊಂದಾಡೆ, ಜನರಲ್ ಮೆಡಿಸಿನ್ ತಜ್ಞರು

ಎಲ್ಲರ ಕಾಳಜಿ ವಹಿಸುವ ಕುಟುಂಬಜೀವಿ ಅಪ್ಪಾಜಿ

ಪ್ರಭಾ ಮಲ್ಲಿಕಾರ್ಜುನ

ಪ್ರಭಾ ಮಲ್ಲಿಕಾರ್ಜುನ

ಕುಟುಂಬದ ಪ್ರತಿ ಸದಸ್ಯರ ಬಗ್ಗೆ ಕಾಳಜಿ ವಹಿಸುವ, ಸಣ್ಣ ಮಗುವಿನಿಂದ ಹಿಡಿದು ದೊಡ್ಡವರವರೆಗೆ ಎಲ್ಲರಿಗೂ ಗೌರವ ನೀಡುವ ಅಪ್ಪಾಜಿ ಅಪ್ಪಟ ಕುಟುಂಬಜೀವಿ. ಒಂದು ಕೂಡುಕುಟುಂಬವನ್ನು ಹೇಗೆ ನಡೆಸಬೇಕು ಎಂಬುದನ್ನು ಬಾಯಲ್ಲಿ ಹೇಳದೇ ತಮ್ಮ ನಡವಳಿಕೆಯಿಂದಲೇ ತೋರಿಸುವ ಅಪ್ಪಾಜಿಯಿಂದ ಕಲಿಯುವಂಥದ್ದು ಬಹಳ ಇದೆ.

ನಾನು ಮದುವೆಯಾಗಿ ಬರುವಾಗ ದೊಡ್ಡ ಮನೆಗೆ, ದೊಡ್ಡ ಕುಟುಂಬಕ್ಕೆ ಬರುತ್ತಿದ್ದೇನೆ ಎಂಬ ಹೆಮ್ಮೆ ಒಂದು ಕಡೆ, ಹೊಂದಿಕೊಳ್ಳಲು ಕಷ್ಟವಾಗಬಹುದೇ ಎಂಬ ಅಳುಕು ಇನ್ನೊಂದು ಕಡೆ ಇತ್ತು. ಆದರೆ, ಒಮ್ಮೆ ಬಂದ ಮೇಲೆ ಅಪ್ಪಾಜಿ ಎಲ್ಲರನ್ನೂ ನಡೆಸಿಕೊಳ್ಳುವ ರೀತಿ ಕಂಡು ಬೆರಗಾದೆ. ಈ ಮನೆಯ ವಾತಾವರಣವೇ ಬದುಕಿನ ಪಾಠವಾಯಿತು.

ಅತ್ತೆಯವರು ಕೂಡ ಇರುವಷ್ಟು ಸಮಯ ಮನೆಯ ಜವಾಬ್ದಾರಿ ನೋಡಿಕೊಂಡು ಎಲ್ಲರನ್ನೂ ಸಮಾನವಾಗಿ ಕಂಡಿದ್ದರು. ಕುಟುಂಬದ ಮೌಲ್ಯವನ್ನು ಎತ್ತಿಹಿಡಿದವರು. ದೇವಸ್ಥಾನಕ್ಕೆ ಹೋಗುವುದಿರಲಿ, ಯಾವುದೇ ಹಬ್ಬಗಳನ್ನು ಆಚರಿಸುವುದಿರಲಿ ಎಲ್ಲ ಸದಸ್ಯರು ಒಟ್ಟು ಸೇರಿ ಆಚರಿಸಬೇಕು ಎಂಬುದು ಅವರ ನಿಲುವು. ಒಂದು ಮನೆಯ ಹಿರಿಯರು ಹೇಗಿರಬೇಕು ಎಂಬುದಕ್ಕೆ ನಮ್ಮ ಅತ್ತೆಯವರು ಮತ್ತು ಅಪ್ಪಾಜಿಗಿಂತ ದೊಡ್ಡ ಉದಾಹರಣೆ ಇಲ್ಲ ಎಂದು ನಾನು ಭಾವಿಸಿದ್ದೇನೆ.

92 ವರ್ಷಗಳ ಅಗಾಧ ಜೀವನಾನುಭವ ಅಪ್ಪಾಜಿಯದ್ದು. ಕಠಿಣ ಪರಿಶ್ರಮ, ಶ್ರದ್ಧೆ, ಮಾಡಬೇಕು ಎಂದು ಯೋಚಿಸಿದ್ದನ್ನು ಮಾಡಿಯೇ ತೀರಬೇಕು ಎಂಬ ಛಲ, ಶಿಸ್ತುಬದ್ಧ ಜೀವನ, ದೈವಭಕ್ತಿ, ಸರಳತೆ ಅಪ್ಪಾಜಿಯನ್ನು ಇಷ್ಟು ಎತ್ತರಕ್ಕೆ ಒಯ್ದಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಇರುವುದರಿಂದ ಕುಟುಂಬದ ಜತೆಗೆ ಬಹಳ ಹೊತ್ತು ಕಳೆಯಲು ಅವರಿಗೆ ಸಮಯ ಸಿಗುತ್ತದೆ ಎಂದಲ್ಲ. ಆದರೆ ಕಳೆಯುವ ಅಷ್ಟು ಹೊತ್ತು ಗುಣಮಟ್ಟದ್ದಾಗಿರುತ್ತಿತ್ತು. ನಾವು ಮೂವರು ಸೊಸೆಯಂದಿರು. ಮೂವರಿಗೂ ಏನೂ ಹೇಳಿದವರಲ್ಲ. ಏನು ಮಾಡಿದರೆ ಒಳ್ಳೆಯದಾಗುತ್ತದೆ ಎಂಬುದನ್ನು ತೋರಿಸುತ್ತಿದ್ದರು.

ತಮ್ಮ ಕೆಲಸದ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದ್ದರೇ ಹೊರತು ಬೇರೆಯವರ ಟೀಕೆಗಳಿಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಅವರ ನೆನಪಿನ ಶಕ್ತಿ ಅದ್ಭುತವಾದುದು. ಅವರು ಒಮ್ಮೆ ನೋಡಿದ್ದನ್ನು, ಕೇಳಿದ್ದನ್ನು ಮರೆಯುವುದಿಲ್ಲ.

10 ರೂಪಾಯಿ ಇರಲಿ, 10 ಸಾವಿರವೇ ಇರಲಿ, ಎಷ್ಟಾದರೂ ಇರಲಿ ಅದಕ್ಕೆ ಅದರದ್ದೇ ಆದ ಮೌಲ್ಯ ಇದೆ ಎಂದು ಅಪ್ಪಾಜಿ ಹೇಳುತ್ತಾರೆ. ಮಕ್ಕಳಿಗೆ 100 ರೂಪಾಯಿ ನೀಡಿದರೂ ಅವರು ಲೆಕ್ಕ ಕೇಳುತ್ತಾರೆ. ಏನು ತಗೊಂಡು ಬಂದೆ. ಅದಕ್ಕೆ ಎಷ್ಟು ಖರ್ಚಾಯಿತು. ಉಳಿದ ಚಿಲ್ಲರೆ ಎಲ್ಲಿ ಎಂದು ವಿಚಾರಿಸುತ್ತಾರೆ. ಈ ರೀತಿ ಲೆಕ್ಕ ಕೇಳಿ, ಸರಿಯಾಗಿ ಹಣ ಉಪಯೋಗವಾಗಿದೆಯೇ ಎಂದು ನೋಡುತ್ತಾರೆ. ಹಣದ ಮೌಲ್ಯವನ್ನು ತಿಳಿಸಲು ಇದಕ್ಕಿಂತ ಬೇರೆ ಪಾಠ ಏನಿದೆ?

ಈಗ ಅವರಿಗೆ ಮೊಮ್ಮಕ್ಕಳು ಮಾತ್ರವಲ್ಲ, ಮರಿಮಕ್ಕಳು ಇದ್ದಾರೆ. ಎಲ್ಲರನ್ನು ಪ್ರೀತಿಯಿಂದ ಕಾಣುತ್ತಾರೆ. ಶಾಲೆಯಲ್ಲಿ ಫಲಿತಾಂಶ ಬಂದರೆ, ಬೇರೆಡೆ ಸೀಟ್ ಆದರೆ, ಹೀಗೆ ಏನೇ ಇದ್ದರೂ ಮೊಮ್ಮಕ್ಕಳು, ಮರಿಮಕ್ಕಳು ಬಂದು ಅಪ್ಪಾಜಿ ಹತ್ತಿರ ಹೇಳುತ್ತಾರೆ. ಅದನ್ನು ನೆನಪಿಟ್ಟುಕೊಂಡು ಬೇರೆಯವರ ಜತೆಗೆ ಹಂಚಿಕೊಳ್ಳುತ್ತಾರೆ. ಮಕ್ಕಳನ್ನು ಪ್ರೋತ್ಸಾಹಿಸುತ್ತಾರೆ.

ಅವರ ಶಿಸ್ತುಬದ್ಧ ವ್ಯಕ್ತಿತ್ವದಿಂದ ಸಾಧನೆ ಮಾಡಲು ಸಾಧ್ಯವಾಗಿದೆ. ಅಪ್ಪಾಜಿ ಒಂದು ಕ್ಷೇತ್ರಕ್ಕೆ ಸೀಮಿತರಾದವರಲ್ಲ. ರಾಜಕೀಯ, ವ್ಯವಹಾರ, ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಅವರು ಸಾಧನೆ ಮಾಡಿದ್ದಾರೆ.

ನಮ್ಮ ಮನೆಗೆ ಪ್ರತಿದಿನ ಬೇರೆ ಬೇರೆ ಕಾರಣಕ್ಕೆ ನೂರಾರು ಮಂದಿ ಬರುತ್ತಿರುವುದನ್ನು ಕಂಡು ಮೊದಲು ನನಗೂ ಆಶ್ಚರ್ಯವಾಗುತ್ತಿತ್ತು. ನಿಧಾನಕ್ಕೆ ಅರ್ಥಮಾಡಿಕೊಂಡೆ. ಬಂದವರಿಗೆ ಸಹಾಯ ಮಾಡುವ ಅವಕಾಶ ದೇವರು ಎಲ್ಲರಿಗೂ ನೀಡಿರುವುದಿಲ್ಲ. ಅಪ್ಪಾಜಿಗೆ ಆ ಶಕ್ತಿಯನ್ನು ನೀಡಿದ್ದಾರೆ. ಜನರ ಸಂಕಷ್ಟಗಳಿಗೆ ಸ್ಪಂದಿಸುವ ಮನಸ್ಸು ಇರಬೇಕು. ಇಲ್ಲದೇ ಇದ್ದರೆ ಸಹಾಯ ಮಾಡಲು ಆಗುವುದಿಲ್ಲ. ಅಪ್ಪಾಜಿ ಅವರಿಗೆ ಸಹಾಯ ಮಾಡುವ ಮನಸ್ಸು ಮಾತ್ರವಲ್ಲ, ಜನರ ಕಷ್ಟಗಳನ್ನು ತಕ್ಷಣ ಅರ್ಥ ಮಾಡಿಕೊಳ್ಳುವ ಶಕ್ತಿಯೂ ಇದೆ. ಜನರು ಬಹಳ ನಿರೀಕ್ಷೆ ಇಟ್ಟುಕೊಂಡು ಬರುತ್ತಾರೆ. ಯಾರಿಗೂ ನಿರಾಸೆ ಮಾಡುವುದಿಲ್ಲ.

ಯಾವುದೋ ಊರಿಗೆ ಹೋದಾಗ ಅಲ್ಲಿ ಜನರು ಹಕ್ಕುಪತ್ರ ಸಿಕ್ಕಿಲ್ಲ ಎಂದು ಅಪ್ಪಾಜಿಯ ಹತ್ತಿರ ಹೇಳಿಕೊಂಡರೆ ಅವರಿಗೆ ಹಕ್ಕು ಪತ್ರ ಕೊಡಿಸುವವರೆಗೆ ಅವರು ವಿರಮಿಸುವುದಿಲ್ಲ. ಅಧಿಕಾರಿಗಳನ್ನು ಕರೆದು ಹಕ್ಕುಪತ್ರ ನೀಡುವಂತೆ ಸೂಚನೆ ನೀಡುತ್ತಾರೆ. ಬಳಿಕ ಅದು ಏನಾಯಿತು? ಎಲ್ಲಿಗೆ ಮುಟ್ಟಿತು ಎಲ್ಲವನ್ನೂ ವಿಚಾರಿಸಿ ಹಕ್ಕುಪತ್ರ ತಲುಪುವವರೆಗೆ ನೋಡಿಕೊಳ್ಳುತ್ತಾರೆ. ಇದು ಅವರು ಕೆಲಸ ಮಾಡುವ ರೀತಿಗೆ ಒಂದು ಉದಾಹರಣೆ.

ಮನೆಯಲ್ಲಿ ಅಪ್ಪಾಜಿಯೇ ಬಹುತೇಕ ಎಲ್ಲ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಕೆಲವೊಂದು ವಿಚಾರಗಳನ್ನು ಕುಟುಂಬದ ಸದಸ್ಯರ ಜತೆಗೆ ಚರ್ಚೆ ಮಾಡುತ್ತಾರೆ. ಅಲ್ಲಿಯೂ ಅಂತಿಮವಾಗಿ ಅವರದ್ದೇ ನಿರ್ಧಾರವಾಗಿರುತ್ತದೆ. ಅನುಭವದ ಬಲದಿಂದ ಎಲ್ಲ ದೃಷ್ಟಿಯಿಂದ ಚಿಂತನೆ ಮಾಡಿ ಅವರು ತೀರ್ಮಾನಕ್ಕೆ ಬಂದಿರುವುದರಿಂದ ಅದರಿಂದ ಒಳ್ಳೆಯದೇ ಆಗುತ್ತದೆ.

ಕರ್ಮಯೋಗಿ ಎಂಬ ಪದ ಅಪ್ಪಾಜಿಗೆ ಅನ್ವಯವಾಗುತ್ತದೆ. ಅವರು ಕೆಲಸವನ್ನು ಎಷ್ಟು ಶ್ರದ್ಧೆಯಿಂದ ಮಾಡುತ್ತಾರೋ ಅಷ್ಟೇ ಶ್ರದ್ಧೆಯಿಂದ ದೈನಂದಿನ ಬದುಕನ್ನೂ ನಡೆಸುತ್ತಾರೆ. ಯಾವುದೇ ಊರಿಗೆ ಹೋಗಿ ಬಂದರೂ, ಸುಸ್ತಾಗಿದ್ದರೂ, ಜ್ವರ ಇದ್ದರೂ ಬಕ್ಕಪ್ಪನ ದೇವಸ್ಥಾನಕ್ಕೆ ಹೋಗಿ ನಮಸ್ಕಾರ ಮಾಡಿಯೇ ಬರುತ್ತಾರೆ. ಅದೇ ಅವರಲ್ಲಿ ಸಕಾರಾತ್ಮಕ ಶಕ್ತಿಯನ್ನು ತುಂಬಿದೆ. ಅವರ ಊಟ ಕೂಡ ಬಹಳ ಸರಳ. ರೊಟ್ಟಿ ಇಲ್ಲವೇ ಮುದ್ದೆ, ಚಟ್ನಿ, ಸಾರು, ಜತೆಗೆ ಯಾವುದಾದರೂ ಒಂದು ಸಿಹಿ ತಿನಿಸು ಇಂದಿಗೂ ಬೇಕು. ಪಾಯಸ, ಗೋಧಿ ಹುಗ್ಗಿ ಅಥವಾ ಯಾವುದಾರೂ ಸಿಹಿಯ ಒಂದು ಸಣ್ಣ ತುಂಡಾದರೂ ಅವರಿಗೆ ಬೇಕು.

ಹೀಗೆ ಶಿಸ್ತು ಬದ್ಧ ವ್ಯಕ್ತಿಯ ಮನೆಯ ಸೊಸೆ ಎಂಬುದು ನನ್ನ ಹೆಮ್ಮೆ. ನನ್ನದು ಮಾತ್ರವಲ್ಲ ಎಲ್ಲ ಮೂವರು ಸೊಸೆಯರ ಹೆಮ್ಮೆ. ನಮ್ಮ ಕುಟುಂಬದ ಹೆಮ್ಮೆ.

(ನಿರೂಪಣೆ: ಬಾಲಕೃಷ್ಣ ಪಿ.ಎಚ್.)

ಸಿರಿವಂತರಷ್ಟೇ ಅಲ್ಲ; ಗುಣವಂತರೂ ಹೌದು...

ಬಡವರ ಬೆವರಿನ ಬೆಲೆ ಅರಿತ ಲೋಕಾನುಭವಿ ಶಾಮನೂರು ಶಿವಶಂಕರಪ್ಪ ಸಿರಿವಂತರಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಾಗಿ ಅವರೊಬ್ಬ ಹೃದಯವಂತ! ಹಮ್ಮು-ಬಿಮ್ಮಿಲ್ಲದ, ದ್ವೇಷ, ಅಸೂಯೆ ಗೊತ್ತಿಲ್ಲದ, ಪ್ರೀತಿ, ಸ್ನೇಹ ಹಂಚುವ ಗುಣವಂತ ಇವರು. ಯಾರಿಗೂ ಕೆಡುಕು ಬಯಸದ, ತಂಟೆ-ತಕರಾರಿಲ್ಲದ ಈ ಸ್ನೇಹ ಜೀವಿ ಜೂನ್ 16ರಂದು 92ನೇ ವರ್ಷಕ್ಕೆ ಪದಾರ್ಪಣೆ ಮಾಡುತ್ತಿರುವ ಹೊತ್ತಲ್ಲಿ ತಮ್ಮ ಲೋಕಾನುಭವ ಹಂಚಿಕೊಂಡಿದ್ದು, ಅದರ ಆಯ್ದ ಭಾಗ ಇಲ್ಲಿದೆ.

★ ನೀವೀಗ 91 ವರ್ಷ ದಾಟಿ 92ಕ್ಕೆ ಕಾಲಿರಿಸಿದ್ದೀರಿ. ಈಗಲೂ 60 ವಯಸ್ಸಿನ ಯೌವ್ವನ ನಿಮ್ಮದು. ಯುವಕರನ್ನು ನಾಚಿಸುವಂತೆ ಸದಾ ಕಾರ್ಯ ನಿರತರಾಗಿರುತ್ತೀರಿ. ಕನ್ನಡಕವಿಲ್ಲದೆ ಪತ್ರಿಕೆ ಓದುತ್ತೀರಿ. ನೆನಪಿನ ಶಕ್ತಿಯಲ್ಲಿ ಎಲ್ಲರನ್ನೂ ಮೀರಿಸುತ್ತೀರಿ. ಗಂಟೆಗಟ್ಟಲೇ ದೇವರ ಪೂಜೆಗೆ ಕೂರುತ್ತೀರಿ. ನಿಮಗೆ ಬಿಪಿ, ಶುಗರ್ ಯಾವುದೂ ಇಲ್ಲ. ನಿಮ್ಮ ಆರೋಗ್ಯದ ಗುಟ್ಟೇನು?

ಶಾಮನೂರು ಶಿವಶಂಕರಪ್ಪ (ಎಸ್ಸೆಸ್): ಯಾರಿಗೂ ಕೆಡುಕು ಬಯಸದೆ ಇರುವುದು ನನ್ನ ಆರೋಗ್ಯ ಚೆನ್ನಾಗಿರಲು ಕಾರಣ ಅಂದುಕೊಂಡಿದ್ದೇನೆ. ನನ್ನಲ್ಲಿ ದ್ವೇಷಕ್ಕೆ ಅವಕಾಶವಿಲ್ಲ. ದ್ವೇಷ, ಅಸೂಯೆ, ಮೊದಲು ನಮ್ಮ ಆರೋಗ್ಯವನ್ನೇ ಹಾಳು ಮಾಡುತ್ತದೆ. ಪಾಟೀಲ ಪುಟ್ಟಪ್ಪನವರು ಯಾವಾಗಲೂ ಹೇಳುತ್ತಿದ್ದಂತೆ ದ್ವೇಷ ಸಾಧಿಸಲು ನಾವು ಸಾವಿರಾರು ವರ್ಷ ಬದುಕುವುದಿಲ್ಲ.

★ ನೀವು ವರ್ತಕರು ಅಥವಾ ರಾಜಕಾರಣಿ ಆಗದೆ ಇದ್ದಿದ್ದರೆ ಏನಾಗಬೇಕೆಂದು ಬಯಸಿದ್ದಿರಿ?

ಎಸ್ಸೆಸ್: ಯಾವ ಆಸೆಯೂ ಇರಲಿಲ್ಲ. ತಂದೆ, ತಾಯಿ, ಚಿಕ್ಕಪ್ಪ ತೋರಿದ ದಾರಿಯಲ್ಲಿ ನಡೆದಿದ್ದೇನೆ.

★ ನಿಮ್ಮ ಬದುಕಿನ ಗುರು ಅಥವಾ ಮಾರ್ಗದರ್ಶಕ ಯಾರು?

ಎಸ್ಸೆಸ್: ಗುರು, ಮಾರ್ಗದರ್ಶಕ, ಎಲ್ಲವೂ ನನ್ನ ಚಿಕ್ಕಪ್ಪ ಶಾಮನೂರು ಶಿವಪ್ಪನವರು. ನಾನು ರಾಜಕೀಯದಲ್ಲಿ ಮುಂದೆ ಬರಬೇಕು ಎಂದು ಸದಾ ಪ್ರೋತ್ಸಾಹಿಸುತ್ತಿದ್ದರು. ಎಷ್ಟೇ ಖರ್ಚಾಗಲಿ ಬಿಡಬೇಡ ನಾನು ಕೊಡ್ತಿನಿ, ಎಲೆಕ್ಷನ್ ಗೆಲ್ಲು ಅಂತಿದ್ರು.

★ ನಿಮಗೆ ಎಂಎಲ್‌ಎ ಟಿಕೆಟ್ ಸಿಕ್ಕಿದ್ದೇ ತಡವಾಗಿ. ಮುಖ್ಯಮಂತ್ರಿ ಆಗಬೇಕೆಂದು ಕನಸು ಮೊದಲಿನಿಂದಲೂ ಇತ್ತಾ?

ಎಸ್ಸೆಸ್: ಹಲವಾರು ಕಾರಣಗಳಿಂದ ನನಗೆ ಎಂಎಲ್‌ಎ ಟಿಕೆಟ್ ತಪ್ಪಿಸಲಾಯಿತು. ಕೊನೆಗೆ ಜಾಫರ್ ಷರೀಫ್ ಅವರ ನೆರವಿನಿಂದ ಟಿಕೆಟ್ ಸಿಕ್ಕಿತು. ಮುಖ್ಯಮಂತ್ರಿ ಆಗಬೇಕೆಂಬ ಕನಸು ಮೊದಲಿನಿಂದ ಇರಲಿಲ್ಲ. ನೀವು ಮಾಧ್ಯಮದವರು ಕೇಳಿದಾಗ ಹಾಗೆ ಹೇಳುತ್ತೇನೆ ಅಷ್ಟೇ.

★ ನೀವು ಅಪಾರ ದೈವಭಕ್ತರು. ದೇವರಿದ್ದಾನೆ ಎಂಬ ಅನುಭವ ನಿಮಗೆ ಎಂದಾದರೂ ಆಗಿದೆಯೇ?

ಎಸ್ಸೆಸ್: ಬಹಳ ಸಲ ಆಗಿದೆ. ದೇವರ ಪೂಜೆಯನ್ನು ನಾನು ಎಂದೂ ಬಿಟ್ಟಿಲ್ಲ. ದೇವರೂ ನನ್ನ ಕೈ ಬಿಟ್ಟಿಲ್ಲ.

★ ನಿಮ್ಮನ್ನು ಅಜಾತ ಶತ್ರು ಅಂತಾರೆ. ನಿಮಗೂ ಶತ್ರುಗಳು ಇದಾರಾ?

ಎಸ್ಸೆಸ್: (ನಗುತ್ತ ತಮ್ಮ ಜತೆಗಿದ್ದ ಅವರ 50 ವರ್ಷಗಳ ಒಡನಾಡಿ ಅಥಣಿ ವೀರಣ್ಣ ಅವರನ್ನು, 'ಶತ್ರುಗಳು ಅದಾರೇನ್ರಿ' ಎಂದು ಕೇಳಿದರಲ್ಲದೆ,) 'ನನಗೆ ಯಾರೂ ಶತ್ರುಗಳಿಲ್ಲ' ಎಂದರು. ಈ ಮಾತಿಗೆ ದನಿಗೂಡಿಸಿದ ಅಥಣಿ ವೀರಣ್ಣನವರು, 'ಮೊದಲು ರಾಜಕೀಯದಲ್ಲಿ ವಿರೋಧಿಗಳಿದ್ದರು, ಆದರೆ, ಶತ್ರುಗಳು ಯಾರೂ ಇಲ್ಲ' ಎಂದರು.

★ ಇವತ್ತಿನ ರಾಜಕಾರಣ ನೋಡಿದರೆ ಏನೆನ್ನಿಸುತ್ತದೆ?

ಎಸ್ಸೆಸ್: ಹೊಲಸೆದ್ದು ಹೋಗಿದೆ. ಹಣ, ಅಧಿಕಾರಕ್ಕೆ ಏನು ಬೇಕಾದ್ರೂ ಮಾಡ್ತಾರೆ. ಪರಸ್ಪರ ಕೆಸರೆರಚುವುದೇ ರಾಜಕಾರಣ ಆಗಿದೆ.

★ ನಿಮಗೂ ಕೋಪ ಬರುತ್ತದಾ? ಬಂದದ್ದು ಯಾರೂ ನೋಡಿಲ್ಲ?

ಎಸ್ಸೆಸ್: ಬರುತ್ತದೆ. ಆದರದು ಸಾತ್ವಿಕ ಕೋಪ.

★ ನೀವು ಆರಂಭದಿಂದಲೂ ಶ್ರೀಮಂತರಾ?

ಎಸ್ಸೆಸ್: ಇಲ್ಲ, ನಮ್ಮ ಅಂಗಡಿ, ವ್ಯವಹಾರ, ಅಕ್ಕಿ ಮಿಲ್ಲುಗಳಿಂದ ಮುಂದೆ ಬಂದೆವು.

★ ನಿಮ್ಮ ಬದುಕಿನಲ್ಲಿ ಸಂತೃಪ್ತಿ ಸಿಕ್ಕಿದೆಯೇ?

ಎಸ್ಸೆಸ್: ತೃಪ್ತಿ, ಸಮಾಧಾನ ಎಲ್ಲವೂ ಸಿಕ್ಕಿದೆ. ನನ್ನ ಪತ್ನಿ ಇಲ್ಲ ಎಂಬುದನ್ನು ಬಿಟ್ಟರೆ ಬೇರೆಲ್ಲ ಸಿಕ್ಕಿದೆ.



ಸಂದರ್ಶನ: ಬಿ.ಎನ್.ಮಲ್ಲೇಶ್, ಪತ್ರಕರ್ತರು, ಸಾಹಿತಿ

ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮಾಜಿ ಮುಖ್ಯಮಂತ್ರಿ, ದಿವಂಗತ ದೇವರಾಜ ಅರಸ್ (ಬಲತುದಿ) ಹಾಗೂ ಮಾಜಿ ಸಚಿವ, ದಿವಂಗತ ಕೆ.ಎಚ್. ರಂಗನಾಥ್ ಅವರೊಂದಿಗೆ ದಾವಣಗೆರೆಯಲ್ಲಿ ಕುಳಿತು ಭೋಜನ ಮಾಡಿದ ಕ್ಷಣ. (ಸಂಗ್ರಹ ಚಿತ್ರ: ಎಚ್.ಬಿ. ಮಂಜುನಾಥ್)

ವೀರಶೈವ – ಲಿಂಗಾಯತ ಸಮಾಜ ಒಡೆಯದಂತೆ ಕಾಪಾಡಿದ ಎಸ್‌ಎಸ್

ವೀರಶೈವ ಮತ್ತು ಲಿಂಗಾಯತ ಸಮಾಜ ಬೇರೆ ಬೇರೆ ಎಂದು ವಿವಾದ ಉಂಟಾದಾಗ ಎರಡೂ ಒಂದೇ ಎಂದು ಗಟ್ಟಿಯಾಗಿ ನಿಂತು ಒಗಟ್ಟಿನಿಂದ ಸಾಗುವಂತೆ ಮಾಡಲು ಹಠತೊಟ್ಟವರು ಶಾಮನೂರು ಶಿವಶಂಕರಪ್ಪ ಅವರು.

1904ರಲ್ಲಿ ಸ್ಥಾಪನೆಯಾದ ಅಖಿಲ ಭಾರತ ವೀರಶೈವ ಮಹಾಸಭಾವನ್ನು 2012ರಿಂದ ಮುನ್ನಡೆಸುತ್ತಿರುವ ಶಾಮನೂರು ಶಿವಶಂಕರಪ್ಪ ಅವರು ಅದರಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದವರು. ಸಮಾಜದ ಅಭಿವೃದ್ಧಿಗಾಗಿ ನಿರಂತರ ತೊಡಗಿಸಿಕೊಂಡವರು.

ಈಗ ಮಹಸಭಾದ ಹೆಸರನ್ನು ಮಾರ್ಪಾಡು ಮಾಡಿ ಯಾರಿಗೂ ನೋವಾಗದಂತೆ ನೋಡಿಕೊಳ್ಳಲು ಮುಂದಾಗಿದ್ದಾರೆ. ಅಖಿಲ ಭಾರತ ವೀರಶೈವ ಮಹಾಸಭಾವು ಇನ್ನು ಮುಂದೆ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಆಗಲಿದೆ. ಈ ಬಗ್ಗೆ ಮಹಾಸಭಾದ ಪದಾಧಿಕಾರಿಗಳ ಸಭೆಯಲ್ಲಿ ಚರ್ಚೆಯಾಗಿದೆ. ಇನ್ನೂ ನೋಂದಣಿ ದಾಖಲೆಯಲ್ಲಿ ಸೇರಬೇಕಿದೆ. ಆ ಪ್ರಕ್ರಿಯೆ ಮುಂದುವರಿದಿದೆ.

'ಒಡೆಯುವ ಕೆಲಸ ನನ್ನದಲ್ಲ, ಎಲ್ಲರನ್ನು ಎಲ್ಲವನ್ನೂ ಜೋಡಿಸುವ ಕೆಲಸವನ್ನು ನಾನು ಮಾಡುತ್ತೇನೆ' ಎಂದು ತಮ್ಮ ಕಾರ್ಯದ ಮೂಲಕ, ತಮ್ಮ ಬದುಕಿನ ಮೂಲಕ ತೋರಿಸುತ್ತಾ ಬಂದವರು ಶಾಮನೂರು ಶಿವಶಂಕರಪ್ಪ ಅವರು.

ಶಾಮನೂರು ಶಿವಶಂಕರಪ್ಪ ಅವರ ಜನ್ಮದಿನದಂದು ಕುಟುಂಬದ ಸದಸ್ಯರೆಲ್ಲ ಸೇರಿಕೊಂಡು ಆಚರಿಸಿದ ಕ್ಷಣ. (ಸಂಗ್ರಹ ಚಿತ್ರ)

ಎಲ್ಲರನ್ನೂ ಒಳಗೊಳ್ಳುವ ಮನೋಭಾವದ ಶಾಮನೂರು

ಶಾಮನೂರು ಶಿವಶಂಕರಪ್ಪ ಅವರು ಎಲ್ಲರ ಜತೆ ಉತ್ತಮ ಸಂಬಂಧ ಹೊಂದಿದ್ದಾರೆ. ಅವರಿಗೆ ಎಲ್ಲರೂ ಸ್ನೇಹಿತರು, ಬಂಧುಗಳು. ಯಾರ ಜತೆಗೂ ದ್ವೇಷ ಕಟ್ಟಿಕೊಂಡವರಲ್ಲ. ಹೀಗಾಗಿ ಎಲ್ಲ ಪಕ್ಷಗಳಲ್ಲಿ ಅವರ ಸ್ನೇಹಿತರು, ಹಿತೈಷಿಗಳು, ಬಂಧುಗಳು ಇದ್ದಾರೆ. ಅವರ ಸ್ನೇಹ ಗುಣಕ್ಕೆ ಬಿಜೆಪಿ, ಕಾಂಗ್ರೆಸ್ ಎಂಬ ಪಕ್ಷಗಳ ಬೇಧವಿಲ್ಲ. ಅವರು ಸರ್ವರನ್ನು ಒಳಗೊಳ್ಳುವ ಸ್ನೇಹ ಮನೋಭಾವದವರು ಬಿಜೆಪಿ ನಾಯಕ ಜಗದೀಶ್ ಶೆಟ್ಟರ್ ಜತೆ ಅವರು ನೆಂಟಸ್ತಿಕೆ ಬೆಳೆಸಿದ್ದಾರೆ.

ಜಗದೀಶ್ ಶೆಟ್ಟರ್ ಅವರ ಪುತ್ರನಿಗೆ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗಳು ಅಂದರೆ ಶಾಮನೂರು ಅವರ ಪುತ್ರ ಎಸ್. ಎಸ್. ಗಣೇಶ್ ಅವರ ಪುತ್ರಿಯನ್ನು ವಿವಾಹ ಮಾಡಿಕೊಡಲಾಗಿದೆ. ಕಾಂಗ್ರೆಸ್ ನಾಯಕ ಎಂ.ಬಿ. ಪಾಟೀಲ ಅವರ ಪುತ್ರನಿಗೆ ಎಸ್. ಎಸ್. ಗಣೇಶ್ ಅವರ ಎರಡನೇ ಪುತ್ರಿ ಯನ್ನು ಮದುವೆ ಮಾಡಿಕೊಡುವ ಬಗ್ಗೆ ಮಾತುಕತೆ ನಡೆಯುತ್ತಿದೆ.

ಮುಖ್ಯಮಂತ್ರಿ, ಬಸವರಾಜ ಬೊಮ್ಮಾಯಿ ಅವರ ಆಪ್ತ ಸ್ನೇಹಿತ ಚೆನ್ನುಪಾಟೀಲ ಅವರ ಪುತ್ರನ ಜತೆ ಶಾಮನೂರು ಅವರ ಪುತ್ರ ಎಸ್.ಎಸ್. ಬಕ್ಕೇಶ್ ಅವರ ಮಗಳ ವಿವಾಹ ಜೂನ್ 16ರಂದು ನಡೆಯಲಿದೆ. ಶ್ಯಾಮನೂರು ಅವರು ನೆಂಟಸ್ತಿಕೆ ಬೆಳೆಸುವಾಗ ಲಿಂಗಾಯತ ಸಮುದಾಯದ ಒಳಪಂಗಡಗಳ ಬಗ್ಗೆ ಗಮನ ಕೊಡುವುದಿಲ್ಲ. ತಾವು ಸಾದರ ಲಿಂಗಾಯತ ಸಮುದಾಯ ದವರಾದರೂ ಬಣಜಿಗರ ಜತೆ ನೆಂಟಸ್ತಿಕೆ ಬೆಳೆಸಿದ್ದಾರೆ. ಇದು ಬಹಳ ವಿಶೇಷ ಎನ್ನುತ್ತಾರೆ ಅವರ ನಿಕಟವರ್ತಿ ಅಣಬೇರು ರಾಜಣ್ಣ.

ಶಾಮನೂರು ಅವರಿಗೆ ಜಾತಿ ಭೇದವಿಲ್ಲ. ಹೀಗಾಗಿ ಎಲ್ಲ ಜಾತಿಯ ಜನರು, ನಾಯಕರು, ಮಠಾಧೀಶರು ಅವರನ್ನು ಇಷ್ಟಪಡುತ್ತಾರೆ, ಗೌರವ ಕೊಡುತ್ತಾರೆ. ಹೀಗಾಗಿ ಎಲ್ಲರಿಗೂ ಅವರು ಅಚ್ಚುಮೆಚ್ಚು.

‘ಒಂಟಿ ಮನೆ’ ಪುನರಾರಂಭಕ್ಕೆ ನಿರ್ಧಾರ

ಬಸವರಾಜ ಬೊಮ್ಮಾಯಿ ಮಾಹಿತಿ • ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ಕಾಮಗಾರಿಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಡವರು ಹಾಗೂ ಹಿಂದುಳಿದವರಿಗೆ ಮನೆ ನಿರ್ಮಿಸಲು ಆರ್ಥಿಕ ಸಹಾಯ ನೀಡುವ ಒಂಟಿ ಮನೆ ಯೋಜನೆಯನ್ನು ಪುನಃ ಪ್ರಾರಂಭಿಸಲಾಗುವುದು. ಈ ಬಗ್ಗೆ ಶೀಘ್ರದಲ್ಲಿಯೇ ಆದೇಶ ಹೊರಡಿಸಲಾಗುತ್ತದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ‘ಕೆ-100 ಯೋಜನೆ’ ಕಾಮಗಾರಿಯ ವೀಕ್ಷಣೆ, ನವೀಕರಣಗೊಂಡಿರುವ ಬೈರಸಂದ್ರ ಕೆರೆ ಹಾಗೂ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ ಎಂ.ಎಸ್. ಬಹುಮಹಡಿ ವಸತಿ ಕಟ್ಟಡ ಉದ್ಘಾಟನೆ, ಗಾಂಧಿಬಜಾರಿನಲ್ಲಿ ಬಹುಮಹಡಿ ವಾಹನ ನಿಲ್ದಾಣ ಕಟ್ಟಡ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಬಹುಮಹಡಿ ವಾಹನ ನಿಲ್ದಾಣ ಕಟ್ಟಡ ಕಾಮಗಾರಿಯ ಶಂಕುಸ್ಥಾಪನೆಯನ್ನು ಬಸವರಾಜ ಬೊಮ್ಮಾಯಿ ನೆರವೇರಿಸಿದರು. ತುಷಾರ್ ಗಿರಿನಾಥ್, ಆರ್. ಅಶೋಕ್, ಉದಯ್ ಬಿ. ಗರುಡಾಚಾರ್, ತೇಜಸ್ವಿ ಸೂರ್ಯ, ಬಿಜೆಪಿ ಮುಖಂಡ ಡಿ.ಎನ್. ರಮೇಶ್ ಹಾಗೂ ಅಧಿಕಾರಿಗಳು ಇದ್ದಾರೆ —ಪ್ರಜಾವಾಣಿ ಚಿತ್ರ

‘ಬಿಬಿಎಂಪಿ ಅನುಷ್ಠಾನ ಮಾಡಿದ್ದ ಒಂಟಿ ಮನೆ ಯೋಜನೆಯು ಕೋವಿಡ್‌ನಿಂದಾಗಿ ಸ್ಥಗಿತವಾಗಿತ್ತು. ಈ ಯೋಜನೆಯನ್ನು ಪ್ರಾರಂಭಿಸುವುದರಿಂದ ಸ್ಥಳವಿದ್ದವರು ಒಂಟಿ ಮನೆ ನಿರ್ಮಾಣ ಮಾಡಿಕೊಳ್ಳಲು ಸಹಾಯವಾಗಲಿದೆ. ಪ್ರತಿ ವಾರ್ಡ್‌ಗೆ ಮನೆಗಳ ಸಂಖ್ಯೆಯನ್ನು ನಿಗದಿ ಮಾಡಲಾಗುವುದು’ ಎಂದರು.

‘ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಅಡಿ ಇರುವ ಆಸ್ಪತ್ರೆಗಳಿಗೆ ಏಕಸ್ವಾಮ್ಯ ಆಡಳಿತ ತರಲಾಗುತ್ತದೆ. 20 ಸರ್ಕಾರಿ ಶಾಲೆಗಳನ್ನು ಆಧುನೀಕರಣ ಮಾಡಲಾಗುತ್ತಿದೆ. ಬೆಂಗಳೂರಿನ ಅಂತರ ರಾಷ್ಟ್ರೀಯ ಮಟ್ಟದ ಖ್ಯಾತಿಗೆ ಗರಿ ಮೂಡಿಸಲು ಇನ್ನಷ್ಟು ಕಾರ್ಯಕ್ರಮಗಳನ್ನು ಜೋಡಿಸಲಾಗುತ್ತಿದೆ’ ಎಂದು ಅವರು ಹೇಳಿದರು.

ಸಮಸ್ಯೆಗೆ ಪರಿಹಾರ: ‘₹15 ಸಾವಿರ ಕೋಟಿ ವೆಚ್ಚದ ಉಪನಗರ ರೈಲು ಹಾಗೂ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಯೋಜನೆಗೆ ಇದೇ 20ರಂದು ಪ್ರಧಾನಿ ನರೇಂದ್ರ ಮೋದಿ ಅಡಿಗಲ್ಲು ಹಾಕಲಿದ್ದಾರೆ. ಈ ಎರಡು ಯೋಜನೆಗಳು ಪೂರ್ಣಗೊಂಡರೆ ನಗರದ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಯಾಗಲಿದೆ. ಬೆಂಗಳೂರು ನಗರದ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹8 ಸಾವಿರ ಕೋಟಿ ಅನುದಾನ ಒದಗಿಸಲಾಗಿದೆ’ ಎಂದು ವಿವರಿಸಿದರು.

‘ಮಳೆ ನಿಂತ ಕೂಡಲೇ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಯನ್ನು ₹1,600 ಕೋಟಿ ವೆಚ್ಚದಲ್ಲಿ ಪ್ರಾರಂಭ ಮಾಡಲಾಗುವುದು. ಸಾರ್ವಜನಿಕರಿಗೆ ತೊಂದರೆ ಆಗದಂತೆ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲಾಗುವುದು’ ಎಂದು ಭರವಸೆ ನೀಡಿದರು.

‘ಬೆಂಗಳೂರಿನ ಕಂದಾಯ ಪ್ರದೇಶಗಳಲ್ಲಿ ಅಕ್ರಮವನ್ನು ಸಕ್ರಮ ಮಾಡಲು ಕಾನೂನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಸುಪ್ರೀಂ ಕೋರ್ಟ್‌ಗೆ ದಾಖಲೆಗಳನ್ನು ಒದಗಿಸಲಾಗಿದೆ. ಆದಷ್ಟು ಬೇಗ ಇದಕ್ಕೆ ಪರಿಹಾರ ಸಿಗುವ ವಿಶ್ವಾಸವಿದೆ’ ಎಂದು ಹೇಳಿದರು.

ಕಂದಾಯ ಸಚಿವ ಆರ್. ಅಶೋಕ, ಶಾಸಕರಾದ ಉದಯ್ ಬಿ. ಗರುಡಾಚಾರ್, ರವಿ ಸುಬ್ರಮಣ್ಯ, ಸಂಸದ ತೇಜಸ್ವಿ ಸೂರ್ಯ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಜಲಮಂಡಳಿ ಅಧ್ಯಕ್ಷ ಜಯರಾಮ್, ಬೆಂಗಳೂರು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಹಾಗೂ ಅಧಿಕಾರಿಗಳು ಇದ್ದರು.

‘ಚರಂಡಿ ನೀರು ಶುದ್ಧೀಕರಣ’

‘ರಾಜಕಾಲುವೆ ಸ್ವಚ್ಛತೆಗೆ ಸಂಬಂಧಿಸಿದಂತೆ ಬಿಬಿಎಂಪಿ ಹಾಗೂ ನಗರಾಭಿವೃದ್ಧಿ ಇಲಾಖೆಯು ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಹೊಸ ಪ್ರಯೋಗ ಮಾಡಿದೆ. ರಾಜಕಾಲುವೆಯನ್ನು ಸ್ವಚ್ಛಗೊಳಿಸಿ, ಅದಕ್ಕೆ ಬರುವ ಚರಂಡಿ ನೀರನ್ನು ಶುದ್ಧೀಕರಣ ಮಾಡಿ, ಅಕ್ಕಪಕ್ಕದ ಸ್ಥಳವನ್ನು ನಾಗರಿಕರ ಜಲಮಾರ್ಗವನ್ನಾಗಿ ಮಾಡಲಾಗುತ್ತಿದೆ. ಈ ಯೋಜನೆಯಡಿ ಮೆಜೆಸ್ಟಿಕ್‌ನಿಂದ ಬೆಳ್ಳಂದೂರು ಕೆರೆಯವರೆಗೆ 24 ಕಿ.ಮೀ. ಗುರುತಿಸಲಾಗಿದೆ. ಮೊದಲ ಹಂತವಾಗಿ ಮೂರು ತಿಂಗಳಲ್ಲಿ 9 ಕಿ.ಮೀ. ನಾಗರಿಕರ ಜಲಮಾರ್ಗ ಪೂರ್ಣಗೊಳಿಸಲಾಗುತ್ತದೆ’ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

‘ಬೆಂಗಳೂರು ಬೃಹತ್ ಆಗಿ ಬೆಳೆದಿದೆ. ದಿನನಿತ್ಯ ಇದರ ವಿಸ್ತರಣೆ ಹೆಚ್ಚುತ್ತಿದೆ . ಹೀಗಾಗಿ, ನಗರವನ್ನು ಯೋಜನಾಬದ್ಧವಾಗಿ ನಿರ್ಮಿಸಬೇಕು ಎನ್ನುವ ಚಿಂತನೆಯಿದೆ. ಹಲವಾರು ವಿನೂತನ ಯೋಜನೆಗಳನ್ನು ರೂಪಿಸಲಾಗಿದೆ’ ಎಂದು ಅವರು ತಿಳಿಸಿದರು.

ಎಂಜಿನಿಯರಿಂಗ್ ಕೋರ್ಸ್ ಶೇ 10ರಷ್ಟು ಶುಲ್ಕ ಹೆಚ್ಚಳ?

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶ ಶುಲ್ಕವು ಈ ವರ್ಷದಿಂದ ಹೆಚ್ಚಳವಾಗುವ ಸಾಧ್ಯತೆಯಿದೆ.

ಶುಲ್ಕ ಹೆಚ್ಚಳ ಸಂಬಂಧ ಚರ್ಚಿಸಲು ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದೆ.

ಅನುದಾನರಹಿತ ಖಾಸಗಿ ಎಂಜಿನಿಯ ರಿಂಗ್ ಕಾಲೇಜು ಒಕ್ಕೂಟದ ಅಧ್ಯಕ್ಷ ಮಂಜುನಾಥ್ ಭಂಡಾರಿ ಪ್ರತಿಕ್ರಿಯಿಸಿ, ‘ಶೇ 15ರಷ್ಟು ಶುಲ್ಕ ಹೆಚ್ಚಿಸುವಂತೆ ಕಳೆದ ವರ್ಷವೇ ಮನವಿ ಸಲ್ಲಿಸಿದ್ದೆವು.

ಆದರೆ, ಕೋವಿಡ್ ಕಾರಣಕ್ಕೆ ಹಿಂದಿನ ವರ್ಷದ ಶುಲ್ಕವನ್ನೇ ಮುಂದುವರಿಸಲಾಗಿತ್ತು. ಈ ಶೈಕ್ಷಣಿಕ ಸಾಲಿನಿಂದ ಶೇ 10ರಷ್ಟು ಶುಲ್ಕ ಹೆಚ್ಚಿಸುವುದು ಅನಿವಾರ್ಯ’ ಎಂದರು.

ನೌಕರರ ವರ್ಗಾವಣೆ: ಅವಧಿ ವಿಸ್ತರಣೆ

ಬೆಂಗಳೂರು: ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆ ಅವಧಿ ಜೂನ್ 30ರ ವರೆಗೆ ವಿಸ್ತರಿಸಲಾಗಿದೆ.

ಏಪ್ರಿಲ್ 30ರಂದು ಸರ್ಕಾರ ಹೊರಡಿಸಿದ ಆದೇಶದಲ್ಲಿ 2022–23 ಸಾರ್ವತ್ರಿಕ ವರ್ಗಾವಣೆ ಅವಧಿಯನ್ನು ಜೂನ್ 15ರವರೆಗೆ ನಿಗದಿಪಡಿಸಲಾಗಿತ್ತು. ಅವಧಿಯನ್ನು ಮತ್ತೆ ವಿಸ್ತರಿಸುವ ಅವಶ್ಯವೆಂದು ಪರಿಗಣಿಸಿರುವ ಸರ್ಕಾರ ಬುಧವಾರ ಪರಿಷ್ಕೃತ ಆದೇಶ ಹೊರಡಿಸಿದೆ.

ಹಿರಿಯ ನಾಗರಿಕರ ನಿಂದನೆ ತಡೆ ಜಾಗೃತಿ ದಿನದಲ್ಲಿ ಡಿಸಿಪಿ ಬಸಪ್ಪ ಅಂಗಡಿ

‘ಹಿರಿಯರ ರಕ್ಷಣೆಗೆ ಕಾನೂನಿನ ಬಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿರಿಯ ನಾಗರಿಕರ ರಕ್ಷಣೆಗೆ ಕಾನೂನಿನ ಬಲವಿದ್ದು, ಅವರು ಆತಂಕಕ್ಕೆ ಒಳಗಾಗುವ ಅಗತ್ಯ ಇಲ್ಲ’ ಎಂದು ಬೆಂಗಳೂರು ನಗರ ಅಪರಾಧ ವಿಭಾಗದ ಡಿಸಿಪಿ ಬಸಪ್ಪ ಎಸ್. ಅಂಗಡಿ ಹೇಳಿದರು.

‘ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್’ ನಿಂದ ನಗರದಲ್ಲಿ ಬುಧವಾರ ವಿಶ್ವ ಹಿರಿಯ ನಾಗರಿಕರ ನಿಂದನೆ ತಡೆ ಜಾಗೃತಿ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಹಿರಿಯ ನಾಗರಿಕರು ಅಂಜಿಕೆ ಪಡಬಾರದು. ಹಿರಿಯರ ಅನುಭವಗಳನ್ನು ಸಮಾಜ ಹಾಗೂ ಕುಟುಂಬಸ್ಥರು ಬಳಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಶ್ರೀಮಂತರಿಗೆ ರಕ್ಷಣೆ ಬೇಕಿರುವುದಿಲ್ಲ. ದಲಿತರು, ಬಡವರು, ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರಿಗೆ ರಕ್ಷಣೆ ನೀಡುವುದು ಪೊಲೀಸರ ಮೊದಲ ಆದ್ಯತೆಯಾಗಿದೆ. ಹಿರಿಯರ ಮನಸ್ಸಿಗೆ ಎಂದಿಗೂ ವಯಸ್ಸಾಗಿರುವುದಿಲ್ಲ. ಸಮಸ್ಯೆ ಬಂದಾಗ ಉದಾಸೀನತೆ ತೋರುವುದು ಸಲ್ಲದು. ಪರಿಹಾರಕ್ಕೆ ಸಾಕಷ್ಟು ವೇದಿಕೆಗಳಿವೆ. ಅಲ್ಲಿಗೆ ದೂರು ನೀಡಬಹುದಾಗಿದೆ’ ಎಂದರು.

ನಗರದ ಪೊಲೀಸ್ ಆಯುಕ್ತರ ಕಚೇರಿಯ ಸಮ್ಮೇಳನ ಸಭಾಂಗಣದಲ್ಲಿ ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್ ಬುಧವಾರ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ನಿಂದನೆ ತಡೆ ಜಾಗೃತಿ ದಿನದ ಕಾರ್ಯಕ್ರಮವನ್ನು ಅಪರಾಧ ವಿಭಾಗದ ಡಿಸಿಪಿ ಬಸಪ್ಪ ಎಸ್. ಅಂಗಡಿ ಉದ್ಘಾಟಿಸಿದರು. ಡಾ.ಸಿ.ಆರ್. ಚಂದ್ರಶೇಖರ್, ಎಸ್. ಪ್ರೇಮ್ ಕುಮಾರ್, ಕೆ.ಎಸ್.ಲತಾಕುಮಾರಿ, ಇಂದಿರಾ ಮೆನನ್, ಡಾ.ರಾಧಾ ಎಸ್. ಮೂರ್ತಿ ಇದ್ದಾರೆ. – ಪ್ರಜಾವಾಣಿ ಚಿತ್ರ

‘ಹಿರಿಯರನ್ನು ಸಮಾಜ ಹಾಗೂ ಕುಟುಂಬದ ಸದಸ್ಯರು ಗೌರವದಿಂದ ನಡೆಸಿಕೊಳ್ಳಬೇಕು’ ಎಂದು ತಿಳಿಸಿದರು.

ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ ನಿರ್ದೇಶಕಿ ಕೆ.ಎಸ್.ಲತಾಕುಮಾರಿ ಮಾತನಾಡಿ, ‘ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್ ಮಾನವೀಯ ನೆಲೆಯಲ್ಲಿ ಕೆಲಸ ಮಾಡುತ್ತಿದೆ. ಹಿಂದಿನ ದಿನಗಳಲ್ಲಿ ಹಿರಿತನ ಸಮಸ್ಯೆಯೇ ಆಗಿರಲಿಲ್ಲ. ಸಮಾಜದಲ್ಲಿ ಹಿರಿಯರಿಗೆ ಮನ್ನಣೆಯಿತ್ತು. ಇಂದಿನ ಒತ್ತಡದ ಜೀವನದಲ್ಲಿ ಹಿರಿಯರ ಜೀವನ ಸಮಸ್ಯೆಗೆ ಸಿಲುಕಿದೆ. ಕ್ಲಿಷ್ಟಕರ ಘಟ್ಟ ಎನಿಸುತ್ತಿದೆ. ಹಿರಿಯರ ಅನುಭವಗಳನ್ನು ಸರಿಯಾದ ಮಾರ್ಗದಲ್ಲಿ ಬಳಕೆ ಮಾಡಿಕೊಳ್ಳಬೇಕಿದೆ’ ಎಂದು ಹೇಳಿದರು.

> **ಹಿರಿಯರಿದ್ದ ಮನೆಗಳಲ್ಲಿ ಸಂತೋಷ, ಸುಖ ನೆಲೆಸಿರುತ್ತದೆ. ಹಳ್ಳಿಯಲ್ಲಿ ಈಗಲೂ ಹಿರಿಯ ನಾಗರಿಕರಿಗೆ ಗೌರವ ಲಭಿಸುತ್ತಿದೆ**
>
> **ಕೆ.ಎಸ್.ಲತಾಕುಮಾರಿ**
>
> ನಿರ್ದೇಶಕಿ, ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆ

‘ನೈಟಿಂಗೇಲ್ಸ್ ವೈದ್ಯಕೀಯ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಡಾ.ರಾಧಾ ಎಸ್. ಮೂರ್ತಿ, ‘ಅವಿಭಕ್ತ ಕುಟುಂಬಗಳ ಕಲ್ಪನೆಯೇ ಮರೆಯಾಗಿದೆ. ಹಿರಿಯರ ನಿಂದನೆಯಿಂದ ಅವರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ನಮ್ಮ ಸಂಸ್ಥೆಯ ಸಹಯೋಗದಲ್ಲಿ 2002ರಲ್ಲಿ ಸಹಾಯವಾಣಿ ಆರಂಭಿಸಲಾಗಿತ್ತು. ಕಿರುಕುಳಕ್ಕೆ ಸಂಬಂಧಿಸಿದ ದೂರುಗಳು ನಿತ್ಯವೂ ಬರುತ್ತಿವೆ. ಗಂಭೀರ ಸ್ವರೂಪದ ಪ್ರಕರಣಗಳನ್ನು ಮಧ್ಯಸ್ಥಿಕೆ ಹಾಗೂ ಕಾನೂನು ಸಲಹೆಯ ಮೂಲಕ ಪರಿಹರಿಸಲಾಗುತ್ತಿದೆ’ ಎಂದು ಹೇಳಿದರು.

‘ಹಿರಿಯ ನಾಗರಿಕರು ಸುರಕ್ಷಿತವಾಗಿರಿ ಮತ್ತು ಜಾಗರೂಕರಾಗಿರಿ’ ಎಂಬ ಕೃತಿಯನ್ನು ಬಿಡುಗಡೆ ಮಾಡಲಾಯಿತು.

ವೈದ್ಯ ಸಿ.ಆರ್.ಚಂದ್ರಶೇಖರ್, ಎಸ್.ಪ್ರೇಮಕುಮಾರ ರಾಜ, ಇಂದಿರಾ ಮೆನನ್ ಹಾಜರಿದ್ದರು.

20ರಿಂದ ಹೊಸ ಪ್ಯಾಸೆಂಜರ್ ರೈಲು

ತುಮಕೂರು: ಜಿಲ್ಲೆಯ ಜನರ ಬಹುದಿನಗಳ ಬೇಡಿಕೆಯಾದ ತುಮಕೂರು– ತಿಪಟೂರು– ಅರಸೀಕೆರೆ ಹಾಗೂ ತುಮಕೂರು– ಯಶವಂತಪುರ– ಬಾಣಸವಾಡಿ ನಡುವೆ ಹೊಸದಾಗಿ ಪ್ಯಾಸೆಂಜರ್ ರೈಲು ಸಂಚಾರ ಜೂನ್ 20ರಿಂದ ಆರಂಭವಾಗಲಿದೆ.

ನವದೆಹಲಿಯಲ್ಲಿ ರೈಲ್ವೆ ಮಂಡಳಿ ಅಧ್ಯಕ್ಷ ತ್ರಿಪಾಠಿ ಅವರನ್ನು ಸಂಸದ ಜಿ.ಎಸ್.ಬಸವರಾಜು ಭೇಟಿಮಾಡಿ ಚರ್ಚಿಸಿದ್ದಾರೆ.

ಹೊಸದಾಗಿ ಎರಡು ರೈಲುಗಳ ಸಂಚಾರ ಆರಂಭಿಸುವ ಭರವಸೆಯನ್ನು ರೈಲ್ವೆ ಮಂಡಳಿ ಅಧಿಕಾರಿಗಳು ನೀಡಿದ್ದಾರೆ. ಜೂನ್ 20ರಂದು ನಗರದ ರೈಲು ನಿಲ್ದಾಣದಲ್ಲಿ ನೂತನ ರೈಲುಗಳ ಸಂಚಾರಕ್ಕೆ ಚಾಲನೆ ನೀಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಮಾದಕ ವಸ್ತು ವಶ

ಮಂಗಳೂರು: ಮಾದಕ ವಸ್ತುವಾದ ಮೀಥೈಲೀನ್ ಡಯಾಕ್ಸಿ ಮೆಥಾಂಫೆಟಮೈನ್ (ಎಂಡಿಎಂಎ) ಅನ್ನು ಕಾರಿನಲ್ಲಿ ಸಾಗಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕಾಸರಗೋಡು ಜಿಲ್ಲೆಯ ಉಪ್ಪಳ ಗ್ರಾಮದ ಮಹಮ್ಮದ್ ರಮೀಜ್ (24), ಅಬ್ದುಲ್ ರವೂಫ್ (35), ಸಿರಿಯಾದ ಮೊಹಿದ್ದೀನ್ ರಶೀದ್ (24), ಬೆಂಗಳೂರು ಮಡಿವಾಳದ ಚಿಂಚು ಅಲಿಯಾಸ್ ಸಮೀರಾ (25) ಬಂಧಿತರು.

19ರಂದು ಉಚಿತ ಆರೋಗ್ಯ ಶಿಬಿರ

ಯಲಹಂಕ: ನವಚೇತನ ಆಸ್ಪತ್ರೆ ಹಾಗೂ ಬೆಂಗಳೂರು ನ್ಯೂರೋ ಸೆಂಟರ್ ಸಹಯೋಗದಲ್ಲಿ ಮಾನಸಿಕ ಹಾಗೂ ನರರೋಗಗಳಿಗೆ ಸಂಬಂಧಿಸಿದಂತೆ ಆಪ್ತ ಸಮಾಲೋಚನೆಯ ಜೊತೆಗೆ ಚಿಕಿತ್ಸೆ ನೀಡುವ ಉದ್ದೇಶದಿಂದ ಜೂನ್ 19ರಂದು ಉಚಿತ ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ನರರೋಗಗಳು ಅದರಲ್ಲೂ ಕೋವಿಡ್ ಮಹಾಮಾರಿಯ ನಂತರ ಜನರು ಹಲವಾರು ಮಾನಸಿಕ ಒತ್ತಡಗಳಿಂದ ಬಳಲುತ್ತಿದ್ದಾರೆ. ಇಂತಹವರಿಗೆ ನೆರವಾಗುವ ನಿಟ್ಟಿನಲ್ಲಿ ಶಿಬಿರ ಏರ್ಪಡಿಸಲಾಗಿದೆ ಎಂದು ನವಚೇತನ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಬಿ.ಜಿ.ಗಿರೀಶ್ ಚಂದ್ರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಂದು ಬೆಳಿಗ್ಗೆ 9ರಿಂದ ಮಧ್ಯಾಹ್ನ 2ರ ತನಕ ನಡೆಯಲಿರುವ ಶಿಬಿರದಲ್ಲಿ ಡಾ.ಆರ್.ಉಮಾಶಂಕರ್, ಡಾ.ಕೃಷ್ಣಪ್ರಸಾದ್ ಸೇರಿದಂತೆ ಹಲವು ವೈದ್ಯರು ಪಾಲ್ಗೊಂಡು, ತಪಾಸಣೆ ಹಾಗೂ ಸಮಾಲೋಚನೆ ನಡೆಸಲಿದ್ದಾರೆ ಎಂದು ತಿಳಿಸಿದ್ದಾರೆ. ನೋಂದಣಿ ಹಾಗೂ ಹೆಚ್ಚಿನ ಮಾಹಿತಿಗೆ 080 42480000, 98809 25495 ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಅನುವಾದಿತ ಕೃತಿಗಳ ಬಿಡುಗಡೆ 18ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ನಲ್ಲತಂಬಿ ಅವರ ಮೂರು ತಮಿಳು ಕೃತಿಗಳ ಕನ್ನಡದ ಅನುವಾದ ಪುಸ್ತಕಗಳಾದ ‘ಬಾಪು ಹೆಜ್ಜೆಗಳಲ್ಲಿ’, ‘ಮತ್ತೊಂದು ರಾತ್ರಿ’, ‘ಗುಡಿ-ಗಂಟೆ ಮತ್ತು ಇತರೆ ಕಥೆಗಳು’ ಜೂನ್.18ರಂದು ಶನಿವಾರ ಶೇಷಾದ್ರಿಪುರಂನ ಗಾಂಧಿಭವನದಲ್ಲಿ ಬಿಡುಗಡೆಯಾಗಲಿವೆ ಎಂದು ವಿ.ಎಸ್. ಶ್ರೀಧರ ತಿಳಿಸಿದ್ದಾರೆ.

ತಮಿಳುನಾಡು ಸರ್ಕಾರ ಹಾಗೂ ತಮಿಳ್ ವಳರ್ಚಿ ಕಳಗಂ (ತಮಿಳನಾಡು ಪಠ್ಯಪುಸ್ತಕ ಸೇವಾ ನಿಗಮ) ತಮಿಳು ಭಾಷೆ ಮತ್ತು ಸಾಹಿತ್ಯವನ್ನು ಜಗತ್ತಿಗೆ ಪರಿಚಯಿಸುವ ಉದ್ದೇಶದಿಂದ ಅನುವಾದ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಪ್ರತಿ ಭಾಷೆಗೆ ಅನುವಾದ ಮಾಡಿಸಲು ಒಬ್ಬ ಸಂಯೋಜಕರನ್ನು ನೇಮಿಸಲಾಗಿದೆ. ವಿ.ಎಸ್. ಶ್ರೀಧರ ಅವರು ತಮಿಳು-ಕನ್ನಡ ಅನುವಾದ ಮಾಲಿಕೆಯ ಸಂಯೋಜಕರು.

ಯೋಜನೆ ಅಂಗವಾಗಿ ಮೊದಲ ಹಂತದಲ್ಲಿ ತಮಿಳಿನ ಮೂರು ಕೃತಿಗಳು ಪ್ರಕಟವಾಗುತ್ತಿವೆ. ಗಾಂಧೀಜಿ ಪ್ರಭಾವಕ್ಕೆ ಒಳಗಾಗಿ ತಮಿಳುನಾಡಿನ ಗ್ರಾಮಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಸಮಾಜ ಸುಧಾರಣೆಯಲ್ಲಿ ನಿಸ್ವಾರ್ಥದಿಂದ ತೊಡಗಿಸಿಕೊಂಡು, ತಮ್ಮ ಬಾಳನ್ನೆ ಬದಲಿಸಿಕೊಂಡ 15 ಮಹನೀಯರ ಕುರಿತ ಪ್ರಬಂಧಗಳ ಸಂಕಲನ ‘ಬಾಪೂ ಹೆಜ್ಜೆಗಳಲ್ಲಿ’ (ಲೇ: ಪಾವಣ್ಣನ್, ಪಲ್ಲವ ಪ್ರಕಾಶನ, ಹೊಸಪೇಟೆ). ಇದರಲ್ಲಿ ಪ್ರಸಿದ್ಧರಾದ ರಾಜಾಜಿ, ಕೆ.ಸ್ವಾಮಿನಾಥನ್, ಜೆ.ಸಿ. ಕುಮರಪ್ಪ, ಲಕ್ಷ್ಮಣ ಅಯ್ಯರ್ ಅಂಥವರಲ್ಲದೆ, ಅಜ್ಞಾತರಾಗಿ ಸೇವೆ ಸಲ್ಲಿಸಿದ ಅಂಬುಜಮ್ಮಾಳ್, ಗೋದೈ ಅಮ್ಮಾಳ್, ಶ್ರೀಲಂಕಾದ ರಾಜಗೋಪಾಲ ಮುಂತಾದವರ ಕುರಿತ ಪರಿಚಯವಿದೆ.

‘ಮತ್ತೊಂದು ರಾತ್ರಿ’ (ಗಾಂಧೀಜಿ ಬದುಕಿನ ಕುರಿತ ವಿವಿಧ ತಮಿಳು ಕತೆಗಳ ಸಂಗ್ರಹ–ಅಭಿರುಚಿ ಪ್ರಕಾಶನ, ಮೈಸೂರು) ಕೃತಿಯಲ್ಲಿ ದೇವಿ ಭಾರತಿ, ಜಯಮೋಹನ್, ಶರವಣನ್ ಕಾರ್ತಿಕೇಯನ್, ಕಲೈಸೆಲವಿ , ಎಸ್.ರಾಮಕೃಷ್ಣ, ನಾಗರಾಜನ್ ಮುಂತಾದವರ 11 ಕತೆಗಳಿವೆ. ‘ಗುಡಿ-ಗಂಟೆ ಮತ್ತು ಇತರ ಕತೆಗಳು’ (ಲೇ. ಜಾನಕೀರಾಮನ್, ಲಡಾಯಿ ಪ್ರಕಾಶನ, ಗದಗ)–ಇದು ತಮಿಳಿನ ಪ್ರಸಿದ್ಧ ಕತೆಗಾರ ಜಾನಕೀರಾಮನ್ ಅವರು 1950ರಿಂದ 70ರ ವರೆಗೆ ಬರೆದ 17 ಕತೆಗಳ ಸಂಕಲನ ಎಂದು ವಿ.ಎಸ್.ಶ್ರೀಧರ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

ಇಂದಿನಿಂದ ಬಿಜೆಪಿ ಒಬಿಸಿ ಮೋರ್ಚಾ ರಾಷ್ಟ್ರೀಯ ಪ್ರಶಿಕ್ಷಣ ವರ್ಗ

ಬೆಂಗಳೂರು: ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಷ್ಟ್ರೀಯ ಪ್ರಶಿಕ್ಷಣ ವರ್ಗವು ಗುರುವಾರದಿಂದ ಮೂರು ದಿನಗಳ ಕಾಲ ಯಲಹಂಕದಲ್ಲಿ ನಡೆಯಲಿದೆ ಎಂದು ಪಕ್ಷದ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ನೆ.ಲ. ನರೇಂದ್ರಬಾಬು ಮತ್ತು ರಾಷ್ಟ್ರೀಯ ಘಟಕದ ಪ್ರಧಾನ ಕಾರ್ಯದರ್ಶಿ ಯಶ್‌ಪಾಲ್ ಸುವರ್ಣ ತಿಳಿಸಿದ್ದಾರೆ. ಗುರುವಾರ ಬೆಳಿಗ್ಗೆ 10 ಗಂಟೆಗೆ ಪ್ರಶಿಕ್ಷಣ ವರ್ಗದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ.ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಹಿಂದುಳಿದ ವರ್ಗಗಳ ಮೋರ್ಚಾ ರಾಷ್ಟ್ರೀಯ ಘಟಕದ ಅಧ್ಯಕ್ಷ ಡಾ. ಲಕ್ಷ್ಮಣ್ ಭಾಗವಹಿಸಲಿದ್ದಾರೆ. ವಿವಿಧ ರಾಜ್ಯಗಳ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು ಮತ್ತು ಪ್ರಶಿಕ್ಷಣ ವರ್ಗದ ಸಂಚಾಲಕರು ಈ ಪ್ರಶಿಕ್ಷಣ ವರ್ಗದಲ್ಲಿ ಪಾಲ್ಗೊಳ್ಳುವರು ಎಂದು ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.



ಭೋವಿ ನಿಗಮದ ಎಂ.ಡಿ ಲೀಲಾವತಿ ಬಂಧನ

ಒಂದನೇ ಪುಟದಿಂದ...

‘ಇಬ್ಬರೂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಎಸಿಬಿ ಬೆಂಗಳೂರು ನಗರ ಘಟಕದ ಅಧಿಕಾರಿಗಳು, ತನಿಖೆ ನಡೆಸುತ್ತಿದ್ದಾರೆ. ಪ್ರಕರಣದ ತನಿಖೆಗೆ ಅಗತ್ಯವಿರುವ ಕಡತಗಳನ್ನು ಒದಗಿಸುವಂತೆ ಲೀಲಾವತಿ ಅವರಿಗೆ ಸೂಚಿಸಲಾಗಿತ್ತು. ಆದರೆ, ಕಡತಗಳನ್ನು ಒದಗಿಸದೇ ಅಸಹಕಾರ ತೋರುತ್ತಿದ್ದರು. ಈ ಕಾರಣದಿಂದ ಅವರನ್ನು ಬಂಧಿಸಿದ್ದು, ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಎಸಿಬಿ ತಿಳಿಸಿದೆ.


ಲೀಲಾವತಿ

ಭೋವಿ ಅಭಿವೃದ್ಧಿ ನಿಗಮದಲ್ಲಿ ಸರ್ಕಾರದ ಅನುದಾನ ದುರ್ಬಳಕೆ ಮಾಡಿರುವುದು ಮತ್ತು ಫಲಾನುಭವಿ ಗಳಿಗೆ ವಂಚಿಸಿರುವ ಆರೋಪಕ್ಕೆ ಸಂಬಂ ಧಿಸಿದಂತೆ ಕೆಲವು ತಿಂಗಳುಗಳಿಂದ ಈಚೆಗೆ ಎಸಿಬಿ ಹಲವು ಪ್ರಕರಣಗಳನ್ನು ದಾಖಲಿಸಿತ್ತು. ನಾಗರಾಜಪ್ಪ ಸೇರಿದಂತೆ ಕೆಲವು ಅಧಿಕಾರಿಗಳ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿಯೂ ಮೊಕದ್ದಮೆ ದಾಖಲಿಸಲಾಗಿದೆ.

ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ಬಾಲಭವನದಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದರಿಂದ ಸಾರ್ವಜನಿಕರಿಗೆ ಪ್ರವೇಶವಿಲ್ಲ ಫಲಕವನ್ನು ನೋಡಿ ತೆರಳುತ್ತಿರುವ ಪಾಲಕರು ಮತ್ತು ಮಕ್ಕಳು (ಎಡಚಿತ್ರ). ಬಾಲಭವನದಲ್ಲಿ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿರುವುದು —ಪ್ರಜಾವಾಣಿ ಚಿತ್ರ: ಎಂ.ಎಸ್‌ಮಂಜುನಾಥ್

ಜೂನ್ ಹೊತ್ತಿಗೆ ಮುಗಿಯಬೇಕಿದ್ದ ಬಾಲಭವನದ ಕಾಮಗಾರಿ

ಚಿಣ್ಣರಿಗೆ ಇನ್ನೂ ತೆರೆಯದ ಬಾಲಭವನ

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಮಕ್ಕಳ ಆಕರ್ಷಣೆಯ ಕೇಂದ್ರವಾಗಿರುವ ಬಾಲಭವನದಲ್ಲಿ ಸದಾ ಮಕ್ಕಳ ಚಟುವಟಿಕೆ ನಡೆಯುತ್ತಿತ್ತು. ಆದರೆ ಸ್ಮಾರ್ಟ್ ಸಿಟಿ ಯೋಜನೆ ಅಡಿಯಲ್ಲಿ ಪುನರ್ ನಿರ್ಮಾಣ ಕಾಮಗಾರಿಗಳು ನಡೆಯುತ್ತಿರುವುದರಿಂದ ಬೀಗ ಹಾಕಿರುವ ಗೇಟ್ ನೋಡಿ ಮಕ್ಕಳು ಮತ್ತು ಪಾಲಕರು ನಿರಾಸೆಯಿಂದ ತೆರಳುತ್ತಿದ್ದಾರೆ.

ಕಬ್ಬನ್ ಪಾರ್ಕ್‌ನ 12 ಎಕರೆ ವಿಸ್ತೀರ್ಣದಲ್ಲಿರುವ ಜವಾಹರ್ ಬಾಲಭವನದಲ್ಲಿ ಸ್ಮಾರ್ಟ್ ಸಿಟಿ ವತಿಯಿಂದ ನವೀಕರಣ ಕಾರ್ಯ ನಡೆಯುತ್ತಿದ್ದು, ಜೂನ್‌ನಲ್ಲಿ ಸಾರ್ವಜನಿಕರಿಗೆ ಪ್ರವೇಶ ಸಾಧ್ಯವಾಗಬೇಕಿತ್ತು. ನಿಗದಿತ ಅವಧಿಯೊಳಗೆ ಕಾಮಗಾರಿ ಮುಗಿಯದೇ ಇರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಸಾಂಕ್ರಾಮಿಕ ರೋಗದ ಮೊದಲ ಅಲೆಯಿಂದ ಬಾಲ ಭವನವನ್ನು ಮುಚ್ಚಲಾಗಿದೆ. ಕೆಲವು ಪುನರ್ ನಿರ್ಮಾಣ ಕಾರ್ಯಗಳ ಜೊತೆಗೆ, ಈ ಪ್ರದೇಶದಲ್ಲಿ ಹೊಸದಾಗಿ ಅಂಗವಿಕಲಸ್ನೇಹಿ ಉದ್ಯಾನ ನಿರ್ಮಿಸಲಾಗುತ್ತಿದೆ. ಉದ್ಯಾನದ ಕಾಮಗಾರಿ ಪೂರ್ಣಗೊಂಡ ನಂತರ ಮತ್ತಷ್ಟು ಡಿಜಿಟಲ್ ವ್ಯವಸ್ಥೆಗಳನ್ನು ಅಳವಡಿಸುವ ಗುರಿ ಇದೆ. ಶೀಘ್ರದಲ್ಲೇ ನವೀಕೃತ ಬಾಲಭವನ ಉದ್ಘಾಟಿಸಿ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುವುದು ಎಂದು ಬಾಲಭವನ ಸೊಸೈಟಿಯ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿಕಲಚೇತನರ ಉದ್ಯಾನದಲ್ಲಿ ಅಂಗವಿಕಲ ಮಕ್ಕಳು ವ್ಹೀಲ್ ಚೇರ್ ಮೂಲಕ ಆಟಿಕೆಗಳಲ್ಲಿ ಕುಳಿತುಕೊಂಡು ಆಟ ಆಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸುರಂಗ ಮಾರ್ಗ, ಟ್ರೆಕಿಂಗ್, ಜಾರುಬಂಡೆ ಮತ್ತು ಆ್ಯಂಪಿ ಥಿಯೇಟರ್ ನಿರ್ಮಿಸಲಾಗಿದೆ. ಬಾಸ್ಕೆಟ್ ಬಾಲ್ ಮೈದಾನಕ್ಕೆ ಇಪಿಡಿಎಂ ಫ್ಲೋರಿಂಗ್ ಮಾಡಲಾಗಿದೆ. ಇದರಲ್ಲಿ ಮಕ್ಕಳು ಬಿದ್ದರೂ ನೋವಾಗುವುದಿಲ್ಲ’ ಎಂದು ಮಾಹಿತಿ ನೀಡಿದರು.

ಕಬ್ಬನ್ ಪಾರ್ಕ್‌ನಲ್ಲಿರುವ ಜವಾಹರ್ ಬಾಲಭವನದಲ್ಲಿ ಕಾಮಗಾರಿ ನಡೆಯುತ್ತಿರುವ ಬಗ್ಗೆ ಮಾಹಿತಿ ಇಲ್ಲದ ಕಾರಣ ರಜಾ ದಿನಗಳಲ್ಲಿ ಬಹಳಷ್ಟು ಪಾಲಕರು ಮಕ್ಕಳೊಂದಿಗೆ ಭೇಟಿ ನೀಡುತ್ತಿದ್ದು, ಮುಚ್ಚಿರುವ ಗೇಟ್ ನೋಡಿ ವಾಪಸ್ಸಾಗುತ್ತಿದ್ದಾರೆ. ಕೆಂಗೇರಿ ನಿವಾಸಿ ಪಲ್ಲವಿ ಮತ್ತು ಅವರ ಮಗಳು ಸಾನ್ವಿ ಬಾಲಭವನ ಮುಚ್ಚಿರುವ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಬಹಳ ದಿನಗಳಿಂದ ಸ್ಥಗಿತಗೊಂಡಿರುವ ಬಾಲಭವನವನ್ನು ಸಾರ್ವಜನಿಕರಿಗೆ, ವಿಶೇಷವಾಗಿ ಮಕ್ಕಳಿಗೆ ಮುಕ್ತಗೊಳಿಸಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬೋಟಿಂಗ್‌ಗೆ ಮರುಜೀವ

ಬಾಲಭವನದ ಆವರಣದಲ್ಲಿರುವ ಸಣ್ಣ ಕೆರೆಯಲ್ಲಿ ಈ ಹಿಂದೆ ಮಕ್ಕಳಿಗಾಗಿ ಬೋಟಿಂಗ್ ವ್ಯವಸ್ಥೆ ಮಾಡಲಾಗಿತ್ತು. ಕಾರಣಾಂತರಗಳಿಂದ 2008ರಲ್ಲಿ ಬೋಟಿಂಗ್ ಸ್ಥಗಿತಗೊಳಿಸಲಾಗಿತ್ತು. ಸ್ಮಾರ್ಟ್ ಸಿಟಿ ಯೋಜನೆಯಡಿ ಬಾಲಭವನದಲ್ಲೂ ವಿವಿಧ ಅಭಿವೃದ್ಧಿ ಯೋಜನೆಗಳ ಶೇ 80–90ರಷ್ಟು ಕಾಮಗಾರಿ ಮುಗಿದಿದೆ. ಕೆರೆಯ ಅಭಿವೃದ್ಧಿ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಹೊಸ ಬೋಟ್‌ಗಳ ಸೇರ್ಪಡೆಯೊಂದಿಗೆ ಬೋಟಿಂಗ್‌ಗೆ ಮರುಜೀವ ನೀಡಲಾಗುವುದು ಎಂದು ಚಿಕ್ಕಮ್ಮ ಬಸವರಾಜ್ ಮಾಹಿತಿ ನೀಡಿದರು.

ಜೂನ್ 25 ರಂದು ವಿಕಲಚೇತನಸ್ನೇಹಿ ಉದ್ಯಾನವನ್ನು ಮೈಂಡ್ ಟ್ರೀ ಫೌಂಡೇಶನ್‌ನಿಂದ ಬಾಲಭವನಕ್ಕೆ ಹಸ್ತಾಂತರ ಮಾಡಿಕೊಳ್ಳಲಾಗುತ್ತದೆ

ಚಿಕ್ಕಮ್ಮ ಬಸವರಾಜ್, ಬಾಲಭವನ ಸೊಸೈಟಿ ಅಧ್ಯಕ್ಷೆ

ಸುದ್ದಿ 2 ನಿಮಿಷ

ಬಿಷಪ್ ವಿರುದ್ಧದ ಪ್ರಕರಣ ವಜಾ

ಬೆಂಗಳೂರು: ದಕ್ಷಿಣ ಭಾರತ ಚರ್ಚ್‌ಗಳ ಬಿಷಪ್ ರೆವರೆಂಡ್ ಪ್ರಸನ್ನಕುಮಾರ್ ಸ್ಯಾಮ್ಯುಯೆಲ್ ವಿರುದ್ಧ ಪೊಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ) ಅಡಿಯಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಕುರಿತಂತೆ ರೆವರೆಂಡ್ ಪ್ರಸನ್ನಕುಮಾರ್ ಸ್ಯಾಮ್ಯುಯೆಲ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

‘ಪ್ರಕರಣದಲ್ಲಿ ಪ್ರಸನ್ನಕುಮಾರ್ ಭಾಗಿಯಾಗಿಲ್ಲ ಎಂಬುದು ಕಂಡು ಬರುತ್ತದೆ ಮತ್ತು ಸಂತ್ರಸ್ತ ಬಾಲಕಿಯ ಹೇಳಿಕೆಯ ಆಧಾರದಲ್ಲಿ ಅರ್ಜಿದಾರರ ವಿರುದ್ಧ ದೋಷಾರೋಪ ನಿಗದಿಪಡಿಸಲು ಸೆಷನ್ಸ್ ನ್ಯಾಯಾಲಯ ಮುಂದಾಗಿರುವುದಕ್ಕೆ ಸಾಕ್ಷ್ಯಗಳ ಕೊರತೆಯಿದೆ’ ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಅರ್ಜಿದಾರರ ವಿರುದ್ಧದ ಪ್ರಕರಣ ಕೈಬಿಡುವಂತೆ ಆದೇಶಿಸಿದೆ.

ಅರ್ಜಿದಾರರ ವಿರುದ್ಧ ವಿಚಾರಣೆ ನಡೆಸಲು 50ನೇ ಸಿಟಿ ಸಿವಿಲ್ ಕೋರ್ಟ್ 2017ರ ಡಿಸೆಂಬರ್ 12ರಂದು ಆದೇಶಿಸಿ ಸಮನ್ಸ್ ಜಾರಿಗೊಳಿಸಿತ್ತು. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ಕಾಂಗ್ರೆಸ್‌ನಿಂದ ಇಂದು ರಾಜಭವನ ಮುತ್ತಿಗೆ

ಬೆಂಗಳೂರು: ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ನಿರಂತರವಾಗಿ ವಿಚಾರಣೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಕ್ರಮ ದ್ವೇಷದ ರಾಜಕೀಯ ಎಂದು ಆರೋಪಿಸಿರುವ ಕಾಂಗ್ರೆಸ್, ಅದನ್ನು ವಿರೋಧಿಸಿ ಗುರುವಾರ ರಾಜಭವನಕ್ಕೆ ಮುತ್ತಿಗೆ ಹಾಕುವುದಾಗಿ ಪ್ರಕಟಿಸಿದೆ.

ಬುಧವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೇಂದ್ರದ ಬಿಜೆಪಿ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳು ಮತ್ತು ತನಿಖಾ ಸಂಸ್ಥೆಗಳನ್ನು ದ್ವೇಷದ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ. ಇದನ್ನು ವಿರೋಧಿಸಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಕೆಪಿಸಿಸಿ ಕಚೇರಿಯಿಂದ ಮೆರವಣಿಗೆಯಲ್ಲಿ ತೆರಳಿ ರಾಜಭವನಕ್ಕೆ ಮುತ್ತಿಗೆ ಹಾಕಲಾಗುವುದು’ ಎಂದರು.

‘ರಾಹುಲ್ ಗಾಂಧಿ ಅವರನ್ನು ಸತತವಾಗಿ ಮೂರು ದಿನಗಳ ಕಾಲ ವಿಚಾರಣೆ ನಡೆಸಿ ಕಿರುಕುಳ ನೀಡಲಾಗುತ್ತಿದೆ. ಅವರ ಕುಟುಂಬ ಅಲಹಾಬಾದ್‌ನಲ್ಲಿದ್ದ ₹ 20,000 ಕೋಟಿ ಮೌಲ್ಯದ ಆಸ್ತಿಯನ್ನು ದೇಶಕ್ಕಾಗಿ ದಾನ ಮಾಡಿದೆ. ಈ ವಿಚಾರದ ಕುರಿತು ಬಿಜೆಪಿಯವರು ಮಾತನಾಡುವುದಿಲ್ಲ. ಸತ್ಯವನ್ನು ಮುಚ್ಚಿಡಲು ಯಾರಿಂದಲೂ ಸಾಧ್ಯವಿಲ್ಲ’ ಎಂದರು.

ಇದಕ್ಕೂ ಮುನ್ನ ಪ್ರತ್ಯೇಕ ಪತ್ರಿಕಾಗೋಷ್ಠಿಗಳನ್ನು ನಡೆಸಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮತ್ತು ಕಾಂಗ್ರೆಸ್ ಮುಖಂಡ ವಿ.ಎಸ್. ಉಗ್ರಪ್ಪ, ಕೇಂದ್ರ ಸರ್ಕಾರ ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಂಡು ರಾಹುಲ್ ಗಾಂಧಿ ಅವರಿಗೆ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿದರು.

3 ತಿಂಗಳು ಹಿಂದೆ ಮದುವೆಯಾಗಿದ್ದ ಎಂಬಿಬಿಎಸ್ ವಿದ್ಯಾರ್ಥಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಎಂಬಿಬಿಎಸ್ ವಿದ್ಯಾರ್ಥಿ ಪೃಥ್ವಿರಾಜ್ (31) ಹನ್ನೊಂದನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆಂಧ್ರಪ್ರದೇಶದ ಪೃಥ್ವಿರಾಜ್ ಎಂಬಿಬಿಎಸ್ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸದ್ಯ ತರಬೇತಿಯಲ್ಲಿದ್ದರು. ಮುಂದಿನ ಐದು ತಿಂಗಳಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮುಗಿಯುತ್ತಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಎಂ.ಎಸ್. ರಾಮಯ್ಯ ಆಸ್ಪತ್ರೆಯ ವೈದ್ಯೆಯೊಬ್ಬರನ್ನು ಮೂರು ತಿಂಗಳ ಹಿಂದೆಯಷ್ಟೇ ಪೃಥ್ವಿರಾಜ್ ಮದುವೆಯಾಗಿದ್ದರು. ಅಮೃತಹಳ್ಳಿ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ದಂಪತಿ ವಾಸವಿದ್ದರು’ ಎಂದು ತಿಳಿಸಿವೆ.

‘ಮಂಗಳವಾರ ಆಸ್ಪತ್ರೆಗೆ ಹೋಗಿ ಬಂದಿದ್ದ ದಂಪತಿ ಊಟ ಮಾಡಿ ಮಲಗಿದ್ದರು. ಬುಧವಾರ ಬೆಳಿಗ್ಗೆ 5 ಗಂಟೆಗೆ ಎದ್ದಿದ್ದ ಪೃಥ್ವಿರಾಜ್, ಹನ್ನೊಂದನೇ ಮಹಡಿಗೆ ಹೋಗಿ ಜಿಗಿದಿದ್ದರು. ನೆಲಮಹಡಿಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದರು. ಅದನ್ನು ನೋಡಿದ್ದ ಭದ್ರತಾ ಸಿಬ್ಬಂದಿ ಹಾಗೂ ಇತರರು, ಪತ್ನಿಗೆ ವಿಷಯ ತಿಳಿಸಿದ್ದರು’ ಎಂದೂ ಮೂಲಗಳು ಹೇಳಿವೆ.

ಸಾವಿಗೂ ಮುನ್ನ ಸಂದೇಶ: ‘ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು ಎನ್ನಲಾದ ಪೃಥ್ವಿರಾಜ್, ಮಾನಸಿಕ ಖಿನ್ನತೆಗೆ ಒಳಗಾಗಿದ್ದರು. ಇದೇ ಕಾರಣಕ್ಕೆ ಅವರು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಾವಿಗೂ ಮುನ್ನ ತಮ್ಮ ಮೊಬೈಲ್‌ನಲ್ಲಿ ತೆಲುಗು ಭಾಷೆಯಲ್ಲಿ ಸಂದೇಶ ಬರೆದಿದ್ದಾರೆ. ಅದನ್ನೂ ಪರಿಶೀಲಿಸಲಾಗುತ್ತಿದೆ’ ಎಂದೂ ಹೇಳಿವೆ.

ಸಾಣೇಹಳ್ಳಿ ಶ್ರೀ, ನಾಗತಿಹಳ್ಳಿ ಸೇರಿ 11 ಮಂದಿಗೆ ಡಿಎಸ್‌ಮ್ಯಾಕ್ಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಎಸ್‌ಮ್ಯಾಕ್ಸ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆ’ಯು ಸಾಣೇಹಳ್ಳಿಯ ಸಿರಿಗೆರೆ ಶಾಖಾ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಲುಮರದ ತಿಮ್ಮಕ್ಕ, ಸಿನಿಮಾ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಸೇರಿ ಹನ್ನೊಂದು ಮಂದಿಗೆ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಪಿ.ದಯಾನಂದ್ ಅವರು, 2022ನೇ ಸಾಲಿನ ‘ಡಿಎಸ್ ಮ್ಯಾಕ್ಸ್ ರತ್ನಶ್ರೀ ಪ್ರಶಸ್ತಿ’ಗೆ 9 ಮಂದಿ ಮತ್ತು ಕಲಾಶ್ರೀ ಪ್ರಶಸ್ತಿ’ಗೆ ಇಬ್ಬರನ್ನು ಆಯ್ಕೆ ಮಾಡಲಾಗಿದೆ ಎಂದರು.

ಭಾರತೀಯ ಚಿತ್ರರಂಗದಲ್ಲಿ ಕೊಡುಗೆ ನೀಡಿದ ಸಾಹಿತಿ, ನಟ ಮತ್ತು ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಮತ್ತು ತೆಲುಗು ಸಾಹಿತಿ, ನಟ ಮತ್ತು ನಿರ್ದೇಶಕ ತಣಿಕೆಲ್ಲ ಭರಣಿ ಅವರು ‘ಡಿ ಎಸ್ ಮ್ಯಾಕ್ಸ್ ಕಲಾಶ್ರೀ ಪ್ರಶಸ್ತಿ’ಗೆ ಆಯ್ಕೆಯಾಗಿದ್ದಾರೆ.


ಎಸ್‌.ಪಿ. ದಯಾನಂದ್

‘ಡಿಎಸ್‌ಮ್ಯಾಕ್ಸ್ ಕರುನಾಡು ರತ್ನಶ್ರೀ ಪ್ರಶಸ್ತಿ’ಗೆ ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನಟಿ ಭಾರತಿ ವಿಷ್ಣುವರ್ಧನ್, ಪರಿಸರ ಉಳಿಸಲು ಕೆಲಸ ಮಾಡಿದ ಸಾಲುಮರದ ತಿಮ್ಮಕ್ಕ ಮತ್ತು ತುಳಸಿಗೌಡ, ರಂಗಭೂಮಿ ಕಲಾವಿದೆ ಮಂಜಮ್ಮ ಜೋಗತಿ, ಕವಿ–ಗೀತರಚನೆಕಾರ ದೊಡ್ಡರಂಗೇಗೌಡ, ಅಂತರರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಮಾಲತಿ ಕೃಷ್ಣಮೂರ್ತಿ ಹೊಳ್ಳ, ಸಬಿತಾ ಮೋನಿಸ್ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

‘ಪ್ರಶಸ್ತಿ ಪುರಸ್ಕೃತರಿಗೆ ₹25 ಸಾವಿರ ನಗದು ಬಹುಮಾನ ಹಾಗೂ ಸ್ಮರಣಿಕೆ ನೀಡಲಿದ್ದೇವೆ. ಇದೇ 19ರ ಮಧ್ಯಾಹ್ನ 2.30ಕ್ಕೆ ಬೆಂಗಳೂರು ಅರಮನೆಯಲ್ಲಿ ಸಂಸ್ಥೆಯ ಸಂಸ್ಥಾಪನಾ ದಿನ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ವಸತಿ ಸಚಿವ ವಿ.ಸೋಮಣ್ಣ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಬ್ಲಿಕ್ ಟಿ.ವಿಯ ಮುಖ್ಯಸ್ಥ ಎಚ್.ಆರ್. ರಂಗನಾಥ್ ಹಾಗೂ ಶಾಸಕ ರಾಜು ಗೌಡ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದ್ದು, ಚಲನಚಿತ್ರ ಕ್ಷೇತ್ರದ ಹೆಸರಾಂತ ನಟ–ನಟಿಯರು ಪಾಲ್ಗೊಳ್ಳಲಿದ್ದಾರೆ. ಸಂಸ್ಥೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮನೆ, ಕಾರು ಸೇರಿದಂತೆ 166 ಮಂದಿಗೆ ಬಹುಮಾನ ನೀಡಲಾಗುವುದು ಎಂದು ವಿವರಿಸಿದರು.

ಸಂಸ್ಥೆಯ ಅಧ್ಯಕ್ಷ ಕೆ.ವಿ. ಸತೀಶ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ತಂಡ ಕಟ್ಟಿಕೊಂಡು ವಾಹನ ಕಳ್ಳತನ: ಬಂಧನ

ಬೆಂಗಳೂರು: ಸಹಚರರ ತಂಡ ಕಟ್ಟಿಕೊಂಡು ದ್ವಿಚಕ್ರ ವಾಹನ ಹಾಗೂ ಗೂಡ್ಸ್ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿ ರಾಜಶೇಖರ್ ಅವರನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಬಂಧಿತ ರಾಜಶೇಖರ್ ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಈತನಿಂದ ₹ 2.70 ಲಕ್ಷ ಮೌಲ್ಯದ ಟಾಟಾ ಏಸ್ ಗೂಡ್ಸ್ ವಾಹನ ಹಾಗೂ 3 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಠಾಣೆ ವ್ಯಾಪ್ತಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನವನ್ನು ಮೇ 26ರಂದು ಕಳ್ಳತನ ಮಾಡಲಾಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದಡಿ ಆರೋಪಿಯನ್ನು ಬಂಧಿಸಲಾಗಿದೆ. ಈತನ ಸಹಚರರು ತಲೆಮರೆಸಿಕೊಂಡಿದ್ದಾರೆ’ ಎಂದೂ ತಿಳಿಸಿದರು.

ಭಾಷಾ ತಾರತಮ್ಯ: ಸುತ್ತೋಲೆ ವಾಪಸ್‌ಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪದವಿಪೂರ್ವ ಶಿಕ್ಷಣ ಇಲಾಖೆಯು ಹೊರ ರಾಜ್ಯಗಳ ಪ್ರವಾಸಕ್ಕೆ ಹಿಂದಿ ಭಾಷೆ ಬಲ್ಲ ವಿದ್ಯಾರ್ಥಿಗಳಿಗೆ ಮಾತ್ರ ಆದ್ಯತೆ ನೀಡಿರುವುದು ಖಂಡನೀಯ. ಇಲಾಖೆಯು ಕೂಡಲೇ ಸುತ್ತೋಲೆಯನ್ನು ವಾಪಸ್ ಪಡೆದು, ಎಲ್ಲ ವಿದ್ಯಾರ್ಥಿಗಳಿಗೆ ಅವಕಾಶ ನೀಡಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ಇಲಾಖೆಗೆ ಪತ್ರ ಬರೆದಿದ್ದಾರೆ. ‘ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ ‘ಒಂದು ಭಾರತ ಶ್ರೇಷ್ಠ ಭಾರತ’ ಕಾರ್ಯಕ್ರಮದಡಿ ಇಲಾಖೆಯು ಮಕ್ಕಳಲ್ಲಿ ಭಾಷಾ ಗೊಂದಲಕ್ಕೆ ಕಾರಣವಾಗುವಂತಹ ಕ್ರಮ ಕೈಗೊಂಡಿದೆ. ಮಕ್ಕಳ ಆಯ್ಕೆಯಲ್ಲಿ ಹಿಂದಿ ಭಾಷೆ ಬಲ್ಲವರಿಗೆ ಮಾತ್ರ ಅವಕಾಶ ಎನ್ನುವುದು ಸರಿಯಲ್ಲ. ಇಲಾಖೆಯ ಈ ನಡೆಯಿಂದ ಕನ್ನಡದ ಮಕ್ಕಳು ಕೇಂದ್ರ ಸರ್ಕಾರದ ಯೋಜನೆಗಳಿಂದ ವಂಚಿತರಾಗುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮಹೇಶ ಜೋಶಿ

‘ಕನ್ನಡ ಶಾಲೆಗಳು ಉಳಿದರೆ ಕನ್ನಡ ಉಳಿಯುತ್ತದೆ. ಕನ್ನಡ ಮಾಧ್ಯಮ ಉಳಿವಿಗೆ ಪರಿಷತ್ತು ಹೋರಾಡುತ್ತಲೇ ಬಂದಿದೆ. ಇತ್ತೀಚೆಗೆ ಕನ್ನಡ ಶಾಲೆಗಳ ಉಳಿವಿಗಾಗಿ ಸಾಹಿತಿ ಎಸ್.ಎಲ್. ಭೈರಪ್ಪ ಅವರ ನೇತೃತ್ವದಲ್ಲಿ ರಾಜ್ಯದ ಪ್ರಮುಖ ಶಿಕ್ಷಣ ತಜ್ಞರ ದುಂಡು ಮೇಜಿನ ಸಭೆ ನಡೆಸಿ, ಕನ್ನಡ ಶಾಲೆಗಳ ಉಳಿವಿಗಾಗಿ ಸರ್ಕಾರ ಹಾಗೂ ಸಾರ್ವಜನಿಕರು ಏನೆಲ್ಲಾ ಮಾಡಬೇಕು ಎನ್ನುವ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರ ಸಮ್ಮುಖದಲ್ಲಿ ಚರ್ಚೆ ಮಾಡಲಾಗಿದೆ’ ಎಂದು ಹೇಳಿದ್ದಾರೆ.

‘ಅಧಿಕಾರಿಗಳು ಭಾಷಾ ವಿಷಯದಲ್ಲಿ ಗೊಂದಲ ಸೃಷ್ಟಿ ಮಾಡಬಾರದು. ಬೇಜವಾಬ್ದಾರಿತನದಿಂದ ಕೆಲಸ ಮಾಡುವುದು ಸರಿಯಲ್ಲ. ತಕ್ಷಣವೇ ಈ ಗೊಂದಲಕ್ಕೆ ತೆರೆ ಎಳೆದು, ಕನ್ನಡ ವಿದ್ಯಾರ್ಥಿಗಳಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು’ ಎಂದು ತಿಳಿಸಿದ್ದಾರೆ.

ಆರೋಗ್ಯ ಶಿಬಿರ

ಪೀಣ್ಯ–ದಾಸರಹಳ್ಳಿ ಸಮೀಪದ ಚಿಕ್ಕಸಂದ್ರದಲ್ಲಿ ಜೆಡಿಎಸ್ ಮುಖಂಡ ಚಂದ್ರಣ್ಣ ಅವರು ಬುಧವಾರ ಉಚಿತ ಆರೋಗ್ಯ ಶಿಬಿರ ಏರ್ಪಡಿಸಿ ಅವಶ್ಯ ಇರುವವರಿಗೆ ಕನ್ನಡಕಗಳನ್ನು ಹಾಗೂ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನೋಟ್‌ಬುಕ್‌ಗಳನ್ನು ವಿತರಿಸಿದರು. ಈ ವೇಳೆ ಶಾಸಕ ಆರ್. ಮಂಜುನಾಥ್, ಜೆಡಿಎಸ್ ಮುಖಂಡರಾದ ಕೆ.ಸಿ. ವೆಂಕಟೇಶ್, ಜಯಣ್ಣ, ಪಾಪಣ್ಣ, ಪಾಂಡು, ಸಮಾಜಸೇವಕ ಲಕ್ಷ್ಮಣ್ ಗೌಡ್ರು ಮುಂತಾದವರಿದ್ದರು.

₹ 30 ಸಾವಿರ ಬಾಕಿ ಇರಿಸಿಕೊಂಡಿದ್ದಕ್ಕೆ ಕೃತ್ಯ

ಚಿಕ್ಕಪೇಟೆಯ ಹರಳು ವ್ಯಾಪಾರಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಚಿಕ್ಕಪೇಟೆಯ ಬಿ.ಟಿ. ಸ್ಟ್ರೀಟ್‌ನ ಹರಳು ವ್ಯಾಪಾರಿ ಸೈಯದ್ ಮನ್ಸೂರ್ ಅಹಮ್ಮದ್ (42) ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಕೊಲೆ ಆರೋಪದಡಿ ಸಿಟಿ ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆನೇಪಾಳ್ಯದ ನಿವಾಸಿ ಸೈಯದ್ ಹಲವು ವರ್ಷಗಳಿಂದ ಹರಳು ವ್ಯಾಪಾರ ಮಾಡುತ್ತಿದ್ದರು. ಅವರ ಕೊಲೆ ಸಂಬಂಧ ಸಹೋದರ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಹರಳು ವ್ಯಾಪಾರಿ ಇಕ್ಬಾಲ್, ಹನೀಫ್ ಬಾಬಾ, ಶಂಕರ್ ಮಂಡಲ ಹಾಗೂ ವಿನಯ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ರಾಜಸ್ಥಾನದ ಆರೋಪಿ ಇಕ್ಬಾಲ್ ಜೊತೆ ಹರಳು ವ್ಯವಹಾರ ಮಾಡುತ್ತಿದ್ದ ಸೈಯದ್, ₹ 30 ಸಾವಿರ ಬಾಕಿ ಇರಿಸಿಕೊಂಡಿದ್ದರು. ಹಣ ನೀಡುವಂತೆ ಇಕ್ಬಾಲ್ ಒತ್ತಾಯಿಸಲಾರಂಭಿಸಿದ್ದ. ಸೈಯದ್, ಕಾಲಾವಕಾಶ ಕೇಳಿದ್ದರು. ಅದಕ್ಕೆ ಒಪ್ಪದ ಆರೋಪಿ, ಕೂಡಲೇ ಹಣ ನೀಡುವಂತೆ ಪೀಡಿಸಲಾರಂಭಿಸಿದ್ದ’ ಎಂದೂ ತಿಳಿಸಿದರು.

‘ಜೂನ್ 13ರಂದು ರಾತ್ರಿ ಸೈಯದ್ ಅಂಗಡಿ ಬಳಿ ಹೋಗಿದ್ದ ಇಕ್ಬಾಲ್ ಹಾಗೂ ಇತರರು, ಹಣ ನೀಡುವಂತೆ ಒತ್ತಾಯಿಸಿ ಜಗಳ ತೆಗೆದಿದ್ದರು. ಸೈಯದ್ ಅವರ ಮೇಲೆ ಹಲ್ಲೆ ಮಾಡಿ ಮುಖ, ಎದೆ ಹಾಗೂ ಹೊಟ್ಟೆಗೆ ಗುದ್ದಿದ್ದರು. ರಕ್ಷಣೆಗೆ ಬಂದಿದ್ದ ಅಕ್ಕ–ಪಕ್ಕದ ವ್ಯಾಪಾರಿಗಳು, ಜಗಳ ಬಿಡಿಸಿದ್ದರು. ಆರೋಪಿಗಳು, ಸ್ಥಳದಿಂದ ಹೊರಟು ಹೋಗಿದ್ದರು ಎಂಬುದಾಗಿ ದೂರಿನಲ್ಲಿ ಸಹೋದರ ತಿಳಿಸಿದ್ದಾರೆ’ ಎಂದೂ ಹೇಳಿದರು.

ಚಿಕಿತ್ಸೆ ಪಡೆಯದೇ ಮಲಗಿದ್ದ ಸೈಯದ್: ‘ಹಲ್ಲೆಯಿಂದ ಗಾಯಗೊಂಡಿದ್ದ ಸೈಯದ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರಲಿಲ್ಲ. ನೇರವಾಗಿ ಮನೆಗೆ ಹೋಗಿ ಮಲಗಿದ್ದರು’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ಮಂಗಳವಾರ (ಜೂನ್ 14) ಬೆಳಿಗ್ಗೆ ಎಚ್ಚರಗೊಂಡಿದ್ದ ಸೈಯದ್, ಸುಸ್ತಾಗುತ್ತಿರುವುದಾಗಿ ಹೇಳಿದ್ದರು. ಪತ್ನಿ ಹಾಗೂ ಅಕ್ಕ–ಪಕ್ಕದ ಮನೆಯವರು ಸೇಂಟ್ ಫಿಲೋಮಿನಾ ಆಸ್ಪತ್ರೆಗೆ ಕರೆದೊಯ್ದಿದ್ದರು. ತಪಾಸಣೆ ನಡೆಸಿದ್ದ ವೈದ್ಯರು, ಮಾರ್ಗಮಧ್ಯೆಯೇ ಸೈಯದ್ ಮೃತಪಟ್ಟಿರುವುದಾಗಿ ಹೇಳಿದರು. ಸದ್ಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಯಲ್ಲಿ ಇರಿಸಲಾಗಿದೆ’ ಎಂದು ಹೇಳಿದರು.

‘ತಮ್ಮ ಮೇಲಾದ ಹಲ್ಲೆ ಬಗ್ಗೆ ಪತ್ನಿ ಬಳಿ ಸೈಯದ್ ಹೇಳಿದ್ದರು. ಈ ಸಂಗತಿ ತಿಳಿಯುತ್ತಿದ್ದಂತೆ ಸಹೋದರ ದೂರು ನೀಡಿದ್ದಾರೆ. ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

ಅಪ್ಪಂದಿರ ದಿನ: ವಂಡರ್‌ಲಾ ಕೊಡುಗೆ

ಪ್ರಜಾವಾಣಿ ವಾರ್ತೆ

ರಾಮನಗರ: ವಂಡರ್‌ಲಾ ವತಿಯಿಂದ ಅಪ್ಪಂದಿರ ದಿನದ ಅಂಗವಾಗಿ ಇದೇ 19ರಂದು ಮೂರು ಟಿಕೆಟ್ ಖರೀದಿಸಿದರೆ ಒಂದು ಟಿಕೆಟ್ ಅನ್ನು ಉಚಿತವಾಗಿ ನೀಡುವ ವಿಶೇಷ ಕೊಡುಗೆಯನ್ನು ಪ್ರಕಟಿಸಿದೆ.

10ನೇ ತರಗತಿ, ದ್ವಿತೀಯ ಪಿಯು ಪರೀಕ್ಷೆ ಬರೆದವರು ತಮ್ಮ ಹಾಲ್ ಟಿಕೆಟ್ ತೋರಿಸಿ ಶೇ 35ರಷ್ಟು ರಿಯಾಯಿತಿ ಪಡೆಯಬಹುದು. 22 ವರ್ಷದ ಒಳಗಿನ ವಿದ್ಯಾರ್ಥಿಗಳು ತಮ್ಮ ಕಾಲೇಜು ಐಡಿ ತೋರಿಸಿದರೆ ಶೇ 20ರಷ್ಟು ರಿಯಾಯಿತಿ ಇದೆ. ಮಾಹಿತಿಗೆ www.wonderla.com ಅಥವಾ 080–37230333/35073966 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೆಂಚನಹಳ್ಳಿ ರಸ್ತೆಗೆ ಹೊಂದಿಕೊಂಡಂತೆ ಇರುವ ಸ್ಮಶಾನ

ಸ್ಮಶಾನ ಜಾಗದಲ್ಲಿ ರಸ್ತೆ: ಸ್ಥಳೀಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಸ್ಮಶಾನ ಜಾಗದಲ್ಲಿ ರಸ್ತೆ ನಿರ್ಮಿಸುವ ಕಾರ್ಯಕ್ಕೆ ಸ್ಥಳೀಯರು ತಡೆ ಒಡ್ಡಿ ಪ್ರತಿಭಟನೆ ನಡೆಸಿದರು.

‘ರಾಜರಾಜೇಶ್ವರಿನಗರದಿಂದ ಉತ್ತರಹಳ್ಳಿ ರಸ್ತೆಗೆ ಸಂಪರ್ಕ ಕಲ್ಪಿಸುವ ಕೆಂಚನಹಳ್ಳಿ ರಸ್ತೆಗೆ ಹೊಂದಿಕೊಂಡಂತೆ ಸ್ಮಶಾನವಿದ್ದು, ಆ ಜಾಗವನ್ನು ರಸ್ತೆ ವಿಸ್ತರಣೆಗೆ ಬಳಕೆ ಮಾಡಿಕೊಳ್ಳಲು ಯತ್ನಿಸಲಾಗಿದೆ’ ಎಂದು ಸ್ಥಳೀಯರು ಆರೋಪಿಸಿದರು.

ಜೆಸಿಬಿ ಮೂಲಕ ಆರಂಭಿಸಿದ್ದ ಕೆಲಸ ತಡೆದ ಪ್ರತಿಭಟನಕಾರರು, ಯಾವುದೇ ಕಾರಣಕ್ಕೂ ಈ ಜಾಗದಲ್ಲಿ ರಸ್ತೆ ಅಭಿವೃದ್ಧಿಗೆ ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದರು.

‘ಹಲಗೆವಡೇರಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಮಾದಿಗ ಸಮುದಾಯದವರಿಗೆ ಸ್ಮಶಾನಕ್ಕೆಂದು ಮೀಸಲಿಟ್ಟಿದ್ದ 2 ಎಕರೆ ಜಾಗ ಇತ್ತು. ಒತ್ತುವರಿಯಾಗಿ ಈಗ ಅರ್ಧ ಎಕರೆಯಷ್ಟು ಜಾಗ ಮಾತ್ರ ಉಳಿದಿದೆ. ಅದನ್ನೂ ರಸ್ತೆ ವಿಸ್ತರಣೆಗೆ ಬಳಸಿಕೊಂಡರೆ ಸ್ಮಶಾನವೇ ಇಲ್ಲದಂತೆ ಆಗಲಿದೆ’ ಎಂದು ಪ್ರತಿಭಟನೆ ನೇತೃತ್ವ ವಹಿಸಿದ್ದ ರಾಜೇಶ್ ಅವರು ಹೇಳಿದರು.

‘ಈ ರಸ್ತೆಯಲ್ಲಿ ಈಗಾಗಲೇ ವೈಟ್‌ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದೆ. ಆದರೂ ಸಂಚಾರ ದಟ್ಟಣೆ ನೆಪದಲ್ಲಿ ಸ್ಮಶಾನ ಜಾಗ ಪಡೆಯಲು ಶಾಸಕರು ಹೊರಟಿದ್ದಾರೆ. ಅದರ ಎದುರಿನಲ್ಲಿ ಶಾಸಕರ ಕಚೇರಿ ಇದ್ದು, ಅದನ್ನು ಬಿಟ್ಟು ದಲಿತರ ಸ್ಮಶಾನದ ಜಾಗದಲ್ಲೇ ರಸ್ತೆ ನಿರ್ಮಿಸುವುದು ಸರಿಯಲ್ಲ’ ಎಂದು ಹೇಳಿದರು.

ರಾಜರಾಜೇಶ್ವರಿನಗರದಲ್ಲಿ ಸ್ಮಶಾನದ ಜಾಗ ಉಳಿಸಲು ಒತ್ತಾಯಿಸಿ ಸ್ಥಳೀಯರು ಅಂಬೇಡ್ಕರ್ ಭಾವಚಿತ್ರದೊಂದಿಗೆ ಬುಧವಾರ ಪ್ರತಿಭಟನೆ ನಡೆಸಿದರು

ಸ್ಥಳಕ್ಕೆ ಬಂದ ತೋಟಗಾರಿಕಾ ಸಚಿವ ಮುನಿರತ್ನ ಅವರು ಪ್ರತಿಭಟನಕಾರರ ಮನವೊಲಿಸಲು ಯತ್ನಿಸಿದರು. ಪ್ರತಿಭಟನಕಾರರು ಪಟ್ಟು ಸಡಿಲಿಸದೆ ಕಾಮಗಾರಿ ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು. ಬಳಿಕ ಕಾಮಗಾರಿ ಸ್ಥಗಿತಗೊಳಿಸಲು ಸಚಿವರು ಸೂಚಿಸಿದರು.

ಸ್ಥಳೀಯ ಮುಖಂಡರಾದ ಕೆ.ಸೋಮಶೇಖರ್, ಎಸ್. ದೇವರಾಜ್, ಜೆ.ಮುನಿರಾಜು, ಎಚ್.ಬಿ.ತಿಮ್ಮರಾಜು, ಎನ್.ರಾಜಕುಮಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಮುನಿರತ್ನ ಅವರು, ‘ರಸ್ತೆ ವಿಸ್ತರಣೆ ಆಗಬೇಕಿದ್ದು, ಅದಕ್ಕೆ ಸ್ಮಶಾನ ಜಾಗ ಬಳಕೆ ಮಾಡಿಕೊಳ್ಳುತ್ತಿಲ್ಲ. ಅದರ ಅಗತ್ಯವೂ ಇಲ್ಲ. ಸರ್ಕಾರಿ ಜಾಗದಲ್ಲಿ ರಸ್ತೆ ವಿಸ್ತರಣೆ ಮಾಡಲಾಗುವುದು’ ಎಂದು ಸ್ಪಷ್ಟಪಡಿಸಿದರು.

ಈದ್ಗಾ ಆಸ್ತಿ ವಿವಾದ: ವಕ್ಫ್ ಮಂಡಳಿಗೆ ಬಿಬಿಎಂಪಿ ನೋಟಿಸ್

ದಾಖಲೆಗಳಿದ್ದರೆ ಮೂರು ದಿನಗಳಲ್ಲಿ ಹಾಜರುಪಡಿಸಲು ಸೂಚನೆ

ಬೆಂಗಳೂರು: ಚಾಮರಾಜಪೇಟೆ ಈದ್ಗಾ ಮೈದಾನದ ಆಸ್ತಿ ವಿವಾದ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ವಕ್ಫ್ ಮಂಡಳಿಗೆ ಬಿಬಿಎಂಪಿ ನೋಟಿಸ್ ನೀಡಿದೆ.

ಈದ್ಗಾ ಮೈದಾನದ ಆಸ್ತಿ ವಕ್ಫ್ ಮಂಡಳಿಗೆ ಸೇರಿದ್ದು ಎಂಬುದಕ್ಕೆ ದಾಖಲೆಗಳಿದ್ದರೆ ಹಾಜರುಪಡಿಸುವಂತೆ ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತ ಶ್ರೀನಿವಾಸ್ ಅವರು ನೋಟಿಸ್‌ನಲ್ಲಿ ಸೂಚಿಸಿದ್ದಾರೆ.

‘ಆಟದ ಮೈದಾನದ ಬಗ್ಗೆ ಗೊಂದಲಗಳು ಉಂಟಾಗಿದ್ದು, ವಕ್ಫ್ ಮಂಡಳಿ ಆಸ್ತಿ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಈ ಆಸ್ತಿ ತಮ್ಮದೆಂದು ಸಾಬೀತುಪಡಿಸಲು ದಾಖಲೆಗಳಿದ್ದರೆ ಮೂರು ದಿನಗಳಲ್ಲಿ ಸಲ್ಲಿಸಿದರೆ ಪರಿಶೀಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಅವರು ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಎನ್.ಕೆ. ಷಾಫಿ ಸಾ– ಆದಿ, ‘ಈದ್ಗಾ ಮೈದಾನಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಬಿಬಿಎಂಪಿ ಬಳಿ ಇಲ್ಲ. ಏಕೆಂದರೆ ಅದು ವಕ್ಫ್ ಮಂಡಳಿಯ ಆಸ್ತಿ. ಎಲ್ಲ ದಾಖಲೆಗಳು ನಮ್ಮ ಬಳಿ ಇವೆ’ ಎಂದರು.

‘ದಾಖಲೆಗಳನ್ನು ಕೇಳಿ ಬಿಬಿಎಂಪಿ ನೋಟಿಸ್ ನೀಡಿದೆ. ಅದಕ್ಕೆ ಯಾವ ರೀತಿಯ ಉತ್ತರ ನೀಡಬೇಕು ಎಂಬುದನ್ನು ವಕ್ಫ್ ಮಂಡಳಿ ಕಾನೂನು ವಿಭಾಗ ಪರಿಶೀಲಿಸಿದೆ. ಉತ್ತರವನ್ನೂ ಸಿದ್ಧಪಡಿಸಿದ್ದು, ಸಲ್ಲಿಸಲಾಗುವುದು’ ಎಂದರು.

ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್(ಸಿಎಂಎ) ಹೆಸರಿನಲ್ಲಿ 10 ಎಕರೆ ಜಾಗ ಇತ್ತು. ಖಬರಸ್ತಾನ ಮತ್ತು ಈದ್ಗಾ ಮೈದಾನ ಎರಡೂ ಇದ್ದವು. ಈಗ ಅದರಲ್ಲಿ 8 ಎಕರೆ ಕಬಳಿಕೆಯಾಗಿದ್ದು, ಎರಡು ಎಕರೆ ಮಾತ್ರ ಉಳಿದುಕೊಂಡಿದೆ. ಖಬರಸ್ತಾನದ ಜಾಗ ಕಬಳಕೆ ಆಗಿದ್ದರಿಂದ ಮೈಸೂರು ರಸ್ತೆಯಲ್ಲಿ ಬದಲಿ ಜಾಗವನ್ನೂ ನೀಡಲಾಗಿದೆ ಎಂದರು. ‘ಈ ಎಲ್ಲ ವಿವಾದಗಳನ್ನೂ ಸುಪ್ರೀಂ ಕೋರ್ಟ್ ಇತ್ಯರ್ಥಪಡಿಸಿದೆ. ಅದಕ್ಕೆ ಸಂಬಂಧಿಸಿದ ಆದೇಶ ಪತ್ರಗಳು ನಮ್ಮ ಬಳಿ ಇವೆ. ಸುಪ್ರೀಂ ಕೋರ್ಟ್‌ಗಿಂತ ದೊಡ್ಡವರು ಯಾರೂ ಇಲ್ಲ’ ಎಂದರು.

ಮುನ್ನೆಚ್ಚರಿಕೆ ಡೋಸ್‌ಗೆ ಬಾರದ ಜನ • ಆಸ್ಪತ್ರೆಗಳಲ್ಲಿ ಲಸಿಕೆ ವ್ಯರ್ಥವಾಗುವ ಸಾಧ್ಯತೆ

ದರ ಇಳಿಸಿದರೂ ಲಸಿಕೆಗೆ ನಿರಾಸಕ್ತಿ

• ವರುಣ ಹೆಗಡೆ

ನಗರದಲ್ಲಿ ಕೋವಿಡ್ ಲಸಿಕೆ ವಿತರಣೆ ವಿವರ

1.10 ಕೋಟಿ	1.04 ಕೋಟಿ	7.88 ಲಕ್ಷ	591	121
ಈವರೆಗೆ ಮೊದಲ ಡೋಸ್ ಪಡೆದವರು	ಎರಡನೇ ಡೋಸ್ ಪಡೆದವರು	ಮೂರನೇ ಡೋಸ್ ಪಡೆದವರು	ಲಸಿಕೆ ವಿತರಿಸುತ್ತಿರುವ ಸರ್ಕಾರಿ ಕೇಂದ್ರಗಳು	ಲಸಿಕೆ ವಿತರಿಸುತ್ತಿರುವ ಖಾಸಗಿ ಕೇಂದ್ರಗಳು

ಬೆಂಗಳೂರು: ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗೆ ದರ ಇಳಿಕೆ ಮಾಡಿದರೂ ನಗರದ ಖಾಸಗಿ ಆಸ್ಪತ್ರೆಗಳಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಿಗದಿತ ಸಂಖ್ಯೆಯಲ್ಲಿ ಜನ ಬಾರದಿದ್ದಲ್ಲಿ ಲಸಿಕೆ ವ್ಯರ್ಥವಾಗುತ್ತದೆ ಎಂಬ ಕಾರಣಕ್ಕೆ ಸೀಶೆ (ಬಾಟಲಿ) ತೆರೆಯಲು ಆಸ್ಪತ್ರೆಗಳು ನಿರಾಕರಿಸುತ್ತಿವೆ.

ಕಳೆದ ಏ.10ರಿಂದ 18ರಿಂದ 60 ವರ್ಷದೊಳಗಿನವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ನೀಡಲಾಗುತ್ತಿದೆ.

ಪ್ರಜಾವಾಣಿ ವಿಶೇಷ

ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ದರವನ್ನು ತಯಾರಿಕಾ ಕಂಪನಿಗಳು ₹ 225ಕ್ಕೆ ಇಳಿಕೆ ಮಾಡಿವೆ. ಸೇವಾ ಶುಲ್ಕ ಸಹಿತ ಒಂದು ಡೋಸ್ ಲಸಿಕೆಗೆ ಆಸ್ಪತ್ರೆಗಳು ₹ 386 ಪಡೆಯುತ್ತಿವೆ. ಈ ಮೊದಲು ಕೋವಿಶೀಲ್ಡ್ ಲಸಿಕೆಯ ಡೋಸ್ ಅನ್ನು ₹ 630ರಿಂದ ₹ 780ರ ವರೆಗಿನ ದರಕ್ಕೆ ಹಾಗೂ ಕೋವ್ಯಾಕ್ಸಿನ್ ಲಸಿಕೆಯನ್ನು ₹ 1,050 ರಿಂದ ₹ 1,410ರ ವರೆಗಿನ ದರಕ್ಕೆ ಒದಗಿಸಲಾಗುತ್ತಿತ್ತು. ಲಸಿಕೆಯ ದರ ಇಳಿಕೆ ಮಾಡಿದರೂ ಬಹುತೇಕ ಆಸ್ಪತ್ರೆಗಳಲ್ಲಿ ದೈನಂದಿನ ವಿತರಣೆ ಗುರಿ ಸಾಧ್ಯವಾಗುತ್ತಿಲ್ಲ.

ಬಿಬಿಎಂಪಿ ವ್ಯಾಪ್ತಿಯಲ್ಲಿ 18ರಿಂದ 44 ವರ್ಷದವರಲ್ಲಿ 55.51 ಲಕ್ಷ ಮಂದಿ ಎರಡು ಡೋಸ್ ಲಸಿಕೆ ಪಡೆದಿದ್ದಾರೆ. 45 ವರ್ಷಗಳು ಮೇಲ್ಪಟ್ಟವರಲ್ಲಿ 26 ಲಕ್ಷಕ್ಕೂ ಅಧಿಕ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

18ರಿಂದ 60 ವರ್ಷದೊಳಗಿನವರಲ್ಲಿ 1.86 ಲಕ್ಷ ಮಂದಿ ಮಾತ್ರ ಮೂರನೇ ಡೋಸ್ ಲಸಿಕೆ ಪಡೆದಿದ್ದಾರೆ. 60 ವರ್ಷಗಳು ಮೇಲ್ಪಟ್ಟವರಲ್ಲಿ 3.38 ಲಕ್ಷ ಮಂದಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ಹಾಕಲಾಗಿದೆ.

ಕೋವಿಡ್ ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷಗಳು ದಾಟಿದವರಿಗೆ ಉಚಿತವಾಗಿ ಸರ್ಕಾರಿ ಕೇಂದ್ರಗಳಲ್ಲಿ ಮುನ್ನೆಚ್ಚರಿಕೆ ಡೋಸ್ ಒದಗಿಸಲಾಗುತ್ತಿದೆ. ಉಳಿದವರು ಖಾಸಗಿ ಆಸ್ಪತ್ರೆಗಳಲ್ಲಿ ಹಣ ಪಾವತಿಸಿ ಲಸಿಕೆ ಪಡೆದುಕೊಳ್ಳಬೇಕಿದೆ. ಆದರೆ, ಸೋಂಕಿನ ತೀವ್ರತೆ ಕಡಿಮೆ ಇರುವುದರಿಂದ ಬಹುತೇಕರು ಅವಧಿ ಮುಗಿದರೂ ಲಸಿಕೆ ಪಡೆದುಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಕೇಂದ್ರಗಳ ಸಂಖ್ಯೆ ಇಳಿಕೆ: ಲಸಿಕೆಯ ಮುನ್ನೆಚ್ಚರಿಕೆ ಡೋಸ್ ವಿತರಣೆ ಪ್ರಾರಂಭವಾದಾಗ 150ಕ್ಕೂ ಅಧಿಕ ಖಾಸಗಿ ಆಸ್ಪತ್ರೆಗಳಲ್ಲಿ ಹಣ ಪಾವತಿ ಆಧಾರದಲ್ಲಿ ಲಸಿಕೆ ಲಭ್ಯವಾಗುತ್ತಿತ್ತು. ಈಗ ಖರೀದಿಸಿದ ಲಸಿಕೆ ದಾಸ್ತಾನು ಖಾಲಿಯಾಗದಿದ್ದರಿಂದ 20ಕ್ಕೂ ಅಧಿಕ ಆಸ್ಪತ್ರೆಗಳು ಲಸಿಕೆ ವಿತರಣೆಯಿಂದ ಹಿಂದೆ ಸರಿದಿವೆ. ಲಭ್ಯವಿರುವ ಲಸಿಕೆಯನ್ನು ಮಣಿಪಾಲ್, ಅಪೋಲೊ ಸೇರಿದಂತೆ ವಿವಿಧ ಆಸ್ಪತ್ರೆಗಳ ಸಮೂಹಕ್ಕೆ ವಿತರಿಸಿವೆ.

ಕೋವಿನ್ ಪೋರ್ಟಲ್ ನಲ್ಲಿ ಲಸಿಕೆಯನ್ನು ಮುಂಚಿತವಾಗಿ ಕಾಯ್ದಿರಿಸಲು ಅವಕಾಶವಿದೆ. ಮದರ್‌ಹುಡ್, ಅಪೋಲೊ ಕ್ಲಿನಿಕ್, ಮಣಿಪಾಲ್ ಕ್ಲಿನಿಕ್, ಫೋರ್ಟಿಸ್, ಮೆಡಿಹೋಪ್, ಪೀಪಲ್ ಟ್ರೀ ಸೇರಿದಂತೆ ನಗರದ ವಿವಿಧ ಆಸ್ಪತ್ರೆಗಳಲ್ಲಿ ಲಸಿಕೆ ಕಾಯ್ದಿರಿಸಲು ನಿಗದಿಪಡಿಸಲಾದ ಬಹುತೇಕ ಸ್ಲಾಟ್‌ಗಳು ಖಾಲಿ ಉಳಿದಿವೆ.

‘ಕೋವಿಡ್ ಭಯ ಕಡಿಮೆಯಾಗಿರುವುದರಿಂದ ಕೆಲವರು ಮುನ್ನೆಚ್ಚರಿಕೆ ಡೋಸ್ ಪಡೆಯಲು ಮುಂದೆ ಬರುತ್ತಿಲ್ಲ. ಲಸಿಕೆ ಪಡೆದಿರುವ ಬಗ್ಗೆ ಮನೆ ಮನೆಗೆ ತೆರಳಿ, ಸಮೀಕ್ಷೆ ನಡೆಸಲು ಈ ಹಿಂದೆ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿತ್ತು. ಲಸಿಕೆ ಪಡೆಯದವರಿಗೆ ಅಲ್ಲಿಯೇ ಲಸಿಕೆಗೆ ವ್ಯವಸ್ಥೆ ಮಾಡಲಾಗುತ್ತಿತ್ತು. ಈಗ ಮತ್ತೆ ಆ ವ್ಯವಸ್ಥೆ ಪ್ರಾರಂಭಿಸುತ್ತೇವೆ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದರು.

ಲಸಿಕೆ ವಿತರಣೆ ಸಮಸ್ಯೆ

ಕೋವಿಶೀಲ್ಡ್ ಲಸಿಕೆಯು ಒಂದು ಸೀಶೆಯಲ್ಲಿ 10 ಡೋಸ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯು 20 ಡೋಸ್ ಇರುತ್ತದೆ. ನಿಗದಿತ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಬರದಿದ್ದಲ್ಲಿ ಹಾಗೂ ಲಸಿಕೆ ಕೇಂದ್ರದಲ್ಲಿ ವಿತರಣೆ ಅವಧಿ ಮುಗಿಯುತ್ತಾ ಬಂದಾಗ ಸೀಶೆ ತೆರೆದರೆ ವ್ಯರ್ಥವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ, ಆಸ್ಪತ್ರೆಗಳು 10 ಅಥವಾ ಅದಕ್ಕಿಂತ ಹೆಚ್ಚಿನ ಜನರು ಲಸಿಕೆ ಪಡೆಯಲು ಬಂದಾಗ ಮಾತ್ರ ಸೀಶೆ ತೆರೆದು, ಲಸಿಕೆ ವಿತರಿಸುತ್ತಿವೆ. ಇದರಿಂದಾಗಿ ಕೆಲವರು ಗಂಟೆಗೆಟ್ಟಲೆ ಕಾಯಬೇಕಾಗುತ್ತಿದೆ.

‘ಕೋವಿಡ್ ತೀವ್ರತೆ ಕಡಿಮೆ ಎಂಬ ಕಾರಣಕ್ಕೆ ಕೆಲವರು ಮುನ್ನೆಚ್ಚರಿಕೆ ಡೋಸ್ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಲಸಿಕೆಯಿಂದ ಯಾವುದೇ ಅಡ್ಡ ಪರಿಣಾಮವಿಲ್ಲ. ನೇರವಾಗಿ ಆಸ್ಪತ್ರೆಗೆ ಬಂದರೂ ಲಸಿಕೆ ನೀಡಲಾಗುತ್ತದೆ. ನಿಗದಿತ ಸಂಖ್ಯೆಯಲ್ಲಿ ಜನ ಬಂದಲ್ಲಿ ಸೀಶೆ ತೆರೆದು, ವಿತರಿಸಲಾಗುತ್ತದೆ’ ಎಂದು ಸುಗುಣ ಆಸ್ಪತ್ರೆ ಮುಖ್ಯಸ್ಥ ಹಾಗೂ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ನಿಕಟಪೂರ್ವ ಅಧ್ಯಕ್ಷ ಡಾ.ಆರ್. ರವೀಂದ್ರ ತಿಳಿಸಿದರು.

ಕೋವಿಡ್ ನಿಯಂತ್ರಣಕ್ಕೆ ಲಸಿಕೆ ಸಹಕಾರಿ. ಅಸಡ್ಡೆ ಮಾಡದೆ ಪ್ರತಿಯೊಬ್ಬರೂ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆದುಕೊಳ್ಳಬೇಕು.

ಡಾ.ಸಿ.ಎನ್. ಮಂಜುನಾಥ್,
ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಕೋವಿಡ್: ಪರೀಕ್ಷೆ, ಸೋಂಕು ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಹೆಚ್ಚಳದಿಂದ ಪ್ರಕರಣಗಳ ಸಂಖ್ಯೆಯೂ ಏರಿಕೆ ಕಂಡಿದೆ. ಬುಧವಾರ 23,452 ಪರೀಕ್ಷೆಗಳನ್ನು ಮಾಡಲಾಗಿದ್ದು, 648 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

13 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ಪತ್ತೆಯಾಗಿವೆ. ಸೋಂಕು ದೃಢ ಪ್ರಮಾಣ ಶೇ 2.76 ರಷ್ಟು ವರದಿಯಾಗಿದೆ. ಬೆಂಗಳೂರಿನಲ್ಲಿ 615 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಲ್ಲಿ ಬೆಂಗಳೂರಿನ 72 ವರ್ಷದ ವೃದ್ಧರೊಬ್ಬರು ಮೃತಪಟ್ಟಿದ್ದಾರೆ. ಇವರು ಉಸಿರಾಟದ ಸಮಸ್ಯೆ ಹೊಂದಿದ್ದರು.

ಸಕ್ರಿಯ ಪ್ರಕರಣಗಳ ಸಂಖ್ಯೆ 4 ಸಾವಿರದ ಗಡಿ (3,997) ಸಮೀಪಿಸಿದೆ. ಬೆಂಗಳೂರಿನಲ್ಲಿಯೇ 3,843 ಸೋಂಕಿತರು ಇದ್ದಾರೆ. ಸಕ್ರಿಯ ಪ್ರಕರಣಗಳು ಐದು ಜಿಲ್ಲೆಗಳಲ್ಲಿ ಎರಡಂಕಿ ಹಾಗೂ 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ.

ರಾಜ್ಯದಲ್ಲಿ ಇದುವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.57 ಲಕ್ಷ ದಾಟಿದೆ. 39.13 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ. ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,067ಕ್ಕೆ ಏರಿಕೆಯಾಗಿದೆ.

ಮಾದರಿ ನೀಡದಿದ್ದರೂ ಸಂದೇಶ

ಬೆಂಗಳೂರು: ಕೋವಿಡ್ ಪರೀಕ್ಷೆಗೆ ಗಂಟಲ ಹಾಗೂ ಮೂಗಿನ ದ್ರವದ ಮಾದರಿ ನೀಡದಿದ್ದರೂ ಪರೀಕ್ಷೆ ಪ್ರಕ್ರಿಯೆ ನಡೆಯುತ್ತಿರುವ ಬಗ್ಗೆ ಕೆಲವರ ಮೊಬೈಲ್ ಸಂಖ್ಯೆಗೆ ಸಂದೇಶಗಳು ಬರಲಾರಂಭಿಸಿವೆ.

ಥಣಿಸಂದ್ರದ ನಿವಾಸಿ ಇಗ್ನೇಷಿಯಸ್ ರೋಡ್ರಿಗಸ್ ಎಂಬುವವರು ಕೋವಿಡ್ ಪರೀಕ್ಷೆಗೆ ಮಾದರಿ ನೀಡದಿದ್ದರೂ ಸಂದೇಶ ಸ್ವೀಕರಿಸಿದ್ದಾರೆ. ಈ ರೀತಿ ಪ್ರಕರಣಗಳು ಎರಡನೇ ಅಲೆಯಲ್ಲಿಯೂ ವರದಿಯಾಗಿದ್ದವು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

‘ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಮಾದರಿಗಳನ್ನು ಯಾವಾಗಲೂ ನೀಡಿಲ್ಲ. ಆದರೂ ಸಂಗ್ರಹಿಸಿದ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂಬ ಸಂದೇಶ ಸ್ವೀಕರಿಸಿದೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದ್ದು, ತನಿಖೆ ಮಾಡುವುದಾಗಿ ತಿಳಿಸಿದ್ದಾರೆ’ ಎಂದು ರೋಡ್ರಿಗಸ್ ವಿವರಿಸಿದರು.

‘ಕೋವಿಡ್ ಪರೀಕ್ಷೆಗೆ ಸಂಬಂಧಿಸಿದಂತೆ ನಗರದಾದ್ಯಂತ ಮೇಲ್ವಿಚಾರಣೆ ನಡೆಸಲು ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆ. ನಿಗದಿತ ಪರೀಕ್ಷಾ ಕೇಂದ್ರಗಳಿಗೆ ತೆರಳುವ ತಂಡಗಳು, ನಕಲಿ ಸಂದೇಶಗಳ ಬಗ್ಗೆ ಪರಿಶೀಲನೆ ನಡೆಸಲಿವೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ. ತ್ರಿಲೋಕ್ ಚಂದ್ರ ತಿಳಿಸಿದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌ಡಿಕೆ ಆರೋಪ

‘ಹಿಂದಿ ಪೋಷಿತ ಕಬಂಧ ಸಂಕೋಲೆಗಳಿಂದ ನಮ್ಮ ಕನ್ನಡ, ಕರ್ನಾಟಕವನ್ನು ರಕ್ಷಣೆ ಮಾಡಿಕೊಳ್ಳಬೇಕಿದೆ’

‘ಕನ್ನಡ, ಕರ್ನಾಟಕ ಕಟುಕರ ಕೈಗೆ ಸಿಲುಕಿವೆ’

ಬೆಂಗಳೂರು: ‘ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಕನ್ನಡ ಹಾಗೂ ಕರ್ನಾಟಕ ಕಟುಕರ ಕೈಗೆ ಸಿಲುಕಿವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.



ಎಚ್‌.ಡಿ.ಕುಮಾರಸ್ವಾಮಿ

‘ಒಂದು ಭಾರತ– ಶ್ರೇಷ್ಠ ಭಾರತ’ ಕಾರ್ಯಕ್ರಮದ ಅಡಿಯಲ್ಲಿ ಹೊರ ರಾಜ್ಯ ಪ್ರವಾಸ ಕೈಗೊಳ್ಳುವ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಹಾಗೂ ಅವರ ಜತೆಗೆ ಹೋಗುವ ಸಿಬ್ಬಂದಿಗೆ ಹಿಂದಿ, ಇಂಗ್ಲಿಷ್ ಭಾಷೆ ತಿಳಿದಿರಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳು ನಿರ್ದೇಶನ ನೀಡಿರುವುದನ್ನು ಆಕ್ಷೇಪಿಸಿ ಬುಧವಾರ ಸರಣಿ ಟ್ವೀಟ್ ಮಾಡಿರುವ ಅವರು, ತೀವ್ರ ವಾಗ್ದಾಳಿ ನಡೆಸಿದ್ದಾರೆ.

‘ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಅಧಿಕಾರಕ್ಕೆ ಬಂದ ಬಳಿಕ ಕನ್ನಡ ಮತ್ತು ಕರ್ನಾಟಕದ ಮೇಲೆ ದಬ್ಬಾಳಿಕೆ ಹೆಚ್ಚುತ್ತಿದೆ. ಕನ್ನಡವನ್ನೇ ಮೂಲೋತ್ಪಾಟನೆ ಮಾಡಿ, ಕನ್ನಡ ಅಸ್ಮಿತೆಯನ್ನೇ ಕಣ್ಮರೆಗೊಳಿಸುವ ಕಿರಾತಕ ಹುನ್ನಾರ ಇದರ ಹಿಂದಿದೆ’ ಎಂದು ಹೇಳಿದ್ದಾರೆ.

ಸರ್ಕಾರಕ್ಕೆ ಗೊತ್ತಿಲ್ಲದೆಯೇ ಇಂಥ ಆದೇಶ ಬರಲು ಸಾಧ್ಯವೇ? ಇಂತಹ ದ್ರೋಹದ ಆದೇಶ ನೀಡಿದ ಅಧಿಕಾರಿಯನ್ನು ಕೂಡಲೆ ಕಿತ್ತೊಗೆಯಬೇಕು. ಆದೇಶವನ್ನು ತಕ್ಷಣ ಹಿಂಪಡೆಯಬೇಕು ಎಂದು ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಪ್ರಕರಣ ಹೆಚ್ಚಳವಾದರೂ ವ್ಯತ್ಯಾಸವಾಗದ ಆಸ್ಪತ್ರೆ ದಾಖಲಾತಿ

ಮನೆ ಆರೈಕೆಯಲ್ಲಿ ಶೇ 99ರಷ್ಟು ಸೋಂಕಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರಿಕೆ ಕಂಡರೂ ಆಸ್ಪತ್ರೆ ದಾಖಲಾತಿಯಲ್ಲಿ ವ್ಯತ್ಯಾಸವಾಗಿಲ್ಲ. ಕೊರೊನಾ ಸೋಂಕಿತರಲ್ಲಿ ಶೇ 99.26ರಷ್ಟು ಮಂದಿ ಮನೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದಾರೆ.

ನಗರದಲ್ಲಿ ಸದ್ಯ 3,700ಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 28 ಮಂದಿಗೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. 25 ಮಂದಿ ಸಾಮಾನ್ಯ ಹಾಸಿಗೆ, ಇಬ್ಬರು ಎಚ್‌ಡಿಯು ಹಾಸಿಗೆ ಹಾಗೂ ಒಬ್ಬರು ಐಸಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಹೊಸ ಪ್ರಕರಣಗಳ ಸಂಖ್ಯೆ 500ರ ಗಡಿಯ ಆಸುಪಾಸಿಗೆ ಏರಿಕೆಯಾಗಿದ್ದರೂ ಸೋಂಕಿತರಲ್ಲಿ ಪ್ರತಿನಿತ್ಯ ನಾಲ್ಕರಿಂದ ಐದು ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗುತ್ತಿದ್ದಾರೆ. ದಾಖಲಾಗುತ್ತಿರುವ ಹೆಚ್ಚಿನವರಿಗೆ ಸಾಮಾನ್ಯ ಹಾಸಿಗೆಗಳಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ.

ಸೋಂಕಿತರ ಚಿಕಿತ್ಸೆಗೆ ಮೀಸಲಿಟ್ಟಿರುವ 2,395 ಹಾಸಿಗೆಗಳಲ್ಲಿ 2,367 ಹಾಸಿಗೆಗಳು ಖಾಲಿ ಉಳಿದಿವೆ. ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಚಿಕಿತ್ಸಾ ನಿರ್ಧಾರ ಕೇಂದ್ರಗಳಲ್ಲಿ (ಟ್ರಯಾಜ್ ಸೆಂಟರ್) ಸೋಂಕಿತರನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ನಗರದಲ್ಲಿ 48 ಟ್ರಯಾಜ್ ಸೆಂಟರ್‌ಗಳಿವೆ.

ವಿಶ್ವ ಆರೋಗ್ಯ ಸಂಸ್ಥೆ ಗುರುತಿಸಿರುವ ಕೊರೊನಾ ವೈರಾಣುವಿನ ಆಲ್ಫಾ, ಬೀಟಾ, ಡೆಲ್ಟಾ ಮತ್ತು ಉಪತಳಿಗಳು, ಇಟಾ, ಕಪ್ಪಾ, ಪಾಂಗೊ ಹಾಗೂ ಓಮೈಕ್ರಾನ್ ರೂಪಾಂತರಿ ಈವರೆಗೆ ಪತ್ತೆಯಾಗಿವೆ. ಕೋವಿಡ್ ಪೀಡಿತರಾದವರಲ್ಲಿ ಕೆಲವರ ಮಾದರಿಗಳನ್ನು ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆ (ಜಿನೋಮಿಕ್ ಸಿಕ್ವೆನ್ಸಿಸ್) ಪರೀಕ್ಷೆಗೆ ಪ್ರಯೋಗಾಯಲಕ್ಕೆ ಕಳುಹಿಸಲಾಗುತ್ತಿದ್ದು, ಸದ್ಯ ಹೊಸ ತಳಿ ಪತ್ತೆಯಾಗಿಲ್ಲ.

‘ಸದ್ಯ ಕೋವಿಡ್ ತೀವ್ರತೆ ಕಡಿಮೆಯಿದೆ. ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಯಲ್ಲಿ ಹೊಸ ರೂಪಾಂತರಿ ಪತ್ತೆಯಾಗಿಲ್ಲ. ಆದರೂ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಿ, ಅಧಿಕ ಪ್ರಕರಣಗಳು ವರದಿಯಾಗುತ್ತಿರುವ ಕಡೆ ನಿಗಾ ಇಡಲಾಗಿದೆ’ ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದರು.

ಸಿಧು ಹತ್ಯೆ: ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮಗಳ ಬಂಧನ

ನವದೆಹಲಿ (ಪಿಟಿಐ): ಆರು ವರ್ಷಗಳ ಹಿಂದೆ ಚಂಡೀಗಡದಲ್ಲಿ ರಾಷ್ಟ್ರಮಟ್ಟದ ಶೂಟರ್ ಸುಖಮನ್‌ಪ್ರೀತ್ ಸಿಂಗ್ ಅಲಿಯಾಸ್ ಸಿಪ್ಪಿ ಸಿಧು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಮಾಚಲ ಪ್ರದೇಶ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸಬೀನಾ ಸಿಂಗ್ ಅವರ ಪುತ್ರಿ ಕಲ್ಯಾಣಿ ಸಿಂಗ್ ಅವರನ್ನು ಸಿಬಿಐ ಬುಧವಾರ ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದರು.

‘ಸಿಧು ಜತೆಗಿನ ಸಂಬಂಧವು ಹದಗೆಟ್ಟಿದೆ ಎಂದು ಸೂಚಿಸುವ ಸಾಕ್ಷ್ಯಗಳನ್ನು ಕಲೆಹಾಕಿದ ನಂತರ ಸಿಬಿಐ ಕಲ್ಯಾಣಿ ಅವರನ್ನು ವಿಚಾರಣೆಗಾಗಿ ಕರೆದಿತ್ತು. ವಿಚಾರಣೆಯ ಸಮಯದಲ್ಲಿ ಕಲ್ಯಾಣಿ ಅನುಮಾನಾಸ್ಪದ ಪ್ರತಿಕ್ರಿಯೆ ನೀಡಿದ್ದರಿಂದ ಸಿಬಿಐ ಅವರನ್ನು ಬಂಧಿಸಿತು’ ಎಂದು ಅವರು ಹೇಳಿದರು.

ಪ್ರತಿಭಟನೆ ನಲ್ಲೂರಹಳ್ಳಿ ಮತ್ತು ವೈಟ್‌ಫೀಲ್ಡ್ ನಡುವಿನ ರಸ್ತೆ ಸಂಚಾರಕ್ಕೆ ಯೋಗ್ಯವಿಲ್ಲದಷ್ಟು ಹಾಳಾಗಿದ್ದು, ದುರಸ್ತಿಗೆ ಆಗ್ರಹಿಸಿ ಸ್ಥಳೀಯ ನಾಗರಿಕರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು

ದಲಿತ ಹಕ್ಕುಗಳ ಸಮಿತಿ–ಕರ್ನಾಟಕ ಆರೋಪ

‘ಚಕ್ರತೀರ್ಥ ಸಮಿತಿಯೇ ತುಕ್ಡೆ ತುಕ್ಡೆ ಗ್ಯಾಂಗ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರಗೂರು ರಾಮಚಂದ್ರಪ್ಪ ಸಮಿತಿಯು ಪಾಲಿಸಿದ ಸಂವಿಧಾನಾತ್ಮಕ ಆಶಯಗಳನ್ನು ತುಂಡರಿಸಿದ ರೋಹಿತ್ ಚಕ್ರತೀರ್ಥ ಸಮಿತಿಯು ತಾನೇ ‘ತುಕ್ಡೆ ತುಕ್ಡೆ ಗ್ಯಾಂಗ್’ ಎಂದು ತೋರಿಸಿಕೊಂಡಿದೆ ಎಂದು ದಲಿತ ಹಕ್ಕುಗಳ ಸಮಿತಿ–ಕರ್ನಾಟಕದ ಸಂಚಾಲಕ ಬಿ. ರಾಜಶೇಖರಮೂರ್ತಿ ಬುಧವಾರ ಪ್ರತಿಕ್ರಿಯಿಸಿದ್ದಾರೆ.

ಕರ್ನಾಟಕ ಸರ್ಕಾರವು ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ಮರುಪರಿಷ್ಕರಣೆ ಮಾಡಿದ ಮೇಲೆ ರಾಜ್ಯದಾದ್ಯಂತ ಪ್ರತಿರೋಧ ವ್ಯಾಪಕವಾಗುತ್ತಿದೆ. ಇದನ್ನು ಪ್ರಜಾಸತ್ತಾತ್ಮಕವಾಗಿ ಪರಿಗಣಿಸದೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ. ಬರಗೂರು ನೇತೃತ್ವದ ಸಮಿತಿಗಳು ಮಾಡಿದ ಪರಿಷ್ಕರಣೆಯ ಹಿಂದೆ ಜೆಎನ್‌ಯುಗೆ ಸಂಬಂಧಿಸಿದ ತುಕ್ಡೆ ತುಕ್ಡೆ ಗ್ಯಾಂಗ್ ಇತ್ತು ಎಂದು ಅವರು ಹೇಳಿರುವುದೇ ಮಿಥ್ಯಾರೋಪ ಎಂದು ಅವರು ದೂರಿದ್ದಾರೆ.

ಬರಗೂರು ಸಮಿತಿಯು ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ‘ಸಂವಿಧಾನ ಶಿಲ್ಪಿ’ ಎಂದು ಕರೆದಿತ್ತು. ಚಕ್ರತೀರ್ಥ ಸಮಿತಿ ಅದನ್ನು ಕಿತ್ತುಹಾಕಿದೆ. ಬದಲಾಗಿ ಬಿ.ಎನ್. ರಾವ್ ಅವರು ಸಂವಿಧಾನ ರಚನಾ ಚೌಕಟ್ಟು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದು ಪ್ರತ್ಯೇಕವಾಗಿ ಬರೆದು, ಅಂಬೇಡ್ಕರ್ ಅವರ ಪಾತ್ರವನ್ನು ಗೌಣಗೊಳಿಸಲಾಗಿದೆ. ಅಂಬೇಡ್ಕರ್ ತಾಯಿ–ತಂದೆ ಇತ್ಯಾದಿ ವಿವರ ಕೈಬಿಡಲಾಗಿದೆ. ಸಮಾಜ ಸುಧಾರಕಿ ಸಾವಿತ್ರಿಬಾಯಿ ಫುಲೆ ಅವರ ವ್ಯಕ್ತಿಚಿತ್ರವನ್ನು ಕಿತ್ತುಹಾಕಿದ್ದೂ ಇದೇ ಚಕ್ರತೀರ್ಥ ಸಮಿತಿ. ಅಂಬೇಡ್ಕರ್, ಬುದ್ಧ ಗುರುವಿನ ಬಗ್ಗೆ ಇದ್ದ ಪದ್ಯಗಳಿಗೆ ಸಂಪೂರ್ಣ ಕತ್ತರಿ ಹಾಕಲಾಗಿದೆ. 6ನೇ ತರಗತಿ ಪಠ್ಯದಿಂದ ಬೌದ್ಧ ಧರ್ಮದ ಪಾಠ ತೆಗೆಯಲಾಗಿದೆ. ದಲಿತ ಲೇಖಕರ ಪಾಠಗಳನ್ನು ತೆಗೆದುಹಾಕಲಾಗಿದೆ. ಇಂತಹ ಕೃತ್ಯವನ್ನು ಸಮರ್ಥಿಸುವ ಶಿಕ್ಷಣ ಸಚಿವರೂ ದಲಿತ ವಿರೋಧಿ ಎಂದು ಆರೋಪಿಸಿದ್ದಾರೆ.

ಬರಗೂರು ಸಮಿತಿಯ ಪಠ್ಯಗಳನ್ನೇ ಈ ವರ್ಷ ಮುಂದುವರಿಸಬೇಕು ಎಂದೂ ಅವರು ಆಗ್ರಹಿಸಿದ್ದಾರೆ.

ವಿ. ಬಾಲಸುಬ್ರಮಣ್ಯಂ ಆತಂಕ

ರೇಷ್ಮೆ ಬಿತ್ತನೆ ಮೊಟ್ಟೆಗೆ ಗಂಟುರೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಷ್ಮೆ ಬಿತ್ತನೆ ಮೊಟ್ಟೆಗಳಿಗೆ ತೀವ್ರವಾಗಿ ಹರಡುತ್ತಿರುವ ಗಂಟುರೋಗದ ಸೋಂಕನ್ನು ತಕ್ಷಣವೇ ನಿಯಂತ್ರಿಸದಿದ್ದರೆ ವರ್ಷದೊಳಗೆ ರೇಷ್ಮೆ ಉದ್ಯಮ ಪೂರ್ತಿ ನಶಿಸಿ ಹೋಗುವ ಸಾಧ್ಯತೆಯಿದೆ ಎಂದು ಭಾರತೀಯ ರೇಷ್ಮೆ ಒಕ್ಕೂಟದ ಅಧ್ಯಕ್ಷ ವಿ.ಬಾಲಸುಬ್ರಮಣ್ಯಂ ಆತಂಕ ವ್ಯಕ್ತಪಡಿಸಿದ್ದಾರೆ.

ರೋಗವು ತೀವ್ರಗೊಂಡರೆ ರೇಷ್ಮೆ ಬೆಳೆಗಾರರು ಬೀದಿ ಪಾಲಾಗಲಿದ್ದಾರೆ. ವರ್ಷದ ಆರಂಭದಲ್ಲಿ ಮೊದಲಿಗೆ ಕಾಣಿಸಿಕೊಂಡ ತಾಯಿ ಚಿಟ್ಟೆಯಿಂದ ಬರುವ ಈ ಗಂಟುರೋಗವು ನವೆಂಬರ್ ಹಾಗೂ ಡಿಸೆಂಬರ್‌ನಲ್ಲಿ ಉಲ್ಬಣವಾಗಲಿದೆ ಎಂದು ರೇಷ್ಮೆ ತಜ್ಞರು ವರದಿ ನೀಡಿದ್ದಾರೆ.

ಹೀಗಾಗಿ, ಬಿತ್ತನೆ ಪ್ರದೇಶಗಳಲ್ಲಿ ಚಿಟ್ಟೆ ಪರೀಕ್ಷೆ, ಸೋಂಕು ನಿವಾರಣೆ, ಬಿತ್ತನೆ ಮಾರುಕಟ್ಟೆಯಲ್ಲಿ ನೂಲು ಬಿಚ್ಚಾಣಿಕೆಗೆ ಹೋಗುವ ಗೂಡಿಗೆ ಹಬೆ ನೀಡುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ.

ಸೋಂಕಿತ ರೇಷ್ಮೆ ಮೊಟ್ಟೆ ಹಾಗೂ ಹುಳುಗಳನ್ನು ಸುಟ್ಟು ಹಾಕಬೇಕು. ವಿಜ್ಞಾನಿಗಳು ಹಾಗೂ ತಜ್ಞ ಸಿಬ್ಬಂದಿಯನ್ನು ಈ ಕೂಡಲೇ ಗಂಟುರೋಗ ಸೋಂಕಿತ ಪ್ರದೇಶಗಳಿಗೆ ನಿಯೋಜಿಸಿ, ಗುಣಮಟ್ಟ ಪರೀಕ್ಷೆ ಮಾಡಿಸಿ ಪೆಬ್ರಿನ್ ರೋಗವನ್ನು ನಿಯಂತ್ರಣಕ್ಕೆ ತರಬೇಕು ಎಂದು ಸಲಹೆ ನೀಡಿದ್ದಾರೆ.

ರಾಜ್ಯದಲ್ಲಿ 46 ಬ್ಯಾಚ್‌ಗಳಲ್ಲಿ ಗಂಟು ರೋಗಾಣು ಕಂಡುಬಂದಿದೆ ಎಂಬುದನ್ನು ರೇಷ್ಮೆ ಇಲಾಖೆ ದೃಢಪಡಿಸಿದೆ. ಈ ಪೆಬ್ರಿನ್ ರೋಗಾಣು ಸೋಂಕಿತ ಸಂತತಿಯನ್ನು ಸಂಪೂರ್ಣ ನಾಶಪಡಿಸಬೇಕು. ರೈತರ ರೇಷ್ಮೆ ಹುಳು ಸಾಕಣೆ ಮನೆಗಳಲ್ಲಿ ಸೋಂಕು ನಿವಾರಣೆ ಮಾಡಬೇಕು ಎಂದು ಹೇಳಿದ್ದಾರೆ.

ಸರ್ಕಾರವು ಪೆಬ್ರಿನ್ ರೋಗವನ್ನು ನಿರ್ಲಕ್ಷ್ಯ ತೋರಿದರೆ ರೇಷ್ಮೆ ಉದ್ಯಮ ನಶಿಸಿ ಹೋಗಲಿದೆ. ಗಂಟುರೋಗ ಸೋಂಕಿನಿಂದ ಇಟಲಿ ಮತ್ತು ಫ್ರಾನ್ಸ್‌ನಲ್ಲಿ ರೇಷ್ಮೆ ಉದ್ಯಮ ಸರ್ವನಾಶವಾಗಿರುವುದನ್ನು ಗಮನದಲ್ಲಿ ಇರಿಸಿಕೊಂಡು ತಕ್ಷಣವೇ ಕ್ರಮ ವಹಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ರೇಷ್ಮೆ ಸಂಶೋಧನಾ ಸಂಸ್ಥೆಯನ್ನು ಬಲಪಡಿಸಬೇಕು ಹಾಗೂ ಸಮರ್ಥ ವಿಜ್ಞಾನಿಗಳನ್ನು ನೇಮಕಾತಿ ಮಾಡಬೇಕು ಎಂದೂ ವಿ. ಬಾಲಸುಬ್ರಮಣ್ಯಂ ಅವರು ಆಗ್ರಹಿಸಿದ್ದಾರೆ.

‘ಭಾಷಾಂತರಕ್ಕೆ ಆಳ ಅಧ್ಯಯನ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭಾಷಾಂತರಕಾರರಿಗೆ ಆಳವಾದ ಅಧ್ಯಯನ ಅಗತ್ಯ’ ಎಂದು ಅನುವಾದಕ ಡಾ.ನಾ.ದಾಮೋದರ ಶೆಟ್ಟಿ ಪ್ರತಿಪಾದಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ಸೋಮವಾರ ಆಯೋಜಿಸಿದ್ದ ಭಾಷಾ ಬೋಧಕರ ಭಾಷಾಂತರ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

‘ಭಾಷಾಂತರವೂ ಸೃಜನಶೀಲ ಕೆಲಸ. ಒಳ್ಳೆಯ ಭಾಷಾಂತರ ಕೃತಿ ಸಿದ್ಧವಾಗಬೇಕಿದ್ದರೆ ಭಾಷಾಂತರಕಾರರಿಗೆ ಆಳವಾದ ಅಧ್ಯಯನ ಇರಬೇಕು’ ಎಂದರು.

‘ಭಾಷಾಂತರಕಾರರಿಗೆ ಎರಡು ಭಾಷೆಗಳ ಮೇಲೆ ಹಿಡಿತ ಇರಬೇಕು. ಸಂಸ್ಕೃತಿಯ ಪರಿಚಯವೂ ಮುಖ್ಯ’ ಎಂದು ನುಡಿದರು.

‘ಮಲಯಾಳ, ಕೊಡವ ಭಾಷೆಗಳ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ. ಅದರ ಅನುಭವವು ಉತ್ತಮವಾಗಿತ್ತು’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸೋಮವಾರ ಆಯೋಜಿಸಿದ್ದ ಭಾಷಾ ಬೋಧಕರ ಭಾಷಾಂತರ ಶಿಬಿರದಲ್ಲಿ ಅನುವಾದಕ ಡಾ.ನಾ.ದಾಮೋದರ ಶೆಟ್ಟಿ ಮಾತನಾಡಿದರು. ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ, ಪ್ರಾಧಿಕಾರದ ಅಧ್ಯಕ್ಷ ಡಾ.ಅಜಕ್ಕಳ ಗಿರೀಶ ಭಟ್, ಲೇಖಕ ಡಾ.ಜಿ.ಬಿ.ಹರೀಶ ಹಾಜರಿದ್ದರು – ಪ್ರಜಾವಾಣಿ ಚಿತ್ರ

ವಿಮರ್ಶಕ ಡಾ.ಜಿ.ಬಿ.ಹರೀಶ ಮಾತನಾಡಿ, ‘ಭಾಷಾಂತರವೆಂದರೆ ಸಾಂಸ್ಕೃತಿಕ ವಿನಿಮಯ ಕೂಡ ಆಗಿರುತ್ತದೆ’ ಎಂದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಡಾ.ಅಜಕ್ಕಳ ಗಿರೀಶ ಭಟ್, ಕಾಲೇಜುಗಳ ಬೋಧಕರನ್ನು ಭಾಷಾಂತರದತ್ತ ಆಕರ್ಷಿಸಲು ಈ ಪ್ರಾಯೋಗಿಕ ಶಿಬಿರ ಏರ್ಪಡಿಸಿರುವುದಾಗಿ ತಿಳಿಸಿದರು.

ಮುಂದಿನ ದಿನಗಳಲ್ಲಿ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ಬೋಧಕರಿಗೂ ಭಾಷಾಂತರ ಕಮ್ಮಟಗಳನ್ನು ನಡೆಸಲಾಗುವುದು ಎಂದು ತಿಳಿಸಿದರು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಉಪಸ್ಥಿತರಿದ್ದರು.

ಪಠ್ಯ: ಪ್ರತಿಭಟನೆಗೆ ಒಕ್ಕಲಿಗರ ಸಂಘ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರು ಪರಿಷ್ಕೃತ ಪಠ್ಯ ವಾಪಸ್‌ಗೆ ಆಗ್ರಹಿಸಿ ಇದೇ 18ರಂದು ನಡೆಯಲಿರುವ ಬೃಹತ್ ಪ್ರತಿಭಟನೆಗೆ ಬೆಂಬಲ ಸೂಚಿಸುವುದಾಗಿ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್. ಬಾಲಕೃಷ್ಣ ತಿಳಿಸಿದ್ದಾರೆ.

ಕವಿ ಕುವೆಂಪು ಅವರು ರಚಿಸಿರುವ ನಾಡಗೀತೆ, ನಾಡಧ್ವಜ ಕುರಿತಂತೆ ಅವಹೇಳನ ಮಾಡಿರುವ ರೋಹಿತ್ ಚಕ್ರತೀರ್ಥ ಧೋರಣೆ ಬಗ್ಗೆ ಸರ್ಕಾರ ಇದುವರೆಗೂ ಮೌನವಾಗಿರುವ ಬಗ್ಗೆ ಹಾಗೂ ಪಠ್ಯದಲ್ಲಿ ಮಹನೀಯರ ಪಾಠಗಳನ್ನು ಕೈಬಿಟ್ಟಿರುವ ಬಗ್ಗೆ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ಸಂಘ ಸಕ್ರಿಯವಾಗಿ ಪಾಲ್ಗೊಳ್ಳಲಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿ.ಎನ್. ಬಾಲಕೃಷ್ಣ

ಈ ಬಗ್ಗೆ ನೊಂದಿರುವ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸರ್ಕಾರದ ಗಮನ ಸೆಳೆದಿದ್ದಾರೆ. ಆದರೆ, ಸರ್ಕಾರ ಈ ಬಗ್ಗೆ ಸ್ಪಷ್ಟ ನಿಲುವು ತೆಗೆದುಕೊಳ್ಳದೇ ಪರಿಷ್ಕೃತ ಪಠ್ಯಗಳನ್ನೇ ಶಾಲೆಗಳಿಗೆ ರವಾನಿಸುತ್ತಿರುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ. ಸರ್ಕಾರ ತಕ್ಷಣವೇ ಚಕ್ರತೀರ್ಥ ವಿರುದ್ಧ ಕಾನೂನು ಕ್ರಮ ಜಾರಿಗೊಳಿಸಬೇಕು, ಪಠ್ಯದಲ್ಲಿ ಮಾಡಿರುವ ಬದಲಾವಣೆಗಳನ್ನು ಕೈಬಿಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಒಕ್ಕಲಿಗ ಸಮುದಾಯದ ವಿವಿಧ ಸಂಘಟನೆಗಳ ಜತೆ ಈ ಚರ್ಚೆ ಮಾಡಲಾಗಿದ್ದು, ಸಮುದಾಯದ ಬಂಧುಗಳು ಪ್ರತಿಭಟನೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಬಾಗಲಗುಂಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಅರಣ್ಯ ಅಭಿವೃದ್ಧಿ ನಿಗಮದ ಸುವರ್ಣ ಮಹೋತ್ಸವ: ಕಾಲ್ನಡಿಗೆ ಜಾಥಾ

‘ಕಾಡು ಉಳಿಸಲು ಎಲ್ಲರೂ ಪಣ ತೊಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಡನ್ನು ಉಳಿಸಲು ಎಲ್ಲರೂ ಪಣ ತೊಡಬೇಕು’ ಎಂದು ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷೆ ತಾರಾ ಅನುರಾಧ ಕರೆ ನೀಡಿದರು.

ಅರಣ್ಯ ಅಭಿವೃದ್ಧಿ ನಿಗಮದ ಸುವರ್ಣ ಮಹೋತ್ಸವದ ಅಂಗವಾಗಿ ಬುಧವಾರ ಕಾಲ್ನಡಿಗೆ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು.

‘ಆಮ್ಲಜನಕದ ಕೊರತೆಯಿಂದ ಬಹಳಷ್ಟು ಸಮಸ್ಯೆಯನ್ನು ಅನುಭವಿಸಿದ್ದೇವೆ. ಆಮ್ಲಜನಕವನ್ನು ಸಮೃದ್ಧವಾಗಿ ನೀಡುವಂತಹ ಪರಿಸರ ಮತ್ತು ಕಾಡನ್ನು ಬೆಳೆಸುವಂತಹ ಕಾರ್ಯಗಳ ಬಗ್ಗೆ ಹೆಚ್ಚಿನ ಗಮನ ನೀಡಬೇಕಾದ ಅವಶ್ಯಕತೆ ಅರಿತುಕೊಂಡಿದ್ದೇವೆ’ ಎಂದರು.

ಅರಣ್ಯ ಅಭಿವೃದ್ಧಿ ನಿಗಮದ ಸುವರ್ಣ ಮಹೋತ್ಸವದ ಅಂಗವಾಗಿ ನಗರದಲ್ಲಿ ಬುಧವಾರ ಕಾಲ್ನಡಿಗೆ ಜಾಥಾ ನಡೆಯಿತು

‘ಕಾಡನ್ನು ಬೆಳೆಸಿ, ಪರಿಸರ ರಕ್ಷಿಸಲು ನಾವೆಲ್ಲರೂ ಪಣ ತೊಡಬೇಕಾಗಿದೆ. ಅರಣ್ಯ ಅಭಿವೃದ್ಧಿ ನಿಗಮ ಕಳೆದ 50 ವರ್ಷಗಳಿಂದ ರಾಜ್ಯದಲ್ಲಿ ಕಾಡು ಉಳಿಸುವಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡಿದೆ’ ಎಂದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಆರ್.ಕೆ.ಸಿಂಗ್ ಮಾತನಾಡಿ, ಪರಿಸರ ಜಾಗೃತಿ ಮಾಸಾಚರಣೆ ಅಂಗವಾಗಿ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಿರುವುದು ಸಂತಸದ ಸಂಗತಿ ಎಂದರು.

ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ನಿಗಮದ ಉಪಾಧ್ಯಕ್ಷ ರೇವಣ್ಣಪ್ಪ, ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರಾಧಾದೇವಿ ಹಾಜರಿದ್ದರು.

ನಗರದಲ್ಲಿ ಇಂದು

ಇಂಟರ್‌ನ್ಯಾಷನಲ್ ಇಂಡಿಯನ್ ಫೋಕ್ ಆರ್ಟ್ ಗ್ಯಾಲರಿ: 300 ಅದ್ಭುತ ಕಲಾಕೃತಿಗಳ ಪ್ರದರ್ಶನ, ನೇತೃತ್ವ: ಚಿತ್ರಕರ್ ಸದಾಶಿವ ಕುಲಕರ್ಣಿ, ಆಯೋಜಕರು: ಇಂಟರ್‌ನ್ಯಾಷನಲ್ ಇಂಡಿಯನ್ ಫೋಕ್ ಆರ್ಟ್ ಗ್ಯಾಲರಿ–ಆಸ್ಟ್ರೇಲಿಯಾ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಶೇಷಾದ್ರಿಪುರಂ, ಬೆಳಿಗ್ಗೆ: 10

ವಾಟರ್ ಎಕ್ಸ್‌ಪೋ–ನೀರಿನ ಸಂರಕ್ಷಣೆಯ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನ: ಆಯೋಜಕರು: ವಾಟರ್ ಇಂಡಿಯಾ, ಮ್ಯಾನ್ಫೊ ಕನ್ವೆನ್ಷನ್ ಸೆಂಟರ್, ನಾಗವಾರ ವರ್ತುಲ ರಸ್ತೆ, ಬೆಳಿಗ್ಗೆ: 11.30

#ಇನ್‌ವ್ಯಾಲ್ಯುಯಬಲ್ ರಿಸೈಕ್ಲರ್ ಕ್ಯಾಂಪೇಂನ್‌ಗೆ ಸಂಗೀತ ಪ್ರಸ್ತುತಿಯ ಮೂಲಕ ಚಾಲನೆ: ಚಾಲನೆ ನೀಡುವವರು: ವಾಸು ದೀಕ್ಷಿತ್, ಶ್ರದ್ಧಾ ಜೈನ್, ವಾಣಿ ಮೂರ್ತಿ, ಸ್ಥಳ: ಗೋ ನೇಟಿವ್, 25, ಲ್ಯಾವೆಲ್ಲೆ ರಸ್ತೆ, ಶಾಂತಲಾ ನಗರ, ಅಶೋಕನಗರ, ಮಧ್ಯಾಹ್ನ: 12

ಇಮ್‌ಟೆಕ್ಸ್ ಫಾರ್ಮಿಂಗ್–2022 ಮತ್ತು ಟೂಲ್‌ಟೆಕ್–2022 ಪ್ರದರ್ಶನ: ಉಪಸ್ಥಿತಿ: ಜೆಮ್‌ಶೆಡ್ ಎನ್. ಗೋದ್ರೆಜ್, ರವಿ ರಾಘವನ್, ಆಯೋಜಕರು: ಇಂಡಿಯನ್ ಮಷಿನ್ ಟೂಲ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್, ಸ್ಥಳ: ಬೆಂಗಳೂರಿನ ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಮಾದಾವರ, ಬೆಳಿಗ್ಗೆ: 10.30

ಮುಕ್ತ ಮನಸು–ಸ್ವಸ್ಥ ಬದುಕು: ಉಪನ್ಯಾಸಕರು: ಡಿ.ಯಶೋದಾ, ಉಪಸ್ಥಿತಿ: ಎಂ.ಸಿ. ನರೇಂದ್ರ, ಮಹಾಂತೇಶ ದೇಗಾವಿ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜಕರು: ಕನ್ನಡ ಯುವಜನ ಸಂಘ, ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಸಂಜೆ: 6.30

‘ಸರ್ಕಾರಿ ಶಾಲೆಗಳಿಗೆ ಮತ್ತಷ್ಟು ಸೌಲಭ್ಯ ಸಿಗಲಿ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಸರ್ಕಾರಿ ಶಾಲೆಗಳಲ್ಲೂ ಉತ್ತಮ ಶಿಕ್ಷಣ ಲಭಿಸುತ್ತಿದೆ ಎಂಬುದಕ್ಕೆ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದಿರುವುದೇ ಸಾಕ್ಷಿಯಾಗಿದೆ. ಸರ್ಕಾರಿ ಶಾಲೆಗಳಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳು ಸಿಕ್ಕರೆ ವಿದ್ಯಾರ್ಥಿಗಳು ಸಾಧನೆ ಮಾಡಲಿದ್ದಾರೆ’ ಎಂದು ಶ್ರೀನಿವಾಸ ಮಂಜುನಾಥ ಫೌಂಡೇಶನ್ ಅಧ್ಯಕ್ಷ ಡಾ.ಎಸ್. ಮಂಜುನಾಥ್ ತಿಳಿಸಿದರು.

ಬಾಗಲಗುಂಟೆ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಿ ಅವರು ಮಾತನಾಡಿದರು.

‘ದಾನಿಗಳು ಕೂಡ ಸರ್ಕಾರಿ ಶಾಲೆಗಳಿಗೆ ಅನೇಕ ಸೌಲಭ್ಯಗಳನ್ನು ನೀಡುತ್ತಿರುವುದು ಸಂತೋಷದ ವಿಷಯ. ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳಲ್ಲೂ ಸಾಧನೆ ಮಾಡಬೇಕು’ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯಶಿಕ್ಷಕ ವೇಣುಗೋಪಾಲ್, ಸಮಾಜ ಸೇವಕಿ ಚಂದ್ರಕಲಾ ಮಂಜುನಾಥ್, ಆರಂಭ ಫೌಂಡೇಷನ್ ಸಂಸ್ಥಾಪಕ ಮಹೇಶ್ ಕೆ.ಪಿ., ಮಂಜುಳಾ ಹಾಜರಿದ್ದರು.

18ರಂದು ವಿಜಯಾ ಪಿಯು ಕಾಲೇಜು ರಜತ ಮಹೋತ್ಸವ

ಬೆಂಗಳೂರು: ವಿಜಯಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವವನ್ನು ಶನಿವಾರ ಜೂನ್. 18ರಂದು ಜಯನಗರ 3ನೇ ಬ್ಲಾಕ್‌ನಲ್ಲಿರುವ ವಿಜಯ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

1956ರಲ್ಲಿ ಚಿಕ್ಕ ಬಾಡಿಗೆ ಮನೆಯಲ್ಲಿ ಎಸ್‌ಎಸ್‌ಎಲ್‌ಸಿ ಕೋಚಿಂಗ್ ಹೋಮ್ ಎಂಬ ಹೆಸರಿನಲ್ಲಿ ಒಬ್ಬ ವಿದ್ಯಾರ್ಥಿಗೆ ಪಾಠ ಹೇಳಿಕೊಡುವುದರೊಂದಿಗೆ ಆರಂಭವಾದ ಸಂಸ್ಥೆ ಈಗ ರ‍್ಯಾಂಕ್ ಶಾಲೆ ಎಂದೇ ಹೆಸರಾಗುವ ಮಟ್ಟಕ್ಕೆ ಬೆಳೆದಿದಿ. 1998ರಲ್ಲಿ ವಿಜಯಾ ಪ್ರೌಢಶಾಲೆಯು ಪದವಿ ಪೂರ್ವ ಕಾಲೇಜಾಗಿ ಮೇಲ್ದರ್ಜೆಗೆ ಏರಿತು. ಪದವಿ ಪೂರ್ವ ಕಾಲೇಜು ಈಗ 25ನೇ ವರ್ಷದ ಸಂಭ್ರಮದಲ್ಲಿದ್ದರೆ, ಪದವಿ ವಿಭಾಗವು ದಶಮಾನೋತ್ಸವ ಆಚರಿಸಿಕೊಳ್ಳುತ್ತಿದೆ.

ರಜತ ಮಹೋತ್ಸವವನ್ನು ವಿಧುಶೇಖರ ಭಾರತೀ ಸ್ವಾಮೀಜಿ ಉದ್ಘಾಟನೆ ಮಾಡಲಿದ್ದಾರೆ. ಅತಿಥಿಗಳಾಗಿ ಕೆ.ಎಸ್. ಚಂದ್ರಶೇಖರಯ್ಯ, ಸಂಸದ ತೇಜಸ್ವಿ ಸೂರ್ಯ, ಶತಾವಧಾನಿ.ಆರ್. ಗಣೇಶ್, ವಿ.ಆರ್. ಗೌರಿಶಂಕರ್ ಆಗಮಿಸಲಿದ್ದಾರೆ ಎಂದು ವಿಜಯಾ ಶಿಕ್ಷಣ ಸಂಸ್ಥೆಯ ಪದವಿ ಕಾಲೇಜಿನ ಪ್ರಾಂಶುಪಾಲ ಶಂಕರಾಚಾರ್ಯ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಸ್ತ್ರೀಧನದ ಮೇಲೆ ಪತಿಯ ಕುಟುಂಬಕ್ಕೆ ಹಕ್ಕಿಲ್ಲ: ಹೈಕೋರ್ಟ್

ಬೆಂಗಳೂರು: ‘ವಿವಾಹ ವಿಚ್ಛೇದನದ ನಂತರ ಪತಿಯ ಕುಟುಂಬದವರು ಪತ್ನಿಯು, ಮದುವೆ ವೇಳೆ ತಂದ ಒಡವೆ, ಹಣ ಸೇರಿದಂತೆ ಯಾವುದೇ ಸ್ತ್ರೀಧನದ ಮೇಲೆ ಹಕ್ಕು ಸ್ಥಾಪಿಸುವಂತಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಕೌಟುಂಬಿಕ ವ್ಯಾಜ್ಯವೊಂದರಲ್ಲಿ, ‘ಪತ್ನಿ ನನ್ನ ವಿರುದ್ಧ ಹೂಡಿರುವ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಪತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಮದುವೆಯನ್ನು ರದ್ದುಗೊಳಿಸುವುದು ಎಂದರೆ ಹೆಂಡತಿಯು ಮದುವೆ ವೇಳೆ ತಂದ ಎಲ್ಲಾ ವಸ್ತುಗಳನ್ನು ಗಂಡನ ಕುಟುಂಬವು ಉಳಿಸಿಕೊಳ್ಳಬಹುದು ಎಂದು ಅರ್ಥವಲ್ಲ. ಮದುವೆ ಮುರಿದು ಬಿದ್ದು ಪತ್ನಿಗೆ ಕಾಯಂ ಜೀವನಾಂಶ ನೀಡುವುದು ಹಾಗೂ ಮದುವೆ ಸಂದರ್ಭದಲ್ಲಿ ತವರು ಮನೆಯಿಂದ ತಂದಂತಹ ಹಣ ಹಾಗೂ ಒಡವೆಗಳ ಮೇಲಿನ ಹಕ್ಕು ಮಂಡಿಸುವುದು ಬೇರೆ ಬೇರೆ’ ಎಂದು ನ್ಯಾಯಪೀಠ ಹೇಳಿದೆ.

‘ಅರ್ಜಿದಾರರು ಜೀವನಾಂಶ ನೀಡುತ್ತಿರುವುದೇನೊ ಸರಿ. ಆದರೆ, ಪತ್ನಿಯ ಕುಟುಂಬದವರು ನೀಡಿದ್ದ ₹ 9 ಲಕ್ಷ ಹಾಗೂ ಒಡವೆಯನ್ನು ಆಕೆಗೆ ವಾಪಸು ನೀಡಬೇಕು. ಅದರ ಮೇಲೆ ಹಕ್ಕು ಮಂಡಿಸಲು ಪತಿಗೆ ಅವಕಾಶವಿಲ್ಲ’ ಎಂದು ಅಭಿಪ್ರಾಯಪಟ್ಟಿದೆ.

ಪತಿಯ ವಿರುದ್ಧದ ಕೇಸ್ ರದ್ದು ಮಾಡಲು ನಿರಾಕರಿಸಿರುವ ನ್ಯಾಯಪೀಠ, ‘ಅರ್ಜಿದಾರರು ಶುದ್ಧಹಸ್ತರೆಂದು ಸಾಬೀತಾಗಬೇಕಾದರೆ ವಿಚಾರಣೆಯನ್ನು ಎದುರಿಸಲೇಬೇಕು’ ಎಂದು ಹೇಳಿದೆ.

ಹೈಕೋರ್ಟ್ ವಿಭಾಗೀಯ ಪೀಠ ಆದೇಶ

‘ಗಂಡನ ಲೈಂಗಿಕ ಅಸಮರ್ಥತೆ ಪತ್ನಿ ಆರೋಪಕ್ಕೆ ಸಾಕ್ಷಿ ಅವಶ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಗಂಡ ಲೈಂಗಿಕವಾಗಿ ಅಸಮರ್ಥನಿದ್ದಾನೆ ಎಂದು ಪತ್ನಿ ಸುಳ್ಳು ಆರೋಪ ಹೊರಿಸಿದ್ದೇ ಆದರೆ, ಅದು ಮಾನಸಿಕ ಕ್ರೌರ್ಯ’ ಎಂದು ವ್ಯಾಖ್ಯಾನಿಸಿರುವ ಹೈಕೋರ್ಟ್, ‘ಇಂತಹ ಪ್ರಕರಣಗಳಲ್ಲಿ ಪತಿ ಧಾರಾಳವಾಗಿ ವಿಚ್ಛೇದನ ಕೋರಬಹುದು’ ಎಂದು ಆದೇಶಿಸಿದೆ.

ಪ್ರಕರಣವೊಂದರಲ್ಲಿ ಪತಿಯ ವಿರುದ್ಧ ಆಧಾರ ರಹಿತವಾಗಿ ನಪುಂಸಕತ್ವದ ಆರೋಪ ಹೊರಿಸಿದ್ದ ಪತ್ನಿಯ ನಡೆಯನ್ನು ಆಕ್ಷೇಪಿಸಿರುವ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಹಾಗೂ ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಒಂದು ವೇಳೆ ಪತಿ ಮಕ್ಕಳನ್ನು ಹೊಂದಲು ಅಸಮರ್ಥ ಎಂದಾದರೆ ಅಂತಹ ಆರೋಪಕ್ಕೆ ಸೂಕ್ತ ಸಾಕ್ಷ್ಯಾಧಾರ ಇರಬೇಕು. ಇಲ್ಲವಾದಲ್ಲಿ ಅದು ಮಾನಸಿಕ ಕ್ರೌರ್ಯವಾಗುತ್ತದೆ’ ಎಂದು ಅಭಿಪ್ರಾಯಪಟ್ಟಿದೆ.

‘ಲೈಂಗಿಕ ಕ್ರಿಯೆ ನಡೆಸಲು ಪತಿ ಅಸಮರ್ಥ ಎಂದು ಈ ಪ್ರಕರಣದಲ್ಲಿ ಪತ್ನಿ ಆರೋಪ ಮಾಡಿದ್ದಾರೆ. ಪ್ರಜ್ಞಾವಂತ ಮಹಿಳೆಯೊಬ್ಬರು ತನ್ನ ಪತಿಯ ನಪುಂಸಕತ್ವದ ಬಗ್ಗೆ ಮತ್ತೊಬ್ಬರ ಮುಂದೆ ಸುಳ್ಳು ಆರೋಪ ಮಾಡುವುದಿಲ್ಲ. ಸಾರ್ವಜನಿಕವಾಗಿ ಇಂತಹ ನಿರಾಧಾರ ಆರೋಪ ಮಾಡುವುದರಿಂದ ಪತಿಯ ಘನತೆಗೆ ಧಕ್ಕೆ ತಂದಂತಾಗುತ್ತದೆ’ ಎಂದು ನ್ಯಾಯಪೀಠ ಹೇಳಿದೆ.

‘ನಾನು ಲೈಂಗಿಕ ಕ್ರಿಯೆ ನಡೆಸಲು ಅಸಮರ್ಥ ಎಂದು ಪತ್ನಿ ಪದೇ ಪದೇ ಸಂಬಂಧಿಕರ ಮುಂದೆ ದೂರುತ್ತಿದ್ದಳು. ಇದರಿಂದ ನನಗೆ ತುಂಬಾ ಮುಜುಗರ ಉಂಟಾಗುತ್ತಿತ್ತು ಮತ್ತು ಇದರಿಂದ ನಾನು ಸಾಕಷ್ಟು ಮಾನಸಿಕ ಹಿಂಸೆ ಅನುಭವಿಸುತ್ತಿದ್ದು, ನನಗೆ ವಿಚ್ಛೇದನ ಮಂಜೂರು ಮಾಡಬೇಕು’ ಎಂದು ಕೋರಿ 34 ವರ್ಷದ ಪತಿ ಕೌಟುಂಬಿಕ ನ್ಯಾಯಾಲಯ ಕಾಯ್ದೆಯ ಕಲಂ 19 (1)ರ ಅಡಿಯಲ್ಲಿ 2014ರಲ್ಲಿ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಪ್ರಧಾನ ಕೌಟುಂಬಿಕ ನ್ಯಾಯಾಲಯ ತಿರಸ್ಕರಿಸಿತ್ತು.

ಪ್ರಧಾನ ಕೌಟುಂಬಿಕ ನ್ಯಾಯಾಲಯದ ಈ ಆದೇಶವನ್ನು ಇದೀಗ ರದ್ದುಗೊಳಿಸಿರುವ ವಿಭಾಗೀಯ ನ್ಯಾಯಪೀಠ, ಅರ್ಜಿದಾರರ ಮನವಿಯನ್ನು ಭಾಗಶಃ ಪುರಸ್ಕರಿಸಿದೆ. ‘ಪತ್ನಿ ಮತ್ತೊಂದು ಮದುವೆಯಾಗುವ ತನಕ ಪ್ರತಿ ತಿಂಗಳೂ ₹ 8 ಸಾವಿರ ನೀಡಬೇಕು’ ಎಂದು ಪತಿಗೆ ಆದೇಶಿಸಿ ವಿಚ್ಛೇದನ ಮಂಜೂರು ಮಾಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

DISTRIBUTOR- BANGALORE CITY: MERCURY IMPEX: 080 41499222
FOR TRADE & INSTITUTIONAL ENQUIRY CALL- SHYAMLAL: 9742277106,
ABHISHEK: 8197683550, MAHIPAL: 9686455415

JOB OPPORTUNITIES

Part-Time Jobs

SANIYA PARTTIME Join Male Work with Highprofile girl, Housewife, Earn (15000- 25000). 8979597135, 9557041436, 7043061724.

Teachers/ Professors

ST. FRANCIS SCHOOL - ICSE
P.B. No. 3417, Koramangala, Bangalore - 560 034
Tel: 080-25531076 / 25500123
Mobile: 9731013320
Email: office@stfrancisschoolicse.com
TEACHERS REQUIRED
Invites application from experienced candidates with MCA / BCA / B Sc (Computer Science) to teach Computer Science at High School, Middle & Primary Level. (ICSE Syllabus)
Interested candidates - Walk in Interview / mail your CV.

JYOTI NIVAS PRE- UNIVERSITY COLLEGE
HOSUR ROAD, BANGALORE – 560095
Ph: 25506100 E-Mail Id: louisa.regi@gmail.com / info@jnpuc.org
REQUIRES:
A Post Graduate in MCA/ MBA with excellent communication skill in English, and equipped in both hardware & software
Apply to the Principal on or before 23.06.2022

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/-Contact: 9741401834

WANTED VEG and Non Veg Cooking Manager Delivery Boy Cashier 50 Nos Contact: 8892501007/ 9606701007

COMPUTER TEACHERS with Knowledge in JAVA Required for ICSE Schools at Nagarbhavi. Freshers too can apply.Walk-in interview TODAY ARYAN PRESIDENCY SCHOOL,#283.13A Main,13th Block,2nd Stage, Nagarbhavi, Bangalore-72. 6364917865/ info@ilmedu.org

NEW HOLY SAINT HIGH SCHOOL HAMPINAGAR Requires Kannada Lady Trained Teacher 15000/- Contact: 7892461960/ 9980802988

General

URGENT REQUIREMENT of Parking Cashiers For Supervisor Phoenix Market city Mahadevpura below 35 age limit Contact: 9600800923.

Marketing & Sales

REQ, TEAMLEADER, Telecaller, & Field executive for Banking Loan collection (salary 20000). Direct recruitment to company Contact:- 9620206756, 9620206756.

AUTOMOTIVE

Four Wheelers Selling

Multiple

Audi Q3 Diesel 2018 Model
Audi A4 Diesel 2015 Model
Audi E Tron Electric 2021 Model
M Benz GLC 43 AMG Petrol 2017 Model
+91 9900257792

BUSINESS

Business Offers

Finance

WANTED BUSINESS Partner Non Veg Hotel 1 Crore Investment Monthly Income 10 Lakhs: 8892501007/ 9606701007

INVESTERS WANTED for a Business with Hundred Percent SECURED and FIXED PROFIT. 9110830507 Rajajinagar B'lore.

NRI'S INVESTMENT And Finance Available On Low Interest Against Properties, Land &Building,Sites,Flats, Converted& Agriculture Lands Call:7411265189

WANTED BUSINESS Partner Non Veg Hotel 10 Lakhs Investment Monthly Income 1 Lakhs: 8892501007/ 9606701007

REAL ESTATE SELLING

Flat

Mysore

3BHK FLAT 1475 Sft,For Sale In V.V.Mohalla Mysore.Ph: 9980267710.

Sites

Whitefield

URGENT SALE 30X40 site in Dew Drops Gated community, ready to construct - Chikka thirupathi at Rs.17L SBI approved. Call 7022206007.

EDUCATIONAL

Special Courses

JOB ORIENTED Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

PERSONAL

Change of Name

I SMT. Aishwarya Anantharamu, Residing at No.51, Samruddhi,Krishna Kamala Enclave, 2nd Main Road, Uttarahalli, Bengaluru-61. Solemnly declare I whollyrenounce/relinquish and abandon the useof my former name/surname of AishwaryaSrikar and I hereby assume by thename/surname AISHWARYA ANANTHARAMU for all Purpose Vide affidavit dated21-05-2022 Sworn before B K R Krishnamurthy, Advocate & Notary.

I,RAJENDRA INAMDAR alias Rajendra alias Rajendra L Inamdar S/o Lakshman Rao Inamdar,R/at #1303, Anugragha Apartment 2nd Main 2nd Cross KHB Colony Govindarajnagar Magadi Road Bangalore North Basaveshwaranagar, Bangalore-560079 Have Changed My Name to Rajendra Laxman Rao Inamdar Vide Affidavit Dated 11-06-2022 Before Notary B A Lakshminarayana Rao, Bengaluru.old Names are Abandoned and Waived

I,SHEETAL ALIAS Sheetal P Kalbhat alias Seetal Kalbhat W/o Rajendra Laxman Rao Inamdar R/at #1303,Anugragha Apartment 2nd Main 2nd Cross KHB Colony Govindarajnagar Magadi Road Bangalore North Basaveshwaranagar Bangalore-560079 Have Changed My Name to Sheetal Rajendra Inamdar, Vide Affidavit Dated 11-06-2022 Before Notary B A Lakshminarayana Rao Bengaluru.old Names are Abandoned and Waived

I, UMASHREE NANJAPPA Residing at #217, 5th B Main Road, B- Sector, Yelahanka New Town, Bengaluru-64 have changed my name to UMA BABU RAJENDRAPRASAD vide affidavit dated 14.06.2022, before notary C.V. Earappa, Bengaluru. Henceforth, I shall be known as UMA BABU RAJENDRAPRASAD only.

6498565X, SEP, AJAY KUMAR TIWARI, Vill- Murarpatti, Laljapani, Bairia, Ballia, Uttar Pradesh, changed name from AADITI to AADITI TIWARI 11/06/2022 Notary K.V. Mani Bangalore

CHANGE OF NAME
I, **Shree Kumar**, Residing at No. 2/4, Vannarpet Officers Colony, Vannarpet Road, Neelsandra, Bengaluru, have changed my name to **Shree Kumar Nair** vide affidavit dated: 15.06.2022, before notary S. Ramesh, Bangalore. Henceforth I shall be called **Shree Kumar Nair** only.

I, ABIR Residing at No. 30, 4th Cross, Anepalya, Bangalore- 560030, have changed my name to ABIR MODY vide affidavit dated 15.06.2022, before notary L. Gopalakrishna, Bangalore. Henceforth I shall be called ABIR MODY only.

HARNARAYAN SINGH, JC681996M, NB SUB, Vill- Jautana, Fatehpur Sikri, Kirawali, Agra, Uttar Pradesh changed Son's name from HARI PAL SINGH CHAHAR to HARPAL SINGH CHAHAR 15/06/2022 Notary K.V. Mani Bangalore

HARMMA, WIFE/O. 6495044Y, L/NK (CHEFCOM), BINU BHADRAN B, Vill - Arattupuzha, Pattoli Market, Karthikappally, Alappuzha, Kerala changed name from HARMMA to HARMADAS 15/06/2022 Notary K.V. Mani Bangalore

I, MEGHA NAIK, residing at 1097, 1st floor, 22 B main, 23rd A cross, HSR Layout, 2nd Sector, Bangalore- 560102, have changed my minor son's name from AAHIR to AAHIR BALACHANDRA NAIK, vide affidavit dated 11.05.2022 before Notary Naik Mahesh Ramayya, Bhatkal. Henceforth he shall be known as AAHIR BALACHANDRA NAIK only.

UTTAM SINGH, JC682009W, NB SUB, Vill- Bareat, Sirkot, Dunda/ Chinyalisur, Uttarkashi, Uttarakhand, changed Son's name from SUBHAM to SHUBHAM SINGH MAHANT 14/06/2022 Notary K.V. Mani Bangalore

I, USHA RAVICHANDRAN D/o. MAHADEVAN .K, have changed my name to USHA.M vide affidavit dated 15/06/2022 sworn before Notary Rajanna S.M. Bengaluru.

I, ADARSH CHANABASAPPA Residing at No. B-201, Linea Sunflower Apartment Orchard Cross Road, Doddabelle Main Road Kengeri near SST Convention Hall Bengaluru- 560060 have changed my name to ADARSH CHANABASAPPA SHETKAR vide affidavit dated 15.06.2022, before notary M.K. Devaki, Bangalore. Henceforth I shall be known as ADARSH CHANABASAPPA SHETKAR only.

A JAYALAXSHMI W/O JC671969P SUB/SKT GOPALA KRISHNAN P R/A VANNIYARNAGAR METTUPATTI OMALUR SALEM TAMILNADU MY NAME A JAYALAXSHMI TO A JAYALAKSHMI Notary KV MANI Bangalore

SUNITA W/O 14829942W HAV/MT BHAGURE JALANDAR KARBHARI R/A KANDARI BADNAPUR JALNA MH MY NAME SUNITA TO SUNITA JALANDAR BHAGURE Notary KV MANI Bangalore

14849107W HAV/PA NARAYANA KN 2ATC MOTHER Name records SUMITHRA Instead of SUMITHRAMMA Notary KV MANI Bangalore

JC670964K SUB ANANDESWAR BEHERA 2ATC SON Name records KRISHNAND BEHERA instead of KRISHNANANDA BEHERA Notary KV MANI Bangalore

I, ARUN GOWDA .S, residing at #33/40, 1st main, 3rd cross, DSI Road, Gangadhar Nagar, Sarakki Gate, Bengaluru- 560078, have changed my name to ARJUN .S, vide affidavit dated 15.06.2022 before notary Sivakumara M.N., Bangalore. Henceforth I shall be known as ARJUN .S. only

Lost

LOST
I, Avinash, No. 221, 4th main, Viveknagar, Bangalore-47, have lost the Possession Certificate of my house while shifting residence. Document Identification: 221.
Finders please
Contact : 9620684478

PUBLIC NOTICE

PUBLIC NOTICE
We,1.**UMESH S. KULKARNI** 2.**RAMESH S. KULAKARNI** Both are sons late. **Usha S. Kulkarni** & late. **S.K.Kulkarni** were absolute owners of the Schedule Property. And we Lost the Original Sale Deed Registered in the name of Smt. Usha S. Kulkarni, in the office of the Bangalore South Taluk, Registered as Document bearing No.1969/ 1971-72, of Book-I, Volume 882, pages 208 to 210, dated:12-07-1971.
If original document is found, Please contact or return it to below mentioned address. If anyone found misusing the said document is punishable under the law.
SCHEDULE PROPERTY
Site Nos.68/B and 89/A carved out of Sy No.58/3A and 58.2 of Sarakki Village, Uttarahalli Hobli, Bangalore South Taluk, Now coming under the purview of BBMP, having New Municipal No.89A, situated at 9th Main, Shakambarinagara, Bangalore PID No.57-276-89A. East by: Property bearing No.68/A, West by: Property bearing No.89/B, North by: Road, South by: Property bearing No.69 &70. Measuring, East to West:Northern Side:36'-0 feet, Southern Side:36'-0 and North to South: Eastern Side 65'-0 feet Western Side:58'-0 feet,
Sd/- **RAMESH S.KULKARNI**
No. 904, Nagarjuna Premier Apartment,J.P.Nagar 6th Phase, Bangalore-560 078.
Date: 16.06.2022 Ph No.8884430300

CAUTION NOTICE
Readers are advised to make appropriate through enquiry before acting upon any advertisement. This newspaper does not vouch or subscribe to the claims and representations made by advertisers.
GM-Advertisement

For More Details Contact:
Jerry Louis : 9731810277
Vishal GM : 9845114560
080- 45557161 | 163 |164
SPECIAL RATES FOR
Admission Notice,
Education Success
Congratulation Ads
Email : dhclassifieds@deccanherald.co.in

ನೈರುತ್ಯ ರೈಲ್ವೆ
Azadi Ka Amrit Mahotsav

ಟೆಂಡರ್ ಸೂಚನೆ ಸಂ. 06/2022 ದಿನಾಂಕ: 10.06.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ–ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯ ಸಮಯ: 14:00 ಗಂಟೆಗಳು

ಕ್ರ	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ	ಪ್ರಮಾಣ	ಟೆಂಡರ್ ಕೊನೆಯ ದಿನಾಂಕ
1	38221007 A	ಡಿಆರ್‌ಜಿ ಸಂ. ಎಎಲ್. 021101 ಐಟಂ 5 ಗೆ ಪಾಲಿರಿಂಗ್ಸ್ 3.	2000 ಸಂ.	24.06.2022
2	45221301	ಕಪ್ಲಿಂಗ್ ಸಾಕೆಟ್ ಅಸೆಂಬ್ಲಿ.	51 ಸಂ.	04.07.2022
3	33221100	ಇಂಟರ್ ವೆಹಿಕಲ್ ಕಪ್ಲರ್ ರ‍್ಹುಡ್‌ಎಸ್ ಕಪ್ಲಿಂಗ್ 400 ಎ, 750 ವೋಲ್ಟ್‌ಗಳು.	35 ಸೆಟ್	01.07.2022
4	33221018	ಎಲ್‌ಎಚ್‌ಬಿ ಕೋಚ್‌ಗಳಿಗಾಗಿ ಡಬಲ್ ಸೀಲ್ಡ್ ವಿಂಡೋ ಗ್ಲಾಸ್ ಯುನಿಟ್.	2900 ಸಂ.	07.07.2022
5	30221250	ಕಿಟ್ ಬ್ರೇಕ್ ಗೇರ್ ಬುಶಸ್.	1530 ಸೆಟ್	08.07.2022
6	38221024	1685X560X5 ಮಿಮೀ ಗಾತ್ರದ ಪ್ಯಾನಲ್ ಪ್ಯಾಚ್ ಪ್ಲೇಟ್.	959 ಸಂ.	12.07.2022
7	90211031 A	ಸ್ಟೀಲ್ ಶಾಟ್ಸ್ ಗಾತ್ರ ಎಸ್–ಎಸ್ – 1180.	32505 ಕೆಜಿಗಳು	04.07.2022
8	L3215519 A	ರೂಫ್ ಮೌಂಟೆಡ್ ಪ್ಯಾಕೇಜ್ ಯೂನಿಟ್.	06 ಸಂ.	27.06.2022
9	L3225413	ಪೂರೈಕೆ, ಸ್ಥಾಪನೆ, ಕಾರ್ಯಾರಂಭ ಮತ್ತು ನಿರ್ವಹಣೆ.	04 ಸೆಟ್	27.06.2022

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ
PUB/151/AAV/PRB/SWR/2022-23 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ
S.W.Railways sw_rly SWRRLY southwesternrailway SWRRLY

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote-tpa.gov.in

ಸಂಖ್ಯೆ:ಹೊಯೋಪ್ರಾ/ಭೂ.ಪ.ಅ/ಆನ್ ಲೈನ್/ನ.ಜೆ/ಎಂ.ಪಿ/28/2022–23 ದಿನಾಂಕ: 15–06–2022

ಪ್ರಕಟಣೆ

ವಿಷಯ: ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ–2 ಹೋಬಳಿ, ಗುಂಡೂರು ಗ್ರಾಮದ ಸ.ನಂ.95/2 ರಲ್ಲಿನ 01 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ [ಎಜುಕೇಷನಲ್ ಇನ್ಸ್ಟಿಟ್ಯೂಷನ್ (ಶಾಲೆ/ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಆನ್ ಲೈನ್ ಅಫಿಡವಿಟ್ ನಂ. 483910, ಲ್ಯಾಂಡ್‌ಕನ್‌ವರ್ಷನ್ ಸಂ: 349256, ದಿನಾಂಕ: 04.06.2022 (ಶ್ರೀ ವೈ. ನಾರಾಯಣಸ್ವಾಮಿ ಬಿನ್ ಯರ್ರಪ್ಪ).
2) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 237 ಬೆಮಪ್ರಾ 2009, ದಿನಾಂಕ: 19.09.2009.

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ–2 ಹೋಬಳಿ, ಗುಂಡೂರು ಗ್ರಾಮದ ಸ.ನಂ. 95/2 ರಲ್ಲಿನ 01 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ [ಎಜುಕೇಷನಲ್ ಇನ್ಸ್ಟಿಟ್ಯೂಷನ್ (ಶಾಲೆ / ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಉಲ್ಲೇಖ (1) ರ ಪತ್ರದಲ್ಲಿ ಕೋರಲಾಗಿದೆ.

ಪ್ರಸ್ತಾಪಿತ ಜಮೀನನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಂತೆ **ಪ್ರಸ್ತಾಪಿತ, ಗುಂಡೂರು ಗ್ರಾಮದ ಸ.ನಂ. 95/2 ರಲ್ಲಿನ 01 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನನ್ನು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ವಲಯ ಹಾಗೂ ಹಾಲಿ ರಸ್ತೆಯನ್ನು 30 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು, ಸದರಿ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅನುಮತಿಸಲು ಅವಕಾಶ ಕಲ್ಪಿಸಲಾಗಿದೆ.**

ಹಾಗಾಗಿ, ಪ್ರಸ್ತಾಪಿತ ಜಮೀನಿನಲ್ಲಿ ಶೈಕ್ಷಣಿಕ ಕಟ್ಟಡವನ್ನು ಕಟ್ಟಿದಲ್ಲಿ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ/ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ **15 ದಿನಗಳ ಒಳಗಾಗಿ** ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.
ವಾಸಾಸಂಇ/ವಾ.ಪ್ರ/918/ಅಡ್ವಟೋರ್/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗುಬ್ಬಿ: ದಸಂಸ ಮುಖಂಡನ ಹತ್ಯೆ

ಗುಬ್ಬಿ (ತುಮಕೂರು): ಪಟ್ಟಣದಲ್ಲಿ ಬುಧವಾರ ಮಧ್ಯಾಹ್ನ ದಲಿತ ಸಂಘರ್ಷ ಸಮಿತಿಯ ಮುಖಂಡರೊಬ್ಬರನ್ನು ಗುಂಪೊಂದು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದೆ.

ನರಸಿಂಹ ಮೂರ್ತಿ

ಇಲ್ಲಿಯ ಸರ್ಕಾರಿ ಪದವಿ ಪೂರ್ವ ಕಾಲೇಜು ಮುಂಭಾಗದ ಹೋಟೆಲ್‌ನಲ್ಲಿ ಸ್ನೇಹಿತರ ಜತೆ ಚಹಾ ಕುಡಿಯುತ್ತ ಕುಳಿತಿದ್ದ ನರಸಿಂಹಮೂರ್ತಿ (50) ಎಂಬುವರ ಮೇಲೆ, ಕಾರಿನಲ್ಲಿ ಬಂದ ಅಪರಿಚಿತ ದುಷ್ಕರ್ಮಿಗಳು ಮಚ್ಚು, ಲಾಂಗ್‌ಗಳಿಂದ ದಾಳಿ ಮಾಡಿ ಪರಾರಿಯಾಗಿದ್ದಾರೆ.

ನರಸಿಂಹಮೂರ್ತಿ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕರಾಗಿದ್ದರು. ಮಚ್ಚಿನ ಏಟಿಗೆ ತಲೆಯ ಚಿಪ್ಪು ಎಗರಿಹೋಗಿ ಶವ ರಕ್ತದ ಮಡುವಿನಲ್ಲಿ ಬಿದ್ದಿತ್ತು. ಎಸ್‌ಪಿ ರಾಹುಲ್ ಕುಮಾರ್ ಶಹಪೂರವಾಡ್ ಮತ್ತು ಹೆಚ್ಚುವರಿ ಎಸ್‌ಪಿ ಉದೇಶ್ ಸ್ಥಳಕ್ಕೆ ಭೇಟಿ ನೀಡಿದ್ದರು. ಹಣಕಾಸು ವ್ಯವಹಾರ ಈ ಹತ್ಯೆಗೆ ಕಾರಣವಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಪ್ರತಿಭಟನೆ:ಲಾರಿ ಮಾಲೀಕರ ಎಚ್ಚರಿಕೆ

ಮಂಗಳೂರು: ‘ಡೀಸೆಲ್ ದರ ಇಳಿಕೆ, ಓವರ್‌ಲೋಡ್, ಟೋಲ್ ಸಮಸ್ಯೆ ಸೇರಿ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಲಾಗಿದೆ. 21 ದಿನದೊಳಗೆ ಸ್ಪಂದಿಸದಿದ್ದಲ್ಲಿ ಲಾರಿಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಲಾಗುವುದು’ ಎಂದು ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಆ್ಯಂಡ್ ಏಜೆಂಟ್ಸ್ ಅಸೋಸಿಯೇಶನ್ ಅಧ್ಯಕ್ಷ ಜಿ.ಆರ್. ಷಣ್ಮುಖಪ್ಪ ತಿಳಿಸಿದರು.

ಸದಸ್ಯರುಗಳ ಗಮನಕ್ಕೆ

ಮಾನ್ಯ ಸದಸ್ಯರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಇದು ವರೆವಿಗೂ ನಮ್ಮ ಸಂಘವು ದಿ ಅಮರ ಜ್ಯೋತಿ ಹೌಸ್ ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿ., ನಂ. 40, ಎಂ.ಎನ್.ಕೆ.ರಾವ್. ರಸ್ತೆ, ಬಸವನಗುಡಿ, ಬೆಂಗಳೂರು–560 004 ರಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಕಾರಣಾಂತರಗಳಿಂದ ನಮ್ಮ ಸಂಘವನ್ನು ನಂ. 40, 3ನೇ ಮಹಡಿ, ಲಕ್ಷ್ಮೀ ಕಾಂಪ್ಲೆಕ್ಸ್ (ವಾಣೀ ವಿಲಾಸ ಆಸ್ಪತ್ರೆ ಎದುರು), ಕೆ.ಆರ್. ರಸ್ತೆ, ಬೆಂಗಳೂರು–560002 ಇಲ್ಲಿಗೆ ವರ್ಗಾಯಿಸಿದ್ದು ಇನ್ನು ಮುಂದೆ ಸದಸ್ಯರು ಹೊಸ ವಿಳಾಸದಲ್ಲಿ ಅವಶ್ಯಕವಾದ ಸೇವೆಗಳನ್ನು ಪಡೆಯಲು ಈ ಮೂಲಕ ತಿಳಿಸುತ್ತಿದ್ದೇವೆ.

ಸಹಿ/–
ಅಧ್ಯಕ್ಷರು

ಸ್ಥಳ: ಬೆಂಗಳೂರು
ದಿನಾಂಕ: 14–06–2022
ದೂರವಾಣಿ ಸಂಖ್ಯೆ: 080–26570120

के आई ओ सी एल लिमिटेड
ಕೆಐಓಸಿಎಲ್ ಲಿಮಿಟೆಡ್
KUDREMUKH
(ಭಾರತ ಸರ್ಕಾರದ ಒಂದು ಉದ್ಯಮ)
ಸಿಐಎನ್ : L13100KA1976GOI002974
ಎರಡನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 034
ಟೆಲಿಫ್ಯಾಕ್ಸ್ - 080-25531525, ವೆಬ್- www.kioclltd.in, ಇಮೇಲ್ - cs@kioclltd.in

ಕ್ಲೈಮ್ ಮಾಡದೆ/ಪಾವತಿ ಮಾಡದೆ ಇರುವ ಡಿವಿಡೆಂಡ್ ಮತ್ತು ಈಕ್ವಿಟಿಯನ್ನು ಹೂಡಿದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಲು ಷೇರ್ ಹೋಲ್ಡರ್ಸ್‌ಗೆ ನೋಟಿಸು (IEPFA)

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರದ (ಲೆಕ್ಕಪರಿಶೋಧನೆ, ಆಡಿಟ್. ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳು, 2016 (“ನಿಯಮಗಳು”) 2014-15 ರ ಆರ್ಥಿಕ ವರ್ಷಕ್ಕೆ ಘೋಷಿಸಲಾದ ಅಂತಿಮ ಲಾಭಾಂಶದ ನಿಬಂಧನೆಗಳಿಗೆ ಅನುಸಾರವಾಗಿ ಈ ಸೂಚನೆಯನ್ನು ನೀಡಲಾಗಿದೆ. ಏಳು ವರ್ಷಗಳ ಅವಧಿಗೆ ಕ್ಲೈಮ್ ಮಾಡದೆ ಉಳಿದಿದ್ದನ್ನು ಅಕ್ಟೋಬರ್ 13, 2022 ರಂದು IEPFA ಗೆ ಜಮಾ ಮಾಡಲಾಗುತ್ತದೆ. ಮೇಲಿನ ನಿಯಮಗಳಲ್ಲಿ ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಸತತ ಏಳು ವರ್ಷಗಳವರೆಗೆ ಲಾಭಾಂಶವನ್ನು ಕ್ಲೈಮ್ ಮಾಡದಿರುವ ಅನುಗುಣವಾದ ಷೇರುಗಳನ್ನು ಸಹ IEPFA ಗೆ ವರ್ಗಾಯಿಸಲಾಗುತ್ತದೆ,

ಇದರ ಪ್ರಕಾರ ಕಂಪನಿಯು 2014-15 ರಿಂದ ಸತತವಾಗಿ ಕ್ಲೈಮ್ ಮಾಡದ ಡಿವಿಡೆಂಡ್ ಮೊತ್ತದ ಖಾತೆಯಲ್ಲಿ 2022-23 ನೇ ಹಣಕಾಸು ವರ್ಷದಲ್ಲಿ ಐಉಕಊಅ ಗೆ ವರ್ಗಾಯಿಸಲು ಹೊಣೆಗಾರಾರಾಗಿರುವ 15.06.2022 ಎಲ್ಲಾ ಸಂಬಂಧಪಟ್ಟ ಷೇರುದಾರರಿಗೆ ಇತ್ತೀಚಿನ ಲಭ್ಯವಿರುವ ವಿಳಾಸದಲ್ಲಿ ವೈಯಕ್ತಿಕ ಸಂವಹನಗಳನ್ನು ಕಳುಹಿಸಿದೆ. ಕಂಪನಿಯು ತನ್ನ ವೆಬ್‌ಸೈಟ್‌ನಲ್ಲಿ IEPFA ಗೆ ವರ್ಗಾವಣೆಯಾಗಬೇಕಾದ ಷೇರುದಾರರು ಮತ್ತು ಷೇರುಗಳ ಸಂಪೂರ್ಣ ವಿವರಗಳನ್ನು ಅಪ್‌ಲೋಡ್ ಮಾಡಿದೆ, ಇದನ್ನು ವೆಬ್–ಲಿಂಕ್ https://kioclltd.in/data.php?id=117 ಮೂಲಕ ಮೌಲ್ಯಮಾಪನ ಮಾಡಬಹುದು.

ಭೌತಿಕವಾಗಿ ಮತ್ತು ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸಂಬಂಧಪಟ್ಟ ಎಲ್ಲಾ ಷೇರುದಾರರು ಕಂಪನಿ / ರೆಜಿಸ್ಟ್ರಾರ್‌ಗೆ 30.09.2022 ರೊಳಗೆ ಹಣಕಾಸು ವರ್ಷ 2014-15 (ಅಂತಿಮ) ನಂತರ ಪಾವತಿಯಾಗದ ಮತ್ತು ಕ್ಲೈಮ್ ಮಾಡದ ಡಿವಿಡೆಂಡ್‌ಗಳನ್ನು ಪಡೆಯಲು ಕೋರಿಕೆಯೊಂದಿಗೆ ಅರ್ಜಿಗಳನ್ನು ಸಲ್ಲಿಸಬೇಕು. ಇದರಿಂದ ಪಾವತಿಯಾಗದ / ಕ್ಲೈಮ್ ಮಾಡದೆ ಇರುವ ಡಿವಿಡೆಂಡ್‌ಗಳು IEPFA ಗೆ ವರ್ಗಾವಣೆಯಾಗುವುದಿಲ್ಲ.

330.09.2022 ರೊಳಗೆ ಯಾವುದೇ ಅರ್ಜಿಯನ್ನು ಕಂಪನಿ/ರಿಜಿಸ್ಟ್ರಾರ್ ಸ್ವೀಕರಿಸದಿದ್ದರೆ, ಕಂಪನಿಯು ಯಾವುದೇ ಸೂಚನೆಯಿಲ್ಲದೆ ಪಾವತಿಸದ/ಕ್ಲೈಮ್ ಮಾಡದ ಲಾಭಾಂಶವನ್ನು ಅನುಗುಣವಾದ ಷೇರುಗಳೊಂದಿಗೆ ಐಉಕಊಅ ಗೆ ಕಾರ್ಯವಿಧಾನದ ಪ್ರಕಾರ ನಿಗದಿತ ದಿನಾಂಕದೊಳಗೆ ವರ್ಗಾಯಿಸುತ್ತದೆ ಎಂಬುದನ್ನು ದಯವಿಟ್ಟು ಗಮನಿಸಬಹುದು. IEPFA ನಿಯಮಗಳಿಗೆ ಅನುಸಾರವಾಗಿ IEPFA ಗೆ ವರ್ಗಾಯಿಸಲಾದ ಅನುಗುಣವಾದ ಷೇರುಗಳ ಜೊತೆಗೆ ಪಾವತಿಸದ / ಕ್ಲೈಮ್ ಮಾಡದೆ ಇರುವ ಲಾಭಾಂಶಕ್ಕೆ ಸಂಬಂಧಿಸಿದಂತೆ ಕಂಪನಿಯ ವಿರುದ್ಧ ಯಾವುದೇ ಕ್ಲೈಮ್ ಇರುವುದಿಲ್ಲ.

IEPFA ಗೆ ವರ್ಗಾಯಿಸಿದ ಷೇರುಗಳು ಮತ್ತು ಅಂತಹ ಷೇರುಗಳ ಮೇಲೆ ಉಂಟಾಗುವ ಎಲ್ಲಾ ಪ್ರಯೋಜನಗಳು ಏನಾದರೂ ಇದ್ದಲ್ಲಿ, ಅವರು ತಮ್ಮ ವೆಬ್‌ಸೈಟ್ www.iepf.gov.in ನಲ್ಲಿ ನೀಡಲಾದ ವಿಧಾನವನ್ನು ಅನುಸರಿಸಿದ ನಂತರ IEPFA ಪ್ರಾಧಿಕಾರದಿಂದ ಷೇರುದಾರರು ಹಿಂಪಡೆಯಬಹುದು ಎಂಬುದನ್ನು ಗಮನಿಸಿ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಏನಾದರೂ ಪ್ರಶ್ನೆಗಳಿದ್ದಲ್ಲಿ, ಷೇರುದಾರರು ರಿಜಿಸ್ಟ್ರಾರ್ ಮತ್ತು ಷೇರ್ ವರ್ಗಾವಣೆ ಏಜೆಂಟ್ M/s. ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ನಂ.30, ರಾಮಣ್ಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. ದೂರವಾಣಿ - (080) 23460815/18, ಫ್ಯಾಕ್ಸ್ -(080) 23460819, ಇಮೇಲ್: irg@integratedindia.in.ಇವರನ್ನು ಸಂಪರ್ಕಿಸಬಹುದು.

ಸ್ಥಳ – ಬೆಂಗಳೂರು
ದಿನಾಂಕ : 16.06.2022

ಕೆಐಓಸಿಎಲ್ ಲಿಮಿಟೆಡ್
ಸಹಿ
(ಪಿ ಕೆ ಮಿಶ್ರ)
ಕಂಪನಿ ಸೆಕ್ರೆಟರಿ

ಪಶ್ಚಿಮ ಶಿಕ್ಷಕರ ಕ್ಷೇತ್ರದಿಂದ 8ನೇ ಬಾರಿ ಆಯ್ಕೆಯಾಗಿ ದಾಖಲೆ

ಹೊರಟ್ಟಿ ಗೆಲುವಿನ ನಾಗಾಲೋಟ

● ಇ.ಎಸ್.ಸುಧೀಂದ್ರ ಪ್ರಸಾದ್

ಧಾರವಾಡ: ಪಶ್ಚಿಮ ಶಿಕ್ಷಕರ ಕ್ಷೇತ್ರದಲ್ಲಿ 8ನೇ ಬಾರಿಗೆ ಗೆಲುವನ್ನು ಬಸವರಾಜ ಹೊರಟ್ಟಿ ದಾಖಲಿಸಿದರೆ, 42 ವರ್ಷಗಳಿಂದ ಬೇರೆ ಪಕ್ಷಗಳ ಹಿಡಿತದಲ್ಲಿದ್ದ ಕ್ಷೇತ್ರವನ್ನು ಬಿಜೆಪಿ ಈ ಬಾರಿ ತನ್ನದಾಗಿಸಿಕೊಂಡಿದೆ.

ಧಾರವಾಡ, ಗದಗ, ಹಾವೇರಿ ಹಾಗೂ ಉತ್ತರ ಕನ್ನಡ ಜಿಲ್ಲೆಯನ್ನು ಒಳಗೊಂಡ ಪಶ್ಚಿಮ ಶಿಕ್ಷಕರ ಕ್ಷೇತ್ರಕ್ಕೆ ಈ ಬಾರಿ ಕಾಂಗ್ರೆಸ್ ನಿರೀಕ್ಷೆಗೂ ಮೀರಿ ಆರು ತಿಂಗಳ ಮೊದಲೇ ತನ್ನ ಅಭ್ಯರ್ಥಿಯನ್ನಾಗಿ ಬಸವರಾಜ ಗುರಿಕಾರ ಅವರ ಹೆಸರನ್ನು ಘೋಷಿಸಿತ್ತು.

'ನನ್ನ ಜುಟ್ಟು ಬಿಜೆಪಿಯವರ ಕೈಯಲ್ಲಿದೆ. ಅವರು ಹೇಗೆ ಅದನ್ನು ಹಿಡಿದು ಆಟ ಆಡುತ್ತಾರೋ ಹಾಗೇ ಆಡುತ್ತೇನೆ' ಎಂದಿರುವ ಹೊರಟ್ಟಿ ಅವರು ಸ್ವತಂತ್ರ ಅಭ್ಯರ್ಥಿಯಾಗಿ ಗೆಲುವಿನ ಯಾತ್ರೆ ಆರಂಭಿಸಿದ್ದರು. ನಂತರ ಲೋಕಶಕ್ತಿ, ಜನತಾ ಪಕ್ಷ, ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಗೆದ್ದಿದ್ದರು. ಆದರೆ, ಈ ಬಾರಿ ಆಡಳಿತಾರೂಢ ಬಿಜೆಪಿಯ ಸಖ್ಯವನ್ನು ಹೊರಟ್ಟಿ ಬಯಸಿದ್ದರು. ಜೆಡಿಎಸ್ ಬೆಂಬಲದೊಂದಿಗೆ ಸಭಾಪತಿಯನ್ನಾಗಿ ಮಾಡಿದ ಬಿಜೆಪಿ, ಚುನಾವಣೆ ಹೊಸ್ತಿಲಲ್ಲಿ ಹೊರಟ್ಟಿ ಅವರನ್ನು ಸೆಳೆಯುವಲ್ಲಿಯೂ ಯಶಸ್ವಿಯಾಯಿತು.

ಹೊರಟ್ಟಿ ಗೆಲುವಿಗೆ ಅವರ ಅಭಿಮಾನಿಗಳಿಗಿಂತ ಕಣವನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದ ಬಿಜೆಪಿ ನಾಯಕರು ಕ್ಷೇತ್ರದ ಉದ್ದಗಲಕ್ಕೂ ಓಡಾಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಸಚಿವರಾದ ಸಿ.ಸಿ. ಪಾಟೀಲ, ಹಾಲಪ್ಪ ಆಚಾರ್ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಜಗದೀಶ ಶೆಟ್ಟರ್ ಸೇರಿದಂತೆ ಪಕ್ಷದ ಶಾಸಕರು ಹಲವು ಬಾರಿ ಓಡಾಡಿ ಮತ ಯಾಚಿಸಿದ್ದರು.

ಅಡ್ಡಿಯಾಗದ ಆರೋಪಗಳು: ಚುನಾವಣೆ ಸಮೀಪಿಸುತ್ತಿದ್ದಂತೆ ಬಸವರಾಜ ಹೊರಟ್ಟಿ ಹಾಗೂ ಬಸವರಾಜ ಗುರಿಕಾರ ಪರ ಬೆಂಬಲಿಗರ ಆರೋಪ ಮತ್ತು ಪ್ರತ್ಯಾರೋಪಗಳು ತಾರಕಕ್ಕೇರಿದ್ದವು. ಜತೆಗೆ ಧಾರವಾಡ ತಾಲ್ಲೂಕಿನ ಮುಗದದಲ್ಲಿರುವ ಸರ್ವೋದಯ ಶಿಕ್ಷಣ ಟ್ರಸ್ಟ್‌ಗೆ ಸಂಬಂಧಿಸಿದಂತೆ ಹೊರಟ್ಟಿ ಹಾಗೂ ವಾಲ್ಮೀಕಿ ಸಮುದಾಯದ ವ್ಯಾಜ್ಯವೂ ಚುನಾವಣೆ ಸಂದರ್ಭದಲ್ಲಿ ಚರ್ಚೆ ಹುಟ್ಟುಹಾಕಿತ್ತು. ಆರಂಭದಲ್ಲಿ ಮೋಹನ ಲಿಂಬಿ ಕಾಯಿ ಅವರೇ ಬಿಜೆಪಿ ಅಭ್ಯರ್ಥಿ ಎಂದು ಹೇಳಲಾಗಿತ್ತು. ಆದರೆ ಹೊರಟ್ಟಿ ಪಕ್ಷ ಸೇರ್ಪಡೆಯಿಂದ ಬಿಜೆಪಿಯೊಳಗಿನ ಬಂಡಾಯದ ಬಿಸಿ ತಾಕಬಹುದು ಎಂಬ ಲೆಕ್ಕಾಚಾರವೂ ಮೇಲುಕೆಳಗಾಯಿತು. ಕೋಮುವಾದಿ ಪಕ್ಷ ಸೇರಿದ ಆರೋಪ, ಪಠ್ಯಪುಸ್ತಕ ವಿವಾದ ಹೀಗೆ ವಿರೋಧಿಗಳ ಹಲವು ಆರೋಪಗಳು ಹೊರಟ್ಟಿ (ಶೇ 59.47 ರಷ್ಟು ಮತ ಗಳಿಕೆ) ಗೆಲುವಿಗೆ ಅಡ್ಡಿಮಾಡಲಿಲ್ಲ.

ಬಸವರಾಜ ಹೊರಟ್ಟಿ ಗೆಲುವಿನ ಯಾತ್ರೆ

ಸ್ಪರ್ಧಿಸಿದ ವರ್ಷ	ಪ್ರತಿನಿಧಿಸಿದ ಪಕ್ಷ	ಒಟ್ಟು ಮತದಾರರು	ಚಲಾವಣೆಗೊಂಡ ಮತ	ಬಸವರಾಜ ಹೊರಟ್ಟಿ	ಗೆಲುವಿನ ಅಂತರ
1980	ಸ್ವತಂತ್ರ	5,045	3,938 (ಶೇ 78.05)	1,903 (ಶೇ 48.32)	649
1986	ಸ್ವತಂತ್ರ	8,083	6,596 (ಶೇ 81.60)	3,426 (ಶೇ 51.94)	2,398
1992	ಲೋಕಶಕ್ತಿ	8,770	7,682 (ಶೇ 87.59)	4,716 (ಶೇ 61.39)	3,016
1998	ಜನತಾ ಪಕ್ಷ	10,335	8,651 (ಶೇ 83.70)	6,253 (ಶೇ 72.28)	4,496
2004	ಜೆಡಿಎಸ್	12,439	10,173 (ಶೇ 81.78)	7,369 (ಶೇ 61.39)	5,102
2010	ಜೆಡಿಎಸ್	13,351	13,343 (ಶೇ 99.94)	5,889 (ಶೇ 44.13)	2,089
2016	ಜೆಡಿಎಸ್	22,389	14,939 (ಶೇ 66.72)	7,480 (ಶೇ 50.07)	3,109
2022	ಬಿಜೆಪಿ	17,973	15,583 (ಶೇ 86.68)	9,266 (ಶೇ 59.47)	4,669

ಧಾರವಾಡದ ಕರ್ನಾಟಕ ಕಾಲೇಜು ರಸ್ತೆಯಲ್ಲಿ ಬುಧವಾರ ನಡೆದ ವಿಜಯೋತ್ಸವದಲ್ಲಿ ಬಸವರಾಜ ಹೊರಟ್ಟಿ ಅವರೊಂದಿಗೆ ಮಹೇಶ ಟೆಂಗಿನಕಾಯಿ ಹಾಗೂ ಇತರರು ತೆರೆದ ವಾಹನದಲ್ಲಿ ಸಾಗಿದರು

ಮತಗಳ ಹಂಚಿಕೆ
ಬಸವರಾಜ ಹೊರಟ್ಟಿ (ಬಿಜೆಪಿ);**9,266**
ಬಸವರಾಜ ಗುರಿಕಾರ (ಕಾಂಗ್ರೆಸ್);**4,597**
ಶ್ರೀಶೈಲ ಗಡದಿನ್ನಿ (ಜೆಡಿಎಸ್);**273**

ಕಲುಷಿತ ನೀರು: ಪತ್ತೆಯಾಗದ ಮೂಲ

ಒಂದನೇ ಪುಟದಿಂದ...

ಇದುವರೆಗೆ, ಅವೈಜ್ಞಾನಿಕವಾಗಿ ಬ್ಲೀಚಿಂಗ್ ಮತ್ತು ಆಲಂ ಪುಡಿ ಮಿಶ್ರಣಗೊಳಿಸಿ ನಗರಕ್ಕೆ ನೀರು ಪೂರೈಸಲಾಗುತ್ತಿತ್ತು. ನೀರು ಶುದ್ಧೀಕರಣ ಘಟಕದಲ್ಲಿ ತಜ್ಞರಿಲ್ಲದ ಸಿಬ್ಬಂದಿಯನ್ನು ನೇಮಿಸಿದ್ದರು. ಇದರ ಮೇಲ್ವಿಚಾರಣೆ ಹೊತ್ತ ಎಂಜಿನಿಯರ್‌ಗಳು ಕೂಡ ಈ ಗುರುತರ ಕರ್ತವ್ಯವನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ, ಈಗ ಸರಣಿ ಸಾವಿನ ಪ್ರಕರಣದ ನಂತರ ನಗರಸಭೆ ಅಧಿಕಾರಿಗಳು ಎಚ್ಚೆತ್ತುಕೊಂಡಿದ್ದಾರೆ, ಶುದ್ಧ ನೀರು ಪೂರೈಸಲು ಕ್ರಮ ಕೈಗೊಂಡಿದ್ದಾರೆ.

'ಮೂಲದಲ್ಲಿ ಶುದ್ಧವಾಗಿ ಕಾಣುವ ನೀರು ಮನೆಗಳಲ್ಲಿ ಹೇಗೆ ಕಲುಷಿತಗೊಳ್ಳುತ್ತದೆ ಎಂಬ ಅಂಶವನ್ನು ನಗರಸಭೆ ಪತ್ತೆ ಮಾಡುತ್ತಿಲ್ಲ. ಚರಂಡಿಗಳಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಹಾಕಲಾಗಿದೆ. ಪೈಪ್ ಒಡೆದಾಗ ಅದನ್ನು ತಕ್ಷಣಕ್ಕೆ ದುರಸ್ತಿ ಮಾಡಲಾಗುವುದಿಲ್ಲ. ಕುಡಿಯುವ ನೀರಿನಲ್ಲಿ ಗಲೀಜು ಸೇರುತ್ತಿರುವುದು ಈ ಅನಾಹುತಕ್ಕೆ ಮುಖ್ಯ ಕಾರಣ' ಎಂದು ಜನರು ದೂರುತ್ತಾರೆ.

'ನಗರದ 35 ವಾರ್ಡ್‌ಗಳ ಪೈಕಿ ತುಂಗಭದ್ರಾ ನದಿ ನೀರು ಪೂರೈಕೆಯಾಗುವ 14 ವಾರ್ಡ್‌ಗಳಲ್ಲಿ ವಾಂತಿಭೇದಿ ಪ್ರಕರಣಗಳು ಹೆಚ್ಚು ಪತ್ತೆಯಾಗಿವೆ. ಕೊಳೆಗೇರಿ ಪ್ರದೇಶಗಳಾದ ರಾಮನಗರ, ಇಂದಿರಾನಗರ, ಅಂದ್ರೂನ್ ಕಿಲ್ಲಾ, ಬೇರೂನ್ ಕಿಲ್ಲಾ, ಗಂಗಾನಿವಾಸ ಹಾಗೂ ಅರಬ್ ಮೊಹಲ್ಲಾ ನಿವಾಸಿಗಳು ಕಲುಷಿತ ನೀರು ಕುಡಿದು ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆ.

ಕೊಳೆಗೇರಿ ಪ್ರದೇಶದಲ್ಲಿ ಪರಿಶಿಷ್ಟರು, ಮುಸ್ಲಿಂ ಸಮುದಾಯದ ಕುಟುಂಬದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಶುದ್ಧ ನೀರನ್ನು ದುಡ್ಡುಕೊಟ್ಟು ತೆಗೆದುಕೊಳ್ಳಲು ಸಾಧ್ಯವಾಗದ ಕಾರಣ ಅವರು ನಗರಸಭೆಯಿಂದ ಪೂರೈಸುವ ನೀರನ್ನೇ ಅವಲಂಬಿಸಿದ್ದಾರೆ.

'ಮೊದಲಿನಿಂದಲೂ ಕಲುಷಿತ ನೀರು ಪೂರೈಕೆಯಾಗುತ್ತಿದೆ. ಕಾಗದದ ಚೂರುಗಳು, ಮಣ್ಣು ಕೂಡ ನೀರಿನ ಜೊತೆ ಬರುತ್ತದೆ. ಒಂದು ದಿನ ಕಳೆದರೆ ನೀರಿನ ದುರ್ವಾಸನೆ ಹೆಚ್ಚಾಗಿ, ಕುಡಿಯುವುದಕ್ಕೂ ಬಳಸಲಾಗುವುದಿಲ್ಲ. ನಾಲ್ಕು ದಿನಗಳವರೆಗೂ ನೀರು ತುಂಬಿಟ್ಟರೆ, ಅದರಲ್ಲಿ ಜಿಗಿ ಅಂಟು ಕಾಣುತ್ತದೆ' ಎಂದು ಇಂದಿರಾನಗರದ ನಿವಾಸಿ ಗೀತಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ವಾಂತಿಭೇದಿಯಿಂದ ಮೊದಲು ಮಲ್ಲಮ್ಮ ಎಂಬುವರು ಮೃತಪಟ್ಟರು. ನಂತರ ಬೇರೆ ಬೇರೆ ದಿನಗಳಲ್ಲಿ ಉಳಿದ ಐದು ಮಂದಿ ಸಾವನ್ನಪ್ಪಿದ್ದಾರೆ. ಚಿಕಿತ್ಸೆ ಪಡೆಯುತ್ತಿರುವ ಕೆಲವರು ಗುಣಮುಖರಾಗುತ್ತಿದ್ದಾರೆ. ಆದರೆ, ಈಗಲೂ ಕುಡಿಯುವ ನೀರು ಕಂಡರೆ ಭಯವಾಗುತ್ತದೆ' ಎಂದರು.

ತುಂಗಭದ್ರಾ ನೀರು ಶುದ್ಧೀಕರಣ ಘಟಕ

24x7 ನೀರಿನ ಯೋಜನೆ ಏನಾಯಿತು?
ರಾಯಚೂರು ನಗರಕ್ಕೆ 24X7 ನೀರು ಪೂರೈಸಲು ₹95 ಕೋಟಿ ವೆಚ್ಚದ ಯೋಜನೆ 2016ರಲ್ಲಿ ಆರಂಭವಾಯಿತು. ಇನ್ನೂ ಮುಕ್ತಾಯವಾಗಿಲ್ಲ. ಶೇ 30 ರಷ್ಟು ಕಾಮಗಾರಿ ಪೂರ್ಣಗೊಳಿಸದೆ ಕಂಪನಿ ಕೈಚೆಲ್ಲಿ ಹೋಗಿದ್ದರೂ ಈ ಬಗ್ಗೆ ಅಧಿಕಾರಿಗಳು, ರಾಜಕಾರಣಿಗಳು ಗಮನ ನೀಡುತ್ತಿಲ್ಲ ಎಂಬ ದೂರುಗಳಿವೆ.

ಸ್ವಚ್ಛತೆಗೆ ಸೀಮಿತ
ಶುದ್ಧ ನೀರು ಪೂರೈಕೆಯ ಸಮಗ್ರ ಬದಲಾವಣೆಗೆ ನಗರಸಭೆ ಮುಂದಾಗುತ್ತಿಲ್ಲ. 'ಶುದ್ಧೀಕರಣ ಘಟಕ ಮತ್ತು ಓವರ್‌ಹೆಡ್ ಟ್ಯಾಂಕ್‌ಗಳಿಂದ ಹೂಳೆತ್ತುವ ಕಾರ್ಯಕ್ಕೆ ಮಾತ್ರ ನಗರಸಭೆ ಸೀಮಿತವಾಗಿದೆ. ಶುದ್ಧೀಕರಣ ಘಟಕದ ಜವಾಬ್ದಾರಿ ವಹಿಸಿಕೊಳ್ಳಲು ನಗರಸಭೆ ಎಂಜಿನಿಯರ್‌ಗಳು ಹಿಂದೇಟು ಹಾಕುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ವಾಂತಿಭೇದಿಯಿಂದ ಇದುವರೆಗೆ 236 ಜನರು ರಿಮ್ಸ್ ಆಸ್ಪತ್ರೆಗೆ ದಾಖಲಾಗಿದ್ದರು. ಸದ್ಯ 20 ಜನರಿಗೆ ಚಿಕಿತ್ಸೆ ಮುಂದುವರಿದಿದ್ದು, ಅದರಲ್ಲಿ 9 ಮಕ್ಕಳಿದ್ದಾರೆ.
ಡಾ.ಭಾಸ್ಕರ್, ರಿಮ್ಸ್ ಆಸ್ಪತ್ರೆ ಸೂಪರಿಂಟೆಂಡೆಂಟ್, ರಾಯಚೂರು

ವಾಂತಿಭೇದಿಯಿಂದ ಪತ್ನಿ ತೀರಿಕೊಂಡ ಬಳಿಕ ನಗರಸಭೆ ನೀರನ್ನು ಕುಡಿಯುವುದನ್ನೇ ಬಿಟ್ಟಿದ್ದೇವೆ. ಈ ಘಟನೆ ಬಳಿಕ ಸುತ್ತಮುತ್ತಲ ಜನರು ನಲ್ಲಿ ನೀರು ಕಂಡರೆ ಭಯಪಡುವಂತಾಗಿದೆ.
ಮುದುಕಪ್ಪ, ಮೃತ ಮಲ್ಲಮ್ಮನ ಪತಿ, ರಾಯಚೂರು

ಸಮರ್ಪಕವಾದ ಬ್ಲೀಚಿಂಗ್ ಮತ್ತು ಆಲಂ ಪುಡಿ ಮಿಶ್ರಣ ಮಾಡದೆ ನೀರು ಹರಿಬಿಟ್ಟಿದ್ದು ವಾಂತಿಭೇದಿಗೆ ಕಾರಣವಾಗಿತ್ತು. ನೀರು ಪೂರೈಕೆ ವ್ಯವಸ್ಥೆಯ ಸಮಸ್ಯೆಗಳನ್ನು ಪರಿಹಾರ ಮಾಡುತ್ತಿದ್ದೇವೆ.
ಗುರುಲಿಂಗಪ್ಪ, ಪೌರಾಯುಕ್ತ, ರಾಯಚೂರು

ಹಳದಿಯಾಗಿ ಕಾಣುವ ನೀರು

ಮುಖಗವಸು ಧರಿಸಿ

11,460 ಮತ ಪಡೆದ ಕಾಂಗ್ರೆಸ್ ಅಭ್ಯರ್ಥಿ

ಚಿಂತಕರ ಚಾವಡಿ ಸೇರಿದ ಹುಕ್ಕೇರಿ

● ಸಂತೋಷ ಈ.ಚಿನಗುಡಿ

ಬೆಳಗಾವಿ: ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಕಾಶ ಹುಕ್ಕೇರಿ 5,055 ಮತಗಳ ಅಂತರದಿಂದ ಗೆಲುವು ಸಾಧಿಸಿದರು. ಕ್ಷೇತ್ರ ರಚನೆಯಾದಾಗಿನಿಂದ ಇದೇ ಮೊದಲ ಬಾರಿಗೆ ಕಾಂಗ್ರೆಸ್ ಖಾತೆ ತೆರೆದಿದೆ.

ಹ್ಯಾಟ್ರಿಕ್ ಬಾರಿಸುವ ಉಮೇದಿನಲ್ಲಿದ್ದ ಹಾಲಿ ಸದಸ್ಯ ಅರುಣ ಶಹಾಪುರ ಅವರ ಓಟಕ್ಕೆ ತಡೆ ಬಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸೇರಿದಂತೆ ಬಹುಪಾಲು ಸಚಿವರು ಕ್ಷೇತ್ರದಲ್ಲಿ ಪ್ರಚಾರ ಮಾಡಿದ್ದರು. 'ವಯಸ್ಸಾದ ಎತ್ತು' ಎಂದು ಪ್ರಕಾಶ ಹುಕ್ಕೇರಿ ಅವರನ್ನು ಪದೇಪದೇ ಮೂದಲಿಸಿದ್ದರು. ಇದೆಲ್ಲವನ್ನೂ ನಿರ್ಲಕ್ಷಿಸಿ ಮತದಾರ ತೀರ್ಪು ನೀಡಿದ್ದಾನೆ.

ಬಿಜೆಪಿ ಹಾಗೂ ಕಾಂಗ್ರೆಸ್ ತಿಕ್ಕಾಟದ ಮಧ್ಯೆ ತಮಗೆ ಹೆಚ್ಚು ಮತ ಬರುತ್ತವೆ ಎಂಬ ಬನ್ನೂರ ಅವರ ಲೆಕ್ಕಾಚಾರ ತಲೆಕೆಳಗಾಯಿತು. ಇವರ ಸ್ಪರ್ಧೆಯಿಂದ ಕಾಂಗ್ರೆಸ್ ಮತಗಳು ಒಡೆದುಹೋಗಬಹುದು ಎಂಬ ಬಿಜೆಪಿ ಲೆಕ್ಕಾಚಾರವೂ ಬುಡಮೇಲಾಯಿತು.

ಗೆಲುವಿಗೆ ಕಾರಣವೇನು?: ವಿಜಯಪುರ ಜಿಲ್ಲೆಯವರಾದ ಅರುಣ ಶಹಾಪುರ ಬೆಳಗಾವಿ ಜಿಲ್ಲೆಯ ಶಿಕ್ಷಕರ ಸಮಸ್ಯೆಗೆ ಸ್ಪಂದಿಸಿದ್ದು ಕಡಿಮೆ. ಅಲ್ಲದೇ, ಜಿಲ್ಲೆಯ ಶಾಸಕರೊಂದಿಗೂ ಸಂಪರ್ಕಕ್ಕೆ ಬಂದಿಲ್ಲ ಎಂಬ ತಕರಾರು ಬಿಜೆಪಿಯಲ್ಲಿ ಮೊದಲಿನಿಂದಲೂ ಕೇಳಿಬಂದಿತ್ತು. ಅಲ್ಲದೇ, ಕ್ಷೇತ್ರದಲ್ಲಿ ಅರ್ಧಕ್ಕಿಂತ ಹೆಚ್ಚು ಮತದಾರರನ್ನು ಹೊಂದಿದ ಬೆಳಗಾವಿ ಜಿಲ್ಲೆಯ ಶಿಕ್ಷಣ ಸಂಸ್ಥೆಗಳ ಜೊತೆಗೂ ಅವರ ಒಡನಾಟ ಅಷ್ಟಕ್ಕಷ್ಟೇ ಇತ್ತು. ಇದೇ ಅವರ ಹಿನ್ನಡೆಗೆ ಕಾರಣ ಎಂಬ ಮಾತು ಬಿಜೆಪಿ ಮುಖಂಡರಿಂದ ಕೇಳಿಬಂದಿದೆ. ಜಿಲ್ಲೆಯಲ್ಲಿ ಬಿಜೆಪಿಯ 13 ಶಾಸಕರಿದ್ದರೂ ಪ್ರಚಾರದಲ್ಲಿ ಸಕ್ರಿಯಾಗದಿರುವುದೂ ಸೋಲಿಗೆ ಕಾರಣವಾಯಿತು.

'ಹಿರಿಯರ ಮನೆ' ಎಂದೇ ಹೇಳಲಾದ ವಿಧಾನ ಪರಿಷತ್ತಿನ ಅನುಭವಿ ರಾಜಕಾರಣಿಯ ಅಗತ್ಯವನ್ನೂ ಮತದಾರರು ಮನಗಂಡರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರ ಸಾಮೂಹಿಕ ಯತ್ನವೂ ಫಲ ನೀಡಿತು.

ಆರು ತಿಂಗಳಲ್ಲಿ ಎರಡನೇ ಪೆಟ್ಟು: 2021ರ ಡಿಸೆಂಬರ್‌ನಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಕೂಡ ಕಾಂಗ್ರೆಸ್ ಅಭ್ಯರ್ಥಿ ಚನ್ನರಾಜ ಹಟ್ಟಿಹೊಳಿ ಗೆಲುವು ಸಾಧಿಸಿದ್ದಾರೆ. ಈಗ ಪ್ರಕಾಶ ಹುಕ್ಕೇರಿ ಗೆಲುವು ಜಿಲ್ಲೆಯ ಬಿಜೆಪಿ ನಾಯಕರಿಗೆ ಆರು ತಿಂಗಳಲ್ಲಿ ಎರಡನೇ ಪೆಟ್ಟು ಬಿದ್ದಂತಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಹರಿಸಿದ ಹಣದ ಹೊಳೆ ಹರಿಸಿದ್ದರಿಂದ ನನಗೆ ಸೋಲಾಗಿದೆ. ಆದರೆ, ಇದರ ಮಧ್ಯೆಯೂ ಸಾವಿರಾರು ಶಿಕ್ಷಕರು ಮತ ಕೊಟ್ಟಿದ್ದಾರೆ. ಸೋಲಿನಿಂದ ಪಾಠ ಕಲಿಯುತ್ತೇನೆ.
ಅರುಣ ಶಹಾಪುರ

ರಾಜ್ಯದಲ್ಲಿ ಈಗ ಕಾಂಗ್ರೆಸ್ ಅಲೆ ಇದೆ. 2023ರ ವಿಧಾನಸಭೆ ಚುನಾವಣೆಯಲ್ಲೂ ಗೆಲ್ಲುವ ಸೂಚನೆ ಇದು. ಜಿಲ್ಲೆಯ ಕಾಂಗ್ರೆಸ್‌ನ ಶಾಸಕರು, ಕಾರ್ಯಕರ್ತರು, ಎಲ್ಲರೂ ಒಟ್ಟಾಗಿ ಶ್ರಮಿಸಿದ್ದರಿಂದ ಸುಲಭವಾಗಿ ಗೆದ್ದೆ
ಪ್ರಕಾಶ ಹುಕ್ಕೇರಿ

ಅಭ್ಯರ್ಥಿ	ಪಕ್ಷ	ಪಡೆದ ಮತ
ಪ್ರಕಾಶ ಹುಕ್ಕೇರಿ	ಕಾಂಗ್ರೆಸ್	11,460
ಅರುಣ ಶಹಾಪುರ	ಬಿಜೆಪಿ	6,405
ಎನ್.ಬಿ.ಬನ್ನೂರ	ಪಕ್ಷೇತರ	1,009
ಒಟ್ಟು ಮತ		21,402
ಅಸಿಂಧು ಮತಗಳು		1,270
ಗೆಲುವಿನ ಕೋಟಾ		10,067

ನಿರಾಣಿಗೆ 21,544 ಮತಗಳ ಮುನ್ನಡೆ

ಬೆಳಗಾವಿ: ವಾಯವ್ಯ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಹಣಮಂತ ನಿರಾಣಿ ಸತತ ನಾಲ್ಕನೇ ಸುತ್ತಿನಲ್ಲೂ 21,544 ಮೊದಲ ಪ್ರಾಶಸ್ತ್ಯದ ಮತಗಳ ಭಾರಿ ಮುನ್ನಡೆ ಸಾಧಿಸಿದರು. ನಿರಾಣಿ ಅವರಿಗೆ 27,580 ಮತ ಬಂದರೆ, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಸುನೀಲ ಸಂಕ 6,036 ಮತ ಗಳಿಸಿದರು. ಒಟ್ಟು 65,914 ಮತಗಳು ಚಲಾವಣೆಯಾಗಿವೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪಿವಿ ಬ್ರ್ಯಾಂಡ್ ಸ್ಪಾಟ್
ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮೊದಲ ಸುತ್ತಿನಲ್ಲಿ ಕಾಂಗ್ರೆಸ್ ಮುನ್ನಡೆ

ಮೈಸೂರು: ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯ ಮತ ಎಣಿಕೆ ಕಾರ್ಯ ಇಲ್ಲಿನ ಮಹರ್ಷಿ ವಾಲ್ಮೀಕಿ ರಸ್ತೆಯ ಮಹಾರಾಣಿ ವಾಣಿಜ್ಯ ಕಾಲೇಜಿನಲ್ಲಿ ಬುಧವಾರ ಮಧ್ಯರಾತ್ರಿಯಾದರೂ ಮುಗಿದಿರಲಿಲ್ಲ.

'ಮೊದಲ ಹಂತ ಮುಕ್ತಾಯದ ವೇಳೆಗೆ ಕಾಂಗ್ರೆಸ್ ಮುಂದಿದೆ' ಎಂದು ಪ್ರಾದೇಶಿಕ ಆಯುಕ್ತರೂ ಆಗಿರುವ ಚುನಾವಣಾಧಿಕಾರಿ ಡಾ.ಜಿ.ಸಿ. ಪ್ರಕಾಶ್ ತಿಳಿಸಿದರು.

ಮಾಧ್ಯಮದವರಿಗೆ ಮಾಹಿತಿ ನೀಡಿದ ಅವರು, ಮೊದಲ ಸುತ್ತಿನಲ್ಲಿ 49,700 ಮತಗಳ ಎಣಿಕೆ ನಡೆದಿದೆ. ಇದರಲ್ಲಿ ಕಾಂಗ್ರೆಸ್‌ನ ಮಧು ಜಿ. ಮಾದೇಗೌಡ 16,137 ಮತಗಳನ್ನು ಪಡೆದಿದ್ದಾರೆ. ಬಿಜೆಪಿಯ ಮೈ.ವಿ. ರವಿಶಂಕರ್ 13,479, ಜೆಡಿಎಸ್‌ನ ಎಚ್.ಕೆ. ರಾಮು 8,512, ಪಕ್ಷೇತರ ಸದಸ್ಯ ಪ್ರಸನ್ನ ಎನ್.ಗೌಡ 3,142, ವಿನಯ್ 1,892 ಮತಗಳನ್ನು ಪಡೆದಿದ್ದಾರೆ. ಕಾಂಗ್ರೆಸ್ 2658 ಮತಗಳಿಂದ ಮುಂದಿದೆ. ಈವರೆಗೆ 3,711 ಮತಗಳು ತಿರಸ್ಕೃತಗೊಂಡಿವೆ!

2ನೇ ಸುತ್ತಿನಲ್ಲಿ ಉಳಿದ ಮತಗಳ ಎಣಿಕೆ ಕಾರ್ಯ ಮಧ್ಯರಾತ್ರಿಯಾದರೂ ಮುಂದುವರಿದಿತ್ತು. ಅದು ಪೂರ್ಣಗೊಳ್ಳಲು ಕನಿಷ್ಠ ಮೂರು ತಾಸುಗಳ ಸಮಯ ಬೇಕಾಗಬಹುದು. ಪ್ರಥಮ ಪ್ರಾಶಸ್ತ್ಯದ ಮತಗಳಲ್ಲಿ ಶೇ 50ಕ್ಕಿಂತ ಹೆಚ್ಚಿನ ಮತ ಪಡೆದಿದ್ದರೆ ಆ ಅಭ್ಯರ್ಥಿಯನ್ನು ವಿಜೇತರೆಂದು ಘೋಷಿಸಲಾಗುವುದು. ಇಲ್ಲವಾದಲ್ಲಿ ಮುಂದಿನ ಎಣಿಕೆ ಪ್ರಕ್ರಿಯೆ ಮುಂದುವರಿಸಲಾಗುವುದು ಎಂದು ಮಾಹಿತಿ ನೀಡಿದರು.

ಭೋವಿ ನಿಗಮದ ಎಂ.ಡಿ ಲೀಲಾವತಿ ಬಂಧನ

ಒಂದನೇ ಪುಟದಿಂದ...

'ಇಬ್ಬರೂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಎಸಿಬಿ ಬೆಂಗಳೂರು ನಗರ ಘಟಕದ ಅಧಿಕಾರಿಗಳು, ತನಿಖೆ ನಡೆಸುತ್ತಿದ್ದಾರೆ. ಪ್ರಕರಣದ ತನಿಖೆಗೆ ಅಗತ್ಯವಿರುವ ಕಡತಗಳನ್ನು ಒದಗಿಸುವಂತೆ ಲೀಲಾವತಿ ಅವರಿಗೆ ಸೂಚಿಸಲಾಗಿತ್ತು. ಆದರೆ, ಕಡತಗಳನ್ನು ಒದಗಿಸದೇ ಅಸಹಕಾರ ತೋರುತ್ತಿದ್ದರು. ಈ ಕಾರಣದಿಂದ ಅವರನ್ನು ಬಂಧಿಸಿದ್ದು, ನ್ಯಾಯಾಲಯದ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಎಸಿಬಿ ತಿಳಿಸಿದೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ಸರ್ಕಾರದ ಅನುದಾನ ದುರ್ಬಳಕೆ ಮಾಡಿರುವುದು ಮತ್ತು ಫಲಾನುಭವಿಗಳಿಗೆ ವಂಚಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಕೆಲವು ತಿಂಗಳುಗಳಿಂದ ಈಚೆಗೆ ಎಸಿಬಿ ಹಲವು ಪ್ರಕರಣಗಳನ್ನು ದಾಖಲಿಸಿತ್ತು. ನಾಗರಾಜಪ್ಪ ಸೇರಿದಂತೆ ಕೆಲವು ಅಧಿಕಾರಿಗಳ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿಯೂ ಮೊಕದ್ದಮೆ ದಾಖಲಿಸಲಾಗಿದೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.
ದೂ.: 080–29753354/56, ಇ–ಮೇಲ್: karbuildworkerswelfare@gmail.com
No: KBOCWWB/ Admin/Notifications/2022-23 Dated: 14.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಟೆಂಡರ್‌ಗಳನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಸೇವೆಗಳು ಮತ್ತು ನಿಗದಿಪಡಿಸಿದ ಅವಧಿಗಾಗಿ ಅರ್ಹ ಏಜನ್ಸಿಗಳಿಂದ ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಟೆಂಡರ್‌ನ ಸಂಖ್ಯೆ	ಟೆಂಡರ್‌ನ ಹೆಸರು	ಟೆಂಡರ್ ಅಂದಾಜು ಮೊತ್ತ	ಇ.ಎಮ್.ಡಿ ಠೇವಣಿ ಮೊತ್ತ
1	KBOCWWB/ADMIN/TND/CR-05/2021-22/Call-2	ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ಕಛೇರಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನಾಗರಿಕ ಭದ್ರತಾ ಸಿಬ್ಬಂದಿಯಾಗಿ ಮಾನವ ಸಂಪನ್ಮೂಲವನ್ನು ಪೂರೈಸಲು ಏಜೆನ್ಸಿಯ ಆಯ್ಕೆ.	ರೂ. 21.54 ಲಕ್ಷ	ರೂ. 33,000/–

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ **https://eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **29.06.2022**ರಂದು **ಸಂಜೆ 5:30 ಗಂಟೆ**ಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗಾಗಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ
ಸಹಿ/–
ವಾಸಾಸಂಇ/ವಾಪ್ರ/ಎಲ್‌ಸಿ/904/2022–23 ಜಂಟಿ ಕಾರ್ಯದರ್ಶಿ, ಕ.ಕ.&ಇ.ನಿ.ಕಾ.ಕ.ಮಂ.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭೆ ಕಾರ್ಯಾಲಯ, ಗಂಗಾವತಿ.
CITY MUNICIPAL COUNCIL, GANGAVATHI.
ತಾಲೂಕ: ಗಂಗಾವತಿ–583227, ಜಿಲ್ಲೆ: ಕೊಪ್ಪಳ, ರಾಜ್ಯ: ಕರ್ನಾಟಕ. ದೂರವಾಣಿ ಸಂ: 08533–230243
ವೆಬ್‌ಸೈಟ್ : www.gangavathicity.mrc.gov.in ಇ–ಮೇಲ್ ಐ.ಡಿ : itstaff_ulb_gangavati@yahoo.com
ಸಂ:ನಸಗಂ/ಟೆಂಡರ/ತಾಂಶಾ/ಕಾವಿ/2022–23 ದಿನಾಂಕ: 09–06–2022

–:: ಇ–ಪ್ರ್ಯೋಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ::–
(ಸ್ಟ್ಯಾಂಡರ್ಡ್ ಟೆಂಡರ ಪ್ರೊಕ್ಯೂರ್‌ಮೆಂಟ್ ಕೆ.ಡಬ್ಲೂ–1 & 2 ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ **2020–21 ಮತ್ತು 2021–22ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಯೋಜನೆಯಡಿ** ಇ–ಪ್ರೊಕ್ಯೂರ್‌ಮೆಂಟ್ ಏಕ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ http://eproc.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಭರ್ತಿ ಮಾಡುವುದು ವೆಬ್‌ಸೈಟ್ ಮುಖಾಂತರ ಮಾತ್ರ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
01. ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **14–06–2022 ರಿಂದ 30–06–2022**. 02. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **30–06–2022 ರ ಸಾಯಂಕಾಲ 5–30 ರವರೆಗೆ**. 04. ಟೆಂಡರ್ ತೆರೆಯುವ ದಿನಾಂಕ: **02–07–2022 ಬೆಳಿಗ್ಗೆ 11–00 ಗಂಟೆಗೆ ಅಥವಾ ನಂತರ ದಿನಗಳಲ್ಲಿ**
ಒಂದು ವೇಳೆ ಪ್ರಕಟಿಸಲಾಗಿರುವ ದಿನಾಂಕಗಳು ಸಾರ್ವಜನಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು.
15th Finance GBG / 2020-21 & 2021-22 : ಕಾಮಗಾರಿಗಳ ವಿವರ: **1.DMA/2022-23/RD/WORK_INDENT132609.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ): 7500000.00. ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ): 112500.00. ನಿರ್ವಹಣೆಗಾಗಿ ನಿಗದಿಪಡಿಸಿದ ಅವಧಿ: 06 ತಿಂಗಳು. **2.DMA/2022-23/OW/WORK_INDENT132612.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ): 2500000.00. ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ): 50000.00. ನಿರ್ವಹಣೆಗಾಗಿ ನಿಗದಿಪಡಿಸಿದ ಅವಧಿ: 03 ತಿಂಗಳು. **3.DMA/2022-23/OW/WORK_INDENT132627.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ.ಗಳಲ್ಲಿ): 2475000.00. ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ): 49500.00. ನಿರ್ವಹಣೆಗಾಗಿ ನಿಗದಿಪಡಿಸಿದ ಅವಧಿ: 03 ತಿಂಗಳು
Note :- Any changes in Calendar of events will be published in e-procurement portal only
ಷರತ್ತುಗಳು: 1) ಟೆಂಡರ್ ದಸ್ತಾವೇಜುನಲ್ಲಿರುವಂತೆ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. 2) ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿದೆ.
ಸಹಿ/– ಸ.ಕಾ.ನಿ ಅಭಿಯಂತರರು, ನಗರಸಭೆ ಗಂಗಾವತಿ | ಸಹಿ/– ಪೌರಾಯುಕ್ತರು, ನಗರಸಭೆ ಗಂಗಾವತಿ | ಸಹಿ/– ಅಧ್ಯಕ್ಷರು, ನಗರಸಭೆ ಗಂಗಾವತಿ
ಡಿಐಪಿಆರ್/ಕೊಪ್ಪಳ/149/ಎಂಸಿಎ/2022–23

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಲಿ ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009. ದೂರವಾಣಿ : 080–22273511–16
ಸಂಖ್ಯೆ : ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ–4/ಹ–ಶೇ/ಆ.ಠೇ/ಪ್ರಕಟಣೆ/2022–23 ದಿನಾಂಕ : 14.06.2022

ಕಾಲಾವಕಾಶ ವಿಸ್ತರಣೆಗಾಗಿ ಪ್ರಕಟಣೆ

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಶೇರಾಪುರ ಗ್ರಾಮದ ಜಮೀನಿನಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸುತ್ತಿರುವ ವಸತಿ ಬಡಾವಣೆಗೆ ಬೇಡಿಕೆ ಸಮೀಕ್ಷೆಗಾಗಿ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ ದಿನಾಂಕ : 22–11–2019 ರಂದು ಸಾರ್ವಜನಿಕ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಅನುಗುಣವಾಗಿ ಅರ್ಜಿ ನೊಂದಾಯಿಸಿಕೊಂಡಿರುವ ಅರ್ಜಿದಾರರುಗಳಿಗೆ ಆರಂಭಿಕ ಠೇವಣಿ ಮೊತ್ತವನ್ನು ದಿನಾಂಕ : 15–06–2022ರ ಒಳಗಾಗಿ ಆನ್‌ಲೈನ್ ಮೂಲಕ ಪಾವತಿಸುವಂತೆ ಸೂಚಿಸಿ ದಿನಾಂಕ : 13–05–2022 ರಂದು ರಾಜ್ಯ ಮಟ್ಟದ ಪ್ರಜಾವಾಣಿ ಮತ್ತು ಸ್ಥಳೀಯ ಮಟ್ಟದ ದಾವಣಗೆರೆ ಪಬ್ಲಿಕ್ ವಾಯ್ಸ್ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಅರ್ಜಿದಾರರುಗಳ ಹಿತದೃಷ್ಟಿಯಿಂದ ಆರಂಭಿಕ ಠೇವಣಿ ಮೊತ್ತವನ್ನು ಪಾವತಿಸಲು ಕೊನೆಯ ದಿನಾಂಕ : 30.06.2022 ರವರೆಗೆ ಕಾಲಾವಕಾಶ ವಿಸ್ತರಿಸಲಾಗಿರುತ್ತದೆ.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು(ಗ್ರಾ.ಸೇ), ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/888/Zenkar/2022-23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ, ನಂ.2152/20, ಡಿಫೆನ್ಸ್ ಕಾಲೋನಿ, ಬಿಡಬ್ಲ್ಯೂಎಸ್‌ಎಸ್‌ಬಿ ಟ್ಯಾಂಕ್ ರೋಡ್, ಸಹಕಾರನಗರ, ಬಿಬಿಎಂಪಿ ಕಛೇರಿ, ಬ್ಯಾಟರಾಯನಪುರ, ಬೆಂಗಳೂರು – 560092
ಸಂಖ್ಯೆ:ಕಾಅ/ಬ್ಯಾರಾಪು/ಬೃಬೆಂಮಪಾ/ಇ–ಪ್ರೊ/08/2022–23 ದಿನಾಂಕ: 14–06–2022

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ)
(ದ್ವಿ–ಲಕೋಟೆ ಟೆಂಡರ್) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ	ಕಾಮಗಾರಿ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ವಾರ್ಡ್ ಸಂಖ್ಯೆ. 06 ರಲ್ಲಿನ ದಾಸರಹಳ್ಳಿಯಲ್ಲಿ ಎಇಇ ಬ್ಯಾಟರಾಯನಪುರ ಉಪ ವಿಭಾ ಕಛೇರಿ, ಎಆರ್‌ಓ ಕಛೇರಿ ಮತ್ತು ಸಭಾಂಗಣ ನಿರ್ಮಿಸುವಿಕೆ. (ಇತರೆ)	400.00	1000000
2	2022–23ನೇ ಸಾಲಿಗೆ ಯಲಹಂಕ ವಲಯ ನಿಯಂತ್ರಣ ಕೊಠಡಿಗೆ ತುರ್ತು ಪರಿಹಾರ ಕಾರ್ಯಪಡೆ ತಂಡ ಒದಗಿಸುವುದು. (ಇತರೆ)	98.00	245000

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: 22–06–2022ರಂದು ಮಧ್ಯಾಹ್ನ 3.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ, ನಂ.2152/20, ಡಿಫೆನ್ಸ್ ಕಾಲೋನಿ, ಬಿಡಬ್ಲ್ಯೂಎಸ್‌ಎಸ್‌ಬಿ ಟ್ಯಾಂಕ್ ರೋಡ್, ಸಹಕಾರನಗರ, ಬಿಬಿಎಂಪಿ ಕಛೇರಿ, ಬ್ಯಾಟರಾಯನಪುರ, ಬೆಂಗಳೂರು – 560092 ಇಲ್ಲಿ ನಡೆಯುವುದು. 3) ಭರ್ತಿ ಮಾಡಿದ ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 28–06–2022 ರಂದು ಸಂಜೆ 4.00 ಗಂಟೆವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 30–06–2022ರಂದು ಸಂಜೆ 4.05 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ತೆರೆಯಲಾಗುವುದು. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 01–07–2022ರಂದು ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ.
ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ ಬಳ್ಳಾರಿ
ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/1269/2022–23 ದಿನಾಂಕ : 13–06–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು –ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	8443–ಠೇವಣಿ ಕಾಮಗಾರಿಗಳು (ಪ್ರವಾಸೋದ್ಯಮ ಇಲಾಖೆ)	
1)	KPWD/2022-23/RD/WORK_INDENT152221	850.00
2)	KPWD/2022-23/RD/WORK_INDENT152220	890.00

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **24–06–2022 ರಂದು 12.00 ಗಂಟೆಯ ವರೆಗೆ.** ಆ) ಇ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **28–06–2022 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **29–06–2022ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/146/ಎಂಸಿಎ/2022–23

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆವಿಕಂ ಇವರು ಬೆಂಗಳೂರು ಗ್ರಾಮಾಂತರ ವಲಯ ಮತ್ತು ಚಿತ್ರದುರ್ಗ ವಲಯದ ಕೈಗಾರಿಕಾ ಪ್ರದೇಶಗಳ ವಿತರಣ ಜಾಲತಾಣವನ್ನು ಬಲಪಡಿಸಲು ಹಾಗೂ ಉನ್ನತಿಕರಿಸಲು ಕೈಗೊಳ್ಳುವ ಕಾಮಗಾರಿಗಳನ್ನು ಹನ್ನೆರಡು ತಿಂಗಳ ಅವಧಿಗಾಗಿ ಐಟಮ್‌ವಾರು ಖಾಯಂ ದರ ಗುತ್ತಿಗೆ ಸಂಪೂರ್ಣ/ಭಾಗಶಃ ಟರ್ನ್‌ಕೀ ಆಧಾರದ ಮೇಲೆ ದರವನ್ನು ಶೇಕಡವಾರು ಆಧಾರದಲ್ಲಿ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ಮೂಲಕ ಅರ್ಹ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ.	ವಿವರಣೆ	ವಿಚಾರಣೆ ಸಂಖ್ಯೆಗಳು
1	ಚಂದಾಪುರ ವಿಭಾಗದ, ಚಂದಾಪುರ ಮತ್ತು ವೀರಸಂದ್ರ ಉಪ ವಿಭಾಗಗಳ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಫೀಡರ್‌ಗಳನ್ನು ಬಲಪಡಿಸುವುದು ಹಾಗೂ ಪರಿವರ್ತಕ ಕೇಂದ್ರಗಳನ್ನು ನವೀಕರಿಸುವುದು.	ಬೆವಿಕಂ/ಬಿಸಿಪಿ–1412/2022–23/ಬೊಮ್ಮಸಂದ್ರ
2	ಚಂದಾಪುರ ವಿಭಾಗದ, ಜಿಗಣಿ ಉಪ ವಿಭಾಗದ, ಜಿಗಣಿ ಕೈಗಾರಿಕಾ ಪ್ರದೇಶದ ವಿತರಣಾ ವ್ಯವಸ್ಥೆಯ ಹೆಚ್.ಟಿ / ಎಲ್.ಟಿ. ಅನುಪಾತವನ್ನು ಅಭಿವೃದ್ಧಿಗೊಳಿಸುವುದು ಮತ್ತು ಪರಿವರ್ತಕ ಕೇಂದ್ರಗಳನ್ನು ನವೀಕರಿಸುವುದು.	ಬೆವಿಕಂ/ಬಿಸಿಪಿ–1413/2022–23/ಜಿಗಣಿ
3	ಚಂದಾಪುರ ವಿಭಾಗದ ಅತ್ತಿಬೆಲೆ ಉಪವಿಭಾಗದ ಅತ್ತಿಬೆಲೆ ಕೈಗಾರಿಕಾ ಪ್ರದೇಶದ ವಿತರಣಾ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವುದು.	ಬೆವಿಕಂ/ಬಿಸಿಪಿ–1414/2022–23/ಅತ್ತಿಬೆಲೆ
4	ನೆಲಮಂಗಲ ವಿಭಾಗದ ದೊಡ್ಡಬಳ್ಳಾಪುರ ನಗರ ಉಪವಿಭಾಗದ ದೊಡ್ಡಬಳ್ಳಾಪುರ ಕೈಗಾರಿಕಾ ಪ್ರದೇಶದಲ್ಲಿ ವೋಲ್ಟೇಜ್ ನಿಯಂತ್ರಣವನ್ನು ಅಭಿವೃದ್ಧಿಪಡಿಸಲು ಕೈಗಾರಿಕಾ ಫೀಡರ್‌ಗಳನ್ನು ಮರುರೂಪಿಸುವುದು.	ಬೆವಿಕಂ/ಬಿಸಿಪಿ–1415/2022–23/ದೊಡ್ಡಬಳ್ಳಾಪುರ
5	ಹೊಸಕೋಟೆ ವಿಭಾಗದ ದೊಡ್ಡಬಳ್ಳಾಪುರ ಉಪವಿಭಾಗದಲ್ಲಿ ಪಿಲ್ಲಗುಂಪಾ ಕೈಗಾರಿಕಾ ಪ್ರದೇಶದ ಕೈಗಾರಿಕಾ ಫೀಡರ್‌ಗಳ ವಿತರಣಾ ಜಾಲವನ್ನು ಅಭಿವೃದ್ಧಿ ಪಡಿಸುವುದು.	ಬೆವಿಕಂ/ಬಿಸಿಪಿ–1416/2022–23/ಪಿಲ್ಲಗುಂಪಾ
6	ತುಮಕೂರು ವಿಭಾಗ, ಸಿಎಸ್‌ಡಿ ಉಪವಿಭಾಗದ, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನ ವಿಶ್ವಾಸಾರ್ಹತೆಯನ್ನು ಅಭಿವೃದ್ಧಿಪಡಿಸಲು ವಿತರಣಾ ಜಾಲವನ್ನು ಬಲಪಡಿಸುವುದು.	ಬೆವಿಕಂ/ಬಿಸಿಪಿ–1417/2022–23/ಅಂತರಸನಹಳ್ಳಿ
7	ತುಮಕೂರು ವಿಭಾಗ, ಆರ್‌ಎಸ್‌ಡಿ–1 ಉಪವಿಭಾಗದ ವಸಂತನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಹೆಚ್‌ಟಿ/ಎಲ್‌ಟಿ ಅನುಪಾತವನ್ನು ಅಭಿವೃದ್ಧಿಪಡಿಸಲು ವಿತರಣಾ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವುದು.	ಬೆವಿಕಂ/ಬಿಸಿಪಿ–1418/2022–23/ವಸಂತನರಸಾಪುರ
8	ತುಮಕೂರು ವಿಭಾಗ, ಕ್ಯಾತ್ಸಂದ್ರ ಉಪವಿಭಾಗದ ಹಿರೇಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ವಿತರಣಾ ಜಾಲವನ್ನು ಮರುರೂಪಿಸುವುದು.	ಬೆವಿಕಂ/ಬಿಸಿಪಿ–1419/2022–23/ಹಿರೇಹಳ್ಳಿ

ಬಿಡ್ ದಸ್ತಾವೇಜುಗಳ ಲಭ್ಯತೆ: 17.06.2022ರ ನಂತರದಿಂದ. **ಬಿಡ್ ಸಲ್ಲಿಸಲು ಕೊನೆಯ ದಿನಾಂಕ:** 16.07.2022, 16:00 ಗಂಟೆ. **ಬಿಡ್ ದಸ್ತಾವೇಜು ತೆರೆಯುವುದು:** 18.07.2022, 16:15 ಗಂಟೆಗೆ.
ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್ ಡೆಸ್ಕ್ ಸಂಪರ್ಕ ಸಂಖ್ಯೆ (+91–8046010000, +91–8068948777) ಅಥವಾ ಇಮೇಲ್ **support@eprochelpdesk.com**ಗೆ ಸಂಪರ್ಕಿಸಲು ಕೋರಲಾಗಿದೆ.
ಸಹಿ/–
ಪ್ರಧಾನ ವ್ಯವಸ್ಥಾಪಕರು (ವಿ.) ಖರೀದಿ, ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸ್ಪರ್ಧಾ ವಾಣಿ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಬ್ಯಾಂಕಿಂಗ್ ಪರೀಕ್ಷೆ

ಪ್ರಶ್ನೆಪತ್ರಿಕೆ- ಆಕರ ಗ್ರಂಥಗಳೇ ಜೀವಾಳ

ದೇಶದ 43 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿನ(RRB) ಖಾಲಿ ಹುದ್ದೆಗಳ ಭರ್ತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯುತ್ತಿದೆ. ನೇಮಕಾತಿ ಆಯ್ಕೆಗಾಗಿ ನಡೆಯುವ ಪರೀಕ್ಷೆ ಗಳು ಮತ್ತು ಅಧ್ಯಯನ ಸಿದ್ಧತೆ ಕುರಿತ ಮಾಹಿತಿ ಇಲ್ಲಿದೆ.

ಕೆ.ಎಚ್. ಮಂಜುನಾಥ್

ಬ್ಯಾಂಕ್‌ನಲ್ಲಿ ಉದ್ಯೋಗ ಮಾಡುವವರು ಲೆಕ್ಕಾಚಾರದಲ್ಲಿ ಪಕ್ಕಾ ಇರಬೇಕು ಹಾಗೇ ಚುರುಕಾಗಿರಬೇಕು. ಸಂಯಮದಿಂದ ಗ್ರಾಹಕರನ್ನು ನಿರ್ವಹಿಸಬೇಕು. ಕಾನೂನು, ನೀತಿ–ನಿಯಮಗಳನ್ನು ಚೆನ್ನಾಗಿ ಅರಿತಿರಬೇಕು. ಸಮಸ್ಯೆಗಳನ್ನು ಇತ್ಯರ್ಥಗೊಳಿಸುವ, ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಕೌಶಲವಿರಬೇಕು.

ಇದೇ ಆಗಸ್ಟ್–ಸೆಪ್ಟೆಂಬರ್ ತಿಂಗಳಲ್ಲಿ ನಡೆಯಲಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ (ಆರ್‌ಆರ್‌ಬಿ) ನೇಮಕಾತಿ ಪರೀಕ್ಷೆಗಳಲ್ಲೂ ಇಂಥದ್ದೇ ಪ್ರಶ್ನೆಗಳನ್ನು ಕೇಳಲಾಗುತ್ತದೆ.

ದೇಶದ 43 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲಿನ 8,106 ವಿವಿಧ ಹುದ್ದೆಗಳಿಗಾಗಿ ನಡೆಯುವ ಈ ನೇಮಕಾತಿಗಾಗಿ ಮೂರು ಹಂತಗಳಲ್ಲಿ ಪರೀಕ್ಷೆ ನಡೆಸಲಾಗುತ್ತದೆ. ಮೊದಲನೆಯದ್ದು ಪೂರ್ವಭಾವಿ ಪರೀಕ್ಷೆ. ಎರಡನೆಯದು ಮುಖ್ಯ ಪರೀಕ್ಷೆ. ಮೂರನೆಯದು ಸಂದರ್ಶನ.

ಪೂರ್ವಭಾವಿ ಪರೀಕ್ಷೆ: ಈ ಪರೀಕ್ಷೆಯಲ್ಲಿ 80 ಅಂಕಗಳ 80 ಪ್ರಶ್ನೆಗಳು ಇರುತ್ತವೆ. ಪರೀಕ್ಷಾ ವಿವರ ಈ ಕೆಳಗಿನ ಕೋಷ್ಟಕದಲ್ಲಿದೆ.

ಕ್ರ ಸಂ	ವಿಷಯ	ಪ್ರಶ್ನೆಗಳು	ಅಂಕಗಳು	ಅವಧಿ
1	ರೀಸನಿಂಗ್	40	40	45 ನಿ.
2	ನ್ಯೂಮರಿಕಲ್ ಎಬಿಲಿಟಿ	40	40	45 ನಿ.
	ಒಟ್ಟು	80	80	

ಪೂರ್ವಭಾವಿ ಪರೀಕ್ಷೆಯಲ್ಲಿ ಎರಡು ಪತ್ರಿಕೆಗಳಿರುತ್ತವೆ. ಮೊದಲನೆಯದು ರೀಸನಿಂಗ್, ಎರಡನೆಯದು ನ್ಯೂಮರಿಕಲ್ ಎಬಿಲಿಟಿ (ಅಂಕಿ–ಸಂಖ್ಯೆ ಸಾಮರ್ಥ್ಯ).

ರೀಸನಿಂಗ್ ಪತ್ರಿಕೆ

ಆರ್‌ಆರ್‌ಬಿ ಈ ಪತ್ರಿಕೆಗೆ ನಿಗದಿಪಡಿಸಿರುವ ಪಠ್ಯಕ್ರಮದಲ್ಲಿ ಗುಂಪಿಗೆ ಸೇರದ್ದನ್ನು ತೆಗೆದು ಹಾಕಿ (Odd man out), ಕೋಡಿಂಗ್-ಡಿಕೋಡಿಂಗ್, ಕಾರಣಗಳು ಮತ್ತು ಪರಿಣಾಮಗಳು(Reasoning and Effects), ತೀರ್ಮಾನ ಮಾಡುವಿಕೆ (Decision Making), ಸಮರ್ಥನೆ ಮತ್ತು ಕಾರಣ(Asserting and Reasoning) ಸೇರಿದಂತೆ 23 ವಿವಿಧ ವಿಷಯಗಳಿವೆ.

ಅಧ್ಯಯನ ಗ್ರಂಥಗಳು: ಈ ಪತ್ರಿಕೆಗೆ ಉತ್ತರಿಸುವ ಸಂಬಂಧ ಯಾವುದೇ ಆಕರ ಪುಸ್ತಕಗಳನ್ನ ಓದುವ ಮೊದಲು, ಈ ಪರೀಕ್ಷೆಯ ಹಿಂದಿನ ವರ್ಷ ಗಳ ಪ್ರಶ್ನೆಪತ್ರಿಕೆಗಳನ್ನು ಬಿಡಿಸಬೇಕು.

ಇದರ ಜೊತೆ ಜೊತೆಗೆ ಆರ್.ಎಸ್. ಅಗರವಾಲ್ ಅವರ 'ಸಬ್ಜೆಕ್ಟಿವ್ ಮತ್ತು ಅಬ್ಜೆಕ್ಟಿವ್ ಕ್ವಾಂಟಿಟೇಟಿವ್ ಅಪ್ಟಿಟ್ಯೂಡ್', ಎಂ. ಟೈರಾ ಅವರ 'ಕ್ವಿಕರ್ ಮ್ಯಾಥೆಮೆಟಿಕ್ಸ್' ಪರಾಮರ್ಶಿಸಬಹುದು. ಇದಲ್ಲದೇ ಬ್ಯಾಂಕ್ ಎಕ್ಸಾಂ ಪ್ರಿಪರೇಶನ್ ಡಾಟ್ ಕಾಮ್ (exampreparation.com), ಬ್ಯಾಂಕ್ ಇಂಡಿಯಾ ಡಾಟ್ ಕಾಂ(bankindia.com), ಎಕ್ಸಾಂ ಫಂಡಾ ಡಾಟ್ ಕಾಮ್ (examfunda.com) ಮತ್ತಿತರ ವೆಬ್‌ಸೈಟ್‌ಗಳಲ್ಲಿ ಸಾಕಷ್ಟು ಸಾಮಗ್ರಿಗಳಿವೆ ಅದನ್ನೂ ಓದಬಹುದು.

ಆರ್‌ಆರ್‌ಬಿ ನೇಮಕಾತಿ ಪರೀಕ್ಷೆ

ನ್ಯೂಮರಿಕಲ್ ಎಬಿಲಿಟಿ ಪತ್ರಿಕೆಯ ವಿಷಯಗಳು

ಈ ಪತ್ರಿಕೆಯಲ್ಲಿ ಹೆಚ್ಚಾಗಿ ಗಣಿತಕ್ಕೆ ಸಂಬಂಧಿಸಿದ ವಿಷಯಗಳಿರುತ್ತವೆ. ಅವುಗಳೆಂದರೆ; ಸಂಖ್ಯಾ ಪದ್ಧತಿ (Number System), ದಶಮಾಂಶ ಭಿನ್ನರಾಶಿಗಳು(Decimal Fractions), ಸಮಯ ಮತ್ತು ಕೆಲಸ(Time and Work), ವಯಸ್ಸಿಗೆ ಸಂಬಂಧಿಸಿದ ಲೆಕ್ಕಗಳು (Age Problems), ಶೇಕಡಾವಾರು (Percentage), ಸಂಯೋಜನೆ ಮತ್ತು ವಿಕಲ್ಪ (Permutation and Combination), ಲಘುತ್ತಮ ಸಾಮಾನ್ಯ ಅಪವರ್ತನ ಮತ್ತು ಮಹತ್ತಮ ಸಾಮಾನ್ಯ ಅಪವರ್ತನ(HCF and LCM), ಸರಳ ಬಡ್ಡಿ(Simple Interest), ಕಾಲ ಮತ್ತು ದೂರ (Time and Distance), ಸರಳೀಕರಣ(Simplification), ಅನುಪಾತ ಮತ್ತು ಸಮಾನುಪಾತ (Ratio and Proportion), ಸಂಭವನೀಯತೆ, ಲಾಭ ಮತ್ತು ನಷ್ಟ (Probability Profit and Loss), ಚಕ್ರಬಡ್ಡಿ (Compound Interest), ಸರಾಸರಿ ಪಾಲುದಾರಿಕೆ(Average Partnership), ದತ್ತಾಂಶ ವ್ಯಾಖ್ಯಾನ (Data Interpretation), ವರ್ಗ ಸಮೀಕರಣ(Quadratic Equations)

ಆಕರ ಗ್ರಂಥಗಳು: ಈ ವಿಭಾಗದಲ್ಲೂ ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಲು ಆದ್ಯತೆ ನೀಡಬೇಕು. ನಂತರ, ಪಠ್ಯಕ್ರಮ ಆಧರಿಸಿ ಪುಸ್ತಕಗಳನ್ನು ಓದಬೇಕು.

ಈ ಪತ್ರಿಕೆಯ ಪರೀಕ್ಷೆಗೂ ಆರ್.ಎಸ್ ಅಗರವಾಲ್ ಅವರು ಕೃತಿ 'ವರ್ಬಲ್ ಅಂಡ್ ನಾನ್ ವರ್ಬಲ್ ರಿಸನಿಂಗ್', ಅರಿಹಂತ್ ಪ್ರಕಾಶನದ ವಿವಿಧ ರೀಸನಿಂಗ್ ಪುಸ್ತಕಗಳು ಸಹಕಾರಿಯಾಗುತ್ತವೆ. ಇದಲ್ಲದೇ 'ಆರ್‌ಆರ್‌ಬಿ 2022-23 ರೀಸನಿಂಗ್ ಚಾಪ್ಟರ್ ವೈಸ್ ಸಾಲ್ವಡ್ ಪೇಪರ್ಸ್'(RRB 2022-23 REASONING CHATPERWISE SOLVED PAPER) ಪುಸ್ತಕಗಳನ್ನು ಪರಾಮರ್ಶಿಸಬಹುದು.

(ಲೇಖಕರು: ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾಪರೀಕ್ಷಾ ಕೇಂದ್ರ, ಬೆಂಗಳೂರು)

(ಮುಂದಿನವಾರ: ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಪರೀಕ್ಷೆ ಕುರಿತ ಇನ್ನಷ್ಟು ವಿವರಗಳು ಹಾಗೂ ಮಾದರಿ ಪ್ರಶ್ನೆ ಪತ್ರಿಕೆ)

ಪರೀಕ್ಷಾ ತಯಾರಿಗೆ ಸಲಹೆಗಳು

- ಈ ಹಂತದಲ್ಲಿ ಪರೀಕ್ಷೆಗೆ ಸಿದ್ಧತೆ ನಡೆಸುವವರು, ಗಣಿತದಲ್ಲಿ ಹೆಚ್ಚು ಹೆಚ್ಚು ಪ್ರಾಬ್ಲಮ್‌ಗಳನ್ನು ಬಿಡಿಸುವ ಅಭ್ಯಾಸ ಮಾಡಬೇಕು.
- ಆನ್‌ಲೈನ್‌ಲ್ಲಿ ಹೆಚ್ಚು ಪರೀಕ್ಷಾ ಸರಣಿಗಳನ್ನು ತೆಗೆದುಕೊಳ್ಳಬೇಕು. ಇದರಿಂದ ಪರೀಕ್ಷೆಯ ನೈಜ ಅನುಭವಗಳು ಆಗುತ್ತವೆ. ಪರೀಕ್ಷೆಯಲ್ಲಿ ಎಲ್ಲಿ ಎಡವುತ್ತೇವೆಂಬ ಅರಿವಾಗುತ್ತದೆ.
- ಮೊದಲಿಗೆ ರೀಸನಿಂಗ್ ಹಾಗೂ ನ್ಯೂಮರಿಕಲ್ ಎಬಿಲಿಟಿಯ ಮೂಲ ಪರಿಕಲ್ಪನೆ ಅರ್ಥೈಸಿಕೊಳ್ಳಿ. 8, 9 ಮತ್ತು 10ನೇ ತರಗತಿಯ ಗಣಿತದ ಪುಸ್ತಕಗಳನ್ನು ಓದಿ. ಜೊತೆಗೆ, ಆರ್‌ಆರ್‌ಬಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನೀಡಲಾದ ಪಠ್ಯಕ್ರಮದ ಪಾಠಗಳನ್ನು ಓದಿ. ನಂತರ ಆಕರ ಗ್ರಂಥಗಳಲ್ಲಿರುವ ಪ್ರಶ್ನೆಗಳನ್ನು ಬಿಡಿಸಿ. ವಾರಕ್ಕೊಮ್ಮೆ ಆನ್‌ಲೈನ್ ಟೆಸ್ಟ್ ಸೀರಿಸ್‌ಗಳನ್ನು ತೆಗೆದುಕೊಳ್ಳಿ (ವಾರಕ್ಕೆ 2-3 ತೆಗೆದುಕೊಂಡರೆ ಅತ್ಯುತ್ತಮ).

ಹಾಂ! ಗಣಿತದ ಪುಸ್ತಕಗಳು ನಿಮಗೆ ನ್ಯೂಮರಿಕಲ್ ಎಬಿಲಿಟಿ ವಿಭಾಗಕ್ಕೆ ಮಾತ್ರ ಸಹಾಯ ಮಾಡಬಲ್ಲವು. ರೀಸನಿಂಗ್ ವಿಭಾಗದ ಮೂಲ ಪರಿಕಲ್ಪನೆ ತಿಳಿಯಲು ಸ್ಪರ್ಧಾತ್ಮಕ ಪರೀಕ್ಷೆಗೆ ಮೀಸಲಾದ ಮಾಸ ಪತ್ರಿಕೆಗಳು ಹಾಗೂ ಜಾಲತಾಣಗಳೇ ಹೆಚ್ಚು ಉಪಯುಕ್ತ.

- ಪತ್ರಿಕೆಯಲ್ಲಿರುವ ಎಲ್ಲಾ ಪ್ರಶ್ನೆಗಳನ್ನು ಬಿಡಿಸುವುದಕ್ಕಾಗಿ ಹೆಚ್ಚು ಒತ್ತು ನೀಡಬೇಡಿ. ಆದರೆ, ಉತ್ತರಿಸಿರುವ ಎಲ್ಲ ಪ್ರಶ್ನೆಗಳು ನಿಖರವಾಗಿರುವಂತೆ ನೋಡಿಕೊಳ್ಳಿ. ಏಕೆಂದರೆ ತಪ್ಪಾದ ಉತ್ತರಗಳಿಗೆ ಅಂಕಗಳನ್ನು ಕಳೆಯುತ್ತಾರೆ. ಪ್ರಶ್ನೆ ಪತ್ರಿಕೆಯಲ್ಲಿ ಬಂದ ಪ್ರಶ್ನೆಗಳ ಪೈಕಿ ಶೇ 60 ರಿಂದ 70 ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದರೂ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತೀರಿ.
- ರೀಸನಿಂಗ್‌ನಲ್ಲಿ ಎರಡು ಬಗೆ. ಒಂದು ವರ್ಬಲ್ ರೀಸನಿಂಗ್, ಇನ್ನೊಂದು ನಾನ್ ವರ್ಬಲ್ ರೀಸನಿಂಗ್. ಇದರಲ್ಲಿ ದೀರ್ಘವಾದ ಸಮಸ್ಯೆಗಳನ್ನು ನೀಡಿರುತ್ತಾರೆ. ಹೆಚ್ಚು ತಾರ್ಕಿಕ ಮತ್ತು ವಿಶ್ಲೇಷಣಾತ್ಮಕ ಸ್ವರೂಪದ ಪ್ರಶ್ನೆಗಳಿರುತ್ತವೆ. ಚಿತ್ರಗಳ ಸಹಾಯದಿಂದ ನಿಖರ ಉತ್ತರಗಳನ್ನು ಆಯ್ಕೆ ಮಾಡಬೇಕು. ಇದಕ್ಕಾಗಿ, ಈಗಿನಿಂದಲೇ ಪ್ರತಿ ದಿನ ಅಂಥ ಕಠಿಣ ಪ್ರಶ್ನೆಗಳನ್ನು ಬಿಡಿಸುವ ಅಭ್ಯಾಸ ಮಾಡಬೇಕು.
- ನ್ಯೂಮರಿಕಲ್ ಎಬಿಲಿಟಿ ಪರೀಕ್ಷೆಯಲ್ಲಿ, ತರಹೇವಾರಿ ಲೆಕ್ಕಗಳನ್ನು ಕೇಳುತ್ತಾರೆ. ಪ್ರಶ್ನೆ ಉದ್ದವಿದ್ದು, ಅದನ್ನು ಓದಿ ಅರ್ಥೈಸಿಕೊಳ್ಳಲು ಹೆಚ್ಚು ಸಮಯ ಬೇಕಾಗುತ್ತದೆ. ಆದ್ದರಿಂದ ಅಭ್ಯಾಸದ ವೇಳೆಯಲ್ಲಿ ಇಂಥ ಮಾದರಿಯ ಪ್ರಶ್ನೆಗಳನ್ನು ಬಿಡಿಸುವ ಅಭ್ಯಾಸ ಮಾಡಬೇಕು. ವೇದಿಕ್ ಗಣಿತದ ಅಭ್ಯಾಸವಿದ್ದವರಿಗೆ ಈ ಪ್ರಶ್ನೆ ಪತ್ರಿಕೆಗೆ ಉತ್ತರಿಸುವುದಕ್ಕೆ ಪೂರಕವಾಗುತ್ತದೆ.



ಮಾದರಿ ಪ್ರಶ್ನೋತ್ತರ

ಕೆಪಿಎಸ್‌ಸಿ ಗ್ರೂಪ್ 'ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಆ್ಯಂಡ್ ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಕೇಂದ್ರ ಸರ್ಕಾರದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಬಿಡುಗಡೆ ಮಾಡಿರುವ 4ನೇ ರಾಜ್ಯಗಳ ಆಹಾರ ಭದ್ರತಾ ಸೂಚ್ಯಂಕ(4th State Food Safety Index) ದಲ್ಲಿ ಕರ್ನಾಟಕ ಯಾವ ಸ್ಥಾನ ಪಡೆದಿದೆ?

ಎ) 6 ಬಿ) 9
ಸಿ) 12 ಡಿ) 15

ಉತ್ತರ: ಬಿ

2)ಇತ್ತೀಚಿಗೆ ಥಾಯ್ಲೆಂಡ್ ಗಲ್ಫ್‌ನಲ್ಲಿರುವ ರೀಮ್ ನೌಕಾಪಡೆಯ ನೆಲೆಯಲ್ಲಿ ಚೀನಾ 2 ನೇ ವಿದೇಶಿ ಸೇನಾ ನೆಲೆ ನಿರ್ಮಿಸುತ್ತಿದೆ. ಹಾಗಾದರೆ ಮೊದಲ ವಿದೇಶಿ ಸೇನಾ ನೆಲೆಯನ್ನು ಎಲ್ಲಿ ಆರಂಭ ಮಾಡಿತ್ತು?

ಎ) ಜಿಬೂಟಿ (Djibouti - ಪೂರ್ವ ಆಫ್ರಿಕ)
ಬಿ) ಶ್ರೀಲಂಕಾ
ಸಿ) ಮ್ಯಾನ್ಮಾರ್
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: ಎ

3) 2021ರಲ್ಲಿ ಭಾರತಕ್ಕೆ ಹರಿದು ಬಂದ ವಿದೇಶಿ ನೇರ ಬಂಡವಾಳ ಹೂಡಿಕೆ(ಎಫ್ ಡಿ ಐ) ಮೊತ್ತ ಕಡಿಮೆ ಆಗಿದ್ದರೂ ಭಾರತವು ಜಗತಿಕ ಮಟ್ಟದಲ್ಲಿ ಎಫ್‌ಡಿಐ ಆಕರ್ಷಿಸಿದ ದೇಶಗಳಲ್ಲಿ ಮೊದಲ ಹತ್ತು ಸ್ಥಾನದಲ್ಲಿದೆ. ಹಾಗಾದರೆ ನಿರ್ದಿಷ್ಟವಾಗಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಎ) ಮೂರು ಬಿ) ನಾಲ್ಕು
ಸಿ) ಏಳು ಡಿ) ಒಂಬತ್ತು

ಉತ್ತರ: ಸಿ

4) ಭಾರತದಲ್ಲಿ ಮೊದಲ ಸೋಲಿಗಮಿ/ ಸ್ವಯಂ ವಿವಾಹ ಎಲ್ಲಿ ನಡೆಯಿತು?

ಎ) ವಡೋದರಾ(ಗುಜರಾತ್)
ಬಿ) ಲಖನೌ (ಉತ್ತರ ಪ್ರದೇಶ)
ಸಿ) ಪುಣೆ (ಮಹಾರಾಷ್ಟ್ರ)
ಡಿ) ಮೇಲಿನ ಎಲ್ಲಿಯೂ ಅಲ್ಲ

ಉತ್ತರ: ಎ

5) ಕರ್ನಾಟಕದಲ್ಲಿ 'ಗಡಿನಾಡಿನ ಚೇತನ' ಎಂಬ ಪ್ರಶಸ್ತಿಯನ್ನು 'ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ' ನೀಡಲು ನಿಶ್ಚಯಿಸಿದೆ. ಯಾರ ಜನ್ಮದಿನಾಚರಣೆ ಸಂದರ್ಭದಲ್ಲಿ ಅವರ ಸ್ಮರಣೆಗಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ?

ಎ) ಕಯ್ಯಾರ ಕಿಞ್ಞಣ್ಣ ರೈ
ಬಿ) ವಿವೇಕ ರೈ
ಸಿ) ಮಂಜೆ ಮಂಗೇಶ ಪೈ
ಡಿ) ಶಿವರಾಮ ಕಾರಂತ

ಉತ್ತರ: ಎ

6) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಆದಿ ಶಂಕರಾಚಾರ್ಯರ ಜನ್ಮಸ್ಥಳ ಕಾಲಡಿ ರಾಷ್ಟ್ರೀಯ ಸ್ಮಾರಕವಾಗಲಿದೆ ಎಂದು ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರದ (National Monuments Authority)ಅಧ್ಯಕ್ಷ ತರುಣ ವಿಜಯ್ ತಿಳಿಸಿದ್ದಾರೆ.
2) ಕೇರಳದ ಎರ್ನಾಕುಲಂ ಜಿಲ್ಲೆಯ ಪೆರಿಯಾರ್ ನದಿಯ ದಡದಲ್ಲಿರುವ ಕಾಲಡಿ ಆದಿ ಶಂಕರಾಚಾರ್ಯರ ಜನ್ಮ ಸ್ಥಳ ಎಂದು ಗುರುತಿಸಲಾಗಿದೆ. ಪ್ರಸ್ತುತ ಕಾಲಡಿಯಲ್ಲಿ ಶಾರದಾ ದೇವಿ ಹಾಗೂ ದಕ್ಷಿಣಾಮೂರ್ತಿ ದೇವಾಲಯಗಳಿವೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿದ್ದಾವೆ

ಉತ್ತರ: ಡಿ

7) ಕೇಂದ್ರ ಆರೋಗ್ಯ ಸಚಿವಾಲಯ 1945ರ ಔಷಧ ಕಾಯ್ದೆಯ ತಿದ್ದುಪಡಿಗೆ ಸೂಚಿಸಿದೆ. ಆ ಪ್ರಕಾರ ಪ್ಯಾರಾಸಿಟಮಾಲ್, ಮೂಗಿನ ಡ್ರಾಪ್ಸ್, ಫಂಗಸ್ ತಡೆಯುವ ಆಂಟಿಬಯೋಟಿಕ್ಸ್ ಸೇರಿದಂತೆ ಎಷ್ಟು ಔಷಧಗಳನ್ನು ವೈದ್ಯರ ಚೀಟಿಯಿಲ್ಲದೇ ಮೆಡಿಕಲ್ ಅಂಗಡಿಯಿಂದ ಪಡೆಯಲು ಇತ್ತೀಚಿಗೆ ಅನುಮತಿ ನೀಡಿದೆ?

ಎ) 20 ಬಿ) 16
ಸಿ) 50 ಡಿ) 12

ಉತ್ತರ: ಬಿ

8) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಕೊಲಂಬಿಯಾ ವಿಶ್ವವಿದ್ಯಾಲಯದ ಪರಿಸರ ಕಾನೂನು ಮತ್ತು ನೀತಿ ಅಧ್ಯಯನ ಕೇಂದ್ರ ಮತ್ತು ಭೂವಿಜ್ಞಾನ ಮಾಹಿತಿ ಜಾಲ ಕೇಂದ್ರ ನಡೆಸಿದ ಈ ಸಾಲಿನ ಪರಿಸರ ಕಾರ್ಯ ದಕ್ಷತೆ ಸೂಚ್ಯಂಕದಲ್ಲಿ ಡೆನ್ಮಾರ್ಕ್ ಮೊದಲ ಸ್ಥಾನದಲ್ಲಿದ್ದರೆ ಭಾರತವು ಕೊನೆಯ ಸ್ಥಾನದಲ್ಲಿದೆ.
2) ಪರಿಸರ ಕಾರ್ಯ ದಕ್ಷತೆ ಸೂಚ್ಯಂಕದಲ್ಲಿ ಒಟ್ಟು 180 ದೇಶಗಳನ್ನು ಪರಿಗಣಿಸಿ ಅಧ್ಯಯನ ನಡೆಸಲಾಗಿತ್ತು, ಪ್ರತಿ ದೇಶಗಳ ಸುಸ್ಥಿರ ಅಭಿವೃದ್ಧಿ ಮಾದರಿಗಳು, ಹಸಿರುಮನೆ ಅನಿಲ ಹೊರಸೂಸುವಿಕೆ ನಿಯಂತ್ರಣ ಕ್ರಮಗಳನ್ನು ಪರಿಶೀಲಿಸಿ ಸೂಚ್ಯಂಕ ತಯಾರಿಸಲಾಗಿದೆ.

ಉತ್ತರ ಸಂಕೇತಗಳು

ಎ) 1ನೇ ಹೇಳಿಕೆ ಮಾತ್ರ ಸರಿಯಾಗಿದೆ
ಬಿ) 2ನೇ ಹೇಳಿಕೆ ಮಾತ್ರ ಸರಿಯಾಗಿದೆ
ಸಿ) ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ) 1 ಮತ್ತು 2 ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

9) 30ಕ್ಕೂ ಹೆಚ್ಚು ಕ್ಷೇತ್ರಗಳನ್ನು ಪ್ರತಿನಿಧಿಸುವ 70ಕ್ಕೂ ಹೆಚ್ಚು ಕಂಪನಿಗಳು ದೇಶದಾದ್ಯಂತ ಹೊಸ ಪ್ರಯೋಗ ನಡೆಸಲು ನಿಶ್ಚಯಿಸಿದ್ದು 'ವಾರದಲ್ಲಿ ನಾಲ್ಕು ದಿನ ಮಾತ್ರ ಕೆಲಸ ಮಾಡಲು ಅವಕಾಶಕೊಟ್ಟಿವೆ'. ಹಾಗಾದರೆ ಈ ಘಟನೆ ಎಲ್ಲಿ ನಡೆದಿದೆ?

ಎ) ಅಮೆರಿಕ ಬಿ) ಡೆನ್ಮಾರ್ಕ್
ಸಿ) ಬ್ರಿಟನ್ ಡಿ) ಫ್ರಾನ್ಸ್

ಉತ್ತರ: ಸಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

'ಏನು ಓದಬಾರದು ಎಂಬುದೂ ಮುಖ್ಯ'

ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಸಾಹಿತ್ಯ ಮಲ್ಲಿಕಾರ್ಜುನ ಆಲದಕಟ್ಟಿ ಅವರು ಈ ಬಾರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ 250ನೇ ರ್‍ಯಾಂಕ್ ಪಡೆದಿದ್ದಾರೆ. ಅವರ ಈ ಸಾಧನೆಗೆ ಸ್ಫೂರ್ತಿ ಏನು, ಪರೀಕ್ಷೆಗೆ ಸಿದ್ಧತೆ ಹೇಗಿತ್ತು ಎಂಬ ಬಗ್ಗೆ 'ಸ್ಪರ್ಧಾವಾಣಿ'ಯೊಂದಿಗೆ ತಮ್ಮ ಅನುಭವ ಹಂಚಿಕೊಂಡಿದ್ದಾರೆ.

ಸಂದರ್ಶನದ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸಂತೋಷ ಈ. ಚಿನಗುಡಿ

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್

ಸಾಹಿತ್ಯ

- **ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸುಗಳಿಸಿದ್ದೀರಿ, ಅಭಿನಂದನೆಗಳು. ನಿಮ್ಮ ಮುಂದಿನ ಹೆಜ್ಜೆ?**

ಗ್ರಾಮೀಣ ಆರೋಗ್ಯ ಸುಧಾರಣೆ ಮಾಡಬೇಕು ಎಂಬುದು ನನ್ನ ಕನಸು. ಹಳ್ಳಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬುದು ಎರಡನೇ ಬಯಕೆ. ನಾಗರಿಕ ಸೇವಾ ಕ್ಷೇತ್ರ ಆಯ್ಕೆ ಮಾಡಿಕೊಂಡ ಮೇಲೆ ಎಲ್ಲ ಕ್ಷೇತ್ರಗಳನ್ನೂ ನಿರ್ವಹಿಸಬೇಕಾಗುತ್ತದೆ. ಆದರೆ, ಹಳ್ಳಿಗರ ಆರೋಗ್ಯ ಮತ್ತು ಶಿಕ್ಷಣ ಸುಧಾರಣೆಯಾದರೆ ಉಳಿದ ಎಲ್ಲದರಲ್ಲೂ ಅವರು ಸಶಕ್ತರಾಗುತ್ತಾರೆ. ಹಾಗಾಗಿ, ನಾನು ಐಎಎಸ್ ಸೇರುತ್ತೇನೆ. ನಂತರ ಗ್ರಾಮೀಣ ಆರೋಗ್ಯಕ್ಕೇ ಹೆಚ್ಚು ಒತ್ತುನೀಡುತ್ತೇನೆ.

- **ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳನ್ನು ಎಷ್ಟನೇ ಪ್ರಯತ್ನದಲ್ಲಿ ಪೂರ್ಣಗೊಳಿಸಿದಿರಿ? ಹಿಂದಿನ ಪ್ರಯತ್ನ ಫಲಿಸದಿರಲು ಕಾರಣಗಳೇನು?**

ನಾಲ್ಕು ಪ್ರಯತ್ನಗಳಲ್ಲಿ ವಿಫಲವಾಗಿ, ಐದನೇ ಬಾರಿ ಯಶಸ್ವಿಯಾದೆ. ಮೊದಲ ಯತ್ನದಲ್ಲಿ ಪ್ರಿಲಿಮ್ಸ್ ಪಾಸಾಗಲಿಲ್ಲ. ಯಾವ ಪುಸ್ತಕ ಓದಬೇಕು ಎಂಬುದು ಸ್ಪಷ್ಟವಾಗಿ ಗೊತ್ತಿರದ ಕಾರಣ ಫೇಲ್ ಆದೆ. ಎರಡನೇ ಬಾರಿ ಮೇನ್ಸ್‌ನಲ್ಲಿ ಅನುತ್ತೀರ್ಣಳಾದೆ. ಆ ಸಂದರ್ಭದಲ್ಲಿ ನಾನು ಪ್ರಿಲಿಮ್ಸ್‌ಗೆ ಮಾತ್ರ ಆದ್ಯತೆ ನೀಡಿದ್ದರಿಂದ ಮೇನ್ಸ್‌ನಲ್ಲಿ ಹಿಂದುಳಿದೆ. ಮೂರನೇ ಬಾರಿ ಎರಡೂ ಹಂತ ಪಾಸಾದರೂ ಸಂದರ್ಶನದಲ್ಲಿ ಹಿಂದೆ ಬಿದ್ದೆ. ಇದಾಗಿ, ಒಂದೇ ತಿಂಗಳಿಗೆ ಮತ್ತೆ ಪರೀಕ್ಷೆ ಎದುರಿಸಿದೆ. ಸಿದ್ಧತೆ ಇಲ್ಲದ ಕಾರಣ ನಾಲ್ಕನೇ ಬಾರಿ ಪ್ರಿಲಿಮ್ಸ್ ಕೂಡ ಪಾಸಾಗಲಿಲ್ಲ. ಹೀಗೆ ವಿಫಲವಾದಾಗ ಒಂದೊಂದು ಪಾಠ ಕಲಿತೆ. ನಾನು ಮಾಡುತ್ತಿದ್ದ ತಪ್ಪುಗಳ ಅರಿವಾಯಿತು. ಐದನೇ ಬಾರಿಗೆ ಪ್ರಿಲಿಮ್ಸ್, ಮುಖ್ಯಪರೀಕ್ಷೆ ಹಾಗೂ ಸಂದರ್ಶನಕ್ಕೂ ಸಮಾನ ಆದ್ಯತೆ ಕೊಟ್ಟು ಓದಿದೆ.

- **ನೀವು ಬಳಸಿದ ಅಧ್ಯಯನ ಪರಿಕರಗಳ ಬಗ್ಗೆ ತಿಳಿಸಿ**

ಮುಖ್ಯವಾಗಿ 6 ರಿಂದ 12ನೇ ತರಗತಿವರೆಗಿನ ಎನ್‌ಸಿಇಆರ್‌ಟಿ ಪುಸ್ತಕಗಳನ್ನು ವಿವರವಾಗಿ ಓದಿದೆ. ಲಕ್ಷ್ಮಿಕಾಂತ ಅವರ 'ರಾಜನೀತಿ ಶಾಸ್ತ್ರ', ರಮೇಶ್ ಸಿಂಗ್ ಅವರ 'ಅರ್ಥಶಾಸ್ತ್ರ' ಪುಸ್ತಕಗಳನ್ನು ಅಭ್ಯಾಸ ಮಾಡಿದೆ. ಪರಿಸರ ವಿಷಯಗಳ ಅಧ್ಯಯನಕ್ಕೆ ದಿನ ಪತ್ರಿಕೆಗಳನ್ನೇ ಅವಲಂಬಿಸಿದೆ. ಭೂಗೋಳ ಹಾಗೂ ಇತಿಹಾಸ ಅಧ್ಯಯನಕ್ಕೆ ಎನ್‌ಸಿಇಆರ್‌ಟಿ ಪುಸ್ತಕಗಳೇ ಸಾಕಾದವು. 'ಆಧುನಿಕ ಇತಿಹಾಸ (ಮಾಡರ್ನ್ ಹಿಸ್ಟರಿ)' ಎಂಬ ಪುಸ್ತಕ ಬಹಳ ಉಪಯೋಗವಾಯಿತು. ಪ್ರತಿ ದಿನ ಕನಿಷ್ಠ ಎರಡು ತಾಸು ಪತ್ರಿಕೆ ಓದುವುದು ರೂಢಿ. ಸ್ಥಳೀಯ ಮಟ್ಟದಿಂದ ಅಂತರರಾಷ್ಟ್ರೀಯ ಸಂಗತಿಗಳನ್ನು ಪ್ರತಿ ದಿನ ನೀಡುವುದು ಪತ್ರಿಕೆಗಳು ಮಾತ್ರ. ಹಾಗಾಗಿ, ಪತ್ರಿಕೆ ಓದದೇ ಯಶಸ್ಸು ಸಾಧ್ಯವಿಲ್ಲ.

- **ನೀವು ಕೋಚಿಂಗ್‌ಗೆ ಹೋಗಿದ್ದಿರಾ? ಇದು ಅನಿವಾರ್ಯವೇ?**

ಒಂದೂವರೆ ವರ್ಷ ದೆಹಲಿಯಲ್ಲಿ ಕೋಚಿಂಗ್ ಪಡೆದೆ. ಎಂಜಿನಿಯರಿಂಗ್ ಪದವಿ ಪಡೆದ ಕಾರಣ ಇತರ ವಿಷಯಗಳ ಬಗ್ಗೆ ನನಗೆ ತರಬೇತಿ ಅನಿವಾರ್ಯವಾಗಿತ್ತು. ಆದರೆ, ಕೋಚಿಂಗ್ ಎಲ್ಲರಿಗೂ ಅನಿವಾರ್ಯವಲ್ಲ. ನಾವು ಓದಿದ ಕ್ಷೇತ್ರಕ್ಕೂ ನಾಗರಿಕ ಸೇವಾ ಕ್ಷೇತ್ರಕ್ಕೂ ತುಂಬ ವ್ಯತ್ಯಾಸ ಇದ್ದರೆ ಅಂಥವರು ಕೋಚಿಂಗ್ ಪಡೆಯಬಹುದು.

- **ಎಷ್ಟು ಸಮಯದಿಂದ ಪರೀಕ್ಷೆಗೆ ಸಿದ್ಧತೆ ಮಾಡಿದ್ದೀರಿ?**

ಆರು ವರ್ಷದಿಂದ ನಿರಂತರ ಸಿದ್ಧತೆ ಮಾಡಿಕೊಂಡಿದ್ದೆ. ಓದು, ಪುನರ್ ಮನನ, ಪರೀಕ್ಷೆ ಬಿಟ್ಟರೆ ಬೇರೆ ಯಾವುದೇ ಸಂಗತಿಗೆ ತಲೆ ಕೆಡಿಸಿಕೊಳ್ಳಲಿಲ್ಲ. ಪದವಿ ಮುಗಿದ ಮೇಲೆ ಒಮ್ಮೆಲೇ ಎಲ್ಲವನ್ನೂ ಓದಬೇಕು ಎಂದು ಕುಳಿತುಕೊಳ್ಳುವುದು ನನ್ನ ರೂಢಿಯಲ್ಲ. ಹಾಗಾಗಿ ಪಿಯುಸಿ ಮುಗಿದ ದಿನದಿಂದಲೇ ಸಿದ್ಧತೆ ಅಗತ್ಯ.

- **ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ?**

ಏನು ಓದಬೇಕು ಎನ್ನುವುದಕ್ಕಿಂತ ಏನು ಓದಬಾರದು ಎಂದು ತಿಳಿಯುವುದು ಮುಖ್ಯ. ಬಹಳ ಜನ ಮೂಟೆಗಟ್ಟಲೇ ಪುಸ್ತಕಗಳನ್ನು ಓದುತ್ತಾರೆ. ಆದರೆ, ಈ ಪರೀಕ್ಷೆಗೆ ಸರಿಯಾದ ಪುಸ್ತಕಗಳ ಆಯ್ಕೆ ಅಗತ್ಯ.

ನಿಮಗಿದು ಗೊತ್ತೇ?

ವೈಟ್‌ಹೌಸ್ ಏಕೆ ಬೆಳ್ಳಗಿದೆ?

ವೈಟ್‌ಹೌಸ್– ಇದು ಅಮೆರಿಕ ಅಧ್ಯಕ್ಷರ ಅಧಿಕೃತ ನಿವಾಸ. ವಾಷಿಂಗ್‌ಟನ್‌ನಲ್ಲಿದೆ. ಈ ಕಟ್ಟಡವನ್ನು ಕಟ್ಟಿದಾಗ ಇದು ಬೆಳ್ಳಗಿರಲಿಲ್ಲ. ಇದನ್ನು ವೈಟ್ ಹೌಸ್ ಎಂದು ಕರೆಯುತ್ತಿರಲಿಲ್ಲ.

ಈ ಕಟ್ಟಡದ ವಿನ್ಯಾಸವನ್ನು ಐರ್ಲೆಂಡ್‌ನ ಜೇಮ್ಸ್ ಹೋಬನ್(James Hoban) ಎಂಬ ಕಟ್ಟಡ ವಿನ್ಯಾಸಕಾರ ರಚಿಸಿದ್ದಾರೆ. 1792ರಲ್ಲಿ ಅಕ್ಟೋಬರ್ 13ರಂದು ಈ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ಹಾಕಲಾಯಿತು. 1800ರಲ್ಲಿ ಕಟ್ಟಡ ನಿರ್ಮಾಣ ಪೂರ್ಣಗೊಂಡಿತು. ಈ ಕಟ್ಟಡವನ್ನು ಮೊದಲು ಬೂದು ಬಣ್ಣದ ಕಲ್ಲಿನಲ್ಲಿ ಕಟ್ಟಲಾಗಿತ್ತು. ಆಗಿನಿಂದಲೂ ಇದು ಅಮೆರಿಕ ಅಧ್ಯಕ್ಷರ ನಿವಾಸವಾಗಿದೆ. 1814 ರ ಆಗಸ್ಟ್ 24 ರಂದು, ಯುದ್ಧದಲ್ಲಿ ಬ್ರಿಟಿಷ್ ಸೈನಿಕರು ಈ ಕಟ್ಟಡವನ್ನು ಸುಟ್ಟು ಹಾಕಿದರು. ಈ ಕಟ್ಟಡದ ಸ್ವಲ್ಪ ಭಾಗ ಮಾತ್ರ ಹಾಗೆಯೇ ಉಳಿದಿತ್ತು. ಅನಂತರ ಈ ಕಟ್ಟಡವನ್ನು ಪುನರ್‌ನಿರ್ಮಿಸಲಾಯಿತು. 1817ರಲ್ಲಿ ಪುನರ್‌ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಬೆಂಕಿ ಹಾಗೂ ಮಸಿಯ ಕಲೆಗಳನ್ನು ತೆಗೆದುಹಾಕುವುದಕ್ಕಾಗಿ, ಈ ಕಟ್ಟಡದ ಗೋಡೆಗಳಿಗೆ ಬಿಳಿ ಬಣ್ಣವನ್ನು ಹಚ್ಚಲಾಯಿತು. ಆಗಿನಿಂದ ಈ ಕಟ್ಟಡಕ್ಕೆ 'ವೈಟ್ ಹೌಸ್' ಎಂದು ಹೆಸರು ಬಂತು. ಆದರೆ 1902ರ ವರೆಗೆ ಈ ಹೆಸರು ಅಧಿಕೃತವಾಗಿ ಮನ್ನಣೆ ಪಡೆದಿರಲಿಲ್ಲ. ಅಧ್ಯಕ್ಷ ಥಿಯೋಡರ್ ರೂಸ್‌ವೆಲ್ಟ್, 'ವೈಟ್ ಹೌಸ್' ಎಂಬ ಹೆಸರಿಗೆ ಅಧಿಕೃತವಾಗಿ ಅನುಮೋದನೆ ನೀಡಿದರು.

ಪ್ರಜಾವಾಣಿ ಉದ್ಯೋಗ ವಾರ್ತೆ

ಐಟಿಐ ಪಾಸ್; ಎನ್‌ಪಿಸಿಎಲ್‌ನಲ್ಲಿ ಅಪ್ರೆಂಟಿಸ್

ನ್ಯೂಕ್ಲಿಯರ್ ಪವರ್ ಕಾರ್ಪೊರೇಶನ್ ಆಫ್ ಇಂಡಿಯಾ (ಎನ್‌ಪಿಸಿಐಎಲ್)ದಲ್ಲಿ ಖಾಲಿ ಇರುವ ಟ್ರೈನಿ ಅಪ್ರೆಂಟಿಸ್ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ವಿವರ: ಐಟಿಐ ವಿಭಾಗದಲ್ಲಿ ಟ್ರೈನಿ ಅಪ್ರೆಂಟಿಸ್‌ಗಳನ್ನು ನೇಮಕ
ಹುದ್ದೆಗಳ ಸಂಖ್ಯೆ: 177
ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಐಟಿಐಯಲ್ಲಿ ಉತ್ತೀರ್ಣರಾಗಿರಬೇಕು.
ವಯಸ್ಸು: ಜುಲೈ 31, 2022ಕ್ಕೆ ಅನ್ವಯವಾಗುವಂತೆ 24 ವರ್ಷ ಮೀರಿರಬಾರದು.
ವಯೋಮಿತಿ ಸಡಿಲಿಕೆ: ಒಬಿಸಿ, 2ಎ, 2ಬಿ, 3ಎ ಹಾಗೂ 3ಬಿ ಅವರಿಗೆ 3 ವರ್ಷ, ಎಸ್ಸಿ, ಎಸ್ಟಿ ಅಭ್ಯರ್ಥಿಗಳಿಗೆ 5 ವರ್ಷ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇದೆ.
ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ (ಕಂಪ್ಯೂಟರ್ ಟೆಸ್ಟ್) ಮೂಲಕ ನೇಮಕಾತಿ ನಡೆಯಲಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-07-2022
ವೆಬ್‌ಸೈಟ್: https://www.npcil.nic.in/index.aspx ನಲ್ಲಿ ಅಥವಾ NATS ಪೋರ್ಟಲ್ ಮೂಲಕ ಸಲ್ಲಿಸಬಹುದು.

ಐಡಿಬಿಐ: 1044 ಕಾರ್ಯನಿರ್ವಾಹಕ ಹುದ್ದೆಗಳಿಗೆ ಅರ್ಜಿ ಆಹ್ವಾನ

ಭಾರತದಾದ್ಯಂತ ವಿಸ್ತೃತ ಶಾಖೆಗಳನ್ನು ಹೊಂದಿರುವ ಪ್ರಮುಖ ಖಾಸಗಿ ವಲಯದ ಐಡಿಬಿಐ ಬ್ಯಾಂಕ್ ತನ್ನ ಶಾಖೆಗಳು ಮತ್ತು ಕಚೇರಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಹುದ್ದೆಗಳು: ಕಾರ್ಯನಿರ್ವಾಹಕರು (ಗುತ್ತಿಗೆ ಆಧಾರದ ಮೇಲೆ) ಹುದ್ದೆಗಳು -1044
ವಿದ್ಯಾರ್ಹತೆ: ವಿದ್ಯಾರ್ಹತೆ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ ಅಥವಾ ಯಾವುದೇ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು.
ವಯಸ್ಸು ಮತ್ತು ವಯೋಮಿತಿ: ಕನಿಷ್ಠ 20 ವರ್ಷಗಳು, ಗರಿಷ್ಠ 25 ವರ್ಷಗಳು, ಸರ್ಕಾರಿ ನಿಯಮದಂತೆ ಗರಿಷ್ಠ ವಯಸ್ಸಿನ ಮಿತಿಯ ಸಡಿಲಿಕೆಗಳು ಅನ್ವಯಿಸುತ್ತವೆ.

3 ವರ್ಷಗಳ ಗುತ್ತಿಗೆ ಸೇವೆಯ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ, ಬ್ಯಾಂಕಿನಿಂದ ನಡೆಸುವ ಆಯ್ಕೆ ಪ್ರಕ್ರಿಯೆಯ ಮೂಲಕ ಬ್ಯಾಂಕಿನಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ನೇಮಕಗೊಳ್ಳಲು ಅರ್ಹರಾಗಿರುತ್ತಾರೆ.

ಆಯ್ಕೆ ವಿಧಾನ: ಆನ್‌ಲೈನ್ ಪರೀಕ್ಷೆ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು. 2 ಗಂಟೆ ಅವಧಿಯ 200 ಪ್ರಶ್ನೆಗಳ ಆಯ್ಕೆ ಪರೀಕ್ಷೆ ಜುಲೈನಲ್ಲಿ ನಡೆಯಲಿದೆ.
ಆನ್ ಲೈನ್ ನೋಂದಣಿ / ಶುಲ್ಕ ಪಾವತಿಯ ಕೊನೆಯ ದಿನಾಂಕ: 17-06-2022
ಹೆಚ್ಚಿನ ವಿವರಗಳಿಗೆ ಐಡಿಬಿಐ ಬ್ಯಾಂಕಿನ ವೆಬ್‌ಸೈಟ್: https://www.idbibank.in/idbi-bank-careers.aspx

ಪಠ್ಯ ಪರಿಷ್ಕರಣೆ ವಿರೋಧಿಸಿ ಕುಪ್ಪಳಿಯಿಂದ ತೀರ್ಥಹಳ್ಳಿಗೆ ಪಾದಯಾತ್ರೆ

ಸೌಹಾರ್ದ ನಡಿಗೆಯಲ್ಲಿ ಸಮಾನ ಮನಸ್ಕರ ಹೆಜ್ಜೆ

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯ ಕವಿಶೈಲದಲ್ಲಿ ಬುಧವಾರ ಸಂಗೀತ ನಿರ್ದೇಶಕ ಹಂಸಲೇಖ ಅವರು ರಾಷ್ಟ್ರಕವಿ ಕುವೆಂಪು ಸಮಾಧಿಗೆ ಪುಷ್ಪನಮನ ಸಲ್ಲಿಸುವ ಮೂಲಕ 20 ಕಿ.ಮೀ. ಪಾದಯಾತ್ರೆಗೆ ಚಾಲನೆ ನೀಡಿದರು

ತೀರ್ಥಹಳ್ಳಿ (ಶಿವಮೊಗ್ಗ ಜಿಲ್ಲೆ): ರೋಹಿತ್ ಚಕ್ರತೀರ್ಥ ನೇತೃತ್ವದ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕ ಹಿಂದಕ್ಕೆ ಪಡೆಯುವಂತೆ ಅಗ್ರಹಿಸಿ, ನಾಡಗೀತೆಗೆ ಅಪಮಾನ ಆಗಿರುವುದನ್ನು ಖಂಡಿಸಿ ಬುಧವಾರ ಕುಪ್ಪಳಿಯ ಕವಿಶೈಲದಲ್ಲಿನ ರಾಷ್ಟ್ರಕವಿ ಕುವೆಂಪು ಸಮಾಧಿ ಸ್ಥಳದಿಂದ ತೀರ್ಥಹಳ್ಳಿಯವರೆಗೆ ಆಯೋಜಿಸಿದ್ದ ಸಾಂಸ್ಕೃತಿಕ ಸೌಹಾರ್ದ ನಡಿಗೆಯಲ್ಲಿ ಸಮಾನ ಮನಸ್ಕ ಗೆಳೆಯರು ಹೆಜ್ಜೆ ಹಾಕಿದರು.

ಕುವೆಂಪು ವಿಶ್ವಮಾನವ ವೇದಿಕೆಯು, ಮಾಜಿ ಸಚಿವ ಕಿಮ್ಮನೆ ರತ್ನಾಕರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಈ ನಡಿಗೆಯಲ್ಲಿ ಪಕ್ಷಾತೀತವಾಗಿ ಪಾಲ್ಗೊಂಡ ಕನ್ನಡದ ಮನಸ್ಸುಗಳು ಕನ್ನಡ ಬಾವುಟ ಹಿಡಿದು ಸಾಗಿ, ಪಠ್ಯಕ್ರಮ ಪರಿಷ್ಕರಣೆಯ ಸರ್ಕಾರದ ನಿಲುವಿಗೆ ಮೌನ ಪ್ರತಿರೋಧ ತೋರಿದವು. ಕನ್ನಡದ ಅಸ್ಮಿತೆಗೆ ಧಕ್ಕೆ ತರುವ ಸಂಗತಿ ಹೀಗೆಯೇ ಮುಂದುವರಿದರೆ ಗೋಕಾಕ್ ಚಳವಳಿ ಮಾದರಿಯ ಮತ್ತೊಂದು ಹೋರಾಟಕ್ಕೆ ಸಜ್ಜಾಗುವ ಸಂದೇಶ ಸಾರಿದರು.

ಹಂಸಲೇಖ ಚಾಲನೆ: ಕುವೆಂಪು ಸಮಾಧಿಗೆ ಪುಷ್ಪಾರ್ಚನೆ ಮಾಡಿದ ಸಂಗೀತ ನಿರ್ದೇಶಕ ಹಂಸಲೇಖ ಬೆಳಿಗ್ಗೆ 7 ಗಂಟೆಗೆ ಪಾದಯಾತ್ರೆಗೆ ಚಾಲನೆ ನೀಡಿದರು. ಅಲ್ಲಿಂದ 20 ಕಿ.ಮೀ ದೂರದಲ್ಲಿನ ತೀರ್ಥಹಳ್ಳಿ ಪಟ್ಟಣಕ್ಕೆ ಮಧ್ಯಾಹ್ನ 12.30ಕ್ಕೆ ಪಾದಯಾತ್ರಿಗಳು ತಲುಪಿದರು. ಕಿಮ್ಮನೆ ರತ್ನಾಕರ, ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ, ಸಾಹಿತಿಗಳಾದ ಎಸ್.ಜಿ. ಸಿದ್ಧರಾಮಯ್ಯ, ಪ್ರೊ.ರಾಜೇಂದ್ರ ಚೆನ್ನಿ, ಶಿಕ್ಷಣ ತಜ್ಞ ಡಾ.ನಿರಂಜನಾರಾಧ್ಯ, ಪತ್ರಕರ್ತ ದಿನೇಶ ಅಮಿನ್ ಮಟ್ಟು, ದಲಿತ ಸಂಘರ್ಷ ಸಮಿತಿ ಸಂಚಾಲಕ ಗುರುಮೂರ್ತಿ, ರೈತ ಮುಖಂಡ ಕೆ.ಟಿ.ಗಂಗಾಧರ್, ವಕೀಲ ಕೆ.ಪಿ. ಶ್ರೀಪಾಲ್ ಅವರೊಂದಿಗೆ ನೂರಾರು ಮಂದಿ ಭಾಗವಹಿಸಿದರು. ಮಾರ್ಗ ಮಧ್ಯದಲ್ಲಿನ ದೇವಂಗಿ ಗ್ರಾಮದ ಬಳಿ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಧ್ಯಾಹ್ನ ತೀರ್ಥಹಳ್ಳಿ ಮುಖ್ಯಬಸ್ ನಿಲ್ದಾಣದ ಬಳಿ ಪಾದಯಾತ್ರೆ ತಂಡ ಸೇರಿಕೊಂಡರು. ಈ ಸಂದರ್ಭ ಭಾರಿ ಸಂಖ್ಯೆಯಲ್ಲಿದ್ದ ಅವರ ಬೆಂಬಲಿಗರೂ ಹೆಜ್ಜೆ ಹಾಕಿದರು. ಸಂತೆ ಮೈದಾನದಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು. ಶಾಸಕ ಕೆ.ಆರ್. ರಮೇಶಕುಮಾರ್, ವಿಧಾನಪರಿಷತ್ ಸದಸ್ಯ ನಜೀರ್ ಅಹಮದ್, ಮಾಜಿ ಶಾಸಕ ವೈ.ಎಸ್.ವಿ.ದತ್ತ, ಸಾಹಿತಿ ನಾ.ಡಿಸೋಜಾ, ರೈತ ಸಂಘದ ರಾಜ್ಯಘಟಕದ ಅಧ್ಯಕ್ಷ ಎಚ್.ಆರ್. ಬಸವರಾಜಪ್ಪ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್.ಸುಂದರೇಶ ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬೆಳಗಿದ ವಿಶ್ವಮಾನವ ಜ್ಯೋತಿ: ಮಲೆನಾಡು ಸಂಘರ್ಷ ಸಮಿತಿಯ ನೆಂಪೆ ದೇವರಾಜ್ ನೇತೃತ್ವದಲ್ಲಿ ಹೊರಟ ವಿಶ್ವ ಮಾನವ ಜ್ಯೋತಿಯನ್ನು ರೈತ ಮುಖಂಡ ಕೆ.ಟಿ.ಗಂಗಾಧರ್ ಬೆಳಗಿ ಹೋರಾಟದ ನಿರಂತರತೆಯ ಸೂಚನೆ ನೀಡಿದರು. ಕುಪ್ಪಳಿಯಿಂದ ಹೊರಟ ಜ್ಯೋತಿ ಜೂನ್ 17ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ತಲುಪಲಿದೆ.

ಗೋಕಾಕ್ ಮಾದರಿ ಚಳವಳಿ: ಸಿದ್ದರಾಮಯ್ಯ ಗುಡುಗು

‘ರಾಜ್ಯ ಸರ್ಕಾರ ರೋಹಿತ್ ಚಕ್ರತೀರ್ಥ ಸಮಿತಿ ವಿಸರ್ಜಿಸಿದೆ. ಆದರೆ, ಆ ಸಮಿತಿ ರೂಪಿಸಿದ್ದ ಪಠ್ಯಪುಸ್ತಕ ತಿರಸ್ಕರಿಸಿಲ್ಲ. ಹೀಗಾಗಿ ಅದರ ವಿರುದ್ಧ ಗೋಕಾಕ್ ಚಳವಳಿ ಮಾದರಿಯಲ್ಲಿ ರಾಜ್ಯದಾದ್ಯಂತ ಪಕ್ಷಾತೀತ ಹೋರಾಟ ಕೈಗೆತ್ತಿಕೊಳ್ಳುವುದು ಅನಿವಾರ್ಯ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗುಡುಗಿದರು.

ಪಾದಯಾತ್ರೆ ಸಮಾರೋಪದಲ್ಲಿ ಮಾತನಾಡಿದ ಅವರು, ‘ಪಠ್ಯಕ್ರಮ ಪರಿಷ್ಕರಣೆ ಹೆಸರಲ್ಲಿ ಬಸವಣ್ಣ, ಕುವೆಂಪು, ನಾರಾಯಣ ಗುರು, ಅಂಬೇಡ್ಕರ್ ಅವರ ಚರಿತ್ರೆ ತಿರುಚುವ ಕೆಲಸ ಆಗಿದೆ. ಇದೊಂದು ಸಾಂಸ್ಕೃತಿಕ ಭಯೋತ್ಪಾದನೆ. ಕನ್ನಡದ ಅಸ್ಮಿತೆಗೆ ಧಕ್ಕೆ ಬಂದಿರುವಾಗ ಕನ್ನಡದ ಮನಸ್ಸುಗಳು ಒಂದಾಗಿ ಹೋರಾಡಬೇಕಿದೆ’ ಎಂದರು.

‘ಬಸವಣ್ಣ ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಮನುಷ್ಯತ್ವದ ಧರ್ಮ ಹುಟ್ಟುಹಾಕಿದರು. ಅದೇ ಲಿಂಗಾಯತ ಧರ್ಮ. ಆದರೆ, ಬಸವಣ್ಣನ ಅನುಯಾಯಿಗಳನ್ನು ಬಿಜೆಪಿಯವರು ಮತ್ತೆ ವೈದಿಕ ಧರ್ಮದ ಕಡೆ ಸೆಳೆಯುತ್ತಿದ್ದಾರೆ’ ಎಂದು ಆರೋಪಿಸಿದರು.

‘ಕುವೆಂಪುಗೆ ಅಪಮಾನ ಮಾಡಿದ್ದು ಸಿದ್ದರಾಮಯ್ಯ’

ಶಿವಮೊಗ್ಗ: ‘ರಾಷ್ಟ್ರಕವಿ ಕುವೆಂಪು ಅವರಿಗೆ ಅವಮಾನ ಮಾಡಿದ್ದು ಸಿದ್ದರಾಮಯ್ಯ. ಹೀಗಾಗಿ ಮೊದಲು ಅವರು ವಿಧಾನಸಭೆ ವಿರೋಧ ಪಕ್ಷದ ನಾಯಕ ಸ್ಥಾನದಿಂದ ಕೆಳಗಿಳಿಯಲಿ’ ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಆಗ್ರಹಿಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕುವೆಂಪು ಅವರ ನಾಡಗೀತೆ ತಿರುಚಿದ್ದು ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ. ಅವರು ಆಗ ಆರೋಪಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ತಿರುಚಿದ ನಾಡಗೀತೆಯನ್ನು ‘ಫಾರ್ವರ್ಡ್’ ಮಾಡಿದ್ದ ರೋಹಿತ್ ಚಕ್ರತೀರ್ಥರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಅದಕ್ಕೂ ಅವರದ್ದೇ ಸರ್ಕಾರ ‘ಬಿ’ ರಿಪೋರ್ಟ್ ಕೊಟ್ಟಿತ್ತು. ಹೀಗಾಗಿ, ನೈತಿಕತೆ ಇದ್ದರೆ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ಮೊದಲು ರಾಜೀನಾಮೆ ನೀಡಿ ಮಾತಾಡಲಿ’ ಎಂದು ಸವಾಲು ಹಾಕಿದರು.

‘ಕುವೆಂಪು ವಿರಚಿತ ರಾಮಾಯಣ ದರ್ಶನಂ ಕೃತಿಯಲ್ಲಿನ ಪಾಠ ತೆಗೆದು ಹಾಕಿ ಅವಮಾನ ಮಾಡಿದ್ದು ಅವರೇ (ಸಿದ್ದರಾಮಯ್ಯ). ಬರಗೂರು ರಾಮಚಂದ್ರಪ್ಪ ಸಮಿತಿಯ ಅವಧಿಯ ಪರಿಷ್ಕರಣೆ ವಿಚಾರವನ್ನು ನಾವು ಸಾರ್ವಜನಿಕರೆದುರು ಪ್ರಸ್ತಾಪಿಸುತ್ತೇವೆ ಎಂದಾಗ ಬೇಡದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ವೈಚಾರಿಕವಾಗಿ ಮಾತನಾಡಲು ಏನೂ ಇಲ್ಲ. ಹಾಗಾಗಿ ನಮ್ಮ ಬಗ್ಗೆ ಮಾತನಾಡುತ್ತಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಶೇ 74ರಷ್ಟು ಪಠ್ಯಪುಸ್ತಕ ವಿತರಣೆ ಪೂರ್ಣ’

‘ಈಗಾಗಲೇ ಶೇ 86ರಷ್ಟು ಪರಿಷ್ಕೃತ ಪಠಪುಸ್ತಕಗಳ ಮುದ್ರಣ ಕಾರ್ಯ ಪೂರ್ಣಗೊಂಡಿದ್ದು, ಶೇ 74ರಷ್ಟು ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ’ ಎಂದು ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

‘ಈ ವರ್ಷ ಪಠ್ಯಪುಸ್ತಕ ತ್ವರಿತ ವಿತರಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಉಕ್ರೇನ್– ರಷ್ಯಾ ನಡುವೆ ಯುದ್ಧ ನಡೆಯದಿದ್ದರೆ ಶೈಕ್ಷಣಿಕ ವರ್ಷದ ಮೊದಲ ದಿನದಿಂದಲೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಲಭ್ಯವಾಗುತ್ತಿತ್ತು. ಮುದ್ರಣ ಕಾಗದದ ಅಲಭ್ಯತೆಯಿಂದ ವಿಳಂಬವಾಯಿತು. ಇನ್ನುಳಿದ ಶೇ 26ರಷ್ಟು ಪಠ್ಯಪುಸ್ತಕಗಳ ವಿತರಣೆಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಅವತ್ತು ಗೋಕಾಕ್ ಚಳವಳಿ ಇವತ್ತು ಕುಪ್ಪಳಿ ಕಹಳೆ: ಹಂಸಲೇಖ

‘ಕನ್ನಡದ ನಡ (ಸೊಂಟ) ಮುರಿಯುವ ನಡೆ ಕನ್ನಡ ನಾಡಿನಲ್ಲಿ ಶುರುವಾಗಿದೆ. ನಮ್ಮನ್ನು ಭಾಷಾಂಧರು ಅಂದರೂ ಸರಿ. ಈ ನಡೆಯ ವಿರುದ್ಧ ತಮಿಳರನ್ನು ಅನುಸರಿಸಿ ಹೋರಾಟ ಸಂಘಟಿಸಬೇಕಿದೆ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಅವರು ಹೇಳಿದರು.

ಕುಪ್ಪಳಿಯ ಕವಿಶೈಲದಲ್ಲಿ ಬುಧವಾರ ಪಾದಯಾತ್ರೆಗೆ ಚಾಲನೆ ನೀಡಿದ ಅವರು, ‘ತಮಿಳುನಾಡಿನಲ್ಲಿ ಅವರ ಭಾಷೆಗೆ ಕೊಂಚ ಎಡವಟ್ಟಾದರೂ ಆಳುವವರು, ವಿರೋಧದವರೂ ಒಟ್ಟಾಗುತ್ತಾರೆ. ಇಲ್ಲಿಯೂ ನಮಗೀಗ ಪಕ್ಷ ಇಲ್ಲ. ಕವಿ ಪಕ್ಷ, ಕನ್ನಡ ಪಕ್ಷದ ಹೋರಾಟದ ಹಾದಿ ಇಲ್ಲಿಂದಲೇ ಶುರುವಾಗಿದೆ’ ಎಂದು ಹೇಳಿದರು.

‘ಬಸವ ಅಂದರೆ ಕನ್ನಡ. ಕುವೆಂಪು ಅಂದರೆ ಕನ್ನಡ. ಬಸವ ಅಂದರೆ ಕರುನಾಡು. ಪುಟ್ಟಪ್ಪ (ಕುವೆಂಪು) ಅಂದರೆ ಕರ್ನಾಟಕ. ಈ ಎರಡಕ್ಕೂ ಅಪಮಾನ ಆದ ಮೇಲೆ ನಾವು ಇಲ್ಲಿದ್ದು ಏನು ಮಾಡುವುದು’ ಎಂದು ಪ್ರಶ್ನಿಸಿದ ಅವರು, ‘ಅವತ್ತು ಗೋಕಾಕ್ ಚಳವಳಿ. ಇವತ್ತು ಕುಪ್ಪಳಿ ಕಹಳೆ. ಇದು ನಾಡಿನಾದ್ಯಂತ ಮೊಳಗಲಿದೆ’ ಎಂದು ಹೇಳಿದರು.

‘ನಮ್ಮ ನಾಡೇ ಒಂದು ಗೀತೆ. ನಮ್ಮ ನಾಡೇ ಒಂದು ಧ್ವಜ. ಅವೆರಡಕ್ಕೂ ಅಪಮಾನ ಆಗಿ ಕನ್ನಡಕ್ಕೆ ಕುತ್ತು ಬಂದ ಮೇಲೆ ಸುಮ್ಮನಿರುವುದು ಹೇಗೆ? ಕನ್ನಡಕ್ಕೆ ಮಹಾಮನೆ ಕಲ್ಯಾಣ. ಕವಿಶೈಲ ಗುರುಮನೆ. ಹೀಗಾಗಿ ಗುರುಮನೆಯಿಂದಲೇ ಹೋರಾಟದ ಕಹಳೆ ಊದುತ್ತಿದ್ದೇವೆ’ ಎಂದು ಹೇಳಿದರು.

ಪಠ್ಯ ಪುಸ್ತಕ ಪರಿಷ್ಕರಣೆ ವಿವಾದ– ಅಹೋರಾತ್ರಿ ಧರಣಿ

ಕಲಬುರಗಿ: ‘ಪಠ್ಯಪುಸ್ತಕ ಪರಿಷ್ಕರಣೆ ನೆಪದಲ್ಲಿ ಮಹನೀಯರ ಜೀವನ ಚರಿತ್ರೆ ತಿರುಚಲಾಗಿದ್ದು, ರಾಜ್ಯದಾದ್ಯಂತ ವಿರೋಧ ವ್ಯಕ್ತವಾಗಿದೆ. ಸ್ವಾಭಿಮಾನವಿದ್ದರೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು’ ಎಂದು ಕೆಪಿಸಿಸಿ ವಕ್ತಾರ, ಶಾಸಕ ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣೆ ಸಮಿತಿಯು ಕೈಗೊಂಡ ಪರಿಷ್ಕರಣೆ ಕ್ರಮವನ್ನು ವಿರೋಧಿಸಿ ಬುಧವಾರ ಕರ್ನಾಟಕ ಅಸ್ಮಿತೆ ಆಂದೋಲನ ಸಮಿತಿಯು ಬುಧವಾರ ಹಮ್ಮಿಕೊಂಡಿದ್ದ ಅಹೋರಾತ್ರಿ ಧರಣಿಯಲ್ಲಿ ಅವರು ಮಾತನಾಡಿದರು.

‘ಪಠ್ಯಪುಸ್ತಕಗಳ ಪರಿಷ್ಕರಣೆಯನ್ನು ವಿರೋಧಿಸಿ ನಾಡಿನ ಮಠಾಧೀಶರು, ಪ್ರಗತಿಪರ ಚಿಂತಕರು, ಸಾಹಿತಿಗಳು, ಲೇಖಕರು, ಹಲವು ಸಮುದಾಯಗಳ ಮುಖಂಡರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಸರ್ಕಾರವು ತನ್ನ ಪಟ್ಟು ಕೈಬಿಟ್ಟು ಬಹು ಜನರ ಬೇಡಿಕೆಯಂತೆ ವಿದ್ಯಾರ್ಥಿಗಳಿಗೆ ಹಳೆಯ ಪುಸ್ತಕಗಳನ್ನೇ ವಿತರಿಸಬೇಕು’ ಎಂದು ಅವರು ಒತ್ತಾಯಿಸಿದರು.

ಶಾಸಕರಾದ ಡಾ. ಅಜಯ ಸಿಂಗ್, ಖನೀಜ್ ಫಾತಿಮಾ, ಕಾಂಗ್ರೆಸ್ ನಾಯಕರಾದ ಡಾ. ಶರಣಪ್ರಕಾಶ ಪಾಟೀಲ, ಬಿ.ಆರ್.ಪಾಟೀಲ, ಸಿಪಿಎಂ ನಾಯಕಿ ಕೆ.ನೀಲಾ ಮುಂತಾದವರು ಭಾಗವಹಿಸಿದ್ದರು.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ನಂ.4, 100 ಅಡಿ ರಿಂಗ್ ರೋಡ್, ಬನಶಂಕರಿ 3ನೇ ಹಂತ,
ಬೆಂಗಳೂರು–85 ದೂರವಾಣಿ : 080–26980100
ಫ್ಯಾಕ್ಸ್ : 080–26422377

ಸಂಖ್ಯೆ: DSERT/ADMN/OTM/2/2022-ADMN Date: 13.06.2022

ಟೆಂಡರ್ ಪ್ರಕಟಣೆ (ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು, ಇವರಿಂದ DSERT ಕಛೇರಿ, ಅತಿಥಿ ಗೃಹ ಹಾಗೂ ಸೆರಿಕ್ ಗ್ರಂಥಾಲಯಕ್ಕೆ ಅಗತ್ಯವಿರುವ ಕಾವಲುಗಾರರು, ಸ್ವಚ್ಛತೆಗಾರರು, ಪ್ಲಂಬರ್/ಎಲೆಕ್ಟ್ರಿಷಿಯನ್, ಡಿ–ಗ್ರೂಪ್ ಸಹಾಯಕರು, ಡೇಟಾ ಎಂಟ್ರಿ ಆಪರೇಟರ್‌ಗಳು ಮತ್ತು ವಾಹನ ಚಾಲಕರನ್ನು ಹೊರಗುತ್ತಿಗೆ ನೌಕರರನ್ನು ಒದಗಿಸುವ ಸಂಬಂಧ ಅರ್ಹ ಬಿಡ್‌ದಾರರಿಂದ ಇ–ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11.07.2022 ರಂದು ಸಂಜೆ 4:00 ಗಂಟೆಯುವರೆಗೆ. ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ನಿಂದ ಪಡೆಯಬಹುದು.

ಸಹಿ/– ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/909/ಆಕಾರ್/22–23

ಕೋವಿಡ್-19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

NAVODAYA VIDYALAYA SAMITI
(An autonomous organisation of Ministry of Education, Govt.of India) Regional Office, Hyderabad
NOTIFICATION
Engagement of Counsellors on contract basis for the session 2022-23

Navodaya Vidyalaya Samiti intends to engage Counsellors on contract basis in Jawahar Navodaya Vidyalayas residential co-educational schools having classes VI To XII. Online applications are invited from the eligible candidates for contract engagement for the academic session 2022-23. For detailed notification please visit NVS RO Hyderabad website https: // navodaya.gov.in / nvs / ro / Hyderabad / en / home /

Remuneration - Monthly consolidated remuneration of Rs. 44,900/-.

Essential Qualification : (a) Educational Qualification
1.Master's Degree(M.A/M.Sc.)in Psychology from a recognized university or institution.
2.One year Diploma in guidance & counseling from a recognized university or institution.
(b) Experience At least one year experience in Guidance & Counselling / Counselling in educational institutes of central or State or UT Government /Autonomous Bodies of Central or State Government/Public Sector Undertaking.
Age : Above 28 years and below 50 years as **1st June 2022.**
Application Fee: Non refundable application Fee @ Rs. 500/- per candidate will be charged. However, SC / ST and PH candidates are exempted.
Last date for online application:
Online applications may be submitted by visiting the website of NVS Regional Office Hyderabad https:// navodaya. gov.in / nvs / ro / Hyderabad / en / home /from
16th June 2022 to 25th June 2022.
NVS may reject candidature if it is found that candidate has applied for more than one Regions, even after engagement.
Note: Only short listed candidates will be called for Personal Talk.
Dt: 16.06.2022 Sd/- DEPUTY COMMISSIONER

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ
ನಂ.1 ತುಂಗಭದ್ರಾ ಜಲಾಶಯ ವಿಭಾಗ ಮುನಿರಾಬಾದ್
Mail ID-trdmrb@gmail.comPhone No: 08539-270306

Bid No: EE/KNNL No.1 TRD/DRIP PKG-3/2021-22/1833 Date:03.01.2022
Bid No: EE/KNNL No.1 TRD/DRIP PKG-3/2021-22/180 Call-2 Date:20.04.2022
Bid No: EE/KNNL No.1 TRD/DRIP PKG-3/2022-23/616 Call-3 Date:13.06.2022

ಅಲ್ಪಾವಧಿ ಟೆಂಡರ್ ಪ್ರಕಟಣೆ 3ನೇ ಕರೆ
(ಇ–ಪ್ರಕ್ಯೂರಮೆಂಟ್ ಮುಖಾಂತರ)

ಈ ವಿಭಾಗದ ಅಡಿಯಲ್ಲಿ ಬರುವ ಮುಖ್ಯ ಕಾಮಗಾರಿ ಉಪ ವಿಭಾಗ, ಮುನಿರಾಬಾದ್ ವ್ಯಾಪ್ತಿಯಲ್ಲಿ ಬರುವ ವಿಜಯನಗರ ಜಿಲ್ಲೆಯ ತುಂಗಭದ್ರಾ ಆಣೆಕಟ್ಟಿನ ಕಾಮಗಾರಿಯನ್ನು ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ **“Improvements to Electrical system and Fire Extinguisher Arrangements at Tungabhadra Dam Left side under World Bank Aided DRIP Phase-II Programme (Package-III)”.** ಕಾಮಗಾರಿಯ ಟೆಂಡರ್‌ನ್ನು ದ್ವೀ–ಲಕೋಟೆಯ ಪದ್ಧತಿಯಲ್ಲಿ ಫಾರಂ–65 ಮತ್ತು 66 ನಿಯಮಾವಳಿಗಳಂತೆ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಇವರ ಪರವಾಗಿ ಕರೆಯಲಾಗಿದೆ. ಪ್ಯಾಕೇಜ್–3 ಟೆಂಡರ್‌ಗಿಟ್ಟ ಮೊತ್ತ ರೂ. **202.73 Lakhs,** ಗಳಿಗೆ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **23.06.2022** ರಂದು ಮಧ್ಯಾಹ್ನ **4:00** ಹಾಗೂ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **24.06.2022** ರಂದು ಮಧ್ಯಾಹ್ನ **4:30** ಗಂಟೆಗೆ. ಸದರಿ ಕಾಮಗಾರಿಯ ಪ್ರೀಬಿಡ್ ಸಭೆಯನ್ನು ದಿನಾಂಕ: **20.06.2022** ರಂದು ಬೆಳಿಗ್ಗೆ **11.00** ಗಂಟೆಗೆ ಮುಖ್ಯ ಅಭಿಯಂತರರು, ಕನೀನಿನಿ, ನೀರಾವರಿ ಕೇಂದ್ರ ವಲಯ ಮುನಿರಾಬಾದ್ ರವರ ಕಛೇರಿಯಲ್ಲಿ ನಿಗಧಿಪಡಿಸಲಾಗಿದೆ. ವಿವರಗಳನ್ನು http://www.eproc.karnataka.gov.in ಜಾಲದಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳು ಬೇಕಾದಲ್ಲಿ trdmrb@gmail.com ಜಾಲದಲ್ಲಿ ಮತ್ತು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಕೆಲಸದ ದಿನಗಳಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಕನೀನಿನಿ,ನಂ.1 ತುಂಗಭದ್ರಾ ಜಲಾಶಯ ವಿಭಾಗ
ಮುನಿರಾಬಾದ್

ವಾ.ಸಾ.ಇ/ಕೊಪ್ಪಳ/154/2022–23/ದೇಶಪಾಂಡೆ ಪಬ್ಲಿಸಿಟಿ

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–52
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/LAO/15/2016-17 ದಿನಾಂಕ : 15.06.2022

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ ಚಿಕ್ಕಗಟ್ಟಿಗನಬ್ಬೆ ಗ್ರಾಮದ ಸ.ನಂ.32/1ಎ ರಲ್ಲಿ 2ಎ–13 ಗಂಟೆ, ಸ.ನಂ.33/1(ಭಾ)ರಲ್ಲಿ 0–09ಗುಂಟೆ, ಸ.ನಂ.33/2ರಲ್ಲಿ 0–08ಗುಂಟೆ, ಸ.ನಂ.34/1 ರಲ್ಲಿ 0–03ಗುಂಟೆ, ಸ.ನಂ.34/2ರಲ್ಲಿ 1ಎ–08ಗುಂಟೆ, ಸ.ನಂ.34/3ರಲ್ಲಿ 0–02ಗುಂಟೆ, ಸ.ನಂ. 34/4ರಲ್ಲಿ 0–02ಗುಂಟೆ, ಸ.ನಂ.35ರಲ್ಲಿ 2ಎ–37ಗುಂಟೆ, ಸ.ನಂ.40/2ಎರಲ್ಲಿ 0–31ಗುಂಟೆ ಮತ್ತು 40/2ಬಿರಲ್ಲಿ 0–34ಗುಂಟೆ 33/1ರಲ್ಲಿ 0–27ಗುಂಟೆ ಒಟ್ಟು 13ಎ–25¾ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ದಿನಾಂಕ: 31.03.2018ರಲ್ಲಿ ನೀಡಲಾಗಿರುವ ತಾತ್ಕಾಲಿಕ ಅನುಮೋದನೆಯನ್ನು ದಿನಾಂಕ: 13.10.2020 ಈ ಕಛೇರಿ ಆದೇಶದಲ್ಲಿ ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ತಾತ್ಕಾಲಿಕವಾಗಿ ವಜಾಗೊಳಿಸಲಾಗಿತ್ತು.

ದಿನಾಂಕ:20.04.2022ರ ಸಾರ್ವಜನಿಕ ಪ್ರಕಟಣೆಯಲ್ಲಿ ಪ್ರಚುರಪಡಿಸಿದಂತೆ ಅರ್ಜಿದಾರರಾದ ಮೆ:ಎಸ್.ಎಲ್. ರೆಸಿಡೆನ್ಸಿಯಲ್ ಲೇಔಟ್ ಪ್ರೈಲಿ. ಇವರು ಅಂತಿಮ ವಿನ್ಯಾಸ ಅನುಮೋದನೆ ಪತ್ರವು ನಕಲಿಯಾಗಿ ಸೃಷ್ಟಿಸಿರುವ ಬಗ್ಗೆ ಸದರಿ ವಸತಿ ವಿನ್ಯಾಸದಲ್ಲಿ ಯಾವುದೇ ನಿವೇಶನಗಳನ್ನು ಖರೀದಿಸಬಾರದೆಂದು ಸಹ ಸಾರ್ವಜನಿಕರ ಗಮನಕ್ಕೆ ತರಲಾಗಿತ್ತು.

ಅರ್ಜಿದಾರರಾದ ಮೆ:ಎಸ್.ಎಲ್.ರೆಸಿಡೆನ್ಸಿಯಲ್ ಲೇಔಟ್ ಪ್ರೈಲಿ. ಇವರು ಮೇಲ್ಕಂಡ ಪ್ರಕಟಣಗೆ ಉತ್ತರವಾಗಿ ದಿನಾಂಕ: 25.04.2022 ರಂದು ಪ್ರಾಧಿಕಾರಕ್ಕೆ ತಪ್ಪೊಪ್ಪಿಗೆ ಪತ್ರ ನೀಡಿ, ಈ ರೀತಿ ನಕಲು ಪತ್ರ ನಮ್ಮ ಗಮನಕ್ಕೆ ಬರದೆ ಆಗಿರುವ ಅಚಾತುರ್ಯಕ್ಕೆ ಕ್ಷಮೆ ಯಾಚಿಸಿರುತ್ತಾರೆ ಹಾಗು ಪೂರ್ಣ ವಿಸ್ತೀರ್ಣಕ್ಕೆ ಭೂ ಬದಲಾವಣೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ವಿನ್ಯಾಸವನ್ನು ರದ್ದುಪಡಿಸಬೇಕಾಗಿರುತ್ತದೆ.

ಹಾಗಾಗಿ ಪ್ರಾಧಿಕಾರದಿಂದ ಅನುಮೋದಿಸಲಾದ ತಾತ್ಕಾಲಿಕ ವಿನ್ಯಾಸದಲ್ಲಿನ ನಿವೇಶನಗಳನ್ನು ಒಂದು ವೇಳೆ ಸಾರ್ವಜನಿಕರು ಒಪ್ಪಂದ ಪತ್ರ/ಖರೀದಿ ಪತ್ರ ಮಾಡಿಕೊಂಡಿದ್ದಲ್ಲಿ ಈ ಪ್ರಾಧಿಕಾರವು ಯಾವುದೇ ಜವಾಬ್ದಾರಿಯಾಗಿರುವುದಿಲ್ಲ ಹಾಗೂ ಈ ವಿನ್ಯಾಸವನ್ನು ರದ್ದುಪಡಿಸಿದ ನಂತರ ಆಗುವ ಆಗು–ಹೋಗುಗಳಿಗೂ ಸಹ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲವೆಂದು ಒಂದು ವೇಳೆ ಈ ವಿನ್ಯಾಸವನ್ನು ರದ್ದುಪಡಿಸುವುದರಿಂದ ಸಾರ್ವಜನಿಕರಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಲಿಖಿತವಾಗಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 7 ದಿನಗಳೊಳಗಾಗಿ ಈ ಪ್ರಾಧಿಕಾರಕ್ಕೆ ಮಾಹಿತಿ ನೀಡತಕ್ಕದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಜಗದಾಳೆ ಅಡ್ವರ್ಟೈಸಿಂಗ್/906/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಛೇರಿ ಜಿಲ್ಲಾ ನಗರಾಭಿವೃದ್ಧಿ ಕೋಶ,
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

Phone:08262-239010 Email: dudc_ckg@yahoo.co.in
ಡಿಯುಡಿಸಿ(2)ಸಿಆರ್/11/2022–23 ದಿನಾಂಕ : 08.06.2022

॥ ಸಂಕ್ಷಿಪ್ತ ಅಧಿಸೂಚನೆ ॥

ಚಿಕ್ಕಮಗಳೂರು ಜಿಲ್ಲೆಯ ಬೀರೂರು ಪುರಸಭೆಯಲ್ಲಿ ಈ ಕೆಳಗಿನಂತೆ ಖಾಲಿ ಇರುವ ಲೋಡರ್ಸ್ ಮತ್ತು ಕ್ಲೀನರ್ಸ್ ಹುದ್ದೆಗಳನ್ನು ವಿಶೇಷ, ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ನಮೂನೆಯನ್ನು ಹಾಗೂ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು ಮತ್ತು ಸೂಚನೆಗಳ ವಿವರವನ್ನು ಅಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಪಡೆಯುವುದು, ಭರ್ತಿ ಮಾಡಿದ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ದಿನಾಂಕ:11.07.2022 ರೊಳಗೆ ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಕಚೇರಿಗೆ ಸಲ್ಲಿಸುವುದು.

ವಿವರ

ಕ್ರ ಸಂ	ಹುದ್ದೆಯ ವಿವರ	ಲೋಡರ್ಸ್ ಹುದ್ದೆಗಳ ಸಂಖ್ಯೆ	ಕ್ಲೀನರ್ಸ್ ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ
1	ಪುರಸಭೆ ಬೀರೂರು	8	2	17000–28950

(1) ಹುದ್ದೆಯ ವರ್ಗೀಕರಣ : ಲೋಡರ್ಸ್

ಕ್ರ ಸಂ	ವರ್ಗೀಕರಣದ ವಿವರ	ಇತರ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗ ವಿಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ಒಟ್ಟು
1	ಪರಿಶಿಷ್ಟ ಜಾತಿ	1	0	0	0	0	0	0	1
2	ಪರಿಶಿಷ್ಟ ಪಂಗಡ	1	0	0	0	0	0	0	1
3	ಪ್ರವರ್ಗ –1	1	0	0	0	0	0	0	1
4	ಪ್ರವರ್ಗ –2ಎ	1	0	0	0	0	0	0	1
5	ಪ್ರವರ್ಗ –2ಬಿ	0	0	0	0	0	0	0	0
6	ಪ್ರವರ್ಗ –3ಎ	0	0	0	0	0	0	0	0
7	ಪ್ರವರ್ಗ –3ಬಿ	0	0	0	0	0	0	0	0
8	ಸಾಮಾನ್ಯ ಅರ್ಹತೆ	1	1	1	1	0	0	0	4
	ಜುಮ್ಲಾ	5	1	1	1	0	0	0	8

(2) ಹುದ್ದೆಯ ವರ್ಗೀಕರಣ : ಕ್ಲೀನರ್

ಕ್ರ ಸಂ	ವರ್ಗೀಕರಣದ ವಿವರ	ಇತರ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಗ್ರಾಮೀಣ ಅಭ್ಯರ್ಥಿ	ಅಂಗ ವಿಕಲರು	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ಒಟ್ಟು
1	ಪರಿಶಿಷ್ಟ ಜಾತಿ	1	0	0	0	0	0	0	1
2	ಪರಿಶಿಷ್ಟ ಪಂಗಡ	0	0	0	0	0	0	0	0
3	ಪ್ರವರ್ಗ –1	0	0	0	0	0	0	0	0
4	ಪ್ರವರ್ಗ –2ಎ	0	0	0	0	0	0	0	0
5	ಪ್ರವರ್ಗ –2ಬಿ	0	0	0	0	0	0	0	0
6	ಪ್ರವರ್ಗ –3ಎ	0	0	0	0	0	0	0	0
7	ಪ್ರವರ್ಗ –3ಬಿ	0	0	0	0	0	0	0	0
8	ಸಾಮಾನ್ಯ ಅರ್ಹತೆ	1	0	0	0	0	0	0	1
	ಜುಮ್ಲಾ	2	0	0	0	0	0	0	2

ಸಾಮಾನ್ಯ ಷರತ್ತುಗಳು : (1) ವಯೋಮಿತಿ ಕನಿಷ್ಟ 18 ವರ್ಷ ಗರಿಷ್ಠ 55 ವರ್ಷ. (2) ವಿದ್ಯಾರ್ಹತೆ ಅನ್ವಯಿಸುವುದಿಲ್ಲ. (3) ಕನ್ನಡ ಮಾತನಾಡಲು ಗೊತ್ತಿರಬೇಕು (4) ಬೀರೂರು ಪುರಸಭೆಯಲ್ಲಿ ಪ್ರಸ್ತುತ ಲೋಡರ್ಸ್ ಮತ್ತು ಕ್ಲೀನರ್ಸ್ ಹುದ್ದೆಯಲ್ಲಿ ಕೆಲಸ ಮಾಡುತ್ತಿರುವ ಕ್ಷೇಮಾಭಿವೃದ್ಧಿ ದಿನಗೂಲಿ, ಗುತ್ತಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಹೊರಗುತ್ತಿಗೆ ಆಧಾರದ ಮೇಲೆ 02 ವರ್ಷಕ್ಕಿಂತ ಕಡಿಮೆ ಇಲ್ಲದೆ ಕೆಲಸ ನಿರ್ವಹಿಸುತ್ತಿರುವ ನೌಕರರು ಅರ್ಜಿ ಸಲ್ಲಿಸಲು ಅರ್ಹರಿದ್ದಾರೆ. ಹೆಚ್ಚಿನ ವಿವರವನ್ನು ಜಿಲ್ಲಾ ನಗರಾಭಿವೃದ್ಧಿ, ಕೋಶದಲ್ಲಿ, ಮತ್ತು ಆಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಡೆಯಬಹುದಾಗಿದೆ.

ಸಹಿ/–
ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

ತ್ರಿವೇಣಿ ಕೆಂಪೇಗೌಡ ಸರ್ಕಲ್ 4ಆಟ
ಅಭಿನಯ ಕೆ.ಜಿ.ರಸ್ತೆ 4ಆಟ (ಹಿಂದಿ)
ಮಾಗಡಿ ರಸ್ತೆ ವೀರೇಶ್ SCREEN 1
ಲಾಲ್‌ಬಾಗ್ ರಸ್ತೆ URVASHI
ರಾಜಾಜಿನಗರ ನವರಂಗ್

ಸದಾಶಿವನಗರ ಕಾವೇರಿ
ಎಂ.ಜಿ.ರಸ್ತೆ ಶಂಕರ್‌ನಾಗ್
ಸೇದಾನಗರ ಮುಕುಂದ
ಸಂಜಯನಗರ ವೈಭವ್
ಕಾಮಾಕ್ಷಿಪಾಳ್ಯ (2ಆಟ)
ಆವಲಹಳ್ಳಿ ವೆಂಕಟೇಶ್ವರ
ಗೌಡನಪಾಳ್ಯ ಶ್ರೀನಿವಾಸ
ಮಾಗಡಿರಸ್ತೆ(2ಆಟ) ಅಂಜನ್
ಹೊಂಗಸಂದ್ರ(2ಆಟ) ಬೃಂದ
ಆರ್.ಟಿ.ನಗರ(2ಆಟ) ರಾಧಾಕೃಷ್ಣ
ಜೆ.ಪಿ.ನಗರ ಸಿದ್ದೇಶ್ವರ
ಜೆ.ಪಿ.ನಗರ ರೇಣುಕಪ್ರಸನ್ನ
ಕೆಂಗೇರಿ ರಾಬಿನ್
ಕಮಲಾನಗರ ವೀರಭದ್ರೇಶ್ವರ
ಮಲ್ಲತ್ತಹಳ್ಳಿ ವಿಆರ್.ಸಿನಿಮಾಸ್
ಉಲ್ಲಾಳ ವಜ್ರೇಶ್ವರಿ
ಕದಿರೇನಹಳ್ಳಿ(2ಆಟ) ಮಹದೇಶ್ವರ
ಕೋಣನಕುಂಟೆ(2ಆಟ) ಮಾನಸ
ಕೆ.ಆರ್.ಪುರಂ ಕೃಷ್ಣ
ಗರುಡಾಚಾರ್‌ಪಾಳ್ಯ(3ಆಟ) ವಿ ಸಿನಿಮಾಸ್
ಮಲ್ಲೇಶ್ವರಂ
ಅಗರ ತಿರುಮಲ
ಮಾರತ್‌ಹಳ್ಳಿ ವಿನಾಯಕ
ಮಾರತ್‌ಹಳ್ಳಿ (2ಆಟ) ತುಳಸಿ
ದೊಮ್ಮಸಂದ್ರ ಬಾಲಾಜಿ
ಗೊಟ್ಟಿಗೆರೆ ಲಕ್ಷ್ಮಿ
ಸರ್ಜಾಪುರ(2ಆಟ) ರವಿ
ವಿದ್ಯಾಪೀಠ ಸರ್ಕಲ್ ಚಂದ್ರೋದಯ
ಉತ್ತರಹಳ್ಳಿ MUKTA A2 CINEMAS
ಚಿಕ್ಕಲಸಂದ್ರ(2ಆಟ) Balaji Cinemas : Multiplex
ಮತ್ತಿಕೆರೆ ಸ್ವಾಗತ್ ಮುರಳಿ
ಯಶವಂತಪುರ ಉಲ್ಲಾಸ್
ರಾಜಗೋಪಾಲನಗರ ಮಾರುತಿ
ಲಗ್ಗೆರೆ ಆಕಾಶ್
ಯಲಹಂಕ ಗಣೇಶ್
ಕೊಡಿಗೇಹಳ್ಳಿ ರಾಜ್‌ಮುರಳಿ
ಗೊಲ್ಲರಹಟ್ಟಿ ವೆಂಕಟೇಶ್ವರ
ಸುಂಕದಕಟ್ಟೆ ಮೋಹನ್
ನಾಗವಾರ ಪೃಥ್ವಿ
ಸಿಂಗಾಪುರ (2ಆಟ) ವೈನಿಧಿ
ಚಿಕ್ಕಬಾಣಾವರ ಅಶೋಕ
ವಿಜಯಪುರ ಗೌರಿಶಂಕರ
ವರ್ತೂರು (3ಆಟ) ವಿನಾಯಕ
PVR ORION | AURA FORUM | GT VAISHNAVI REGALIA MARKETCITY VR | UPTOWN VEGACITY SPIRIT | ARENA
INOX MANTRI CENTRAL SWAGATH GARUDA | RMZ YELAHANKA FORUM SBR HORIZON
Cinépolis ETA | SJR MEENAKSHI FUN | ORION EAST SHANTINIKETAN
GOPALAN ARCH | GRAND INNOVATION LEGACY SIGNATURE
ROCKLINE JALAHALLI
KINI CINEMAS SEEGEHALLI
INNOVATIVE MARATHHALLI
ಬೊಮ್ಮನಹಳ್ಳಿ ಕೃಷ್ಣ
ಹಾರೋಹಳ್ಳಿ ವಿನಾಯಕ
ಜಿಗಣಿ ನಂದೀಶ್ವರ
ತುಮಕೂರು ಮಾರುತಿ ಜೈಭಾರತ್ INOX
ತಿಪಟೂರು ಲಕ್ಷ್ಮಿ
ಕೋಲಾರ ನಾರಾಯಣಿ
ನೆಲಮಂಗಲ ರೂಪ
ಹೊಸಕೋಟೆ ಅಲಂಕಾರ್
ರಾಮನಗರ ಶಾನ್
ದೊಡ್ಡಬಳ್ಳಾಪುರ ಸೌಂದರ್ಯಮಹಲ್ ವೈಭವ್
ಚನ್ನಪಟ್ಟಣ ಶಿವಾನಂದ
ಕನಕಪುರ ಅರ್ಕಾವತಿ
ಮಧುಗಿರಿ ಶಾಂತಲಾ
ಮಾಗಡಿ ಬಾಲಾಜಿ
ಮಾಲೂರು ಬೆನಕ
ಚಿಕ್ಕಬಳ್ಳಾಪುರ ಬಾಲಾಜಿ
ಚಿಂತಾಮಣಿ ಅಂಜನಿ
ಮುಳಬಾಗಿಲು ವರದರಾಜ
ಬಂಗಾರುಪೇಟೆ ಬಾಲಚಂದ್ರ
ಶಿರಾ ಭಾಗ್ಯಲಕ್ಷ್ಮಿ
ಬಿಡದಿ ದೀಪಕ್
ಆನೇಕಲ್ ಅನ್ನಪೂರ್ಣೇಶ್ವರಿ
ಕುಣಿಗಲ್ ಪದ್ಮ ನೂತನ ಚಿತ್ರಮಂದಿರ
ತುರುವೇಕೆರೆ ಕೃಷ್ಣ
ಚಿಕ್ಕನಾಯಕನಹಳ್ಳಿ ಶ್ರೀನಿವಾಸ
ಹೆಸರಘಟ್ಟ ಎಸ್.ಎಲ್.ಎನ್
ಗೌರಿಬಿದನೂರು ಶಂಕರ್
ಪಾವಗಡ ಮಾರುತಿ
ಶಿಡ್ಲಘಟ್ಟ ಮಯೂರ
ಕಾಡುಗೋಡಿ ಶ್ರೀನಿವಾಸ
ಮೈಸೂರು ವುಡ್‌ಲ್ಯಾಂಡ್ಸ್ ಗಾಯತ್ರಿ DRC PVR FORUM GARUDA INOX VISION CINEMAS
ಕುಂಬಾರಕೊಪ್ಪಲು ಮಹದೇಶ್ವರ
ಮಂಡ್ಯ ಸಂಜಯ
ಹಾಸನ ಎಸ್.ಬಿ.ಜಿ
ಕೊಳ್ಳೇಗಾಲ ಕೃಷ್ಣ
ಚಾಮರಾಜನಗರ ಬಸವೇಶ್ವರ
ಚನ್ನರಾಯಪಟ್ಟಣ ಗಾಯತ್ರಿ
ಮದ್ದೂರು ಸಂಜಯ
ಮಳವಳ್ಳಿ ಮಹಾಲಕ್ಷ್ಮಿ
ಕೆ.ಆರ್.ನಗರ ವೆಂಕಟೇಶ್ವರ
ಕೆ.ಆರ್.ಪೇಟೆ ಕೆ.ಜಿ.ಬಿ
ಗುಂಡ್ಲುಪೇಟೆ ವೆಂಕಟೇಶ್ವರ
ಹೊಳೆನರಸೀಪುರ ಚೆನ್ನಾಂಬಿಕಾ
ಹುಣಸೂರು ಲೀಲಾ
ಪಿರಿಯಾಪಟ್ಟಣ ಶಾರದ
ಶನಿವಾರಸಂತೆ ಯಶಸ್ವಿನಿ
ಕುಶಾಲನಗರ ಕೂರ್ಗ್
ಸಿದ್ದಾಪುರ ವುಡ್‌ಲ್ಯಾಂಡ್ಸ್
ನಂಜನಗೂಡು ಶಾರದ
ಟಿ.ನರಸೀಪುರ ವಿಜಯಭಗವಾನ್
ಬನ್ನೂರು ಸೋಮೇಶ್ವರ
ಅರಸೀಕೆರೆ ಸಾಧನಾ
ಪಾಂಡವಪುರ ಕೋಕಿಲ
ನಾಗಮಂಗಲ ವೆಂಕಟೇಶ್ವರ
ಕೆ.ಎಂ.ದೊಡ್ಡಿ ಮಾರುತಿ
ಬೆಳ್ಳೂರು ಕ್ರಾಸ್ ಮಾರುತಿ
ಹುಲ್ಲಹಳ್ಳಿ ವಿನಾಯಕ
ಸಾಲಿಗ್ರಾಮ ಪದ್ಮಾಂಬ
ಸಕಲೇಶಪುರ ತೇಜಸ್ವಿನಿ
ಶುಂಠಿಕೊಪ್ಪ ಗಣೇಶ್
ಶಿವಮೊಗ್ಗ ಮಲ್ಲಿಕಾರ್ಜುನ Bharath Cinemas
ಚಿಕ್ಕಮಗಳೂರು ನಾಗಲಕ್ಷ್ಮಿ
ಕಡೂರು ವಿಜಯಲಕ್ಷ್ಮಿ
ಭದ್ರಾವತಿ ಸತ್ಯ
ಸಾಗರ ಶ್ರೀ
ತೀರ್ಥಹಳ್ಳಿ ವಿನಾಯಕ
ಶಿಕಾರಿಪುರ ಮಾಲತೇಶ್
ಚನ್ನಗಿರಿ ವೀರಭದ್ರೇಶ್ವರ
ಶಿರಾಳಕೊಪ್ಪ ಮಾರುತಿ
ಹೊನ್ನಾಳಿ ಶಾಂತ
ನ್ಯಾಮತಿ ಶ್ರೀಶೈಲ
ಸಂತೆಬೆನ್ನೂರು ವೆಂಕಟೇಶ್ವರ
ಅನವಟ್ಟಿ ರೇಣುಕಾ
ಕೊಪ್ಪ ಜೆ.ಎಂ.ಜೆ
ಅಜ್ಜಂಪುರ ವೆಂಕಟೇಶ್ವರ
ಚಿತ್ರದುರ್ಗ ಪ್ರಸನ್ನ
ದಾವಣಗೆರೆ ಗೀತಾಂಜಲಿ MOVIE TIME
ಬಳ್ಳಾರಿ ನಟರಾಜಕಾಂಪ್ಲೆಕ್ಸ್
ಹೊಸಪೇಟೆ ಸರಸ್ವತಿ
ಹಿರಿಯೂರು ನಂಜುಂಡೇಶ್ವರ
ಚಳ್ಳಕೆರೆ ಬಾಲಾಜಿ
ಸಂಡೂರು ವಿಶಾಲ್
ಜಗಳೂರು ನಟರಾಜ
ಹರಿಹರ ಜಯಶ್ರೀ
ಹೂವಿನಹಡಗಲಿ ಗಾಯತ್ರಿ
ಹಗರಿಬೊಮ್ಮನಹಳ್ಳಿ ಕೃಷ್ಣ
ಕಂಪ್ಲಿ ಚಂದ್ರಕಲಾ
ಹುಬ್ಬಳ್ಳಿ ಅಪ್ಸರಾ(2ಆಟ) ಸುಧಾ(2ಆಟ) PVR LAKSHMI PRIDE Cinépolis
ಧಾರವಾಡ ಸಂಗಮ್
ಬೆಳಗಾವಿ ಚಿತ್ರಾ INOX KAPEEL
ಬಿಜಾಪುರ ಡ್ರೀಮ್‌ಲ್ಯಾಂಡ್
ಶಿರಸಿ ನಟರಾಜ
ಗದಗ್ ಮಹಾಲಕ್ಷ್ಮಿ
ರಾಣೆಬೆನ್ನೂರು ಶಿವಶಕ್ತಿ
ಬಾಗಲಕೋಟೆ ಶಕ್ತಿ
ಇಳಕಲ್ ಶ್ರೀನಿವಾಸ
ಹಾವೇರಿ ಮಾಘಾವಿ
ಗೋಕಾಕ್ ಲಕ್ಷ್ಮಿ
ಬನಹಟ್ಟಿ ವೈಭವ್
ಜಮಖಂಡಿ ಸುವರ್ಣ
ಹಾರೋಗೆರೆ ಚಂದ್ರಮ
ಹಾವೇರಿ ಮಾಘಾವಿ
ಮಾಲಿಂಗಪುರ ಅಷ್ಟಗಿ
ರಾಯಭಾಗ ದತ್ತ
ಮುಧೋಳ ಶಿವಕಲ್ಯಾಣ ಸೂರ್ಯವಂಶಿ
ಲಕ್ಕೇಶ್ವರ ರವಿ
ಬಾದಾಮಿ ಮಹಾಕೂಟೇಶ್ವರ
ಸವದತ್ತಿ ರೇಣುಕಾ
ಸಿಂಧಗಿ ವಿನಾಯಕ
ಅಂಕೋಲಾ ಸಮರ್ಥ
ಕಾರವಾರ ಅರ್ಜುನ್
ತಾಳಿಕೋಟೆ ಅಮೀರ್
ಇಂಡಿ ಮಹಾವೀರ
ಹೊನ್ನಾವರ ಪದ್ಮಾಂಜಲಿ
ಭಟ್ಕಳ ಪುಷ್ಪಾಂಜಲಿ
ನಿಪ್ಪಾಣಿ ರಾಜಶ್ರೀ ಮ್ಯಾಗ್ನಮ್
ಮುದ್ದೇಬಿಹಾಳ ಗಿರಿಜಾಶಂಕರ್
ರಾಮದುರ್ಗ ಶ್ರೀನಿವಾಸ
ಯಾದವಾಡ ಬಸವೇಶ್ವರ
ಅಥಣಿ ದುರ್ಗಾಲಕ್ಷ್ಮಿ
ಬ್ಯಾಡಗಿ ಶೋಭಾ
ಅಂಕಲಿ ಮಯೂರ
ದಾಂಡೇಲಿ ಶ್ರೀಹರಿ
ಚಡಚಣ ಸಂಗಮೇಶ್ವರ
ನಿಡಗುಂದಿ ಯಲಗೂರೇಶ್ವರ
ಅಮೀನ್‌ಗಡ ಲಕ್ಷ್ಮಿ
ಗುಲ್ಬರ್ಗ ಸಂಗಮ್ INOX SHETTY'S MIRAJ
ಬೀದರ್ ಸಪ್ನ
ರಾಯಚೂರು ಎಸ್.ಎನ್.ಟಿ MIRAJ
ಗಂಗಾವತಿ ಶಿವೆ
ಕೊಪ್ಪಳ ಲಕ್ಷ್ಮಿ
ಸಿಂಧನೂರು ಮಂಜುನಾಥ
ಕುಷ್ಟಗಿ ಬಸವರಾಜ
ಮಾನ್ವಿ ಮಲ್ಲಿಕಾರ್ಜುನ
ಮಸ್ಕಿ ಶರಣಬಸವೇಶ್ವರ
ಭಾಲ್ಕಿ ಅಮರ್
ಕರಟಗಿ ಪದ್ಮಾವತಿ
ದೇವದುರ್ಗ ಭರತ್
ಹುಣಸೋಗಿ ತ್ರಿಶೂಲ್
ಮಂಗಳೂರು PVR Cinépolis Bharath Cinemas
ಮಣಿಪಾಲ INOX Bharath Cinemas
ಉಡುಪಿ ಅಲಂಕಾರ್
ಕುಂದಾಪುರ ವಿನಾಯಕ Bharath Cinemas
ಸುರತ್ಕಲ್ Cine GALAXY
ಮೂಡಬಿದರೆ ಅಮರಶ್ರೀ
ಕಾರ್ಕಳ ಪ್ಲಾನೆಟ್
ಬೈಂದೂರು ಶಂಕರ್

❦ ಸುಭಾಷಿತ ❦

ಮೈಮರೆಸುವ ಸಂತೋಷ, ಸಂಭ್ರಮದಲ್ಲಿ ಪ್ರಮಾದದ ಆಲಸ್ಯದ ಬೀಜಗಳು ಹುದುಗಿರುತ್ತವೆ. -ಡಿ.ವಿ.ಜಿ.

ಕೊರೊನಾ ಪ್ರಕರಣಗಳ ಹೆಚ್ಚಳ ಆತಂಕ ಬೇಡ, ಉದಾಸೀನ ಸಲ್ಲ

ಶಾಲೆಗಳು ಆರಂಭವಾಗಿ ಒಂದು ತಿಂಗಳು ತುಂಬುವ ವೇಳೆಗೆ ಸರಿಯಾಗಿ ಕೊರೊನಾ ಸೋಂಕಿನ ಆತಂಕ ಮಕ್ಕಳನ್ನು ಕಾಡತೊಡಗಿರುವುದು, ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಅನುಸರಿಸಲು ಒತ್ತಾಯಿಸುವಂತಿದೆ. ಬೆಂಗಳೂರಿನ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕೋವಿಡ್ ಸೋಂಕು ತಗುಲಿರುವುದು ವರದಿಯಾಗಿದೆ. ಶಾಲೆಗಳಲ್ಲಿ ಲಸಿಕೆ ಹಾಕುವ ಸಂದರ್ಭದಲ್ಲಿ ರೋಗಲಕ್ಷಣ ಇದ್ದ ಮಕ್ಕಳಿಗೆ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮಾಡಿದಾಗ, ಎರಡು ಶಾಲೆಗಳ 31 ವಿದ್ಯಾರ್ಥಿಗಳಿಗೆ ಕೋವಿಡ್ ಸೋಂಕು ಇರುವುದು ಪತ್ತೆಯಾಗಿದೆ. ಕೊರೊನಾ ಪ್ರಕರಣಗಳು ಹೆಚ್ಚುತ್ತಿದ್ದರೂ, ಸೋಂಕು ತಗುಲಿದವರು ಹೆಚ್ಚಿನ ತೊಂದರೆಯಿಲ್ಲದೆ ಗುಣಮುಖರಾಗುತ್ತಿರುವುದು ಸಮಾಧಾನಕರ ಸಂಗತಿ. ಮಕ್ಕಳಲ್ಲಿ ಕೋವಿಡ್‌ನ ಸೌಮ್ಯ ಲಕ್ಷಣಗಳಷ್ಟೇ ಕಾಣಿಸುತ್ತಿರುವುದರಿಂದ ಹಾಗೂ ಎಳೆಯರಲ್ಲಿ ರೋಗನಿರೋಧಕ ಶಕ್ತಿ ಪ್ರಬಲವಾಗಿರುವುದರಿಂದ ಪಾಲಕರು ಧೈರ್ಯಗೆಡುವ ಅಗತ್ಯವಿಲ್ಲ. ಎರಡು ವರ್ಷಗಳಲ್ಲಿ ಕಲಿತ 'ಕೋವಿಡ್ ಪಾಠ'ಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತೆ ಮತ್ತೆ ನೆನಪಿಸಿಕೊಳ್ಳ ಬೇಕಾದ ಸಂದರ್ಭ ಇಂದಿನದು. ಎರಡು ಅಮೂಲ್ಯ ಶೈಕ್ಷಣಿಕ ವರ್ಷಗಳು ಕೊರೊನಾ ಬಾಧೆಗೆ ಒಳಗಾದುದು ಮಕ್ಕಳ ಕಲಿಕೆಯ ಮೇಲೆ ಗಂಭೀರ ಪರಿಣಾಮ ಬೀರಿದೆ. ಆ ಹಿನ್ನಡೆಯನ್ನು ತುಂಬುವ ಉದ್ದೇಶದಿಂದ 2022–23ನೇ ಶೈಕ್ಷಣಿಕ ವರ್ಷವನ್ನು 'ಕಲಿಕಾ ಚೇತರಿಕೆ ವರ್ಷ'ವೆಂದು ರಾಜ್ಯ ಸರ್ಕಾರ ಪ್ರಕಟಿಸಿದೆ. ಮಕ್ಕಳ ಕಲಿಕೆಗೆ ಶಕ್ತಿ ತುಂಬುವ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲೇ ಕೊರೊನಾ ಸೋಂಕಿನ ಪ್ರಕರಣಗಳು ಹೆಚ್ಚುತ್ತಿರುವುದು ಮಕ್ಕಳು ಮತ್ತು ಪಾಲಕರ ಚೈತನ್ಯವನ್ನು ಸಹಜವಾಗಿಯೇ ಕುಗ್ಗಿಸುವಂತಿದೆ. ಆದರೆ, ಮಕ್ಕಳನ್ನು ಮನೆಯಲ್ಲಿಯೇ ಇರಿಸಿಕೊಳ್ಳುವಷ್ಟು ಪರಿಸ್ಥಿತಿ ಬಿಗಡಾಯಿಸಿಲ್ಲ. ಕೊರೊನಾದೊಂದಿಗೆ ಹೊಂದಿಕೊಂಡು ಜೀವನ ನಿರ್ವಹಣೆ ನಡೆಸುವುದು ಅನಿವಾರ್ಯವಾಗಿರುವುದರಿಂದ, ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವ ಮೂಲಕ ಶೈಕ್ಷಣಿಕ ಚಟುವಟಿಕೆಗಳನ್ನು ಮುಂದುವರಿಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯ. ಸೋಂಕನ್ನು ನಿಯಂತ್ರಿಸುವ ದಿಸೆಯಲ್ಲಿ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳನ್ನು ಸದ್ಯಕ್ಕೆ ಕನಿಷ್ಠಗೊಳಿಸಿ, ಮಕ್ಕಳ ಶೈಕ್ಷಣಿಕ ಚಟುವಟಿಕೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ.

ನಾಲ್ಕು ತಿಂಗಳ ಬಳಿಕ ಗರಿಷ್ಠ ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗುತ್ತಿರುವುದು ಎಲ್ಲರಿಗೂ ಎಚ್ಚರಿಕೆಯ ಗಂಟೆಯಾಗಬೇಕು

ಲಾಕ್‌ಡೌನ್ ಅವಧಿಯಲ್ಲಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿರುವುದು ಮಾತ್ರವಲ್ಲದೆ, ದೈಹಿಕವಾಗಿ ಹಾಗೂ ಮಾನಸಿಕವಾಗಿಯೂ ಸಮಸ್ಯೆಗಳನ್ನು ಅನುಭವಿಸಿದ್ದರು. ಕಹಿ ಘಟನೆಗಳ ಅನುಭವದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಶಾಲೆಗಳನ್ನು ಮುಚ್ಚುವ ಸ್ಥಿತಿಯನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಶಾಲೆಗಳಲ್ಲಿ ಸುರಕ್ಷಿತ ವಾತಾವರಣವನ್ನು ಕಲ್ಪಿಸುವ ಮೂಲಕ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಧೈರ್ಯ ತುಂಬುವ ಕೆಲಸವನ್ನು ಸರ್ಕಾರ ಮಾಡಬೇಕು. ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿಯೇ ಉಚಿತ ಲಸಿಕೆಯನ್ನು ಆದಷ್ಟು ಬೇಗ ನೀಡಲು ವ್ಯವಸ್ಥೆ ಮಾಡಬೇಕು. ಶಿಕ್ಷಕರು ಹಾಗೂ ಶಾಲಾ ಸಿಬ್ಬಂದಿಗೆ ಮುನ್ನೆಚ್ಚರಿಕೆ ಡೋಸ್ ಪಡೆಯುವುದಕ್ಕೂ ಅವಕಾಶ ಕಲ್ಪಿಸಬೇಕು. ಸೋಂಕು ತಗುಲಿದ ವಿದ್ಯಾರ್ಥಿಗಳಿಗೆ ಸೂಕ್ತ ಚಿಕಿತ್ಸೆಗೆ ಅವಕಾಶ ಕಲ್ಪಿಸಿ, ಉಳಿದ ಮಕ್ಕಳಿಗೆ ತರಗತಿಗಳನ್ನು ಮುಂದುವರಿಸಬೇಕು. ಮುಂಗಾರಿನ ಆರಂಭದಿಂದಾಗಿ ಹವಾಮಾನದಲ್ಲಿ ಉಂಟಾಗುವ ಬದಲಾವಣೆಗಳು ಕೂಡ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ, ಮಕ್ಕಳ ಆರೋಗ್ಯದ ಬಗ್ಗೆ ಪೋಷಕರು ಹೆಚ್ಚಿನ ಕಾಳಜಿ ವಹಿಸಬೇಕಾಗಿದೆ.

ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಮಕ್ಕಳೊಂದಿಗೆ ಹೆಚ್ಚಿನ ತೊಂದರೆ ಅನುಭವಿಸಿದ್ದು ಜನಸಾಮಾನ್ಯರು. ರೋಗಭೀತಿಯ ಜೊತೆಗೆ, ದುಡಿಮೆಯ ಅವಕಾಶಗಳೂ ಇಲ್ಲದೆ ಜನಸಾಮಾನ್ಯರು ಪಡಿಪಾಟಲು ಅನುಭವಿಸುವಂತಾಗಿ, ಆರ್ಥಿಕತೆಗೆ ಬಿದ್ದ ಪೆಟ್ಟಿನಿಂದ ದೇಶ ಇನ್ನೂ ಚೇತರಿಸಿಕೊಂಡಿಲ್ಲ. ಕೊರೊನಾ ತೀವ್ರತೆ ಇಳಿಮುಖವಾದ ನಂತರ ಜನಜೀವನ ಬಹುತೇಕ ಯಥಾಸ್ಥಿತಿಗೆ ಮರಳಿದ್ದರೂ ಆರ್ಥಿಕ ವ್ಯವಸ್ಥೆ ಸುಧಾರಿಸಲು ಬಹಳಷ್ಟು ಸಮಯ ಬೇಕು. ಇಂಥ ಸಂದಿಗ್ಧ ಸಂದರ್ಭದಲ್ಲಿ ಕೊರೊನಾದ ನಾಲ್ಕನೇ ಅಲೆ ಕೈಮೀರದಂತೆ ನೋಡಿಕೊಳ್ಳಬೇಕಾದ ಸವಾಲು ನಮ್ಮೆದುರಿಗಿದೆ. ರಾಜ್ಯದಲ್ಲಿ ನಾಲ್ಕು ತಿಂಗಳ ಬಳಿಕ ಗರಿಷ್ಠ ಪ್ರಕರಣಗಳು ದಾಖಲಾಗುತ್ತಿರುವುದು ಎಲ್ಲರಿಗೂ ಎಚ್ಚರಿಕೆಯ ಗಂಟೆಯಾಗಬೇಕು. ಉದಾಸೀನ ಮಾಡದೆ ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಸೋಂಕನ್ನು ನಿಯಂತ್ರಿಸುವ ಹೋರಾಟದಲ್ಲಿ ಪರಿಣಾಮಕಾರಿಯಾದ ತಂತ್ರ. ಮಾಸ್ಕ್ ಧರಿಸುವುದು, ಅಂತರ ಕಾಪಾಡಿಕೊಳ್ಳುವುದು ಹಾಗೂ ಶುಚಿತ್ವದ ಪಾಠಗಳ ಅನುಸರಣೆಯು ಕೊರೊನಾ ವಿರುದ್ಧದ ಹೋರಾಟದಲ್ಲಿ ನಿರ್ಣಾಯಕ ಪಾತ್ರ ವಹಿಸಬಲ್ಲವು ಎನ್ನುವುದು ಈಗಾಗಲೇ ಸಾಬೀತಾಗಿದೆ. ಈ ಸರಳ ಸಂಗತಿಗಳನ್ನು ನಿರ್ಲಕ್ಷ್ಯ ಮಾಡದೆ ಪಾಲಿಸುವುದು ವೈಯಕ್ತಿಕ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವಾದುದು. ಮತ್ತೊಂದು ಲಾಕ್‌ಡೌನ್ ವಿದ್ಯಾರ್ಥಿಗಳನ್ನು ಮಾತ್ರವಲ್ಲ, ಜನಸಮೂಹವನ್ನೂ ಕಂಗೆಡಿಸಬಲ್ಲದು. ಆ ಸ್ಥಿತಿಯನ್ನು ತಂದುಕೊಳ್ಳದಿರುವುದು ನಮ್ಮ ಕೈಯಲ್ಲೇ ಇದೆ.

ದಿನದ ಟ್ವೀಟ್

ಕೂಡಲೇ ಕಾರ್ಯಪ್ರವೃತ್ತರಾಗಲಿ

ಶ್ರೀಲಂಕಾದಲ್ಲಿ ಇಂಧನ, ಅಡುಗೆ ಅನಿಲಕ್ಕಾಗಿ ಕಂಡುಬರುತ್ತಿರುವ ಉದ್ದನೆಯ ಸರತಿ ಸಾಲು ಮತ್ತು ವಸ್ತುಗಳ ಬೆಲೆ ಏರಿಕೆಯನ್ನು ಗಮನಿಸಿದರೆ, ಸಕಾರಾತ್ಮಕವಾದುದು ಏನೂ ನಡೆಯುತ್ತಿಲ್ಲ ಅನಿಸುತ್ತಿದೆ. ಹತಾಶರಾದ ಜನರಿಗೆ ಕಳೆದುಕೊಳ್ಳುವುದಕ್ಕೆ ಏನೂ ಇರುವುದಿಲ್ಲವಾದ್ದರಿಂದ ಅವರು ಅಪಾಯಕಾರಿ ಆಗಬಹುದು ಎಂಬುದನ್ನು ನೆನಪಿನಲ್ಲಿಡಿ. ಈಗಿನ ಸರ್ಕಾರಕ್ಕೆ ನನ್ನ ಕಿವಿಮಾತು: ಜನ ಬಹಳಷ್ಟು ತೊಂದರೆ ಅನುಭವಿಸಿದ್ದಾರೆ. ದಯಮಾಡಿ ತ್ವರಿತವಾಗಿ ಕಾರ್ಯಪ್ರವೃತ್ತರಾಗಿ. #NoMoreLies

ಸನತ್ ಜಯಸೂರ್ಯ, ಶ್ರೀಲಂಕಾದ ಮಾಜಿ ಕ್ರಿಕೆಟಿಗ

ಕಿಡಿನುಡಿ

'ಒಂದು ಭಾರತ, ಒಂದು ಭಾಷೆ'ಯ ಹುನ್ನಾರ ನಡೆಸುತ್ತಿರುವ ಕೇಂದ್ರ ಮತ್ತು ರಾಜ್ಯದ ಬಿಜೆಪಿ ನೇತೃತ್ವದ ಸರ್ಕಾರಗಳು ಶಾಲಾ ಮಕ್ಕಳ ಪ್ರವಾಸದಲ್ಲಿಯೂ ಕನ್ನಡ ವಿದ್ಯಾರ್ಥಿಗಳನ್ನು ಕಡೆಗಣಿಸಿ, ಕನ್ನಡವನ್ನು ಹತ್ತಿಕ್ಕುವ ಹೀನಕೃತ್ಯ ಎಸಗುತ್ತಿವೆ. ಇದು ಅಕ್ಷಮ್ಯ ಮತ್ತು ಖಂಡನೀಯ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ — ಸೋಮವಾರ, 16-6-1997

• **ಭ್ರಷ್ಟಾಚಾರ ತಡೆಗೆ ಕಟಿಬದ್ಧ: ಗುಜ್ರಾಲ್**

ಶಿಮ್ಲಾ, ಜೂನ್ 15 (ಪಿಟಿಐ)– ಉನ್ನತ ಹಂತಗಳಲ್ಲಿ ಭ್ರಷ್ಟಾಚಾರ ತೊಡೆದುಹಾಕಲು ತಮ್ಮ ಸರ್ಕಾರ ಕಟಿಬದ್ಧವಾಗಿದೆ ಎಂದು ಪ್ರಧಾನಿ ಐ.ಕೆ.ಗುಜ್ರಾಲ್ ಪುನರುಚ್ಚರಿಸಿದ್ದಾರೆ.

ಸಾರ್ವಜನಿಕ ರ್‍ಯಾಲಿಯನ್ನು ಇಲ್ಲಿ ಉದ್ಘಾಟಿಸಿದ ಅವರು, ಯಾರು ಎಂಥದ್ದೇ ಉನ್ನತ ಹುದ್ದೆಯಲ್ಲಿರಲಿ ಅಥವಾ ಎಷ್ಟೇ ಪ್ರಭಾವಶಾಲಿಯಾಗಿರಲಿ ಭ್ರಷ್ಟಾಚಾರ ನಡೆಸಿರುವುದು ಕಂಡುಬಂದರೆ ಕ್ರಮ ಜರುಗಿಸದೇ ಬಿಡುವುದಿಲ್ಲ ಎಂದರು.

• **ಸಿಂಗ್ ಭೇಟಿ ಮಾಡಿದ ಪಟೇಲ್**

ಬೆಂಗಳೂರು, ಜೂನ್ 15– ಲಂಡನ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಅವರನ್ನು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು.

ಕರ್ನಾಟಕಕ್ಕೆ ಬಂಡವಾಳ ಹೂಡಿಕೆದಾರರನ್ನು ಸೆಳೆಯುವ ಸಲುವಾಗಿ ಬ್ರಿಟನ್ ಮತ್ತು ಅಮೆರಿಕಕ್ಕೆ ನಿಯೋಗದೊಂದಿಗೆ ತೆರಳಿರುವ ಪಟೇಲ್, ನಿನ್ನೆ ಲಂಡನ್‌ಗೆ ತೆರಳಿದ ಕೂಡಲೇ ಸಿಂಗ್ ಅವರನ್ನು ಭೇಟಿ ಮಾಡಿದರು.

50 ವರ್ಷಗಳ ಹಿಂದೆ — ಶುಕ್ರವಾರ, 16-6-1972

• **ಅಡಿಕೆ ಬೆಲೆ ಇಳಿಮುಖಕ್ಕೆ ದಲ್ಲಾಳಿಗಳೇ ಕಾರಣ**

ಬೆಂಗಳೂರು, ಜೂನ್ 15– ಅಡಿಕೆ ಮಾರುಕಟ್ಟೆಯಲ್ಲಿ ಈಗ ಉಂಟಾಗಿರುವ ವಿಚಿತ್ರ ಪರಿಸ್ಥಿತಿಗೆ ದಲ್ಲಾಳಿಗಳೇ ಕಾರಣ ಎಂದು ರಾಜ್ಯದ ಕೃಷಿ ಸಚಿವ ಶ್ರೀ ಕೆ.ಎಚ್.ಪಾಟೀಲ್ ಅವರು ಇಂದು ಆಪಾದಿಸಿದರು.

ಕೃಷಿ ಕೈಗಾರಿಕಾ ಕಾರ್ಪೊರೇಷನ್ನಿನ ಆಶ್ರಯದಲ್ಲಿ ಸಚಿವ ಶ್ರೀ ಪಾಟೀಲ್ ಅವರು ಕೃಷಿ ಬಿಡಿ ಭಾಗಗಳ ವಿಭಾಗವನ್ನು ಉದ್ಘಾಟಿಸಿ 'ದೊಡ್ಡ ಪ್ರಮಾಣದಲ್ಲಿ ಅಡಿಕೆ ಬೆಲೆ ಕಮ್ಮಿ ಆಗಿದೆ. ಆದರೆ ಅಡಿಕೆಯ ಚಿಲ್ಲರೆ ಬೆಲೆ ಎಂದಿನಂತೆ ಏರುತ್ತಲೇ ಹೊರಟಿದೆ. ಇದಕ್ಕೆಲ್ಲ ದಲ್ಲಾಳಿಗಳೇ ಕಾರಣ' ಎಂದರು.

ಬಾಂಗ್ಲಾದೇಶದಿಂದ ಅಡಿಕೆ ಆಮದು ಮಾಡಿಕೊಂಡ ಪರಿಣಾಮವಾಗಿ ಈ ಪರಿಸ್ಥಿತಿ ಉಂಟಾಗಿದೆ ಎಂಬುದನ್ನು ಸಚಿವರು ಅಲ್ಲಗಳೆದರು.

• **...ವಿಮಾನ ಹೊರಟು ಹೋಯಿತು!**

ಬೆಂಗಳೂರು, ಜೂನ್ 15– ಸ್ವಲ್ಪ ವಿಳಂಬವಾಗಿ ವಿಮಾನ ನಿಲ್ದಾಣ ತಲುಪಿದ ಕಾರಣ ಮುಖ್ಯಮಂತ್ರಿ ಡಿ. ದೇವರಾಜ ಅರಸು ಹಾಗೂ ಲೋಕೋಪಯೋಗಿ ಸಚಿವ ಶ್ರೀ ಎಚ್.ಎಂ. ಚನ್ನಬಸಪ್ಪ ಅವರುಗಳು ವೈಯಕ್ತಿಕವಾಗಿ ರಾಷ್ಟ್ರಪತಿ ಅವರನ್ನು ಬೀಳ್ಕೊಡಲು ಆಗಲಿಲ್ಲ.

ರಾಷ್ಟ್ರಪತಿ ಶ್ರೀ ಗಿರಿ ಅವರು ಸಂಜೆ 4.25ಕ್ಕೆ ವಿಮಾನ ಹತ್ತಿದರು. ಆ ವೇಳೆಗೆ ಸಚಿವ ಶ್ರೀ ಚನ್ನಬಸಪ್ಪ ಅವರು ಸ್ಥಳಕ್ಕೆ ತಲುಪಿದರು. ಇದಾದ ಸುಮಾರು ಎರಡು ನಿಮಿಷಗಳ ನಂತರ ಮುಖ್ಯಮಂತ್ರಿ ತಲುಪಿದರು. ಅಷ್ಟುಹೊತ್ತಿಗೆ ವಿಮಾನದ ಬಾಗಿಲು ಹಾಕಿದ್ದು ಅದು ಚಲಿಸಲು ಸನ್ನದ್ಧವಾಗುತ್ತಿತ್ತು.

ಮುಖ್ಯಮಂತ್ರಿಯವರೇ, ನಿಮ್ಮದು ಬಸವಣ್ಣ, ಕುವೆಂಪು ಮಾರ್ಗವೇ ಅಥವಾ...?

ಅಜ್ಞಾನದ ತೊಟ್ಟಿಲಲಿ ಜ್ಞಾನದ ಶಿಶು!

ಗತಿಬಿಂಬ

ವೈ.ಗ.ಜಗದೀಶ್

'ಓ ಬನ್ನಿ ಸೋದರರೆ ಬೇಗ ಬನ್ನಿ
ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಅದೊ ನೋಡಿ ರಷ್ಯಾ ಜಪಾನು ತುರ್ಕಿಗಳೆಲ್ಲ
ಪರೆಗಳಚಿ ಹೊರಟಿಹವು ಹೊಸಪಯಣಕೆ
ಬೆಳಗಿಹರು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆಕೊಳಕು ಬಣಗು ತೃಣಕೆ...'

ಕವಿ ಕುವೆಂಪು ಅವರು ಕೊಟ್ಟ ಈ ಕರೆ, ನೀಡಿದ ದೀಕ್ಷೆ ದಶಕಗಳ ಬಳಿಕವೂ ನಾಡಿನ ಜನರ ಹೃದಯದಾಳದಲ್ಲಿ ಪ್ರಜ್ವಲಿಸುತ್ತಲೇ ಇದೆ. ಆದರೆ, ನಮ್ಮನ್ನಾಳುತ್ತಿರುವ ಕೇಂದ್ರ–ರಾಜ್ಯದಲ್ಲಿರುವ ಬಿಜೆಪಿ ತಲೆಯಾಳುಗಳಿಗೆ ವಿಶ್ವಕ್ಕೆ ಹೊಸ 'ಧರ್ಮಾಶಯ'ಗಳನ್ನು ನೀಡಿದ ಅಣ್ಣ ಬಸವಣ್ಣ, ಕುವೆಂಪು ಅವರ ಆದರ್ಶಗಳು ಒಗ್ಗಲೊಲ್ಲವು. ದೇಶ–ರಾಜ್ಯದಲ್ಲಿ ಅಭಿವೃದ್ಧಿಯೆಂಬುದು ಗಾಳಿಪಟದಂತೆ ಆಗಸದೆತ್ತರದಲ್ಲಿ ಹಾರುತ್ತಾ ಅಲ್ಲಾಡುತ್ತಲೇ ಇದೆ. ಜನರ ಕೈಗಂತೂ ಅದು ಸಿಕ್ಕಿಲ್ಲ; ಸಿಗುವ ಲಕ್ಷಣವೂ ಕಾಣುತ್ತಿಲ್ಲ. ಹೀಗಾಗಿ, 2023ರಲ್ಲಿ ನಡೆಯುವ ವಿಧಾನಸಭೆ, 24ರಲ್ಲಿ ನಡೆಯಬೇಕಾದ ಲೋಕಸಭೆ ಚುನಾವಣೆಗಳಲ್ಲಿ ಹುಲುಸು ಬೆಳೆ ತೆಗೆದು ಮತ್ತೆ ಕೇಸರಿ ಪತಾಕೆ ಹಾರಿಸಬೇಕೆಂಬ ತಯಾರಿಯಲ್ಲಿರುವವರಿಗೆ ಇವೆಲ್ಲವೂ ಬೇಕಿಲ್ಲ.

ಅಭಿವೃದ್ಧಿಯನ್ನೇ ಮರೆತಂತಿರುವ ಸರ್ಕಾರಗಳಿಗೆ, ಜನರ ಮನಸ್ಸನ್ನು ಕೆರಳಿಸಿ, ಅದನ್ನೇ ಮತವಾಗಿ ಪರಿವರ್ತಿಸಿಕೊಳ್ಳುವ 'ಜಾದೂ' ಅಷ್ಟೇ ಈಗ ಬೇಕಿರುವುದು. ಹಾಗಾಗಿಯೇ ಕುವೆಂಪು ಮಾತು ಯಾರಿಗೂ ರುಚಿಸುತ್ತಿಲ್ಲ. ವಿಜ್ಞಾನ ದೀವಿಗೆಯನ್ನು ಹಿಡಿದು ನಡೆಯಬೇಕಾದ ಯುವಜನಾಂಗವನ್ನು ಮಸೀದಿಯಲ್ಲಿ ಶಿವಲಿಂಗ ಪತ್ತೆಗೆ, ಹನುಮನ ಮೂಲಸ್ಥಾನದ ಹುಡುಕಾಟಕ್ಕೆ, ಮಂದಿರ–ಮಸೀದಿ ವಿವಾದದ ಕಾಲಾಳುಗಳಾಗಿ ದುಡಿಸಲಾಗುತ್ತಿದೆ. ಮುಂದುವರಿದ ದೇಶಗಳು ಸೂಪರ್ ಕಂಪ್ಯೂಟರ್, ಮಂಗಳ ಗ್ರಹ ಶೋಧ, ಕೃತಕ ಬುದ್ಧಿಮತ್ತೆ, ನ್ಯಾನೋ ತಂತ್ರಜ್ಞಾನದತ್ತ ವಿದ್ಯಾರ್ಥಿಗಳ ಚಿತ್ತವನ್ನು ನೇರ್ಪುಗೊಳಿಸುತ್ತಿದ್ದರೆ, ನಮ್ಮ ಸರ್ಕಾರದ 'ಪ್ರವರ್ತಕ'ರು ಮಸೀದಿಯ ಬುಡ ಅಗೆಯಲು ಹುರಿದುಂಬಿಸುತ್ತಿದ್ದಾರೆ. ಹಿಜಾಬು, ಹಲಾಲ್, ಮೈಕು, ವ್ಯಾಪಾರಕ್ಕೆ ತಡೆ, ಪಠ್ಯ ಕೇಸರೀಕರಣದ ಕೊಸರಿನಲ್ಲಿ ಯುವಜನರನ್ನು ಹುದುಗಿಸುತ್ತಿದ್ದಾರೆ. ಸಂವಿಧಾನ ಕೊಟ್ಟ ಅವಕಾಶಗಳಿಂದ ವಿದ್ಯೆಯ ಕಡೆ ಮುಖಮಾಡಿ, ಜ್ಞಾನ ಸಮುದ್ರದೊಳಗೆ ಕೈಚಾಚಿ, ಬೊಗಸೆಯಲ್ಲಿ ಸಿಕ್ಕ ಅಕ್ಷರವನ್ನು ಎದೆಗೆ ಬಿಟ್ಟುಕೊಳ್ಳುವತ್ತ ನಡೆದಿದ್ದ ಹಿಂದುಳಿದ, ದಲಿತ ಸಮುದಾಯದ ಯುವಕರನ್ನೇ ಅನ್ಯಾಸಕ್ತಿಗೆ ದಬ್ಬಿ, ಮತ್ತೆ ಕತ್ತಲೆಯೊಳಗೆ ದೂಡುವ ದಿನಗಳು ಎದುರಾಗುತ್ತಿವೆ.

ಪಠ್ಯಪುಸ್ತಕ ತಿರುಚುವಿಕೆಯ ಪ್ರಮಾದವನ್ನು ನೋಡಿದಾಗ ಪಕ್ಕನೆ ನೆನಪಾಗುವುದು ಕುವೆಂಪು ಅವರ ವಿಶ್ವಮಾನವ ಸಂದೇಶ. 'ಪ್ರತಿಯೊಂದು ಮಗುವೂ ಹುಟ್ಟುತ್ತಲೇ- ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯ ಆಗಬೇಕು' ಎಂದವರು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದರು. 'ವೇದಶಾಸ್ತ್ರ ಆಗಮ ಪುರಾಣಗಳೆಲ್ಲವು ಕೊಟ್ಟಣವ ಕುಟ್ಟಿದ ನುಚ್ಚು ತೌಡು ಕಾಣಿಭೋ...' ಎಂದು 12ನೇ ಶತಮಾನದಲ್ಲಿಯೇ 'ಅಕ್ಕ' ಹೇಳಿದ್ದಳು. ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ, ಪಠ್ಯ ಪರಿಷ್ಕರಣೆಯ ಹೆಸರಿನಲ್ಲಿ ಮಾಡಿರುವ ಅವಾಂತರ ನೋಡಿದರೆ, ಮತ್ತೆ 10–12ನೇ ಶತಮಾನದಷ್ಟು ಹಿಂದಕ್ಕೆ ನಾಡನ್ನು ದೂಡುವ ಯತ್ನಗಳು ಕಣ್ಣಿಗೆ ರಾಚುತ್ತವೆ.

ಪರಿಷ್ಕರಿಸಿರುವ ಪಠ್ಯವನ್ನೇ ಶಾಲೆಗಳಲ್ಲಿ ಬೋಧಿಸಬೇಕೆಂಬ ಫರ್ಮಾನನ್ನು ಸರ್ಕಾರ ಹೊರಡಿಸಿದೆ. 'ಪರಿಷ್ಕರಣೆಯಲ್ಲಿ ತಪ್ಪುಗಳಾಗಿವೆ, ತಿದ್ದುಪಡಿ ಮಾಡಿ ಮರುಪರಿಷ್ಕರಿಸುತ್ತೇವೆ' ಎಂದು ಹೇಳಿದ್ದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಬಾಲವಾಡಿಯ ಮಕ್ಕಳಂತೆ ಈ ವಿಷಯದಲ್ಲಿ ರಚ್ಚೆ ಹಿಡಿದಿದ್ದಾರೆ. ಇದು ಸಂಘದ ಕಾರ್ಯಸೂಚಿಯನ್ನು ಅಧಿಕಾರದಲ್ಲಿದ್ದಾಗಲೇ ಅನುಷ್ಠಾನಕ್ಕೆ ತರಬೇಕೆಂಬ ಅವರ 'ಬದ್ಧತೆ'ಯನ್ನು ತೋರುತ್ತದೆ. ಅಲ್ಲದೆ ಇದು ಮಕ್ಕಳ ಮನಸ್ಸನ್ನು ಅರಳಿಸುವಂತಹ ಶಿಕ್ಷಣದ ಬಗ್ಗೆ ಅವರಿಗೆ ಅಸಡ್ಡೆ ಇರುವುದರ ದ್ಯೋತಕವೂ ಆಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೊದಲಿಗೆ ಜಾರಿಗೆ ತಂದ ರಾಜ್ಯ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಹೀಗೆ ಘೋಷಿಸುತ್ತಲೇ, ಜ್ಞಾನದ ಹಿರಿ ಅರ್ಥವನ್ನು ಕುಬ್ಜಗೊಳಿಸಿ, ತ್ಯಾಜ್ಯವನ್ನು ಮಕ್ಕಳಿಗೆ ತುರುಕುವ ಯತ್ನ ನಡೆದಿರುವುದನ್ನು ಪಠ್ಯ ಪರಿಷ್ಕರಣೆಯ ಎಡವಟ್ಟುಗಳೇ ಹೇಳುತ್ತವೆ.

'ಅಜ್ಞಾನವೆಂಬ ತೊಟ್ಟಿಲೊಳಗೆ/ ಜ್ಞಾನವೆಂಬ ಶಿಶುವ ಮಲಗಿಸಿ/ಸಕಲ ವೇದಶಾಸ್ತ್ರವೆಂಬ ನೇಣಕಟ್ಟಿ/ ಹಿಡಿದು ತೂಗಿ/ಜೋಗುಳವಾಡುತ್ತಿದ್ದಾಳೆ ಭ್ರಾಂತಿ ಎಂಬ ತಾಯಿ/ ತೊಟ್ಟಿಲು ಮುರಿದು ನೇಣು ಹರಿದು ಜೋಗುಳ ನಿಂದಲ್ಲದೆ/ ಗುಹೇಶ್ವರ ಲಿಂಗ ಕಾಣಬಾರದು' ಎಂದು ಅಲ್ಲಮಪ್ರಭು ಅವರು ಆ ಕಾಲಕ್ಕೆ ಚೆಂದದ ರೂಪಕವನ್ನು ಕಟ್ಟಿಕೊಟ್ಟಿದ್ದರು. ಬೆಳಕಿನೆಡೆಗೆ ಮಕ್ಕಳನ್ನು ಕರೆದೊಯ್ಯಬೇಕಾದ ಬೊಮ್ಮಾಯಿ ಮತ್ತು ನಾಗೇಶ್ ಅವರು, ಜ್ಞಾನವನ್ನು ಅಜ್ಞಾನದ ತೊಟ್ಟಿಲೊಳಗೆ ಮಲಗಿಸಿ ಹಾಡುತ್ತಿರುವ ಜೋಗುಳವು ಊಳಿನಂತೆ ಕೇಳುತ್ತಿದೆ.



18ನೇ ಶತಮಾನದಲ್ಲಿ ಆಫ್ರಿಕಾದ ಕಪ್ಪುಜನರನ್ನು ಬೇಟೆಯಾಡಿ ಹಿಡಿಯುತ್ತಿದ್ದ ಬಿಳಿಯರು ಅವರ ಕೈಕಾಲು ಕಟ್ಟಿ, ಹಡಗುಗಳಲ್ಲಿ ತುಂಬಿ ಉತ್ತರ ಅಮೆರಿಕದಲ್ಲಿ ಗುಲಾಮಗಿರಿಗೆ ದೂಡುತ್ತಿದ್ದರು. ಲೇಖಕ ಅಲೆಕ್ಸ್ ಹೆಲಿ ತನ್ನ 'ರೂಟ್ಸ್' ಕಾದಂಬರಿಯಲ್ಲಿ ಈ ಕಥನ ಕಟ್ಟಿಕೊಟ್ಟಿದ್ದು, ಇದು ಸಿನಿಮಾ ಆಗಿದೆ. ಕಾದಂಬರಿಯ ಕಥಾನಾಯಕ ಕುಂಟಾ–ಕಿಂಟೆ ಬಿಳಿಯರ ವಿರುದ್ಧ ಕರಿಯರ ವಿಮೋಚನಾ ಹೋರಾಟವನ್ನೇ ಮುನ್ನಡೆಸಿದ ಕಥನವದು. ಈಗ ಹೀಗೆಲ್ಲ ಕಾಲು–ಕೈ ಕಟ್ಟಿ ಬಂಧಿಸಿ ತನ್ನ ಅಡಿಯಾಳಾಗಿಸುವುದು ಕಷ್ಟ. ಆದರೆ, ಪಠ್ಯ–ಅನಗತ್ಯ ವಿವಾದಗಳ ಮೂಲಕ ಒಂದೆರಡು ತಲೆಮಾರುಗಳನ್ನೇ ಬೌದ್ಧಿಕ ಗುಲಾಮಗಿರಿಗೆ ತಳ್ಳಿ, ಶಾಶ್ವತವಾಗಿ ಅವರನ್ನು ಪ್ರಶ್ನಿಸದಂತೆ ಮಾಡುವ ಅಪಾಯಕಾರಿ ನಡೆಯಂತೂ ಸಾಧ್ಯ. ದೈಹಿಕ ಬಂಧನಕ್ಕೆ ಒಳಗಾದವರಿಗೆ ಆಲೋಚನೆಯ ಸ್ವಾತಂತ್ರ್ಯವಿರುತ್ತದೆ; ಆದರೆ, ಮಿದುಳನ್ನೇ ಕೆರೆದು ತೆಗೆದು ವಿಷ ತುಂಬಿಸಿಬಿಟ್ಟರೆ, ಗುಲಾಮಿತನ ಶಾಶ್ವತವಾಗಿರುತ್ತದೆ.

'ಚಾರ್ಲಿ 777' ಸಿನಿಮಾ ನೋಡಿದ ಬೊಮ್ಮಾಯಿ ಅವರು ತಮ್ಮ ಪ್ರೀತಿಪಾತ್ರ ನಾಯಿ 'ಸನ್ನಿ'ಯ ಅಗಲಿಕೆ ನೆನೆದು ಕಣ್ಣೀರಿಟ್ಟಿದ್ದಾರೆ. ಹೃದಯದಲ್ಲಿ ಒಳಿತನ್ನೇ ಬಯಸುವ ವ್ಯಕ್ತಿಯೊಳಗಿದ್ದ ಸಹಜ ವೇದನೆ ಹೀಗೆ ಉಮ್ಮಳಿಸಿದ್ದು ಅವರ ಭಾವುಕತೆಗೆ ಸಾಕ್ಷಿ. ಆದರೆ, ಹಿಜಾಬ್ ನಿರ್ಬಂಧದಿಂದ ಓದನ್ನೇ ತೊರೆದ ವಿದ್ಯಾರ್ಥಿನಿಯರು, ಜಾತಿದ್ವೇಷಕ್ಕೆ ಹತ್ಯೆಯಾಗುತ್ತಿರುವ ದಲಿತರು, ಧಾರ್ಮಿಕ ಹಗೆಗೆ ಈಡಾಗಿ ಹೊಟ್ಟೆಪಾಡಿನ ಕಲ್ಲಂಗಡಿ ಹಣ್ಣುಗಳು ಛಿದ್ರಗೊಳ್ಳುತ್ತಿದ್ದರೂ ಅಸಹಾಯಕರಾಗಿ ನಿಂತಿದ್ದ ನಬೀಸಾಬರು, ವಿವಾದದ ಕಾರಣಕ್ಕೆ ಪಠ್ಯ ಪುಸ್ತಕವೇ ಇಲ್ಲದೆ ಪಾಡು ಪಡುತ್ತಿರುವ ಸರ್ಕಾರಿ ಶಾಲೆಗಳ ಅಸಂಖ್ಯಾತ ಬಡ ಮಕ್ಕಳು, ತುಳುಕುತ್ತಿರುವ ಭ್ರಷ್ಟಾಚಾರದಿಂದ ಸೌಲಭ್ಯಗಳೇ ಸಿಗದೆ ಪರಿತಪಿಸುತ್ತಿರುವ ಸಾವಿರಾರು ಅಬಲರ ನೋವು ಕಂಡಾಗಲೂ ಅವರ ಕಣ್ಣಂಚಿನಲ್ಲಿ ನೀರಿನ ಪಸೆಯಾದರೂ ಹನಿಗಟ್ಟಬೇಕಿತ್ತು. ಹಾಗಾಗಿದ್ದರೆ, ನಾಡಿಗೆ ಆದರಣೀಯರಾದ ಎಸ್.ಆರ್. ಬೊಮ್ಮಾಯಿ ಅವರಲ್ಲಿದ್ದ ತಾಯ್ತನವು ಮಗನಲ್ಲೂ ಇದೆ ಎಂದು ನಂಬಬಹುದಿತ್ತು. ಈಗಲಾದರೂ ಅವರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿಯಾದರೂ ಮೌನ ತೊರೆಯಬೇಕಿದೆ. ತಮ್ಮದು ಬಸವಣ್ಣ–ಕುವೆಂಪು ಅವರ ಮಾರ್ಗವೋ ಅಥವಾ ಗೋಳ್ವಾಲ್ಕರ ಅವರದ್ದೋ ಎಂಬುದನ್ನು ಬಹಿರಂಗಪಡಿಸಬೇಕಿದೆ.

ಕರ್ನಾಟಕ ಇವತ್ತಿಗೂ 12ನೇ ಶತಮಾನದ ಅನುಭವ ಮಂಟಪವೇ. ಚರಿತ್ರೆಯಲ್ಲಿದ್ದ ಅನುಭವ ಮಂಟಪವನ್ನು ನೂರಾರು ಕೋಟಿ ರೂಪಾಯಿ ಸುರಿದು ಮರುಕಟ್ಟಿದರೆ ಸಾಲದು. ಅಲ್ಲಿ ನೆರೆದು ಬೆಳಕಿನ ದಾರಿ ಹುಡುಕುತ್ತಿದ್ದ, ಸಾಮಾನ್ಯರನ್ನು ಅರಿವಿನ ಮನೆಗೆ ಒಳಗು ಮಾಡಿಕೊಳ್ಳುತ್ತಿದ್ದ ಅಲ್ಲಮ, ಮಾದಾರ ಚನ್ನಯ್ಯ, ಸೂಳೆ ಸಂಕವ್ವ, ಆಯ್ದಕ್ಕಿ ಲಕ್ಕಮ್ಮ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಸಂಬೋಳಿ ನಾಗಿದೇವ, ಕನ್ನಡಿ ಕಾಯಕದ ರೇಮವ್ವ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಕದಿರೆ ರೆಮ್ಮವ್ವೆ... ಇಂತಹ ಶರಣರ ಕುಡಿಗಳು ಕೂಡಿಯೇ ಕರ್ನಾಟಕವನ್ನು ಕಟ್ಟುತ್ತಿದ್ದಾರೆ. ಇಂತಹ ಹೊತ್ತಿನೊಳಗೆ ಬೊಮ್ಮಾಯಿಯವರು, ಅಂದು ವೈದಿಕರಿಗೆ ಬುದ್ಧಿಕೊಟ್ಟ ಬಿಜ್ಜಳನಾಗಕೂಡದು; ಅವರ ಹೆಸರಿಗೆ ತಕ್ಕಂತೆ ಬಸವಣ್ಣನೇ ಆಗಲಿ; ಆಗಿರಲಿ.

ಚುರುಮುರಿ

ಷೇರ್– ಶೇರ್!

• ತುರುವೇಕೆರೆ ಪ್ರಸಾದ್

ಪರ್ಮೇಶಿ ಮುಖಕ್ಕೆ ಪೇಪರ್ ಮುಚ್ಕೊಂಡು ಕೂತಿದ್ದ. ಪದ್ಮಮ್ಮ ಒಳಗಿನಿಂದ ಗುರ್ ಎನ್ನುತ್ತಲೇ ಬಂದ್ರು: 'ನಿಮ್ ಅವಸ್ಥೆ ನೋಡುದ್ರೆ ಇವತ್ತೂ ನಿಮ್ ಷೇರೆಲ್ಲಾ ಢಮಾರೇ ಅನ್ಸುತ್ತೆ. ಒಂದು ಸೀರೆನೋ ಸರನೋ ಕೊಡ್ಸಿ ಅಂದ್ರ ಕೈಯ್ಯೇ ಬರಲ್ಲ ನಿಮಗೆ. ಈ ಷೇರು, ಸ್ಟಾಕು ಅಂತ ಲಕ್ಷ ಲಕ್ಷ ಸುರಿದು ಪಂಗನಾಮ ಹಾಕಿಸ್ಕೊಂಡು ಮುಖ ಮುಚ್ಕೊಂಡ್ ಕೂತ್ಕೊತೀರಿ'.

'ಕೆಳಗ್ ಬಿದ್ದೋರ್ ಮೇಲೆ ಆಳಿಗೊಂದು ಕಲ್ಲು ಅಂತ ನೀನೂ ನನ್ ಮೇಲೆ ಸವಾರಿ ಮಾಡ್ತೀಯಾ? 'ಕರಡಿಗೊಂದು ಕಾಲ, ಗೂಳಿಗೊಂದು ಕಾಲ'! ನನ್ ಟೈಮೂ ಬಂದೇಬರುತ್ತೆ'.

'ಹ್ಞೂಂ ಬರುತ್ತೆ ಬರುತ್ತೆ. ಅದೇನೋ ಹೇಳ್ತಾರಲ್ಲ, ಅಯ್ಯನವರು ಪಟ್ಟಕ್ಕೆ ಬರೋ ಹೊತ್ಗೆ ಅಮ್ಮನವರು ಚಟ್ಟಕ್ಕೆ ಹೊರಟ್ರು ಅಂತ, ಹಾಗೆ! ನಿಮ್ ಷೇರ್ ದುಡ್ಡಲ್ಲಿ ನಾನ್ ಸುಖ ಪಟ್ಟ ಹಾಗೇ ಇದೆ ಬಿಡಿ. ಹೌದು, ಹೀಗೆ ದಬ ದಬ ಷೇರ್ ಬೆಲೆ ಬಿದ್ ಹೋಗಕ್ಕೆ ಏನ್ ಕಾರಣ?'

'ನೂರೆಂಟು ಕಾರಣ ಇದೆ. ಅಮೆರಿಕ ಮಾರ್ಕೆಟ್ಟು, ರಷ್ಯಾ- ಉಕ್ರೇನ್ ಯುದ್ಧ, ನಂ ರಾಜಕೀಯದವರ ನಾಲಿಗೆ ಉದ್ದ ಹೀಗೆ ಪ್ರಪಂಚದಲ್ಲಿ ಎಲ್ಲಿ ಬುಸ್ ಅಂದ್ರೂ ನಮ್ ಷೇರ್‌ಪೇಟೆ ಠುಸ್ ಅನ್ನುತ್ತೆ! ನೀನು ಹಾಕಿರೋ ಚಿನ್ನದ ಚೀಟಿಯಿಂದಲೂ ಮಾರ್ಕೆಟ್ ಬೀಳಬಹುದು'.

'ಅಯ್ಯೋ, ನಾನು ಚಿನ್ನದ ಚೀಟಿ ಹಾಕಕ್ಕೂ ಷೇರ್ ಬೆಲೆ ಕೆಳಗ್ ಬರಕ್ಕೂ ಏನ್ ಸಂಬಂಧ?'

'ಸಂಬಂಧ ಇರುತ್ತೆ ಕಣೆ. ಉದಾಹರಣೆಗೆ, ನೀನು ಚಿನ್ನದ ಸ್ಕೀಮ್ ಹಾಕಿರೋ ಜ್ಯೂಯಲರಿ ಕಂಪನಿಯೋನು ರಾತ್ರೋ ರಾತ್ರಿ ಉಂಡೆನಾಮ ತಿಕ್ಕಿ ಹೋದ ಅನ್ನು. ಅವನನ್ನ ಪೊಲೀಸ್ನೋರು ಹುಡುಕ್ತಾರೆ. ಆ ದೊಡ್ ಮನುಷ್ಯನ್ ಜೊತೆ ಯಾರೋ ರಾಜಕೀಯದೋರು ನಿಂತಿರೋ ಫೋಟೊ ಪೇಪರ್‌ನಲ್ಲಿ ಬರುತ್ತೆ. ರಾಜಕೀಯ ಅಸ್ಥಿರತೆ ಅಂತಾರೆ. ಫಾರಿನ್ ಕಂಪನಿಗಳು ಬಂಡವಾಳ ವಾಪಸ್ ತೆಗೆಯುತ್ವೆ. ಷೇರುಗಳು ಪಲ್ಟಿ ಹೊಡೆಯುತ್ವೆ'.

'ಹಾಗಿದ್ರೆ ಏನ್ ಮಾಡು ಅಂತೀರಿ?'

'ಚಿನ್ನದ ಸ್ಕೀಮ್‌ಗೆ ದುಡ್ಡು ಹಾಕೋ ಬದ್ಲು ಷೇರಲ್ಲಿ ಹಾಕು, ಲಕ್ಷ ಲಕ್ಷ ಬರುತ್ತೆ'.

'ಲಕ್ಷ ಬರಲ್ಲ ಅಮಾಸೆ ಪಕ್ಷ ಬರುತ್ತೆ. ಇಬ್ರದೂ ಫೋಟೊ ಇಟ್ಟು ಎಡೆ ಹಾಕ್ತಾರೆ. ಅಯ್ಯೋ ನಿಮ್ ಮುಖಕ್ಕೆ' ಪದ್ಮಮ್ಮ ಪೇಪರ್ ಉಂಡೆ ಮಾಡಿ ಪರ್ಮೇಶಿ ಮುಖಕ್ಕೆ ಎಸೆದು ಹೋದರು.

ಸಂಗತ

ತೆರಿಗೆ: ಸರಿಯಲಿ ಭ್ರಮೆ ಬದಿಗೆ

ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಗೌರವಾನ್ವಿತ ತೆರಿಗೆದಾರರೇ!

• ದೀಪಾ ಹಿರೇಗುತ್ತಿ

ಸರ್ಕಾರಗಳು ಜನರಿಗೆ ಉಚಿತವಾಗಿ ವಸ್ತು, ಸೌಲಭ್ಯಗಳನ್ನು ನೀಡುವ ಕುರಿತು ಫೇಸ್‌ಬುಕ್‌ನಲ್ಲಿ ಚರ್ಚೆ ನಡೆಯುತ್ತಿತ್ತು. ಯಾರೋ ಬರೆದಿದ್ದರು, 'ಉಚಿತವಾಗಿ ನೀಡುತ್ತಿರುವುದಲ್ಲ, ನಮ್ಮ ತೆರಿಗೆ ಹಣದಿಂದ ನೀಡುತ್ತಿರುವುದು'. 'ನಾವು ಕಷ್ಟಪಟ್ಟು ದುಡಿಯುವುದು ಕಂಡಕಂಡವರಿಗೆ ಬಿಟ್ಟಿಯಾಗಿ ಹಂಚಲು ಅಲ್ಲ'. ಈ ಹೇಳಿಕೆಗಳನ್ನು ಸಮರ್ಥಿಸುವ ಇಂತಹುದೇ ಮತ್ತೊಂದಿಷ್ಟು ಕಮೆಂಟುಗಳು ಕಂಡವು.

ತಾವು ಆದಾಯ ತೆರಿಗೆ ಕಟ್ಟುವುದರ ಮೂಲಕ ದೇಶವನ್ನೇ ನಡೆಸುತ್ತಿದ್ದೇವೆ, ಇಲ್ಲದಿದ್ದರೆ ಈ ದೇಶದ ಬಡವರು ಉಪವಾಸದಿಂದ ಸತ್ತೇಹೋಗುತ್ತಾರೆ ಎನ್ನುವಷ್ಟರ ಮಟ್ಟಿಗಿನ ಅಹಂಕಾರ ಕೆಲವರ ಮಾತುಗಳಲ್ಲಿ! ಬುದ್ಧಿವಂತರು ಎನಿಸಿಕೊಂಡವರ, ಒಳ್ಳೊಳ್ಳೆಯ ಉದ್ಯೋಗದಲ್ಲಿರುವ ಜನರ ಈ ಮಾತುಗಳಲ್ಲಿರುವ ಮೇಲರಿಮೆ ಮತ್ತು ಅಹಂಕಾರ ವಿಷಾದವನ್ನು ಉಂಟುಮಾಡಿತು. ಒಂದೆರಡು ವರ್ಷಗಳ ಹಿಂದೆ ನಟಿ ಕಂಗನಾ ರನೌತ್, ಪ್ರತಿಭಟನೆಯ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿಗೆ ಧಕ್ಕೆಯಾಗಬಾರದು ಎಂದು ಹೇಳುತ್ತಲೇ ಭಾರತದ ಮೂರು–ನಾಲ್ಕು ಶೇಕಡ ಜನರಷ್ಟೇ ತೆರಿಗೆ ಕಟ್ಟುವವರು, ಉಳಿದವರೆಲ್ಲ ಅವರ ಮೇಲೆಯೇ ಅವಲಂಬಿತರಾಗಿ ಇರುವವರು ಎಂದು ಹೇಳಿ ನಗೆಪಾಟಲಿಗೆ ಈಡಾಗಿದ್ದರು.

ಸಾರ್ವಜನಿಕ ಆಸ್ತಿಗೆ ಧಕ್ಕೆಯಾಗಬಾರದು ಎಂಬ ಮಾತನ್ನು ಒಪ್ಪುತ್ತಲೇ ಆ ಸಾರ್ವಜನಿಕ ಆಸ್ತಿಯ ಒಡೆಯರು ಆದಾಯ ಮತ್ತು ಕಾರ್ಪೊರೇಟ್ ತೆರಿಗೆ ಕಟ್ಟುವವರು ಮಾತ್ರ ಎಂದು ತಿಳಿದುಕೊಂಡ ಆಕೆಯ ಬಾಲಿಶತನ ನಗುಬರಿಸುವಂತಿತ್ತು. ಈ ಎರಡು ತೆರಿಗೆಗಳು ಮಾತ್ರ ತೆರಿಗೆ ಎಂದು ಕಂಗನಾ ತಿಳಿದುಕೊಂಡಿದ್ದರೋ ಏನೋ!

ನೆನಪಿರಲಿ, ಕೊಳ್ಳುವ ಪ್ರತೀ ವಸ್ತುವಿಗೂ ನಾವು ತೆರಿಗೆ ಸೇರಿಸಿಯೇ ಹಣ ನೀಡುತ್ತೇವೆ. ಅದನ್ನು ಪರೋಕ್ಷ ತೆರಿಗೆ ಎನ್ನುತ್ತೇವೆ. ಈ ಪರೋಕ್ಷ ತೆರಿಗೆಯೂ ದೇಶದ ಆದಾಯಕ್ಕೆ ನೇರ ತೆರಿಗೆಯಷ್ಟೇ ಕೊಡುಗೆ ಸಲ್ಲಿಸುತ್ತಿದೆ. ಹಾಗಾಗಿ ಸಾಮಾಜಿಕ ವ್ಯವಸ್ಥೆಯ ಕಟ್ಟಕಡೆಯ ಮೆಟ್ಟಿಲ ಮೇಲೆ ಇರುವ ವ್ಯಕ್ತಿಯೂ ಈ ದೇಶದ ಗೌರವಾನ್ವಿತ ತೆರಿಗೆದಾರರೇ! ಒಂದು ಬೆಂಕಿಪೊಟ್ಟಣ ಕೊಂಡಾಗಲೂ ಆತ ದೇಶದ ಆಡಳಿತ ಯಂತ್ರದ ಯಾವುದೋ ಒಂದು ಪುಟ್ಟ ಭಾಗಕ್ಕೆ ಕೀಲೆಣ್ಣೆ ಸವರುತ್ತಿರುತ್ತಾನೆ! ಆದರೆ ಬಹಳ ಜನರಿಗೆ ತಾವು ಕೂಡ ತೆರಿಗೆ ಕಟ್ಟುತ್ತಿದ್ದೇವೆ ಎಂಬುದೇ ಗೊತ್ತಿರುವುದಿಲ್ಲ. ತಮ್ಮ ತೆರಿಗೆ ಹಣದಿಂದ ಬೇರೆಯವರಿಗೆ ಪುಕ್ಕಟೆ ಸೌಲಭ್ಯ ಕೊಟ್ಟರು ಎಂದು ಕೈ ಕೈ ಹಿಸುಕಿಕೊಳ್ಳುತ್ತ, ತಾವೇ ಬಡವರ ಅನ್ನದಾತರು ಎಂಬ ಭ್ರಮೆಯಲ್ಲಿರುವ ಮೂರ್ಖರಿಗೂ ಗೊತ್ತಿಲ್ಲದೇ ಇರುವುದು ಏನೆಂದರೆ, ಅವರು ಪಡೆಯುವ ಸಂಬಳ, ಸೌಲಭ್ಯಗಳೂ ದೇಶದ ಪ್ರತಿಯೊಬ್ಬ ವ್ಯಕ್ತಿಯ ಬೆವರ ಹನಿಯ ಫಲವೇ ಎಂಬುದು.

ಖಾಸಗಿ ಕಂಪನಿಗಳು ಕೂಡ ಸರ್ಕಾರ ಕೊಟ್ಟ ಭೂಮಿಯ, ವಿವಿಧ ರಿಯಾಯಿತಿಗಳ ಋಣದಲ್ಲಿಯೇ ಇರುತ್ತವೆ. ಒಂದು ಪುಟ್ಟ ಸೂಜಿಯಿಂದ ಹಿಡಿದು ವಿಮಾನದವರೆಗೂ ನಾವು ತೆರಿಗೆ ಕಟ್ಟದ ಯಾವುದಾದರೂ ವಸ್ತು ಇದೆಯೇ ಎಂದು ಹುಡುಕಿ ನೋಡಿದರೂ ಸಿಗುವುದಿಲ್ಲ. ಇಂದು ಜನಸಾಮಾನ್ಯರ ಕಿಸೆಗೆ ಭಾರವಾಗಿರುವ ಪೆಟ್ರೋಲ್, ಡೀಸೆಲ್ ತೆರಿಗೆಯನ್ನಂತೂ ಬಡವನಿಂದ ಧನಿಕನವರೆಗೆ ಎಲ್ಲರೂ ಅನಿವಾರ್ಯವಾಗಿ ಕೊಡುತ್ತಲೇ ಇದ್ದಾರೆ. ಕಚೇರಿಗಳಲ್ಲಿ ಕುಳಿತು ಕೆಲಸ ಮಾಡುವವರು, ಕಾರ್ಪೊರೇಟ್ ಮಂದಿ ಕೊಡುವ ತೆರಿಗೆ ಮಾತ್ರವಲ್ಲ, ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ಜನರು ಕೊಡುವ ಪರೋಕ್ಷ ತೆರಿಗೆ ಹಣವೂ ಸರ್ಕಾರ ನಡೆಯಲು ಬೇಕು.

ಇನ್ನು ಕೋಟಿ ಕೋಟಿ ಸಂಭಾವನೆ ಪಡೆದು ಜನಸಾಮಾನ್ಯರ ಬಗ್ಗೆ ಕ್ಷುಲ್ಲಕ ಭಾವನೆ ಇಟ್ಟುಕೊಂಡಿರುವವರಿಗೆ ಹಣ ಮೇಲಿಂದ ಉದುರುವುದಿಲ್ಲ. ಒಬ್ಬ ದಿನಗೂಲಿ ನೌಕರ ತಾನು ದುಡಿದ ಹಣದ ಒಂದು ಭಾಗವನ್ನು ತೆರಿಗೆಯೂ ಸೇರಿರುವ ಟಿಕೆಟ್ ಕೊಂಡು ಸಿನಿಮಾ ನೋಡುವ ಕಾರಣಕ್ಕೇ ತಾವು ಅನ್ನ ತಿನ್ನುತ್ತಿದ್ದೇವೆ ಎಂಬುದನ್ನು ಸಿನಿಮಾ ತಾರೆಯರು ಮರೆಯದಿದ್ದರೆ ಒಳ್ಳೆಯದು. ತಾವು ಮಾತ್ರ ತೆರಿಗೆ ಕಟ್ಟುತ್ತಿದ್ದೇವೆ ಎಂಬ ಕೆಲವರ ದಾರ್ಷ್ಟ್ಯ ಎಲ್ಲಿಯವರೆಗೆ ಎಂದರೆ, ತೆರಿಗೆ ಕಟ್ಟುವವರಿಗೆ ಮಾತ್ರ ಮತದಾನವೂ ಸೇರಿದಂತೆ ಕೆಲವು ಹಕ್ಕುಗಳು ಇರಬೇಕು ಎಂದು ಪ್ರತಿಪಾದಿಸುವಲ್ಲಿಯವರೆಗೆ! ಬ್ರಿಟಿಷ್ ಭಾರತದಲ್ಲಿ ಈ ರೀತಿಯ ವ್ಯವಸ್ಥೆ ಇತ್ತು ಕೂಡ!

ಇಂತಹ ಫ್ಯಾಸಿಸ್ಟ್ ಮನಃಸ್ಥಿತಿಯ ಜನರನ್ನು ಗಮನದಲ್ಲಿ ಇಟ್ಟುಕೊಂಡೇ ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸಾಮಾನ್ಯ ವ್ಯಕ್ತಿಗೂ ರಾಷ್ಟ್ರಪತಿಗೂ ಒಂದೇ ಮತ ಎನ್ನುವುದರ ಮೂಲಕ ಸಮಾನತೆ ತಂದಿದ್ದು. ಅದೇ ರೀತಿ ತೆರಿಗೆದಾರರಲ್ಲೂ ಅಷ್ಟೇ, ನೀವು ನೇರ ತೆರಿಗೆಯನ್ನಾದರೂ ಕಟ್ಟಿ, ಪರೋಕ್ಷ ತೆರಿಗೆಯನ್ನಾದರೂ ಕಟ್ಟಿ, ನಿಮ್ಮ ಆದಾಯದ ನಲವತ್ತು ಶೇಕಡ ಆದರೂ ಕಟ್ಟಿ, ಒಂದು ರೂಪಾಯಿಯಾದರೂ ಕಟ್ಟಿ ಎಲ್ಲರೂ ಸಮಾನರು.

ದೇಶ ನಡೆಯಲು ಇಲ್ಲಿ ವಾಸಿಸುವ ಪ್ರತಿಯೊಬ್ಬರ ಕೊಡುಗೆಯೂ ಬೇಕು. ಹಾಗಾಗಿ ಈ ದೇಶ ಎಲ್ಲರಿಗೂ ಸೇರಿದ್ದು. ಈ ಎಲ್ಲರೂ ಇರುವ ಸಮಾಜದಲ್ಲಿಯೇ ಪ್ರತಿಯೊಬ್ಬರೂ ಹಣ ಸಂಪಾದಿಸುವುದೇ ವಿನಾ ಮನುಷ್ಯರೇ ಇಲ್ಲದ ದ್ವೀಪದಲ್ಲಲ್ಲ. ಹಾಗಾಗಿ ಈ ಹಣದ, ದೊಡ್ಡಸ್ತಿಕೆಯ ಅಹಂಗೆ ಇಲ್ಲಿ ಯಾವ ಬೆಲೆಯೂ ಇಲ್ಲ.

ವಾಚಕರ ವಾಣಿ

ಪರೋಕ್ಷವಾಗಿ ಒಪ್ಪಿದಂತೆ ಅಲ್ಲವೇ?

'ಉತ್ತರಪ್ರದೇಶದ ಮಾದರಿಯಲ್ಲಿ ಬುಲ್ಡೋಜರ್ ಅಸ್ತ್ರವನ್ನು ಪ್ರಯೋಗಿಸುವಂತಹ ಪರಿಸ್ಥಿತಿ ರಾಜ್ಯದಲ್ಲಿ ಇಲ್ಲ. ಕರ್ನಾಟಕದಲ್ಲಿ ಸಂವಿಧಾನ ಹಾಗೂ ಕಾನೂನುಗಳ ಪಾಲನೆ ನಡೆಯುತ್ತಿದೆ. ದೇಶದ ಕಾನೂನು ಎಲ್ಲರಿಗೂ ಒಂದೇ' ಎಂದು ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡುವಾಗ ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ (ಪ್ರ.ವಾ., ಜೂನ್ 15). ಹಾಗಾದರೆ ಉತ್ತರಪ್ರದೇಶದ ಯೋಗಿ ಆದಿತ್ಯನಾಥ ನೇತೃತ್ವದ ಬಿಜೆಪಿ ಸರ್ಕಾರ ಸಂವಿಧಾನ ಹಾಗೂ ಕಾನೂನುಗಳನ್ನು ಪಾಲನೆ ಮಾಡುತ್ತಿಲ್ಲ ಎಂಬುದು ತಾನೇ ಇದರರ್ಥ?

ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ, ಪ್ರವಾದಿ ಮಹಮ್ಮದ್ ಅವರ ಬಗ್ಗೆ ನೀಡಿದ್ದ ಅವಹೇಳನಕಾರಿ ಹೇಳಿಕೆ ವಿರುದ್ಧ ಪ್ರತಿಭಟನೆ ನಡೆಸಿದವರ ಮನೆಗಳನ್ನು ನೆಲಸಮ ಮಾಡುವುದಲ್ಲದೆ ಪ್ರತಿಭಟನಕಾರರನ್ನು ಬಂಧಿಸಿರುವ ಉತ್ತರಪ್ರದೇಶ ಸರ್ಕಾರವನ್ನು ನಾಡಿನ ಬಹುಸಂಖ್ಯಾತರು ಖಂಡಿಸುತ್ತಿದ್ದಾರೆ. ಈ ವೇಳೆಯಲ್ಲಿ ರಾಜ್ಯ ಗೃಹ ಸಚಿವರು ತಮ್ಮದೇ ಪಕ್ಷ ಆಡಳಿತ ನಡೆಸುತ್ತಿರುವ ಉತ್ತರಪ್ರದೇಶದಲ್ಲಿ 'ಸಂವಿಧಾನ ಹಾಗೂ ಕಾನೂನುಗಳ ಪಾಲನೆ ಆಗುತ್ತಿಲ್ಲ' ಎಂಬುದನ್ನು ಪರೋಕ್ಷವಾಗಿ ಹೇಳಿರುವುದು ಸ್ವಾಗತಾರ್ಹ.

ಡಿ.ಸಿ.ಪ್ರಕಾಶ್, ಬೆಂಗಳೂರು

ಕೊಡುಗೈ ದಾನ: ಅತಿಯಾದ ನಿರೀಕ್ಷೆ

'ಸಿದ್ಧಿಸಲಿ ಸಲ್ಲುವುದ ಹಂಚುವ ಬುದ್ಧಿ' ಎಂಬ ಸದಾಶಿವ್ ಸೊರಟೂರು ಅವರ ಲೇಖನ (ಸಂಗತ, ಜೂನ್ 15) ಓದಿ, ಇವರು ಇನ್ನೂ ಯಾವ ಕಾಲದಲ್ಲಿ ಇದ್ದಾರೆ ಎನಿಸಿತು. ಎಷ್ಟಿದ್ದರೂ ಬೇಕು ಬೇಕು ಎನ್ನುವ ಈಗಿನ ಮನಃಸ್ಥಿತಿಯಲ್ಲಿ, ಕಡೆಯಪಕ್ಷ ತನಗೆ ಉಪಯೋಗವಾಗದೆ ಬೇರೆಯವರಿಗೆ ಉಪಯೋಗವಾಗುವ ವಸ್ತುಗಳನ್ನು ಕೊಟ್ಟರೂ ಅದು ಮೆಚ್ಚಬಹುದಾದ ಗುಣವೇ. ಇನ್ನು ಉಪಯೋಗಿಸುತ್ತಿರುವ ಅಥವಾ ಹೊಸತನ್ನು ಕೊಡುವ ವಿಚಾರವನ್ನು ನಿರೀಕ್ಷಿಸುವುದು ಸ್ವಲ್ಪ ಅತಿಯಾಯಿತೇನೋ ಎನಿಸುತ್ತದೆ. ಅಂತಹ ದಾನಶೂರ ಕರ್ಣರನ್ನು ಈ ಕಲಿಯುಗದಲ್ಲಿ ನಿರೀಕ್ಷಿಸಲಾಗದು.

ಟಿ.ವಿ.ಬಿ.ರಾಜನ್, ಬೆಂಗಳೂರು

ಯೋಗ ದಿನಾಚರಣೆ: ರಾಜಕೀಯ ಸಲ್ಲ

ಈ ಬಾರಿಯ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿಗೆ ಬರುತ್ತಾರೆ ಎಂಬ ಸುದ್ದಿ ಇದೆ. ಪ್ರಧಾನಿ ಈ ಕಾರಣಕ್ಕಾಗಿ ಮೈಸೂರಿಗೆ ಬರುತ್ತಿರುವುದು ಶ್ಲಾಘನೀಯ. ಅವರು ಬಂದರೆ ಪ್ರವಾಸೋದ್ಯಮವು ಮೈಸೂರಿನಲ್ಲಿ ಇನ್ನೂ ಹೆಚ್ಚಿನ ಪ್ರಚಾರದೊಂದಿಗೆ ಚುರುಕಾಗಲಿದೆ. ಅನೇಕ ಸರ್ಕಾರಿ ಕಾರ್ಯಕ್ರಮಗಳನ್ನು ಕಾಣಬಹುದು. ಎರಡು ವರ್ಷಗಳಿಂದ ಕೋವಿಡ್‌ನಿಂದ ಕಳೆಗುಂದಿದ್ದ ನಾಡಹಬ್ಬ ಈ ಬಾರಿ ವೈಭವಯುತವಾಗಿ ನಡೆಯಬಹುದು. ಇದಕ್ಕೆಲ್ಲಾ ಪ್ರಧಾನಿ ಭೇಟಿಯಿಂದ ಪುಷ್ಟಿ ಸಿಕ್ಕಂತೆ ಆಗುತ್ತದೆ.

ಅದುಬಿಟ್ಟು ಒಂದು ಪಕ್ಷದ ಕಾರ್ಯಕ್ರಮ ಎಂಬಂತೆ ಪರಿಗಣಿಸಿ ಅದನ್ನು ಆಯೋಜಿಸಿದರೆ, ವಿಶ್ವಮಟ್ಟದಲ್ಲಿ ಮುಜುಗರಕ್ಕೆ ಈಡಾಗಬೇಕಾಗುತ್ತದೆ. ಅಂತರರಾಷ್ಟ್ರೀಯ ಮನ್ನಣೆ ಇರುವ ಯೋಗ ದಿನಾಚರಣೆ ಯಾವುದೇ ಪಕ್ಷದ ಕಾರ್ಯಕ್ರಮ ಆಗಬಾರದು. ಎಲ್ಲ ಪಕ್ಷದವರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ವಿಶ್ವ ಯೋಗ ದಿನ ಆಚರಿಸಿದರೆ ಇತಿಹಾಸದಲ್ಲಿ ಈ ಕಾರ್ಯಕ್ರಮ ಶಾಶ್ವತವಾಗಿ ಉಳಿಯುತ್ತದೆ.

ಹರವೆ ಸಂಗಣ್ಣ ಪ್ರಕಾಶ್, ಹರವೆ, ಚಾಮರಾಜನಗರ

ಹಿರಿಯ ಜೀವಿಗಳ ಬಗ್ಗೆ ಹಿರಿದಾದ ಮನಸ್ಸಿರಲಿ

'ವೃದ್ಧಾಶ್ರಮಕ್ಕೆ ಸೇರಿಸುವಂತೆ ಹಿರಿಯರ ಮನವಿ' ಸುದ್ದಿ (ಪ್ರ.ವಾ., ಜೂನ್ 15) ಓದುತ್ತಿದ್ದಂತೆ ಕಣ್ಣೀರು ಕಪಾಳಕ್ಕೆ ಸರ್ರನೆ ಜಾರಿತು. ಹಿರಿಯರ ಸಮಸ್ಯೆ ಪರಿಹರಿಸಲು ಆರಂಭಿಸಿರುವ ರಾಷ್ಟ್ರೀಯ ಸಹಾಯವಾಣಿಗೆ ರಾಜ್ಯದಿಂದ ವರ್ಷದಲ್ಲಿ (2021ರ ಮೇನಿಂದ 2022ರ ಮೇವರೆಗೆ) 54,964 ಕರೆಗಳು ಬಂದಿರುವುದನ್ನು ತಿಳಿದಾಗ, ಬದುಕಿದ್ದಾಗಲೇ ಈ ರೀತಿ ಕಿರುಕುಳ ನೀಡುವ ಮಕ್ಕಳು ಇದ್ದರೆಷ್ಟು ಬಿಟ್ಟರೆಷ್ಟು ಎನ್ನುವ ಭಾವನೆ ಮೂಡದೇ ಇರದು. ಆಸ್ತಿ ವಿಚಾರದಲ್ಲಿ ವಂಚನೆ, ಸರಿಯಾಗಿ ನೋಡಿಕೊಳ್ಳದೇ ಇರುವುದು ಹಿರಿಯರನ್ನು ತೀವ್ರವಾಗಿ ಬಾಧಿಸುತ್ತದೆ. ದೇಶದಲ್ಲಿ ವಯೋನಿರೀಕ್ಷೆ ಹೆಚ್ಚಾಗುತ್ತಿರುವುದರಿಂದ ಹಿರಿಯ ಜೀವಿಗಳ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಅಂದರೆ ಸಮಸ್ಯೆ ಇನ್ನೂ ಉಲ್ಬಣ ಆಗುತ್ತದೆ. ಇದಕ್ಕೆ ಪರಿಹಾರ ಪಿಂಚಣಿ ನೀಡುವುದಾಗಲೀ, ದವಸಧಾನ್ಯ ನೀಡುವುದಾಗಲೀ ಅಲ್ಲ. ಬದಲಾಗಿ ಸರ್ಕಾರ ಅಥವಾ ಸ್ವಯಂಸೇವಾ ಸಂಸ್ಥೆಗಳು ಹಿರಿಯರಿಗಾಗಿ ಕಲ್ಯಾಣ ಕೇಂದ್ರ, ಆಶ್ರಮಗಳನ್ನು ನಡೆಸಬೇಕು. ನೇರವಾಗಿ ಆ ಸಂಸ್ಥೆಗಳಿಗೆ ಹಣ ವರ್ಗಾವಣೆ ಮಾಡಿ ಹಿರಿಯ ಜೀವಗಳನ್ನು ಚೆನ್ನಾಗಿ ನೋಡಿಕೊಳ್ಳುವ ಕೆಲಸ ಆಗಬೇಕು. ಹಿರಿಯರ ಇಚ್ಛಾನುಸಾರ ಅವರ ಆಸ್ತಿಯನ್ನು ಯೋಗ್ಯ ರೀತಿಯಲ್ಲಿ ವಿಲೇವಾರಿ ಮಾಡಿ, ಬಂದ ಹಣವನ್ನು ಜೀವಾವಧಿಯವರೆಗೂ ಅವರಿಗಾಗಿ ವಿನಿಯೋಗಿಸುವ ವ್ಯವಸ್ಥೆ ಆಗಬೇಕು. ಹಿರಿಯರು ಸಹ ಭೌತಿಕ ಆಸ್ತಿಯ ಬದಲಿಗೆ ಮಕ್ಕಳನ್ನೇ ಆಸ್ತಿ ಎಂಬಂತೆ ಬೆಳೆಸುವುದು ಉತ್ತಮ.

ಬಿ.ಆರ್.ಅಣ್ಣಾಸಾಗರ, ಸೇಡಂ

ಅವಮಾನವಲ್ಲ... ಜಾತಿ ಮೇಲರಿಮೆಯ ಪ್ರಶ್ನೆ

ಬಸವಣ್ಣನವರ ಪಾಠದಲ್ಲಿ 'ಜನಿವಾರ ಕಿತ್ತುಹಾಕಿ ಹೋದರು ಎಂದು ಅಲ್ಲಿತ್ತು. ಉಪನಯನ ಆಗಿ ಹೋದರು ಎಂಬುದು ಇಲ್ಲಿದೆ. ಅದರಲ್ಲಿ ಅವಮಾನ ಆಗುವಂಥದ್ದೇನಿದೆ' ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಪ್ರಶ್ನಿಸಿದ್ದಾರೆ (ಪ್ರ.ವಾ., ಜೂನ್ 15). 'ಜನಿವಾರ ಕಿತ್ತುಹಾಕಿ ಹೋದರು' ಎಂಬ ನುಡಿಗಳು ಬಸವಣ್ಣನವರ ಮನದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧವಾಗಿ ತುಡಿಯುತ್ತಿದ್ದ ಭಾವನೆಗಳನ್ನು ಸಂಕೇತಿಸುತ್ತವೆ. ಕೆಲವು ಜಾತಿಯ ಜನರು ತಮ್ಮ ಮೈಮೇಲೆ ಜನಿವಾರವನ್ನು ತೊಡುವುದರ ಮೂಲಕ, ತಾವು ಜನಿವಾರ ತೊಡದವರಿಗಿಂತ ಮೇಲಿನವರು ಎಂಬ ಭಾವವನ್ನು ಹೊಂದಿರುವುದನ್ನು ಬಸವಣ್ಣನವರು ಪ್ರಶ್ನಿಸಿದ್ದರು. ಬಸವಣ್ಣನವರ ದೃಷ್ಟಿಯಲ್ಲಿ ಜಾತಿವ್ಯವಸ್ಥೆಯು ದುಡಿಯುವ ವರ್ಗದ ಜನಸಮುದಾಯವನ್ನು ಅನ್ನ, ಬಟ್ಟೆ, ವಸತಿ, ವಿದ್ಯೆ, ಆರೋಗ್ಯದಿಂದ ವಂಚಿತರನ್ನಾಗಿ ಮಾಡಿ, ಹಸಿವು, ಬಡತನ ಮತ್ತು ಅಪಮಾನದಿಂದ ನರಳುವುದಕ್ಕೆ ಕಾರಣವಾದ ಕ್ರೂರ ವ್ಯವಸ್ಥೆಯಾಗಿತ್ತು. ಆದ್ದರಿಂದಲೇ 'ಎಲ್ಲ ಮಾನವರು ಒಂದೇ' ಎಂಬ ಸಂದೇಶವನ್ನು ಸಾರುವುದಕ್ಕಾಗಿ ಮತ್ತು ಜಾತಿ ವ್ಯವಸ್ಥೆಯ ಬೇರನ್ನು ಅಲುಗಿಸಿ ಸಡಿಲಿಸುವುದರ ಸಂಕೇತವಾಗಿ ಜಾತಿ ಮೇಲರಿಮೆಯ ಸಂಪ್ರದಾಯದಂತೆ ತಮಗೆ ತೊಡಿಸಿದ್ದ ಜನಿವಾರವನ್ನು ಕಿತ್ತುಹಾಕಿ ಹೋದರು. ಉಪನಯನ ಆಗಿ ಹೋದರು ಎಂಬ ನುಡಿಗಳು ಮೇಲಿನ ಎಲ್ಲಾ ಸಂಗತಿಗಳನ್ನು ಮರೆಮಾಚುತ್ತವೆ.

ಸಿ.ಪಿ.ನಾಗರಾಜ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಠ್ಯಪುಸ್ತಕ ಪುನರ್ ಪರಿಷ್ಕರಣೆ

10ನೇ ತರಗತಿ ಸಮಾಜ ವಿಜ್ಞಾನ ಭಾಗ–1 ಪ್ರಮುಖ ಬದಲಾವಣೆಗಳು

ಪ್ರಜಾವಾಣಿ ವಾರ್ತೆ

ಪ್ರೊ. ಬರಗೂರು ರಾಮಚಂದ್ರಪ್ಪ ಸರ್ವಾಧ್ಯಕ್ಷತೆಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ ಪರಿಷ್ಕರಿಸಿದ್ದ 10ನೇ ತರಗತಿಯ ಸಮಾಜವಿಜ್ಞಾನ ಭಾಗ-1ರ ಪುಸ್ತಕದಲ್ಲಿ ಇದ್ದ ಹಲವು ಪಾಠಗಳನ್ನು, ರೋಹಿತ್ ಚಕ್ರತೀರ್ಥ ನೇತೃತ್ವದ ಪರಿಶೀಲನಾ ಸಮಿತಿಯು ಕೈಬಿಟ್ಟಿದೆ. ಕೆಲವು ಪಾಠಗಳಲ್ಲಿ ಇದ್ದ ವಿವರಗಳನ್ನು ಕೈಬಿಡಲಾಗಿದೆ, ಕೆಲವು ವಿವರಗಳನ್ನು ಹೊಸದಾಗಿ ಸೇರಿಸಲಾಗಿದೆ. ಪರಿಷ್ಕರಣ ಸಮಿತಿ ಅಂತಿಮಗೊಳಿಸಿದ್ದ ಪಠ್ಯದಲ್ಲಿ ಇದ್ದ ಸಾಮಾಜಿಕ ಅಸಮಾನತೆ, ಕಾರ್ಪೊರೇಟ್ ತಂತ್ರಗಾರಿಕೆ ಭಾಗಗಳನ್ನು ಪರಿಶೀಲನಾ ಸಮಿತಿಯು ಕೈಬಿಟ್ಟಿದೆ. ನಿರುದ್ಯೋಗ ಸಮಸ್ಯೆ, ಕೋಮುವಾದ ಸಮಸ್ಯೆ ಭಾಗಗಳ ವಿವರಗಳನ್ನು ಬದಲಿಸಲಾಗಿದೆ. ಪ್ರಾದೇಶಿಕವಾದವು ದೇಶದ ದೊಡ್ಡ ಸಮಸ್ಯೆ ಎಂಬ ಹೊಸ ಭಾಗವನ್ನು ಪುನರ್‌ಪರಿಷ್ಕರಣೆಯಲ್ಲಿ ಸೇರಿಸಲಾಗಿದೆ.

ಭಾರತದ ಸಮಸ್ಯೆಗಳು ಬದಲು

ಪರಿಷ್ಕರಣ ಸಮಿತಿಯು ಅಂತಿಮಗೊಳಿಸಿದ್ದ ಪಠ್ಯಪುಸ್ತಕದಲ್ಲಿ 'ಭಾರತದ ಸಮಸ್ಯೆಗಳು ಮತ್ತು ಅವುಗಳ ಪರಿಹಾರೋಪಾಯಗಳು' ಎಂಬ ಪಾಠವಿತ್ತು. ಪರಿಶೀಲನಾ ಸಮಿತಿ ಸಹ ಈ ಪಾಠವನ್ನು ಉಳಿಸಿಕೊಂಡಿದೆ. ಆದರೆ, ಪಾಠದ ಭಾಗಗಳನ್ನು ಬದಲಿಸಿದೆ.

ಪರಿಷ್ಕೃತ ಪಠ್ಯ

ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ನಿರುದ್ಯೋಗ
- ತಾರತಮ್ಯ (ಲಿಂಗ, ಜಾತಿ, ಪ್ರಾಂತೀಯ ಅಸಮಾನತೆ)
- ಭಯೋತ್ಪಾದಕತೆ
- ಭ್ರಷ್ಟಾಚಾರ
- ಕೋಮುವಾದ
- ಕಾರ್ಪೋರೇಟ್ ತಂತ್ರಗಾರಿಕೆ

ಪುನರ್‌ಪರಿಷ್ಕೃತ ಪಠ್ಯ

ಭಾರತಕ್ಕಿರುವ ಸವಾಲುಗಳು ಹಾಗೂ ಅವುಗಳ ಪರಿಹಾರೋಪಾಯಗಳು

ಈ ಅಧ್ಯಾಯದಲ್ಲಿ ಕೆಳಗಿನ ಅಂಶಗಳನ್ನು ತಿಳಿಯುತ್ತೇವೆ.

- ಕೋಮುವಾದ
- ಮಹಿಳೆಯರ ಸ್ಥಾನಮಾನ
- ಜನಸಂಖ್ಯೆ ಹೆಚ್ಚಳ
- ಲಾಭ ಬಡುಕತನ
- ಭ್ರಷ್ಟಾಚಾರ
- ಅನಕ್ಷರತೆ
- ಆರ್ಥಿಕ ಅಸಮಾನತೆ
- ಬಡತನ
- ಪ್ರಾದೇಶಿಕವಾದ
- ಕಳ್ಳ ಸಾಗಾಣಿಕೆ

ಪರಿಷ್ಕೃತ ಪಠ್ಯ – (ಬರಗೂರು ರಾಮಚಂದ್ರಪ್ಪ ಸಮಿತಿ)

ಕೋಮುವಾದ : ಕೋಮುವಾದ ಅಥವಾ ಮತೀಯವಾದ ನಮ್ಮ ಭಾರತೀಯ ಸಮಾಜದ ಪ್ರಮುಖ ಸಮಸ್ಯೆಯಾಗಿದೆ. ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎಂದು ಕರೆಯುತ್ತೇವೆ. ಇದು ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ. ಕೋಮುವಾದವು ಸಮಾಜದಲ್ಲಿ ಗುಂಪುಗಾರಿಕೆ, ಆರ್ಥಿಕ ವೈಷಮ್ಯ ಮತ್ತು ರಾಜಕೀಯ ಪೈಪೋಟಿಯಲ್ಲಿ ಪ್ರಕಟವಾಗುತ್ತದೆ. ಭಾರತದ ಮಟ್ಟಿಗೆ ಈ ಕೋಮುವಾದ ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುವ, ಅಪಾಯ ತಂದೊಡ್ಡುವ ಶಕ್ತಿಯಾಗಿದೆ. ಅದು ಸಮಾಜದ ನೆಮ್ಮದಿಯನ್ನು ...

... ಸಾಮಾನ್ಯ ಹಾಗೂ ಆರೋಗ್ಯಕರ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಯತ್ನಿಸಬೇಕು. ಮತೀಯ ಮೂಲಭೂತವಾದ ರಾಷ್ಟ್ರೀಯ ಹಿತಾಸಕ್ತಿಗೆ ಮತ್ತು ರಾಷ್ಟ್ರಾಭಿಮಾನಕ್ಕೆ ಧಕ್ಕೆ ಆಗದಂತೆ ತಡೆಗಟ್ಟಬೇಕು. ಶಿಕ್ಷಣದಲ್ಲಿ ಜಾತ್ಯತೀತ ತತ್ವವನ್ನು ಅಳವಡಿಸಿ ಅರಿವು ಮೂಡಿಸಬೇಕಿದೆ. ಸಾರ್ವಜನಿಕ ಎಚ್ಚರ, ರಾಜಕೀಯ ಅಚಲ ನಿರ್ಧಾರ, ಆಡಳಿತಾತ್ಮಕ ಸಮತೋಲನ, ಕ್ರಮಬದ್ಧ ಕಾನೂನು ವ್ಯವಸ್ಥೆ, ಸದೃಢ ರಾಷ್ಟ್ರೀಯ ಮನೋಭಾವ, ಆರೋಗ್ಯಕರ ಪೂರಕ ಸುದ್ದಿಮಾಧ್ಯಮ – ಇವೆಲ್ಲದರ ಸಮ್ಮಿಳಿತದೊಂದಿಗೆ ಕೋಮುವಾದವನ್ನು ನಿಯಂತ್ರಿಸಬಹುದು.

ಪರಿಷ್ಕರಣ ಸಮಿತಿಯ ಪಠ್ಯಪುಸ್ತಕದಲ್ಲಿ ಕೋಮುವಾದಕ್ಕೆ ಸಂಬಂಧಿಸಿದಂತೆ ಇದ್ದ ವಿವರ

ಪುನರ್‌ಪರಿಷ್ಕೃತ ಪಠ್ಯ – (ರೋಹಿತ್ ಚಕ್ರತೀರ್ಥ ಸಮಿತಿ)

1. **ಕೋಮುವಾದ :** ಕೋಮುವಾದ ಅಥವಾ ಮತೀಯವಾದ ನಮ್ಮ ಭಾರತೀಯ ಸಮಾಜದ ಪ್ರಮುಖ ಸಮಸ್ಯೆಯಾಗಿದೆ. ...

... ಸಾಮಾನ್ಯ ಹಾಗೂ ಆರೋಗ್ಯಕರ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಯತ್ನಿಸಬೇಕು. ಮತೀಯ ಮೂಲಭೂತವಾದ ರಾಷ್ಟ್ರೀಯ ಹಿತಾಸಕ್ತಿಗೆ ಮತ್ತು ರಾಷ್ಟ್ರಾಭಿಮಾನಕ್ಕೆ ಧಕ್ಕೆ ಆಗದಂತೆ ತಡೆಗಟ್ಟಬೇಕು. ಶಿಕ್ಷಣದಲ್ಲಿ ಜಾತ್ಯತೀತ ತತ್ವವನ್ನು ಅಳವಡಿಸಿ ಅರಿವು ಮೂಡಿಸಬೇಕಿದೆ. ಸಾರ್ವಜನಿಕ ಎಚ್ಚರ, ರಾಜಕೀಯ ಅಚಲ ನಿರ್ಧಾರ, ಆಡಳಿತಾತ್ಮಕ ಸಮತೋಲನ, ಕ್ರಮಬದ್ಧ ಕಾನೂನು ವ್ಯವಸ್ಥೆ, ಸದೃಢ ರಾಷ್ಟ್ರೀಯ ಮನೋಭಾವ, ಆರೋಗ್ಯಕರ ಪೂರಕ ಸುದ್ದಿಮಾಧ್ಯಮ – ಇವೆಲ್ಲದರ ಸಮ್ಮಿಳಿತದೊಂದಿಗೆ ಕೋಮುವಾದವನ್ನು ನಿಯಂತ್ರಿಸಬಹುದು.

ಪರಿಶೀಲನಾ ಸಮಿತಿಯ ಪಠ್ಯಪುಸ್ತಕದಲ್ಲಿ ಕೋಮುವಾದಕ್ಕೆ ಸಂಬಂಧಿಸಿದಂತೆ ಇರುವ ವಿವರ

'ಪ್ರಾದೇಶಿಕವಾದವೂ ಒಂದು ಸಮಸ್ಯೆ'



ಪರಿಷ್ಕರಣ ಸಮಿತಿಯು ಅಂತಿಮಗೊಳಿಸಿದ್ದ ಪಠ್ಯಪುಸ್ತದಲ್ಲಿ 'ಭಾರತಕ್ಕಿರುವ ಸವಾಲುಗಳು ಮತ್ತು ಅವುಗಳ ಪರಿಹಾರೋಪಾಯಗಳು' ಎಂಬ ಪಾಠಕ್ಕೆ ಪರಿಶೀಲನಾ ಸಮಿತಿ 'ಪ್ರಾದೇಶಿಕವಾದ' ಎಂಬ ಭಾಗವನ್ನು ಸೇರಿಸಿದೆ. ಆ ಭಾಗದ ವಿವರ ಈ ರೀತಿ ಇದೆ.

ರೋಹಿತ್ ಚಕ್ರತೀರ್ಥ ಅವರ ಸಮಿತಿಯು ಪ್ರಾದೇಶಿಕವಾದದ ಸಮಸ್ಯೆಗಳನ್ನು ಈ ರೀತಿ ವಿವರಿಸಿದೆ

- ಪ್ರಾದೇಶಿಕ ಮನೋಭಾವ ತೀರಾ ಹೆಚ್ಚು ಅನಿಸಿದರೆ ಅದು ರಾಷ್ಟ್ರದ ಏಕತೆ ಹಾಗೂ ಹಿತಾಸಕ್ತಿಗಳಿಗೆ ಧಕ್ಕೆ ಒದಗಿಸುತ್ತದೆ
- ಅತಿಯಾದ ಭಾಷಾಭಿಮಾನವೂ ರಾಷ್ಟ್ರೀಯವಾದದ ವಿರುದ್ಧ ಸಂಕುಚಿತ ಮನೋಭಾವವನ್ನು ಬೆಳೆಸುತ್ತದೆ
- ಪ್ರಾದೇಶಿಕವಾದವನ್ನು ವೈಭವೀಕರಿಸುವುದರಿಂದ ದೇಶದ ಏಕತೆಗೆ ಧಕ್ಕೆ ಉಂಟಾಗುತ್ತದೆ

2. **ಪ್ರಾದೇಶಿಕವಾದ :** ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನೇ ಅತ್ಯಂತ ಗಾಢವಾಗಿ ಪ್ರೀತಿಸಿ, ಕೇವಲ ಆ ಭಾಗದ ಬಗ್ಗೆಯೇ ಅತಿಯಾದ ಅಭಿಮಾನವನ್ನು ಬೆಳೆಸಿಕೊಂಡರೆ ಅದನ್ನು ಪ್ರಾದೇಶಿಕವಾದ ಎಂದು ಕರೆಯಬಹುದು. ಭಾರತದಂತಹ ವಿಶಾಲ ರಾಷ್ಟ್ರ ಸಹಜವಾಗಿ ಹಲವಾರು ಪ್ರಾದೇಶಿಕ ವಿಭಿನ್ನತೆಯನ್ನು ಹೊಂದಿದ ದೇಶ. ಒಂದು ನಿರ್ದಿಷ್ಟ ಹಂತದವರೆಗೆ ಈ ಪ್ರಾದೇಶಿಕವಾದ ಸಹನೆಗೆ ಯೋಗ್ಯ ಎನಿಸುತ್ತದೆ. ತಮ್ಮದೇ ಪ್ರದೇಶದ ಸರ್ವತೋಮುಖ ಬೆಳವಣಿಗೆಗೆ ಪ್ರಯತ್ನಿಸಲು ಈ ಭಾವನೆ ಪ್ರೇರಣೆ ನೀಡುತ್ತದೆ. ಆದರೆ ಈ ಪ್ರಾದೇಶಿಕ ಮನೋಭಾವ ತೀರಾ ಹೆಚ್ಚು ಎನಿಸಿದರೆ ಅದು ರಾಷ್ಟ್ರದ ಏಕತೆ ಹಾಗೂ ಹಿತಾಸಕ್ತಿಗಳಿಗೆ ಧಕ್ಕೆ ಒದಗಿಸುತ್ತದೆ. ಆದುದರಿಂದ ಆಯಾಯಾ ಪ್ರದೇಶದ ಜನಸಮುದಾಯ ತಮ್ಮದೇ ಪ್ರಾದೇಶಿಕ ಮನೋಭಾವ ಹೊಂದುವ ಜೊತೆಜೊತೆಗೇ ಸಮಗ್ರ ದೇಶದ ಪ್ರಗತಿಯ ಬಗೆಗೂ ಚಿಂತನೆ ಹರಿಸುವಿಕೆ ಅತ್ಯಗತ್ಯ. ...

(56)

ಸಂಕುಚಿತ ಮನೋಭಾವವನ್ನು ಬೆಳೆಸುತ್ತದೆ. ಪ್ರಾದೇಶಿಕವಾದವನ್ನು ವೈಭವೀಕರಿಸುವುದರಿಂದ ದೇಶದ ಏಕತೆಗೆ ಧಕ್ಕೆ ಉಂಟಾಗುತ್ತದೆ. ಇತ್ತೀಚೆಗೆ ಆಂಧ್ರಪ್ರದೇಶದಲ್ಲಿನ ತೆಲಂಗಾಣದ ಭಾಗದ ಪ್ರಾದೇಶಿಕವಾದ ಹೋರಾಟವನ್ನು ಗಮನಿಸಬಹುದು. ದೇಶದ ಇನ್ನಿತರ ಭಾಗಗಳಲ್ಲಿ ನಡೆಯುತ್ತಿರುವ ಪ್ರಾದೇಶಿಕವಾದದ ಹೋರಾಟಗಳು ಕೂಡಾ ದೇಶದ ಅಭಿವೃದ್ಧಿ ತೊಡಕಾಗುವ ಸಾಧ್ಯತೆಗಳಿವೆ.

ಡಾ.ಜಿ.ಎಸ್.ಮುಡಂಬಡಿತ್ತಾಯ ಸಮಿಯು ರಚಿಸಿ, ಡಾ. ಬರಗೂರು ರಾಮಚಂದ್ರಪ್ಪ ಸಮಿತಿಯು ಪರಿಷ್ಕರಿಸಿದ ಮತ್ತು ರೋಹಿತ್ ಚಕ್ರತೀರ್ಥ ಸಮಿತಿಯು ಪುನರ್‌ಪರಿಷ್ಕರಿಸಿದ ಪಠ್ಯಪುಸ್ತಕಗಳ ಪಿಡಿಎಫ್ ಪ್ರತಿಗಳನ್ನು ಕರ್ನಾಟಕ ಪಠ್ಯಪುಸ್ತಕಗಳ ಸಂಘದ ಜಾಲತಾಣದಲ್ಲಿ ಹಾಕಲಾಗಿದೆ. ಆದರೆ, ಎಲ್ಲಾ ಪಠ್ಯಪುಸ್ತಕಗಳ ಎಲ್ಲಾ ಪುಟಗಳ ಮೇಲೂ 'ನಾಟ್ ಫಾರ್ ರಿಪಬ್ಲಿಷಿಂಗ್' (ಮರುಮುದ್ರಣಕ್ಕಲ್ಲ) ಎಂದು ವಾಟರ್‌ಮಾರ್ಕ್ ಹಾಕಲಾಗಿದೆ. ಹೀಗಾಗಿ ಈ ಪಿಡಿಎಫ್ ಪ್ರತಿಗಳ ಬದಲಿಗೆ ಲಭ್ಯವಿರುವ ಭೌತಿಕ ಪ್ರತಿಗಳನ್ನಷ್ಟೇ ಇಲ್ಲಿ ಪರಿಶೀಲನೆಗೆ ನೀಡಲಾಗಿದೆ. ಮುಡಂಬಡಿತ್ತಾಯ ನೇತೃತ್ವದ ಸಮಿತಿಯು ರಚಿಸಿದ್ದ ಪಠ್ಯಪುಸ್ತಕದ ಭೌತಿಕ ಪ್ರತಿ ಲಭ್ಯವಾಗದ ಕಾರಣ, ಅದನ್ನು ಇಲ್ಲಿ ನೀಡಲಾಗಿಲ್ಲ.

ನಾರಾಯಣ ಗುರು ಪಾಠ ಕೈಬಿಟ್ಟಿದ್ದ ಚಕ್ರತೀರ್ಥ ಸಮಿತಿ

ನಾರಾಯಣ ಗುರು ಅವರಿಗೆ ಸಂಬಂಧಿಸಿದ ಪೂರ್ಣ ಪರಿಚಯವನ್ನು ಪರಿಷ್ಕರಣ ಸಮಿತಿಯು 10ನೇ ತರಗತಿಯ ಸಮಾಜ ವಿಜ್ಞಾನ ಭಾಗ-1ರಲ್ಲಿ ಸೇರಿಸಿತ್ತು. ಆದರೆ, ಪರಿಶೀಲನಾ ಸಮಿತಿಯು ನಾರಾಯಣ ಗುರು ಅವರಿಗೆ ಸಂಬಂಧಿಸಿದ ಅದನ್ನು ಒಂದು ಪ್ಯಾರಾಕ್ಕೆ ಇಳಿಸಿತ್ತು. 'ಪ್ರಜಾವಾಣಿ' ಈ ಬಗ್ಗೆ ವರದಿ ಪ್ರಕಟಿಸಿದ ನಂತರ, 10ನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಪೂರ್ಣ ಪ್ರಮಾಣದಲ್ಲಿ ತೆಗೆದುಕೊಂಡಿದೆ.

ಪೆರಿಯಾರ್ ಪಾಠಕ್ಕೆ ಕತ್ತರಿ

ಪರಿಷ್ಕರಣ ಸಮಿತಿ ರಚಿಸಿದ್ದ ಸಮಾಜವಿಜ್ಞಾನ ಭಾಗ-1ರ 'ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು' ಎಂಬ ಪಾಠದಲ್ಲಿ ನಾರಾಯಣ ಗುರು ಮತ್ತು ಪೆರಿಯಾರ್ ಅವರಿಗೆ ಸಂಬಂಧಿಸಿದ ವಿವರಗಳನ್ನು, ಪರಿಶೀಲನಾ ಸಮಿತಿಯು ಈ ಪಠ್ಯಪುಸ್ತಕದಿಂದ ತೆಗೆದುಹಾಕಿದೆ. ಆದರೆ, ಈ ಇಬ್ಬರ ವಿವರಗಳನ್ನು 10ನೇ ತರಗತಿಯ ಕನ್ನಡ ಭಾಷಾ ಪಠ್ಯಪುಸ್ತಕದಲ್ಲಿ ಹೊಸ ಪಾಠವಾಗಿ ಸೇರಿಸಲಾಗಿದೆ. ಆದರೆ, ಪೆರಿಯಾರ್ ಅವರ ಬಗ್ಗೆ ಮೂಲ ಪಾಠದಲ್ಲಿ ಇದ್ದ ಕೆಲವು ವಿವರಗಳನ್ನು ಕನ್ನಡ ಪಠ್ಯಪುಸ್ತಕದಲ್ಲಿ ತೆಗೆಯಲಾಗಿದೆ. ತೆಗೆಯಲಾದ ವಿವರಗಳನ್ನು ಈ ಚಿತ್ರದಲ್ಲಿ ಹೈಲೈಟ್ ಮಾಡಲಾಗಿದೆ.

ಪರಿಷ್ಕೃತ ಪಠ್ಯ

ಪೆರಿಯಾರ್

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬ್ರಾಹ್ಮಣೇತರ ಚಳವಳಿಯೆಂಬ ಹೊಸ ಬಗೆಯ ಚಳವಳಿ ದಕ್ಷಿಣ ಭಾರತದಲ್ಲಿ ಆರಂಭವಾಯಿತು. ಬಹುಸಂಖ್ಯಾತರಾಗಿದ್ದ ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ಇದ್ದ ಅವಕಾಶಗಳಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ತಮಗೆ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟವನ್ನು ಆರಂಭಿಸಿದರು. ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇದೊಂದು ಪ್ರಮುಖ ಚಳವಳಿಯಾಯಿತು. ಬ್ರಾಹ್ಮಣೇತರ ಸಮುದಾಯಗಳು ತಮ್ಮ ಮೇಲೆ ಹೇರಲಾಗಿದ್ದ ಸಾಮಾಜಿಕ ನಿರ್ಬಂಧಗಳನ್ನು ವಿರೋಧಿಸತೊಡಗಿದರು. ಇದಕ್ಕೆ ಪ್ರಮುಖ ಕಾರಣವಾದದ್ದು ಇಂಗ್ಲಿಷ್ ವಿದ್ಯಾಭ್ಯಾಸದ ವಿಸ್ತರಣೆ. ಇದರ ಜೊತೆಗೆ ಬ್ರಿಟಿಷರು 1870ರ ನಂತರ ತಂದ ಜನಗಣತಿ ವರದಿಗಳು, ಬ್ರಾಹ್ಮಣೇತರರಿಗೆ ತಮ್ಮ ಜನಸಂಖ್ಯೆಯ ಅರಿವನ್ನು ತಂದುಕೊಟ್ಟವು. ತಮಿಳುನಾಡಿನಲ್ಲಿ 1916ರಲ್ಲಿ ಪ್ರಾರಂಭವಾದ 'ಜಸ್ಟೀಸ್ ಪಾರ್ಟಿ'ಯು ಈ ಚಳವಳಿಯನ್ನು ಮುನ್ನಡೆಸಿತು.

(49)

ಜಸ್ಟೀಸ್ ಪಾರ್ಟಿಯ ಮೂಲಕ ಬ್ರಾಹ್ಮಣೇತರ ಚಳವಳಿಯು ಹೊಸರೂಪವನ್ನು ಪಡೆಯಿತು. ಇದು ಹೆಚ್ಚು ಕ್ರಾಂತಿಕಾರಕವಾದ ಹೆಜ್ಜೆಯಾಗಿತ್ತು. ಆ ಹೊಸರೂಪವೇ ಇ.ವಿ. ರಾಮಸ್ವಾಮಿ ನಾಯ್ಕರ್ ಅವರ ನೇತೃತ್ವದಲ್ಲಿ ಆರಂಭಗೊಂಡ 'ಆತ್ಮಗೌರವ ಚಳವಳಿ' (Self Respect Movement). 1925ರಲ್ಲಿ ಕಾಂಗ್ರೆಸ್ ಪಕ್ಷದಿಂದ ಹೊರಬಂದ ರಾಮಸ್ವಾಮಿಯವರು 1926ರಲ್ಲಿ ಸೆಲ್ಫ್ ರೆಸ್ಪೆಕ್ಟ್ ಲೀಗ್ ಅನ್ನು ಆರಂಭಿಸಿದರು. ಇವರನ್ನು ಜನರು ಪ್ರೀತಿಯಿಂದ ಪೆರಿಯಾರ್ (ಹಿರಿಯರು) ಎಂದು ಕರೆದರು. ಪೆರಿಯಾರ್ ತಮಿಳುನಾಡಿನ ಈರೋಡಿನಲ್ಲಿ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದರು. ವರ್ಣಾಶ್ರಮ ಧರ್ಮದ ಪರವಾಗಿ ಕಾಂಗ್ರೆಸ್ ಇದೆ ಎಂದು ಅದಕ್ಕೆ ಪರ್ಯಾಯವಾದ ದ್ರಾವಿಡ ಚಳವಳಿಯೆಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳವಳಿ ಯನ್ನು ರೂಪಿಸತೊಡಗಿದರು. ಆರ್ಯ, ಬ್ರಾಹ್ಮಣ ಎನ್ನುವ ಜನಾಂಗೀಯ ಶ್ರೇಷ್ಠತೆಯನ್ನು ಸಾರುವ ಆಲೋಚನೆಗಳನ್ನು ಇಡಿಯಾಗಿ ತಿರಸ್ಕರಿಸಿದರು. ತಮಿಳುಭಾಷೆಯನ್ನು ದ್ರಾವಿಡರ ಭಾಷೆಯೆಂದರು. ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ವಿರೋಧಿಸಿದರು. ಮತ್ತೊಂದು ಪ್ರಮುಖ ಅಂಶವೆಂದರೆ ರಾಮಾಯಣ ಮಹಾಕಾವ್ಯದಲ್ಲಿ ಬರುವ ರಾವಣನನ್ನು ದ್ರಾವಿಡರ ನಾಯಕನೆಂದು ಬಿಂಬಿಸಿ, ರಾಮನನ್ನು ವೈದಿಕ ವರ್ಗದ ದೇವರೆಂದು ತಿರಸ್ಕರಿಸಿದರು. ಬನಾರಸ್ಸಿನಲ್ಲಿ ಆದ ಕಹಿ ಅನುಭವಗಳಿಂದ ಮತ್ತಷ್ಟು ವ್ಯಗ್ರರಾದ ಪೆರಿಯಾರರು ಸಂಸ್ಕೃತ ಭಾಷೆ ಮತ್ತು ರಾಮಾಯಣದ ರಾಮ ಮತ್ತು ರಾವಣರನ್ನು ಸಾಂಸ್ಕೃತಿಕ ಸಂಕೇತಗಳನ್ನಾಗಿ ಪರಿವರ್ತಿಸಿ, ರಾವಣ ಪರಂಪರೆಯನ್ನು ವೈಭವೀಕರಿಸಿದರು. ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿಹಿಡಿದರು. 1924ರಲ್ಲಿ ಕೇರಳದ ವೈಕಂನಲ್ಲಿ ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶದ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದ್ದರು. 1939ರಲ್ಲಿ ಜಸ್ಟೀಸ್ ಪಕ್ಷದ ಅಧ್ಯಕ್ಷರಾದರು. "ದ್ರಾವಿಡ ಕಳಗಂ" ಎಂಬ ಸಂಘಟನೆಯನ್ನು ಹುಟ್ಟುಹಾಕಿದರು. 'ರಿವೋಲ್ಟ್' ಪತ್ರಿಕೆಯನ್ನು ಹುಟ್ಟುಹಾಕಿದರು.



ಪೆರಿಯಾರ್

ಪುನರ್‌ಪರಿಷ್ಕೃತ ಪಠ್ಯ

ಪೆರಿಯಾರ್

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬ್ರಾಹ್ಮಣೇತರ ಚಳವಳಿಯೆಂಬ ಹೊಸ ಬಗೆಯ ಚಳವಳಿ ದಕ್ಷಿಣ ಭಾರತದಲ್ಲಿ ಆರಂಭವಾಯಿತು. ಬಹುಸಂಖ್ಯಾತರಾಗಿದ್ದ ಬ್ರಾಹ್ಮಣೇತರರು ಸರ್ಕಾರಿ ರಂಗದಲ್ಲಿ ಇದ್ದ ಅವಕಾಶಗಳಲ್ಲಿ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ತಮಗೆ ಪ್ರಾತಿನಿಧ್ಯ ಸಿಗಬೇಕೆಂದು ಹೋರಾಟವನ್ನು ಆರಂಭಿಸಿದರು. ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಇದೊಂದು ಪ್ರಮುಖ ಚಳವಳಿಯಾಯಿತು. ಬ್ರಾಹ್ಮಣೇತರ ಸಮುದಾಯಗಳು ತಮ್ಮ ಮೇಲೆ ಹೇರಲಾಗಿದ್ದ ಸಾಮಾಜಿಕ ನಿರ್ಬಂಧಗಳನ್ನು ...

... ಧರ್ಮದ ಪರವಾಗಿ ಕಾಂಗ್ರೆಸ್ ಇದೆ ಎಂದು ಅದಕ್ಕೆ ಪರ್ಯಾಯವಾದ ದ್ರಾವಿಡ ಚಳವಳಿಯೆಂಬ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳವಳಿಯನ್ನು ರೂಪಿಸತೊಡಗಿದರು. ತಮಿಳು ಭಾಷೆಯನ್ನು ದ್ರಾವಿಡರ ಭಾಷೆಯೆಂದರು. ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ ಸಮಾನತೆಯ ಆಶಯವನ್ನು ಎತ್ತಿಹಿಡಿದರು. ೧೯೨೪ರಲ್ಲಿ ಕೇರಳದ ವೈಕಂನಲ್ಲಿ ಅಸ್ಪೃಶ್ಯರಿಗೆ ದೇವಾಲಯದ ಪ್ರವೇಶದ ಹಕ್ಕಿನ ಹೋರಾಟದಲ್ಲಿ ಭಾಗವಹಿಸಿದ್ದರು. ೧೯೩೯ರಲ್ಲಿ ಜಸ್ಟೀಸ್ ಪಕ್ಷದ ಅಧ್ಯಕ್ಷರಾದರು. "ದ್ರಾವಿಡ ಕಳಗಂ" ಎಂಬ ಸಂಘಟನೆಯನ್ನು ಹುಟ್ಟುಹಾಕಿದರು. 'ರಿವೋಲ್ಟ್' ಪತ್ರಿಕೆಯನ್ನು ಹುಟ್ಟುಹಾಕಿದರು.



ಪೆರಿಯಾರ್

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 148

ಶಿವನನ್ನು ಸ್ತುತಿಸಿದ ದೇವತೆಗಳು

ಸತೀದೇವಿಯ ವ್ರತ ನೋಡಲು ದೇವತೆಗಳು ಮತ್ತು ಮುನಿಗಳೆಲ್ಲರೂ ಬ್ರಹ್ಮ, ವಿಷ್ಣು ನೇತೃತ್ವದಲ್ಲಿ ಸತಿಯ ಬಳಿ ಬರುತ್ತಿದ್ದರು. ಶಿವಧ್ಯಾನದಲ್ಲಿ ತಲ್ಲೀನಳಾಗಿ ಸಿದ್ಧಾವಸ್ಥೆಯಲ್ಲಿದ್ದ ಸತೀದೇವಿಯು ಮೂರ್ತಿವತ್ತಾದ ಸಿದ್ಧಿಯಂತೆ ತೋರುತ್ತಿದ್ದಳು. ಇದನ್ನು ಕಂಡ ದೇವತೆಗಳು, ಮುನಿಗಳು ಸಂತೋಷಪಡುತ್ತಿದ್ದರು. ಸತೀದೇವಿಯಲ್ಲಿ ಸಾಕ್ಷಾತ್ ಜಗನ್ಮಾತೆಯನ್ನು ಕಂಡಂತೆ ಭಕ್ತಿಯಿಂದ ಅಂಜಲಿಯುಕ್ತ ನಮಸ್ಕಾರ ಮಾಡುತ್ತಿದ್ದರು.

ಸತೀದೇವಿಯಿಂದ ಬೀಳ್ಕೊಂಡ ಹೊರಟ ದೇವತೆಗಳೂ ಮುನಿಗಳೂ ನೇರವಾಗಿ ಕೈಲಾಸಪರ್ವತಕ್ಕೆ ಹೊರಟರು. ಸರಸ್ವತಿಯೊಡನೆ ಬ್ರಹ್ಮ ಹಾಗೂ ಲಕ್ಷ್ಮೀದೇವಿಯೊಡನೆ ಭಗವಾನ್ ವಿಷ್ಣು ಸಹ ಶಿವನ ಬಳಿಗೆ ತೆರಳಿದರು. ಅವರೆಲ್ಲ ಶಿವನ ಬಳಿಗೆ ಹೋಗಿ ಅನೇಕ ವಿಧವಾಗಿ ಸ್ತೋತ್ರ ಮಾಡಿ, ಲೋಕಕಲ್ಯಾಣಕ್ಕೆ ಅನುಗ್ರಹ ಬೇಡಿದರು. ಓ ದೇವ, ಸಕಲ ಜಗತ್ತನ್ನೂ ಸೃಷ್ಟಿಸುವ ಆದಿಕಾರಣನು, ಜ್ಞಾನಸ್ವರೂಪನು, ಸರ್ವೋತ್ಕೃಷ್ಟನು ನೀನು. ಪ್ರಕೃತಿಗೆ ಆಶ್ರಯನೂ ಪುರುಷಸ್ವರೂಪನೂ ಆಗಿ ಜಗತ್ತನ್ನು ಸೃಷ್ಟಿಸಿ ಅದರ ಒಳಗೂ ಹೊರಗೂ ಪ್ರಕಾಶಿಸುವ ಆಧಾರಭೂತ. ನಿನಗಿಂತ ನಿರ್ವಿಕಾರನಾದ ದೇವರು ಮತ್ತೊಬ್ಬನಿಲ್ಲ. ಈ ಜಗತ್ತನ್ನು ತನ್ನಲ್ಲಿಯೇ ನೋಡುವಂತಹ ನಿನಗೆ ನಮಸ್ಕಾರ.

ನೀನು ದಿವ್ಯದೃಷ್ಟಿಯುಳ್ಳವನು. ಸಾಕ್ಷಿಭೂತನು. ಎಲ್ಲ ಜೀವರ ಆತ್ಮಸ್ವರೂಪನು. ಸರ್ವಾಂತರ್ಯಾಮಿ. ಪರಮೇಶ್ವರ. ನಿನ್ನ ಸ್ವರೂಪನನ್ನು ದೇವತೆಗಳು, ಸಿದ್ಧರು, ಋಷಿಗಳೂ ತಿಳಿಯಲಾರರು. ದುಃಖಮಯವಾದ ಜನ್ಮವಿಕಾರಗಳು ನಿನಗೆ ವಸ್ತುತಃ ಇಲ್ಲ. ಆದರೆ ಮಾಯೆಯಿಂದ ಆ ವಿಚಾರಗಳನ್ನು ಧರಿಸಿ ಭಕ್ತರ ಅನುಗ್ರಹಕ್ಕಾಗಿ ನೀನು ಆಗಾಗ ಅವತರಿಸುವೆ. ರೂಪವಿಲ್ಲದಿದ್ದರೂ ಮಾಯಾಮಯವಾದ ಸಗುಣೇಶ್ವರ ರೂಪವುಳ್ಳವನು, ಅಪರಿಮಿತವಾದ ಶಕ್ತಿಯುಳ್ಳವನು, ಮೂರು ಲೋಕಗಳಿಗೆ ಒಡೆಯ, ಸಾಕ್ಷಿರೂಪ, ವ್ಯಾಪಕ. ಜ್ಞಾನಜ್ಯೋತಿ ಪ್ರಕಾಶಸ್ವರೂಪನು, ಆನಂದಸ್ವರೂಪನು, ಜ್ಞಾನಸ್ವರೂಪನು, ಎಲ್ಲವನ್ನು ವ್ಯಾಪಿಸಿರುವನೂ, ಆದ ಈಶ್ವರನೇ! ಮಹದಾದಿ ತತ್ವಗಳು, ಮೂಲಪ್ರಕೃತಿಯು ನಿನ್ನ ಸ್ವರೂಪವೇ ಹೊರತು ಬೇರೆಯಲ್ಲ. ಎಲ್ಲಾ ವೇದಶಾಸ್ತ್ರ-ಆಗಮಗಳಿಗೆ ಆಧಾರನೂ ಸರ್ವೋತ್ತಮನೂ ಭಕ್ತರನ್ನು ಸಲಹುವವನೂ ಅನಂತಕಲ್ಯಾಣಗುಣಗಳುಳ್ಳವನೂ ಆದ ನಿನಗೆ ನಮಸ್ಕಾರ. ಓ ಮಹೇಶ್ವರ, ನಿನ್ನ ಸ್ವರೂಪಪ್ರಕಾಶವು ಮಾಯೆಯ ಗುಣಗಳಿಂದ ಮುಚ್ಚಲ್ಪಟ್ಟಿದ್ದು ಅಜ್ಞಾನಿಗಳಿಗೆ ಕಾಣಿಸುವುದಿಲ್ಲ. ನೀನು ಜ್ಞಾನಿಗಳ ಹೃದಯದಲ್ಲಿ ವಾಸಿಸುವ ನಿನ್ನನ್ನು ಜ್ಞಾನಿಗಳು ಮಾತ್ರ ನೋಡಬಲ್ಲರು.

ಅಗ್ನಿಯಿಂದ ಯಾವಾಗಲೂ ಉಷ್ಣವು ಹೇಗೆ ಹೊರಬರುವುದೋ, ಸೂರ್ಯನಿಂದ ತೇಜೋಮಯವಾದ ಕಿರಣಗಳು ಎಡಬಿಡದೆ ಹೇಗೆ ಹೊರಡುವವೋ ಹಾಗೆ, ಪರಬ್ರಹ್ಮಸ್ವರೂಪನಾದ ನಿನ್ನಿಂದ ಜಗತ್ಸೃಷ್ಟಿ ಸ್ಥಿತಿ ನಾಶಗಳೆಂಬ ಪ್ರವಾಹವು ಯಾವಾಗಲೂ ಎಡಬಿಡದೆ ಹೊರಡುತ್ತಿರುವುದು. ನೀನು ದೇವನಲ್ಲ. ಅಸುರನಲ್ಲ, ಮನುಷ್ಯನಲ್ಲ, ಪಶುಪ್ರಾಣಿಯಲ್ಲ, ತ್ರೈವರ್ಣಿಕನಲ್ಲ, ಸ್ತ್ರೀಯಲ್ಲ, ಪುರುಷನೂ ಅಲ್ಲ. ದೇವತ್ವ, ಅಸುರತ್ವ, ಮನುಷ್ಯತ್ವ ಮುಂತಾದವು ನಿನ್ನಲ್ಲಿಲ್ಲ. ಅವೆಲ್ಲವೂ ಮಾಯಾಕಲ್ಪಿತವು. ಆ ಮಾಯೆಯಿಂದಲೇ ಈ ಜಗತ್ತು ನಿನ್ನಲ್ಲಿ ಸುಳ್ಳಾಗಿ ತೋರುವುದು.

ಈ ಜಗತ್ತನ್ನು ನೀನು ಸೃಷ್ಟಿಸಿಲ್ಲ. ಜಗತ್ತು ಎಂಬುದು ಇಲ್ಲವೇ ಇಲ್ಲ. ಜಗತ್ತೆಲ್ಲವೂ ನಿನ್ನ ರೂಪವಾದುದು. ನಿನ್ನ ಹೊರತು ಈ ಜಗತ್ತಾವುದೂ ಇಲ್ಲ. ಆದರೆ ಮಾಯಮಯವಾಗಿ ಈ ಜಗತ್ತನ್ನು ಸೃಷ್ಟಿಸುವೆ, ಪಾಲಿಸುವೆ, ಕೊನೆಗೆ ಸಂಹರಿಸುವೆ. ಹೀಗಾಗಿ ನೀನು ಜಗದ್ರೂಪನು. ಯೋಗಿಗಳು ಯೋಗಾನುಷ್ಠಾನವನ್ನು ಮಾಡಿ, ಪರಿಶುದ್ಧವಾದ ತಮ್ಮ ಮನಸ್ಸಿನಲ್ಲಿ ಮಾತ್ರ ನಿನ್ನನ್ನು ನೋಡುವರು. ಇಂತಹ ಯೋಗೇಶ್ವರನಾದ ನಿನಗೆ ನಮಸ್ಕಾರವು. ತಡೆಯಿಲ್ಲದ ವೇಗವುಳ್ಳವನೂ ವ್ಯಾಪಕನೂ,ಇಚ್ಛಾಶಕ್ತಿ ಜ್ಞಾನಶಕ್ತಿ, ಕ್ರಿಯಾಶಕ್ತಿಗಳುಳ್ಳವನು, ವೇದಸ್ವರೂಪನು, ಪ್ರಸನ್ನನಾಗಿ ಭಕ್ತರನ್ನು ಅನುಗ್ರಹಿಸುವವನೂ, ಅನಂತಶಕ್ತಿವಂತನೂ ಆದ ಓ ಶಿವನೇ, ನಿನಗೆ ನಮಸ್ಕಾರ. ಓ ದೇವ, ನಿನ್ನ ಮಾಯಾಶಕ್ತಿಯಿಂದ ಆವೃತರಾಗಿ ನಾವೆಲ್ಲರೂ ನಿನ್ನ ಸ್ವರೂಪವನ್ನು ತಿಳಿಯಲಾರದವರಾಗಿರುವೆವು. ಮಹಾಮಹಿಮನೂ ಮಹಾಪ್ರಭುವೂ ಆದ ನಿನ್ನನ್ನು ಮತ್ತೆ ಮತ್ತೆ ನಮ್ಮಸ್ಕರಿಸುವೆವು ಎಂದು ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಮತ್ತು ಸಿದ್ಧರು, ಋಷಿಗಳು ಮಹಾದೇವನನ್ನು ಸ್ತುತಿಸಿದರು. ಇಲ್ಲಿಗೆ ಶಿವಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದಲ್ಲಿ ಹದಿನೈದನೆ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜೂನ್ 16, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ದ್ವಿತೀಯ ಗಂ. 09-46 ನಕ್ಷತ್ರ: ಪೂರ್ವಾಷಾಢ ಗಂ. 12-37 ಯೋಗ: ಬ್ರಹ್ಮ ಗಂ. 21-08, ಕರಣ: ಗರಜೆ ಗಂ. 09-46, ಮಿಥುನ ಮಾಸದ 01 ನೇ ದಿನ. ರಾಹುಕಾಲ : ಮಧ್ಯಾಹ್ನ 01:30–03:00 ಸೂರ್ಯೋದಯ : 06-08 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 16 ಜುಲ್ಹಾಯದ್
ದಿನ ವಿಶೇಷ : ಕೋರ್ಪಸ್ ಕ್ರಿಸ್ಟಿ (ಗುರುವಾರ) (ಕ್ರಿಶ್ಚಿಯನ್)
ಅದೃಷ್ಟ ಸಂಖ್ಯೆ : 4, 12

ಮೇಷ: ನಿಮ್ಮ ವರ್ಚಸ್ಸಿನ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯುವುದು. ಭಾವನೆಗಳ ಮೇಲೆ ಹಿಡಿತ ಸಾಧಿಸಿ. ಮನಸ್ಸು ನಿಯಂತ್ರಣದಲ್ಲಿರಲಿ. ಕುಡಿಯುವ ನೀರಿನ ಶುಚಿತ್ವದ ಬಗ್ಗೆ ಜಾಗರೂಕತೆ ಇರಲಿ.

ವೃಷಭ: ನಿಮ್ಮ ಅನುಯಾಯಿಗಳಿಗೆ ನೀವಾಡುವ ಆಶ್ವಾಸನೀಯ ವರ್ತನೆಯಿಂದ ಬಹಳ ಸಂತಸ ಉಂಟಾಗುವುದು. ಪ್ರವಾಸ ಕೈಗೊಳ್ಳುವ ಯೋಜನೆಗಳು ಕಾರ್ಯರೂಪಕ್ಕೆ ಬರಲಿದೆ. ಮಕ್ಕಳ ತುಂಟುತನದ ಬಗ್ಗೆ ನೆನಪಿರಲಿ, ಗಮನವಿರಲಿ.

ಮಿಥುನ: ಔಷಧಿಗಳ ಅಧಿಕ ಬಳಕೆ ಅಥವಾ ಅದರ ಅಡ್ಡಪರಿಣಾಮದಿಂದಾಗಿ ಅನಾರೋಗ್ಯಕ್ಕೆ ಗುರಿಯಾಗಬೇಕಾಗುವುದು. ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಕೆಲಸ ಮಾಡುವ ಮತ್ತು ಹೊಸದಾದ ಜಾಗ ಪ್ರಾಪ್ತಿಯಾಗುವುದು.

ಕರ್ಕಾಟಕ: ಹೋಮ-ಹವನಾದಿ ಧಾರ್ಮಿಕ ಕೆಲಸದಲ್ಲಿ ಪಾಲ್ಗೊಳ್ಳುವ ಸದಾವಕಾಶ. ರೈತರು ತಮ್ಮ ಬೆಳೆಗಳ ಅಭಿವೃದ್ಧಿ, ರಕ್ಷಣೆಯ ಬಗ್ಗೆ ಗಮನಹರಿಸುವುದು ಒಳ್ಳೆಯದು. ಹೈನುಗಾರಿಕೆಯನ್ನು ಉಪವೃತ್ತಿಯಾಗಿ ಮಾಡಿಕೊಳ್ಳಬಹುದು.

ಸಿಂಹ: ಸಹಚರರಿಂದ ಅಥವಾ ಅಧಿಕಾರಿಗಳಿಂದ ಅಸಹಕಾರದ ಪರಿಸ್ಥಿತಿ. ಸಮಸ್ಯೆಗಳ ನಡುವೆಯು ಕಾರ್ಯ ಸಾಧನೆ ಮಾಡಿದ ಹೆಮ್ಮೆ ನಿಮ್ಮದಾಗಲಿದೆ. ಇಂದಿನ ಸಂಧಾನ ಅಥವಾ ಕರಾರು ಒಪ್ಪಂದಗಳು ಅನುಕೂಲಕರ ಎನಿಸಲಿದೆ.

ಕನ್ಯಾ: ನೂತನ ಕಾರ್ಯ ಅಥವಾ ಗೃಹ ನಿರ್ಮಾಣದಂತಹ ಕೆಲಸಗಳಿಗಾಗಿ ಹೆಚ್ಚು ಸಮಯದ ವಿನಿಯೋಗ. ರಕ್ತದೊತ್ತಡದ ನಿಯಂತ್ರಣದಿಂದ ಮನಸ್ಸಿಗೆ ಸಮಾಧಾನ. ಔಷಧ ವಸ್ತುಗಳ ವ್ಯಾಪಾರದಿಂದ ಲಾಭ ಹೊಂದಬಹುದು.

ತುಲಾ: ದಾಯಾದಿಗಳೊಡನೆ ಇದ್ದ ಕಲಹಗಳು ಈ ದಿನಾಂತ್ಯದಲ್ಲಿ ನಿರ್ಮೂಲವಾಗಿ ಶುಭವಾಗಲಿದೆ. ಮನಸ್ಸು ಧ್ಯಾನದತ್ತ ಹರಿಯಲು ಧಾರ್ಮಿಕ ವಿಚಾರಧಾರೆಯಂತಹ ಸಮಾರಂಭಗಳ ಆಲಿಕೆಯು ಕಾರಣವಾಗುವುದು.

ವೃಶ್ಚಿಕ: ಗುರುವಿನ ಮಾರ್ಗದರ್ಶನದಂತೆ ನೆಡೆಯುವ ನಿಮ್ಮ ಕೆಲಸದಲ್ಲಿ ಸರ್ವತೋಮುಖವಾದ ಅಭಿವೃದ್ಧಿ. ಪುಣ್ಯಸಂಪಾದನೆಗಾಗಿ ತೀರ್ಥಯಾತ್ರೆ ಕೈಗೊಳ್ಳುವ ನಿಮ್ಮ ಆಸೆ ಈಡೇರುವ ಲಕ್ಷಣಗಳು ಕಂಡುಬರುವುದು.

ಧನು: ನೀವು ಮಾಡುವ ಕೆಲಸದ ಸರಿ ತಪ್ಪುಗಳ ಬಗ್ಗೆ ತಿಳಿಯುವ ಪ್ರಯತ್ನವನ್ನು ಮಾಡಿ. ವೃತ್ತಿಯಲ್ಲಿ ಪ್ರಗತಿ. ವೃತ್ತಿ ವಿಷಯದಲ್ಲಿ ಒಪ್ಪಂದ ಏರ್ಪಡುವ ಸಾಧ್ಯತೆ ಇದೆ. ಬಂಧುಗಳ ನೆರವಿನಿಂದ ಹಳೆಯ ಬಾಕಿ ಹಣ ನಿಮ್ಮ ಕೈ ಸೇರಲಿದೆ.

ಮಕರ: ಹೊರ ದೇಶದಲ್ಲಿರುವ ಮಕ್ಕಳು ಮನೆಗೆ ಬರುವಂತಹ ಸಂತಸದ ಸುದ್ದಿ ಕೇಳಿ ಬರುತ್ತದೆ. ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು. ಎಲೆಕ್ಟ್ರಾನಿಕ್ ವಸ್ತುಗಳ ಮಾರಟ ಅಥವಾ ರಿಪೇರಿಗಳಿಂದ ಆದಾಯ ಹೆಚ್ಚುವುದು.

ಕುಂಭ: ಹಣಕಾಸಿನಲ್ಲಿ ವ್ಯತ್ಯಾಸಗಳಾಗಿ ಉದ್ಯೋಗದಲ್ಲಿ ಛೀಮಾರಿಯ ಪ್ರಸಂಗ ಇದ್ದೀತು. ಸಿದ್ಧ ಉಡುಪು ಮಾರಾಟಗಾರರಿಗೆ ಸಂಗ್ರಹಣೆ ಮಾಡಲು ಈ ದಿನ ಉತ್ತಮವಾಗಿರಲಿದೆ. ಮನೆಯಲ್ಲಿ ನಿಮಗೆ ಜವಾಬ್ದಾರಿ ಹೆಚ್ಚಲಿದೆ.

ಮೀನ: ಹೊಸ ಗೆಳೆತನ ಬೆಳೆಸಿಕೊಳ್ಳುವಿರಿ. ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆಯು ಸರಿಯಾಗಿರುವುದು. ದಿನಸಿ ವರ್ತಕರಿಗೆ ಉತ್ತಮ ಮಾರಾಟದೊಂದಿಗೆ ಲಾಭವೂ ಇರುವುದು. ಪಿತ್ರಾರ್ಜಿತ ಆಸ್ತಿ ಕೈಸೇರಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ತಲ್ಲಣವಿಲ್ಲದ ಬದುಕು

ಮೌನದಿಂದಂಬಲಿಯನುಂಡು ತಣಿಯುವ ಮಾನಿ |
ಶ್ವಾನನುಣುವೆಂಜಲೋಗರಕೆ ಕರಬುವನೆ ? ||
ಜ್ಞಾನಿ ನಡೆವಂ ವಿಷಯ ತರತಮವಿವೇಕದಲಿ |
ಮಾಣು ನೀಂ ತಲ್ಲಣವ – ಮಂಕುತಿಮ್ಮ || 651 ||

ಪದ-ಅರ್ಥ: ಮೌನದಿಂದಂಬಲಿಯನುಂಡು= ಮೌನದಿಂದ + ಅಂಬಲಿಯನು + ಉಂಡು, ತಣಿಯುವ = ತೃಪ್ತಿಪಡುವ, ಮಾನಿ = ಸ್ವಾಭಿಮಾನಿ, ಶ್ವಾನನುಣುವೆಂಜಲೋಗರಕೆ = ಶ್ವಾನ(ನಾಯಿ) + ಉಣುವ + ಎಂಜಲು + ಓಗರಕ್ಕೆ(ಅನ್ನಕ್ಕೆ), ಕರಬುವನೆ = ಅಸೂಯೆಪಡುವನೆ, ತರತಮವಿವೇಕದಲ್ಲಿ = ಯಾವುದು ಸರಿ, ಯಾವುದು ತಪ್ಪು ಎಂದು ತಿಳಿಯುವ ವಿವೇಕದಲ್ಲಿ, ಮಾಣು = ತಡೆ, ನಿಲ್ಲಿಸು, ತಲ್ಲಣವ = ತಳಮಳವ

ವಾಚ್ಯಾರ್ಥ: ಮೌನದಿಂದ, ಆತ್ಮಗೌರವದಿಂದ ಅಂಬಲಿಯನ್ನು ಉಂಡು ತೃಪ್ತನಾಗುವ ಅಭಿಮಾನಿ ನಾಯಿ ತಿನ್ನುವ ಎಂಜಲು ಅನ್ನಕ್ಕೆ ಅಸೂಯೆ ಪಡುವನೆ? ಜ್ಞಾನಿಯಾದವನು ಮೇಲುಕೀಳು ವಿವೇಕದಲ್ಲಿ ತಿಳಿದು ನಡೆಯುತ್ತಾನೆ. ನೀನು ಕಳವಳವನ್ನು ಪಡಬೇಡ.

ವಿವರಣೆ: ಇದೊಂದು ಅತ್ಯಂತ ಮನಮುಟ್ಟುವ ಚೌಪದಿ. ಬಹಳ ಬೋಧಪ್ರದವಾದದ್ದು. ತಮಗೆ ದೊರೆತದ್ದರಲ್ಲಿ ತೃಪ್ತಿಯನ್ನು ಕಾಣದೆ, ತನ್ನದಲ್ಲದ ದುಡ್ಡಿಗೆ, ಲಂಚದಾಸೆಯಿಂದ ಕೈ ಒಡ್ಡುವವನು ನಾಯಿತಿನ್ನುವ ಎಂಜಲು ಅನ್ನಕ್ಕೆ ಕೈ ಚಾಚಿದಂತೆ. ಇರುವುದರೊಳಗೆ ತೃಪ್ತಿಯನ್ನು ಪಡೆಯುವವನು ಮಾನಿ. ಮಾನಿ ಎಂದರೆ ಆತ್ಮಾಭಿಮಾನವುಳ್ಳವನು. ಸ್ವಾಭಿಮಾನವಿದ್ದವರು ಯಾರೂ ಎಂಜಲು ಕಾಸಿಗೆ ಕೈ ಚಾಚುವುದಿಲ್ಲ, ಚಾಚಬಾರದು.

ಜ್ಞಾನಿಯಾದವನು ತರತಮವಿವೇಕದಿಂದ ಬದುಕುತ್ತಾನಂತೆ. ಹಾಗೆಂದರೆ ಯಾವುದು ಹೆಚ್ಚು, ಯಾವುದು ಕಡಿಮೆ ಎನ್ನುವುದರ ತಿಳುವಳಿಕೆ ಉಳ್ಳವನು. ಹೆಚ್ಚು ಕಡಿಮೆ ಎನ್ನುವುದು ವಸ್ತುವಿನ ಬೆಲೆಯಲ್ಲಿ, ಅಂತಸ್ತಿನಲ್ಲಿ ಅಲ್ಲ. ಯಾವುದು ಶ್ರೇಷ್ಠ, ಯಾವುದು ಕನಿಷ್ಠ ಎನ್ನುವ ಪ್ರಜ್ಞೆ ಇರುವವರು. ನನ್ನ ಪರಿಚಯದವರೊಬ್ಬರು ಸರ್ಕಾರದಲ್ಲಿ ಬಹುದೊಡ್ಡ ಹುದ್ದೆಯಲ್ಲಿದ್ದರು. ಇಡೀ ಇಲಾಖೆಗೆ ಅವರೇ ಮುಖ್ಯಸ್ಥರು. ಮಂತ್ರಿಗಳಿಗೂ ಅವರ ತೀರ್ಮಾನಗಳ ಮೇಲೆ ಅಪಾರ ನಂಬಿಕೆ. ಅವರು ರಿಟೈರ್ ಆಗುವುದಕ್ಕಿಂತ ಎರಡು ದಿನ ಮೊದಲು ಉದ್ಯಮಿಯೊಬ್ಬರು ಬಂದು ಅವರನ್ನು ಕಂಡರು, ತಮ್ಮ ಕೆಲಸ ಮಾಡಿಕೊಡಲು ಬೇಡಿಕೊಂಡರು. ಈ ಅಧಿಕಾರಿ ಆಗಲಿ ಎಂದಿದ್ದರೆ ಅವರ ಕೆಲಸ ಆಗಿಯೇ ತೀರುತ್ತಿತ್ತು ಮತ್ತು ಅಧಿಕಾರಿಗೆ ಸುಲಭವಾಗಿ ಒಂದು ಕೋಟಿ ರೂಪಾಯಿ ಹಣ ದೊರೆಯುತ್ತಿತ್ತು. ಇವರು ಸೊಪ್ಪು ಹಾಕದೆ ಅವರನ್ನು ತಿರಸ್ಕರಿಸಿದರು. ಇವರು ರಿಟೈರ್ ಆದ ಮರುದಿನವೂ ಆತ ಮನೆಗೆ ಬಂದ. ಇವರದು ಬಾಡಿಗೆ ಮನೆ, ತೀರ ಚಿಕ್ಕದು. ಅದನ್ನು ಕಂಡು ಆತ ಹೇಳಿದ, 'ಸರ್, ನಾನು ನನ್ನ ಫೈಲನ್ನು ತಂದುಕೊಡುತ್ತೇನೆ, ನೀವು ನಿನ್ನೆಯ ದಿನ ಮಾಡಿದಂತೆ ಸಹಿ ಹಾಕಿದರೆ ಸಾಕು. ನಮ್ಮ ಕಂಪನಿಯದೇ ಒಂದು ಮೂರು ಬೆಡ್ ರೂಂ ಮನೆ ಇದೆ. ಅದು ಕನಿಷ್ಠ ಎರಡು ಕೋಟಿಯಾಗುತ್ತದೆ. ಅದನ್ನು ತಮ್ಮ ಹೆಸರಿಗೆ ಮಾಡಿಸಿಕೊಡುತ್ತೇನೆ.' ಅದಕ್ಕವರು, 'ಸ್ವಾಮಿ, ಮೇಲೆ ಏಳಿ, ನನಗೆ ನಿಮ್ಮ ಎಂಜಲಿನ ಮನೆ ಬೇಡ. ಅದನ್ನು ತೆಗೆದುಕೊಂಡು ಸಾಯುವವರೆಗೆ ಋಣ ದಲ್ಲಿ ಒದ್ದಾಡಲಾರೆ. ನೀವು ಹೊರಡದಿದ್ದರೆ ನಾನು ಪೋಲೀಸರಿಗೆ ಫೋನ್ ಮಾಡಬೇಕಾಗುತ್ತದೆ' ಎಂದು ಗುಡುಗಿದರು. ಆತ ಮರೆಯಾದ. ಈ ಅಧಿಕಾರಿ ಕೊನೆಯವರೆಗೂ ತಮ್ಮ ಆತ್ಮಗೌರವವನ್ನು ಕಾಪಾಡಿಕೊಂಡು ಎದೆ ಎತ್ತಿ, ನಗುನಗುತ್ತಾ ಬದುಕಿದರು.

ಎಂಜಲಿಗೆ ಕೈ ಒಡ್ಡದೆ, ಯಾವ ನಡತೆ ದೊಡ್ಡ ಮಟ್ಟದ್ದು, ಯಾವುದು ಕೀಳುಮಟ್ಟದ್ದು ಎಂದು ತಿಳಿಯುವವನು ತರತಮವಿವೇಕದ ಜ್ಞಾನಿ. ಆ ಜ್ಞಾನಿ ಸಂತೋಷವನ್ನು ಪರರು ನೀಡಿದ ಎಂಜಲು ಕಾಸಿನಲ್ಲಿ ಕಾಣುವುದಿಲ್ಲ, ತನ್ನ ಆತ್ಮಗೌರವವನ್ನು ಕಾಪಾಡಿಕೊಳ್ಳುವುದರಲ್ಲಿ ಕಾಣುತ್ತಾನೆ. ಹಾಗೆ ಮನಸ್ಸು ಸ್ಪಷ್ಟ ಇರುವವರಲ್ಲಿ ತಳಮಳ, ತಲ್ಲಣ ಇರುವುದಿಲ್ಲ. ಬದುಕು ನಿರಾಳವಾಗಿರುತ್ತದೆ.

ಪದಬಂಧ 4990 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಚರವಲ್ಲದುದು ಅಥವಾ ಯಂತ್ರಾಗಾರ (3)
4.ಮನ ಕೊನೆಗಿಟ್ಟಾಗಿನ ನಿಗ್ರಹ (3)
5.ಹರನಿಂದಲೇ ಬಂದಿರುವ ಅಡ್ಡಿ! (4)
6.ಪಣ ತೊಟ್ಟಾಗಿನ ಅಳತೆ (4)
8.ಕಾದಾಟದಲ್ಲಿ ತಿರುಗಿದ್ದಕ್ಕೇ ಈ ತೊಂದರೆ! (2)
10.ವಾಸನೆಯು ಉಲ್ಟಾಪಲ್ಟಾ ಆಗಿದೆ (2)
13.ತತ್ವಜ್ಞಾನಿ ಇಲ್ಲಿದ್ದಾನೆ (4)
14.ಸುಮಾರು ಮೂರು ಮೈಲುಗಳ ಒಂದು ಅಳತೆ (4)
15.ಕಳ್ಳನಿಲ್ಲಿ ಉಲ್ಟಾ ನಿಂತಿದ್ದಾನೆ (3)
16.ಸೂರ್ಯನ ಸಾರಥಿ (3)

ಮೇಲಿಂದ ಕೆಳಕ್ಕೆ

1.ಹೊಟ್ಟೆಯನ್ನು ಹೊರೆಯುವುದು (6)
2.ಬೇರೊಂದು ಸ್ಥಳಕ್ಕೆ ಹೋಗುವಿಕೆ (5)
3.ಮಂಕ ಹೊತ್ತಿರುವ ಬುಟ್ಟಿ (3)
5.ಧನಿಕನನ್ನು ಹೀಗೂ ಕರೆಯುತ್ತಾರೆ (4)
7.ಮಿತಿಯಿಲ್ಲದೆ ಖರ್ಚುಮಾಡುವಿಕೆ (6)
9.ಜನ ನಡೆದು ನಡೆದುತಾನಾಗಿ ರೂಪುಗೊಂಡ ದಾರಿ (4)
11.ಹೆಸರಿಡುವ ಶಾಸ್ತ್ರ (5)
12.ಹಸಿರು ಬಣ್ಣವಿದು (3)



4989ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಉತ್ತರಾಧಿಕಾರಿ 4.ಪುಡಿಗಾಸು 5.ಗಗನ 7.ಕನಸು 9.ತರುಣಿ 11.ಕಠೋರ 13.ನಳಪಾಕ 15.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ: 1.ಉರಗ 2.ರಿಪು 3.ಕಸುಗಾಯಿ 6.ನವನೀತ 7.ಕಲ್ಯಾಣಿ 8.ಸುಧಾರಕ 9.ನವನಟ 12.ರಸಿಕೆ 14.ಕವಿ

ಸುಡೊಕು 5376

				2		3		
3		6	5		8			
	4			7	3	2		6
	6						7	9
9		1		8			6	
						1		8
		2	3		7		5	
7	1					6		
		3	4		2		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5375 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಷೇರುಪೇಟೆ ವಹಿವಾಟು 152



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,732
ಇಂದಿನ ಅಂತ್ಯ	15,692
▼	39
ದಿನದ ಕನಿಷ್ಠ	15783

ವಿನಿಮಯ ದರ

$ ಡಾಲರ್	78.22
£ ಪೌಂಡ್	94.37
€ ಯುರೊ	81.9
¥ ಯೆನ್ (100ಕ್ಕೆ)	58.05

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹525
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹525

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1475 (1485)
ಸೂರ್ಯಕಾಂತಿ (ರಿಫೈನ್ಡ್)	₹1750 (1765)
ಪಾಮೋಲಿನ್	₹1420 (1435)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1400
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹18000-20000
2ನೇ ದರ್ಜೆ ₹10000-16000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹173.50
ಆರ್‌ಎಸ್‌ಎಸ್-5 ₹165.00
ಗುಡ್ ಲಾಟ್ ₹157.00

ಅತ್ಯಂತ ವೇಗದ ಇಂಟರ್ನೆಟ್ ಸೇವೆ ಸಾಧ್ಯವಾಗಿಸಲಿರುವ ತಂತ್ರಜ್ಞಾನ

5ಜಿ ತರಂಗಾಂತರ ಹರಾಜಿಗೆ ಸಂಪುಟ ಅಸ್ತು

ಮುಖ್ಯಾಂಶಗಳು

- 5ಜಿ ತರಂಗಾಂತರಗಳ ಹರಾಜು ಪ್ರಕ್ರಿಯೆ ಜುಲೈ 26ರಿಂದ ಶುರು
- ಮೀಸಲು ಬೆಲೆ ಶೇ 39ರಷ್ಟು ಕಡಿಮೆ ಮಾಡಲು ಶಿಫಾರಸು ಮಾಡಿದ್ದ ಟ್ರಾಯ್

ನವದೆಹಲಿ (ಪಿಟಿಐ): ಅತ್ಯಂತ ವೇಗದ ಇಂಟರ್ನೆಟ್ ಸೇವೆ ಒದಗಿಸುವ 5ಜಿ ತರಂಗಾಂತರಗಳ ಹರಾಜು ಪ್ರಕ್ರಿಯೆಗೆ ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ. ಅಲ್ಲದೆ, ನಿರ್ದಿಷ್ಟ ಪ್ರದೇಶಗಳಲ್ಲಿ ಖಾಸಗಿ 5ಜಿ ದೂರಸಂಪರ್ಕ ಜಾಲ ಆರಂಭಿಸಲು ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಗಳಿಗೆ ಕೇಂದ್ರ ಸಂಪುಟವು ಸಮ್ಮತಿ ಸೂಚಿಸಿದೆ.

5ಜಿ ತರಂಗಾಂತರಗಳ ಹರಾಜು ಪ್ರಕ್ರಿಯೆಯು ಜುಲೈ 26ರಿಂದ ಶುರುವಾಗಲಿದೆ. ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಶಿಫಾರಸು ಮಾಡಿರುವ ಮೀಸಲು ಬೆಲೆಗೆ ಹರಾಜು ನಡೆಸಲು ಸಂಪುಟ ಅಸ್ತು ಎಂದಿರುವುದಾಗಿ ಮೂಲಗಳು ಹೇಳಿವೆ. ಮೀಸಲು ಬೆಲೆಯನ್ನು ಶೇಕಡ 39ರಷ್ಟು ಕಡಿಮೆ ಮಾಡಲು ಟ್ರಾಯ್ ಈ ಹಿಂದೆ ಶಿಫಾರಸು ಮಾಡಿತ್ತು.

5ಜಿ ತರಂಗಾಂತರಗಳನ್ನು ಭಾರ್ತಿ ಏರ್‌ಟೆಲ್, ರಿಲಯನ್ಸ್ ಜಿಯೊದಂತಹ ದೂರಸಂಪರ್ಕ ಸೇವಾ ಕಂಪನಿಗಳಿಗೆ ಹರಾಜಿನ ಮೂಲಕ ಮಾರಾಟ ಮಾಡಲಾಗುತ್ತದೆ. ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಗಳು ಖಾಸಗಿ ದೂರಸಂಪರ್ಕ ಜಾಲ ಸ್ಥಾಪನೆಗೆ 5ಜಿ ತರಂಗಾಂತರಗಳನ್ನು ದೂರಸಂಪರ್ಕ ಸೇವಾ ವಲಯದ ಕಂಪನಿಗಳಿಂದ ಲೀಸ್ ಆಧಾರದಲ್ಲಿ ಪಡೆದುಕೊಳ್ಳಲು ಅವಕಾಶ ಇದೆ.

ಗೂಗಲ್‌ನಂತಹ ಬೃಹತ್ ಕಂಪನಿಗಳು ತರಂಗಾಂತರಗಳನ್ನು ತಮಗೆ ನೇರವಾಗಿ ಹಂಚಿಕೆ ಮಾಡಬೇಕು ಎಂದು ಆಗ್ರಹಿಸುತ್ತಿವೆ. ಆದರೆ, ಇಂತಹ ಕಂಪನಿಗಳಿಗೆ ತರಂಗಾಂತರ ನೇರ ಹಂಚಿಕೆಯಿಂದ ಸರ್ಕಾರಕ್ಕೆ ಆದಾಯ ಖೋತಾ ಆಗುತ್ತದೆ ಎಂದು ದೂರಸಂಪರ್ಕ ವಲಯದ ಕಂಪನಿಗಳು ವಾದಿಸುತ್ತಿವೆ.

5ಜಿ ತರಂಗಾಂತರಗಳನ್ನು 20 ವರ್ಷಗಳ ಅವಧಿಗೆ ಹರಾಜು ಹಾಕಲಾಗುತ್ತದೆ.

ಹರಾಜು ಗೆದ್ದವರು ತರಂಗಾಂತರಕ್ಕೆ ಸಂಬಂಧಿಸಿದ ಹಣವನ್ನು ತಕ್ಷಣಕ್ಕೆ ಪಾವತಿಸಬೇಕಾಗಿಲ್ಲ. ಈ ಮೊತ್ತವನ್ನು ಅವರು 20 ಸಮಾನ ವಾರ್ಷಿಕ ಕಂತುಗಳಲ್ಲಿ, ಪ್ರತಿ ವರ್ಷದ ಆರಂಭದಲ್ಲಿ ಪಾವತಿಸಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಕ್ರಮದಿಂದಾಗಿ ದೂರಸಂಪರ್ಕ ವಲಯದ ಉದ್ದಿಮೆಗಳಿಗೆ ಉದ್ಯಮ ನಡೆಸುವ ವೆಚ್ಚ ಕಡಿಮೆ ಆಗುವ ನಿರೀಕ್ಷೆ ಇದೆ ಎಂದೂ ಕೇಂದ್ರ ಹೇಳಿದೆ.

ಹರಾಜು ಗೆದ್ದುಕೊಂಡವರು 10 ವರ್ಷಗಳ ನಂತರದಲ್ಲಿ ತರಂಗಾಂತರವನ್ನು ಸರ್ಕಾರಕ್ಕೆ ಮರಳಿಸಬಹುದು. ಬಾಕಿ ಉಳಿದ ಅವಧಿಗೆ ಅವರು ಹಣ ಪಾವತಿ ಬಾಕಿ ಇರಿಸಿಕೊಂಡಿದ್ದರೆ, ಅದನ್ನು ಕೊಡಬೇಕಾಗಿಲ್ಲ.

ಕೆಲವೆಡೆ ಪೆಟ್ರೋಲ್, ಡೀಸೆಲ್ ಖಾಲಿ!

ನವದೆಹಲಿ (ಪಿಟಿಐ): ಮಧ್ಯಪ್ರದೇಶ, ರಾಜಸ್ಥಾನ ಮತ್ತು ಕರ್ನಾಟಕದ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಇಂಧನ ಖಾಲಿ ಆಗಿದೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಪೆಟ್ರೋಲ್ ಬಂಕ್‌ಗಳಲ್ಲಿ ಬೇಡಿಕೆಯು ಇದ್ದಕ್ಕಿದ್ದಂತೆ ಹೆಚ್ಚಾಗಿದ್ದು ಇಂಧನ ಖಾಲಿಯಾಗಲು ಕಾರಣ.

ಕೆಲವು ಖಾಸಗಿ ಕಂಪನಿಗಳ ಪೆಟ್ರೋಲ್ ಬಂಕ್‌ಗಳು ನಷ್ಟ ಭರಿಸಲಾಗದೆ, ತೈಲ ಮಾರಾಟ ಕಡಿಮೆ ಮಾಡಿದ ನಂತರದಲ್ಲಿ ಈ ರೀತಿ ಆಗಿದೆ. ಈ ನಡುವೆ, ಪೆಟ್ರೋಲ್ ಹಾಗೂ ಡೀಸೆಲ್ ಸಂಗ್ರಹವು ಅಗತ್ಯ ಪ್ರಮಾಣದಲ್ಲಿ ಇದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಖಾಸಗಿ ಕಂಪನಿಗಳ ಬಂಕ್‌ಗಳಲ್ಲಿ ಇಂಧನ ಖರೀದಿಸುತ್ತಿದ್ದವರು, ಸರ್ಕಾರಿ ಕಂಪನಿಗಳ ಬಂಕ್‌ಗಳ ಕಡೆ ಮುಖ ಮಾಡಿದ ಕಾರಣದಿಂದಾಗಿ ರಾಜಸ್ಥಾನ ಮತ್ತು ಮಧ್ಯಪ್ರದೇಶದಲ್ಲಿ ಕೆಲವು ಬಂಕ್‌ಗಳಲ್ಲಿ ಇಂಧನ ದಾಸ್ತಾನು ಖಾಲಿಯಾಯಿತು.

ರಾಜಸ್ಥಾನ, ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿ ಇಂಧನ ಬೇಡಿಕೆ ಜೂನ್ ಮೊದಲಾರ್ಧದಲ್ಲಿ ಶೇ 50ರಷ್ಟು ಹೆಚ್ಚಳವಾದ ವರದಿಗಳಿವೆ. ಮುಂಗಾರಿನ ಜೊತೆ ಬೆಸೆದುಕೊಂಡಿರುವ ಕೃಷಿ ಚಟುವಟಿಕೆಗಳು ಹಾಗೂ ಸಗಟು ಖರೀದಿದಾರರು ಖಾಸಗಿ ಕಂಪನಿಗಳ ಬಂಕ್‌ಗಳನ್ನು ಬಿಟ್ಟು ಸರ್ಕಾರಿ ಕಂಪನಿಗಳ ಬಂಕ್‌ಗಳತ್ತ ಮುಖ ಮಾಡಿದ್ದು ಬೇಡಿಕೆ ಹೆಚ್ಚಳಕ್ಕೆ ಕಾರಣ ಎಂದು ಕೇಂದ್ರ ಹೇಳಿದೆ.

'ಬೇಡಿಕೆಯಲ್ಲಿನ ಹೆಚ್ಚಳವನ್ನು ನಿಭಾಯಿಸಲು ಸಾಕಾಗುವಷ್ಟು ಪೆಟ್ರೋಲ್, ಡೀಸೆಲ್ ಉತ್ಪಾದನೆ ದೇಶದಲ್ಲಿದೆ. ಬೇಡಿಕೆ ಹೆಚ್ಚಳವನ್ನು ನಿಭಾಯಿಸಲು ಕಂಪನಿಗಳು ಕ್ರಮ ತೆಗೆದುಕೊಂಡಿವೆ. ಡಿಪೊಗಳಲ್ಲಿ, ಬಂಕ್‌ಗಳಲ್ಲಿ ಇಂಧನ ಹೆಚ್ಚು ಲಭ್ಯವಿರುವಂತೆ ಮಾಡಲು ಕ್ರಮ ಕೈಗೊಳ್ಳಲಾಗಿದೆ' ಎಂದು ಇಂಧನ ಸಚಿವಾಲಯ ತಿಳಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹400-590
ದ್ವಿತಳಿ (ಬಿ.ವಿ) ₹335-755

ಕೊಬ್ಬರಿ ಧಾರಣೆ

ತಿಪಟೂರು ₹13000-14200
ಪುತ್ತೂರು(ಇತರ) ₹4000-9000

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಮಿಸಳ್ ಹಾಪ್ಚಾ
ಮಧುಬನ ಕರೆದರೆ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ

ಶೇಂಗಾ

15-06-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	11050-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	1390 (1420)
ಪಾಮ್ ವಾರದ ಡೆಲಿವರಿ	1418 (1433)
ಸೂರ್ಯಕಾಂತಿ ಎಣ್ಣೆ ಕಚ್ಚಾ	1715 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,650 (50,400)
ಬೆಳ್ಳಿ ಕೆ.ಜಿ 60,700 (60,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಿಲಯನ್ಸ್ ಮಾರುಕಟ್ಟೆ ಮೌಲ್ಯ ಶೇ 13.4ರಷ್ಟು ಹೆಚ್ಚಳ

ಅದಾನಿ ಸಮೂಹದ ಮೌಲ್ಯ ಶೇ 88 ಏರಿಕೆ

ಮುಂಬೈ (ಪಿಟಿಐ): ಏಪ್ರಿಲ್‌ಗೆ ಕೊನೆಗೊಂಡ ಆರು ತಿಂಗಳ ಅವಧಿಯಲ್ಲಿ (2021ರ ನವೆಂಬರ್‌ನಿಂದ 2022ರ ಏಪ್ರಿಲ್ ಕೊನೆಯವರೆಗೆ) ಅದಾನಿ ಸಮೂಹದ ಮಾರುಕಟ್ಟೆ ಮೌಲ್ಯವು ಶೇಕಡ 88.1ರಷ್ಟು ಹೆಚ್ಚಾಗಿ, ₹ 17.6 ಲಕ್ಷ ಕೋಟಿಗೆ ತಲುಪಿದೆ.

ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾರುಕಟ್ಟೆಯ ಮೌಲ್ಯವು ಇದೇ ಅವಧಿಯಲ್ಲಿ ಶೇ 13.4ರಷ್ಟು ಏರಿಕೆ ಕಂಡು, ₹ 18.87 ಲಕ್ಷ ಕೋಟಿಗೆ ತಲುಪಿದೆ ಎಂದು ಬರ್ಗಂಡಿ ಪ್ರೈವೇಟ್ ಹುರೂನ್ ಇಂಡಿಯಾ 500 ವರದಿ ಹೇಳಿದೆ.

ಮಾರುಕಟ್ಟೆ ಬಂಡವಾಳದ ಲೆಕ್ಕಾಚಾರದಲ್ಲಿ ದೇಶದ ಎರಡನೆಯ ಅತಿ ದೊಡ್ಡ ಕಂಪನಿಯಾಗಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮಾರುಕಟ್ಟೆ ಮೌಲ್ಯವು ಶೇ 0.9ರಷ್ಟು ಜಾಸ್ತಿ ಆಗಿದ್ದು, ₹ 12.97 ಲಕ್ಷ ಕೋಟಿಗೆ ತಲುಪಿದೆ ಎಂದು ವರದಿ ಹೇಳಿದೆ. ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್ ಮತ್ತು ಐಸಿಐಸಿಐ ಬ್ಯಾಂಕ್ ನಂತರದ ಸ್ಥಾನಗಳಲ್ಲಿ ಇವೆ. ಅದಾನಿ ಸಮೂಹಕ್ಕೆ ಸೇರಿದ ಅದಾನಿ ಗ್ರೀನ್ ಎನರ್ಜಿ ಕಂಪನಿಯ ಮಾರುಕಟ್ಟೆ ಮೌಲ್ಯವು ಶೇ 139ರಷ್ಟು ಜಾಸ್ತಿ ಆಗಿ, ₹ 4.50 ಲಕ್ಷ ಕೋಟಿಗೆ ತಲುಪಿದೆ. ಅದಾನಿ ವಿಲ್ಮರ್ ಮೌಲ್ಯವು ಸರಿಸುಮಾರು ಶೇ 190ರಷ್ಟು, ಅದಾನಿ ಪವರ್ ಮೌಲ್ಯ ಶೇ 157.8ರಷ್ಟು ಬೆಳವಣಿಗೆ ಕಂಡಿದೆ.

'ಆರು ತಿಂಗಳಲ್ಲಿ ಅದಾನಿ ಸಮೂಹದ ಮಾರುಕಟ್ಟೆ ಮೌಲ್ಯ ಶೇ 88.1ರಷ್ಟು ಬೆಳವಣಿಗೆ ಕಂಡರೆ, ಟಾಪ್-500 ಪಟ್ಟಿಯ ಇತರ ಕಂಪನಿಗಳ ಮಾರುಕಟ್ಟೆ ಮೌಲ್ಯವು ಶೇ 2ರಷ್ಟು ಹೆಚ್ಚಾಗಿದೆ' ಎಂದು ವರದಿ ಹೇಳಿದೆ.

ಭಾರತದ ಕಂಪನಿಗಳ ಸಾಧನೆಯು ಜಾಗತಿಕ ಮಟ್ಟದ ಇತರ ಕಂಪನಿಗಳಿಗಿಂತ ಉತ್ತಮವಾಗಿರುವುದು ದೇಶದ ಅರ್ಥ ವ್ಯವಸ್ಥೆಯ ಶಕ್ತಿಯನ್ನು ತೋರಿಸುತ್ತಿದೆ ಎಂದು ಹುರೂನ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಸಂಶೋಧಕ ಅನಸ್ ರಹಮಾನ್ ಜುನೈದ್ ಹೇಳಿದ್ದಾರೆ.

3ನೇ ವರ್ಷದ ಪುಣ್ಯ ಸ್ಮರಣೆ



ಶ್ರೀಮತಿ ಎ. ಅನಸೂಯ
ಸಂಸ್ಥಾಪಕರು,
ನಿವೇದಿತಾ ಶಾಲೆ, ಗವಿಪುರಂ
ಎಕ್ಸ್‌ಟೆನ್ಷನ್ ಹಾಗೂ ವಸಂತಪುರ.
ನೀವು ನಮ್ಮನ್ನು ಅಗಲಿ ಇಂದಿಗೆ ಮೂರು ವರ್ಷ ಕಳೆದರೂ ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ತಮ್ಮ ಸ್ಮರಣೆಯಲ್ಲಿರುವ
ಕುಟುಂಬ ವರ್ಗ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಶಾಂತಮ್ಮ
ಜನನ: 03-05-1940 ಮರಣ: 15-06-2022
ನನ್ನ ಧರ್ಮಪತ್ನಿಯವರಾದ ಶ್ರೀಮತಿ ಶಾಂತಮ್ಮನವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ: 16-06-2022 ನೇ ಗುರುವಾರ ದಂದು ಬೆಳಿಗ್ಗೆ 11.00 ಗಂಟೆಗೆ ಬನಶಂಕರಿಯ ಚಿತಾಗಾರದಲ್ಲಿ ನಡೆಸಲಾಗುತ್ತದೆ.
ಇಂತಿ ದುಃಖತಪ್ತರು
ವೈ. ವಿ. ಅಣ್ಣಯ್ಯ ಮತ್ತು ಕುಟುಂಬದವರು

ನಾಲ್ಕನೆಯ ದಿನವೂ ಸೆನ್ಸೆಕ್ಸ್ ಇಳಿಕೆ

ಮುಂಬೈ (ಪಿಟಿಐ): ಸತತ ನಾಲ್ಕನೆಯ ದಿನವೂ ಇಳಿಕೆಯ ಹಾದಿಯಲ್ಲಿ ಸಾಗಿದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ಬುಧವಾರ 152 ಅಂಶ ಇಳಿಯಿತು. ಮಾರುಕಟ್ಟೆಯ ಗಮನವು ಬಡ್ಡಿ ದರದ ವಿಚಾರವಾಗಿ ಅಮೆರಿಕದ ಫೆಡರಲ್ ರಿಸರ್ವ್ ಕೈಗೊಳ್ಳುವ ತೀರ್ಮಾನದ ಮೇಲೆ ನೆಟ್ಟಿದೆ.

ರೂಪಾಯಿ ಮೌಲ್ಯ ಕುಸಿತ, ವಿದೇಶಿ ಬಂಡವಾಳ ಹೊರಹರಿವು ಕೂಡ ಮಾರುಕಟ್ಟೆ ಕುಸಿತಕ್ಕೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ. ಬಿಎಸ್‌ಇ ಸೆನ್ಸೆಕ್ಸ್ 52,541 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿದ್ದು ಇದು 10 ತಿಂಗಳ ಕನಿಷ್ಠ ಮಟ್ಟ.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 39 ಅಂಶ ಕುಸಿದಿದೆ. 'ಅಮೆರಿಕದ ಫೆಡರಲ್ ರಿಸರ್ವ್ ತೀರ್ಮಾನ ಏನಿರಬಹುದು ಎಂಬ ನಿರೀಕ್ಷೆಯಲ್ಲಿ ಮಾರುಕಟ್ಟೆಯಲ್ಲಿ ಭೀತಿ ಮನೆ ಮಾಡಿದೆ' ಎಂದು ರೆಲಿಗೇರ್ ಬ್ರೋಕಿಂಗ್ ಸಂಸ್ಥೆಯ ಸಂಶೋಧನಾ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಗಳಲ್ಲಿಯೂ ಹೂಡಿಕೆದಾರರು ಫೆಡರಲ್ ರಿಸರ್ವ್ ತೀರ್ಮಾನದ ಮೇಲೆ ಕಣ್ಣಿಟ್ಟಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 1ರಷ್ಟು ಕಡಿಮೆ ಆಗಿ ಪ್ರತಿ ಬ್ಯಾರೆಲ್‌ಗೆ 120 ಡಾಲರ್‌ಗೆ ತಲುಪಿದೆ.

ಮತ್ತಷ್ಟು ಕುಸಿದ ರೂಪಾಯಿ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು 18 ಪೈಸೆ ಕುಸಿದಿರುವ ರೂಪಾಯಿ ಮೌಲ್ಯವು ಬುಧವಾರದ ವಹಿವಾಟಿನಲ್ಲಿ 78.22ಕ್ಕೆ ಇಳಿಕೆ ಕಂಡಿತು. ಇದು ರೂಪಾಯಿಯ ಸಾರ್ವಕಾಲಿಕ ಕನಿಷ್ಠ ಮೌಲ್ಯ.

ಷೇರುಪೇಟೆಗಳಲ್ಲಿನ ಕುಸಿತ, ವಿದೇಶಿ ಬಂಡವಾಳದ ಹೊರಹರಿವು ನಿಂತಿಲ್ಲದಿರುವುದು ಮೌಲ್ಯ ಕುಸಿತಕ್ಕೆ ಪ್ರಮುಖ ಕಾರಣಗಳು ಎಂದು ತಜ್ಞರು ಹೇಳಿದ್ದಾರೆ. ರೂಪಾಯಿ ಮೌಲ್ಯವು ಸತತ ನಾಲ್ಕು ದಿನಗಳಿಂದ ಕುಸಿಯುತ್ತಲೇ ಇದೆ.

ಹೆಚ್ಚಿದ ವ್ಯಾಪಾರ ಕೊರತೆ ಅಂತರ

ನವದೆಹಲಿ (ಪಿಟಿಐ): ಮೇ ತಿಂಗಳಿನಲ್ಲಿ ದೇಶದ ರಫ್ತು ಪ್ರಮಾಣವು ಶೇಕಡ 20.55ರಷ್ಟು ಹೆಚ್ಚಳ ಕಂಡಿದ್ದು, ₹ 3.04 ಲಕ್ಷ ಕೋಟಿಗೆ ತಲುಪಿದೆ. ವ್ಯಾಪಾರ ಕೊರತೆ ಅಂತರವು ದಾಖಲೆಯ ₹ 1.89 ಲಕ್ಷ ಕೋಟಿ ಆಗಿದೆ.

ಮೇ ತಿಂಗಳಿನಲ್ಲಿ ಆಮದು ಪ್ರಮಾಣವು ಶೇ 62.83ರಷ್ಟು ಹೆಚ್ಚಳ ಕಂಡು, ₹ 4.93 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಕಿ-ಅಂಶಗಳು ಹೇಳಿವೆ.

ಎಣ್ಣೆ ಹೊರತಾಗಿನ ವಸ್ತುಗಳ ರಫ್ತಿನಲ್ಲಿ ಆಗಿರುವ ಅಲ್ಪ ಇಳಿಕೆ ಹಾಗೂ ಚಿನ್ನದ ಆಮದಿನಲ್ಲಿ ಆಗಿರುವ ಭಾರಿ ಏರಿಕೆಯ ಕಾರಣದಿಂದಾಗಿ ದೇಶದ ವ್ಯಾಪಾರ ಕೊರತೆ ಅಂತರವು ಮೇ ತಿಂಗಳಲ್ಲಿ ದಾಖಲೆಯ ಮಟ್ಟಕ್ಕೆ ತಲುಪಿದೆ ಎಂದು ಐಸಿಆರ್‌ಎ ಸಂಸ್ಥೆಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

General

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000. 9538811104, 9538811223

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಬೇಕಾಗಿದ್ದಾರೆ:FRESHFRUITS ಅಂಗಡಿಗೆಬಿಲ್ಲಿಂಗ್ ಮತ್ತು ಹೆಲ್ಪರ್ ಕೆಲಸಕ್ಕೆ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. (ಯುವಕರಿಗೆವಸತಿ ಸೌಲಭ್ಯವಿದೆ). ವಯಸ್ಸು: 18ರಿಂದ 25,ವೇತನ: 12,000. ಸಮಯ:ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 (1st Shift), ಮಧ್ಯಾಹ್ನ 2 ರಿಂದ ರಾತ್ರಿ 10 (2nd Shift) (8 ಗಂಟೆಡ್ಯೂಟಿ). ಶಿಕ್ಷಣ: 10 ಪಾಸಾಗಿರಬೇಕು. ವಿಳಾಸ: ನಂ. 6/1ಎ,ವಿಶ್ವನೀದಂ ಅಂಚೆ, ಸುಂಕದಕಟ್ಟೆ, ಮಾಗಡಿರಸ್ತೆ,ಬೆಂಗಳೂರು - 560 091. ಸಂಪರ್ಕಿಸಿ: ಪುರುಷೋತ್ತಮ್: 8951389775

Hospital & Medical Jobs

ತಕ್ಷಣ ಕೆಲಸ: ಮಹಿಳೆಯರು, ಪುರುಷರು, ವಿಚ್ಛೇದಿತರಿಗೆ ಹೋಂನರ್ಸಿಂಗ್ ಕೆಲಸ ಲಭ್ಯವಿದೆ. ಊಟ, ವಸತಿಯೊಂದಿಗೆ ಸಂಬಳ: 11,000 ರಿಂದ 23,000/-. (ಸರ್ಕಾರಿ ನೊಂದಾಯಿತ ಸಂಸ್ಥೆ) 9739292222, 9742892222, 9742384444

Wanted

ಬೇಕಾಗಿದ್ದಾರೆ. ಇಸ್ತ್ರೀ ಮಾಡುವ ಸಿಬ್ಬಂದಿ (ಅನುಭವದೊಂದಿಗೆ) ದಿನಕ್ಕೆ ರೂ. 800 ಸಂಬಳ ಮತ್ತು ಶಾಪ್ ಸಹಾಯಕರು ತಿಂಗಳಿಗೆ ರೂ. 13,000. ಜಯನಗರ ಮತ್ತು ಕೋರಮಂಗಲದಲ್ಲಿ ಡ್ರೈ ಕ್ಲೀನಿಂಗ್ ಶೋ ರೂಂಗಾಗಿ, ವಯಸ್ಸು 18 ವರ್ಷದಿಂದ 40 ವರ್ಷಗಳು ಮಾತ್ರ. ಬೆಂಗಳೂರಿನ ಜಯನಗರ ಮತ್ತು ಸುತ್ತಮುತ್ತಲಿನ ಜನರು ಮಾತ್ರ ಸಂಪರ್ಕಿಸಿ: 9880266007

ಸಾರ್ವಜನಿಕ ಪ್ರಕಟಣೆ

ಟೆಕ್ಸ್ ಪೋರ್ಟ್ ಇಂಡಸ್ಟ್ರೀಸ್ ಪ್ರೈ. ಲಿ. / ಟೆಕ್ಸ್ ಪೋರ್ಟ್ ಅಪರೆಲ್ಸ್ ಎಲ್‌ಎಲ್ ಪಿ ಆಡಳಿತ ವರ್ಗ ತಿಳಿಸುವುದೇನೆಂದರೆ, ಏಪ್ರಿಲ್ 2020 ರಿಂದ ಡಿಸೆಂಬರ್ 2021 ರವರೆಗೆ ಸಲ್ಲಬೇಕಾದ ತುಟ್ಟಿಭತ್ಯೆಯನ್ನು, ಈ ಅವಧಿಯಲ್ಲಿ ಕೆಲಸ ಮಾಡಿ ಬಿಟ್ಟಿರುವಂತಹ ಕಾರ್ಮಿಕರಿಗೆ ನೀಡಲಾಗುವುದು. ಆದ್ದರಿಂದ ತಾವು ಸೋಮವಾರದಿಂದ ಶನಿವಾರದವರೆಗೆ 9:00 ರಿಂದ 5:00 ಗಂಟೆಯ ಒಳಗೆ ಖುದ್ದಾಗಿ ಫ್ಯಾಕ್ಟರಿ ಎಚ್‌ಆರ್ ಡಿಪಾರ್ಟ್‌ಮೆಂಟ್ ಗೆ ಬಂದು, ನಿಮ್ಮ ಬ್ಯಾಂಕ್ ಧಾಖಲೆ ಸಮೇತ ಅರ್ಜಿ ಸಲ್ಲಿಸಿ ತಮಗೆ ಬರಬೇಕಾದ ತುಟ್ಟಿಭತ್ಯೆಯನ್ನು ಸ್ವೀಕರಿಸಲು ಕೋರಲಾಗಿದೆ. ಈ ವಿಷಯದ ಬಗ್ಗೆ ಲಿಖಿತ ಮಾಹಿತಿಯನ್ನು ಈಗಾಗಲೇ ನಿಮಗೆ ಪೋಸ್ಟ್ ಮೂಲಕ (ಸಿಒಪಿ) ತಿಳಿಸಲಾಗಿರುತ್ತದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: 080-3928 4183 / 81508 00073 / 70268 67770 / 76766 50601

ವಾಹನ

Four Wheelers Selling

TATA

ಭವಿಷ್ಯ

Astrology

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ಪ್ರವಾಸ

Travel

15.08.2022 7 ದಿನಗಳ ಕಾಶಿ,ಗಯಾ,ಅಯೋಧ್ಯ 15.09.2022 35 ದಿನಗಳ ಉತ್ತರ ಭಾರತ. 05.09.2022 ಚಾರ್‌ಧಾಮ್. 22.08.2022 11 ದಿನಗಳ ಮುಕ್ತಿನಾಥ್ ನೇಪಾಳ. 14.07.2022 ಅಮರನಾಥ ಯಾತ್ರೆ ಪ್ರವಾಸಗಳಿಗಾಗಿ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ 080-26574131 26573421 9964108171

22.07.2022ರಿಂದ 12ದಿನಗಳು ವಿಮಾನ ಮತ್ತು ಏಸಿ ಬಸ್ಸು ಹಾಗೂ ಏಸಿ ರೂಂಸಹಿತ 45000/...ಅಮರನಾಥ್, ವೈಷ್ಣೋದೇವಿ,ಕಾಶ್ಮೀರ,ದೆಹಲಿ, ಅಮೃತಸರ್,ವಾಘಬಾರ್ಡರ್. ಏಷ್ಯನ್ ಟ್ರಾವಲ್ ಲೈನ್ಸ್,163/3 ಆರ್.ವಿ.ರಸ್ತೆ,ಬೆಂಗಳೂರು 8105657052, 9480182865.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-54500
ಬೆಂಗಳೂರು	
ಇತರ	60000-70000
ಗುಬ್ಬಿ	
ಇತರ	35500-48500
ಕಾರ್ಕಳ	
ಹೊಸತು	40000-45000
ಹಳತು	46000-54500
ಕುಮಟಾ	
ಚಿಪ್ಪು	25089-30111
ಕೋಕ	16569-29509
ಫ್ಯಾಕ್ಟರಿ	10199-19699
ಹಳೆಚಾಲಿ	45069-46269
ಹೊಸಚಾಲಿ	35509-38100
ಮಂಗಳೂರು	
ಕೋಕ	20000-24000
ಪುತ್ತೂರು	
ಕೋಕ	11000-26000
ಹೊಸತು	27500-41500
ಶಿಕಾರಿಪುರ	
ಕೆಂಪು	46000-48900
ಶಿವಮೊಗ್ಗ	
ಬೆಟ್ಟೆ	48770-54089
ಗೊರಬಲು	16209-37419
ರಾಶಿ	43899-49209
ಸರಕು	57869-78909
ಸಿದ್ದಾಪುರ	
ಬಿಳಿಗೋಟು	25129-32699
ಚಾಲಿ	34469-38399
ಕೋಕ	20199-31312
ಕೆಂಪುಗೋಟು	30599-33699
ರಾಶಿ	44099-48099
ತಟ್ಟಿಬೆಟ್ಟೆ	45299-45299
ಶಿರಸಿ	
ಬೆಟ್ಟೆ	36099-43821
ಬಿಳಿಗೋಟು	22108-31899
ಚಾಲಿ	32499-39099
ರಾಶಿ	42009-47999
ಸೊರಬ	
ರಾಶಿ	47500-47500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16100	15900	16400	233.35 ಸೆಂಟ್ಸ್
ಎಸಿ	8960	8600	9025	
ಆರ್‌ಪಿ	9750	9050	10025	ಲಂಡನ್
ಆರ್‌ಸಿ	4800	4450	4625	2039 ಡಾಲರ್ಸ್

ಕ್ಯಾಮೆರಾ ಕಣ್ಗಾವಲಿನಲ್ಲಿ ಇಂದಿನಿಂದ ಸಿಇಟಿ ಪರೀಕ್ಷೆ

ಬೆಂಗಳೂರು: ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುವೈದ್ಯಕೀಯ, ಫಾರ್ಮಸಿ ಸೇರಿದಂತೆ ವಿವಿಧ ವೃತ್ತಿಪರ ಪದವಿ ಕೋರ್ಸ್‌ಗಳ ಸೀಟು ಹಂಚಿಕೆಗಾಗಿ ಗುರುವಾರದಿಂದ ಮೂರು ದಿನಗಳ ಕಾಲ ಸಂಪೂರ್ಣ ಕ್ಯಾಮೆರಾ ಕಣ್ಗಾವಲಿನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಯಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, 'ಗುರುವಾರ ಮತ್ತು ಶುಕ್ರವಾರ ಸಿಇಟಿ ಪರೀಕ್ಷೆ ನಡೆಯಲಿದೆ. ಶನಿವಾರ ಹೊರನಾಡು ಮತ್ತು ಗಡಿನಾಡು ಕನ್ನಡಿಗ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ. 2.16 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ರಾಜ್ಯದಾದ್ಯಂತ ಒಟ್ಟು 486 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಪೂರ್ಣವಾಗಿ ವಿಡಿಯೊ ಚಿತ್ರೀಕರಣ ಮಾಡಲಾಗುವುದು' ಎಂದರು.

ಪ್ರತಿ ಪರೀಕ್ಷಾ ಕೇಂದ್ರಕ್ಕೂ ಸಹಾಯಕ ಆಯುಕ್ತರ ದರ್ಜೆಯ ಅಧಿಕಾರಿಯೊಬ್ಬರನ್ನು ಪರೀಕ್ಷಾ ವೀಕ್ಷಕರಾಗಿ ನೇಮಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಒಟ್ಟಾರೆ, 486 ವೀಕ್ಷಕರು, 972 ವಿಶೇಷ ತಪಾಸಣಾ ದಳದ ಸದಸ್ಯರು, 486 ಪ್ರಶ್ನೆಪತ್ರಿಕೆ ಪಾಲಕರು, 9,600 ಕೊಠಡಿ ಮೇಲ್ವಿಚಾರಕರು ಮತ್ತು 20 ಸಾವಿರಕ್ಕೂ ಹೆಚ್ಚು ಅಧಿಕಾರಿಗಳನ್ನು ಸಿಇಟಿ ಪರೀಕ್ಷಾ ಪ್ರಕ್ರಿಯೆಯಲ್ಲಿ ನಿಯೋಜಿಸಲಾಗಿದೆ ಎಂದರು.

ಸಂಕ್ಷಿಪ್ತ ಸುದ್ದಿ

ಇತಿಹಾಸ ಸೇರಿದ ಇಂಟರ್‌ನೆಟ್ ಎಕ್ಸ್‌ಪ್ಲೋರರ್

ಸ್ಯಾನ್ ಫ್ರಾನ್ಸಿಸ್ಕೊ (ಎಪಿ): ಇಂಟರ್ನೆಟ್ ಬಳಕೆಯ ಆರಂಭದ ದಿನಗಳಿಂದ ಬಳಕೆದಾರರ ನೆಚ್ಚಿನ ಬ್ರೌಸರ್ ಆಗಿದ್ದ ಇಂಟರ್ನೆಟ್ ಎಕ್ಸ್‌ಪ್ಲೋರರ್ ಬುಧವಾರದಿಂದಲೇ ಸ್ಥಗಿತಗೊಂಡಿದೆ. 90ರ ದಶಕದಿಂದ ಸೇವೆ ಆರಂಭಿಸಿದ್ದ ಐಇ ಅಪ್ಲಿಕೇಷನ್ ಬರೋಬ್ಬರಿ 27 ವರ್ಷಗಳ ಕಾರ್ಯಾಚರಣೆಯ ನಂತರ ಇತಿಹಾಸದ ಪುಟ ಸೇರಿದೆ.

'ಐಇ ಬ್ರೌಸರ್ ಸ್ಥಗಿತವಾಗಿದೆ. ಭವಿಷ್ಯದ ವಿಂಡೋಸ್‌ಗಳಲ್ಲಿ 'ಮೈಕ್ರೋಸಾಫ್ಟ್ ಎಡ್ಜ್' ಬ್ರೌಸರ್ ಇರಲಿದೆ' ಎಂದು ಮೈಕ್ರೋಸಾಫ್ಟ್ ಕಂಪನಿ ಅಧಿಕೃತ ಹೇಳಿಕೆ ನೀಡಿದೆ.

ಯೋಗ ವಿವಿ: ಇನ್ನೊಂದು ಕ್ಯಾಂಪಸ್

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಈಗಾಗಲೇ ಆರಂಭವಾಗಿ, ಮೊದಲ ಘಟಿಕೋತ್ಸವವನ್ನೂ ಪೂರೈಸಿರುವ ವಿವೇಕಾನಂದ ಯೋಗ ವಿಶ್ವವಿದ್ಯಾಲಯ, ದೇಶದ ಪೂರ್ವ ಕರಾವಳಿ ಭಾಗದಲ್ಲಿ ತನ್ನ ಮತ್ತೊಂದು ಕ್ಯಾಪಸ್ ತೆರೆಯುವ ಸಿದ್ಧತೆಯಲ್ಲಿದೆ.

ಲುವಿವ್‌ನ ಮೇಲೆ ದಾಳಿ: (ಕೀವ್ ವರದಿ) ಉಕ್ರೇನ್‌ಗೆ ನ್ಯಾಟೋ ಪೂರೈಸಿರುವ ಲುವಿವ್ ಪ್ರದೇಶದ ಯುದ್ಧೋಪಕರಣಗಳ ಬೃಹತ್ ಶಸ್ತ್ರಕೋಠಿಯನ್ನು ನಾಶ ಮಾಡಲು ದೂರಗಾಮಿ ಕ್ಷಿಪಣಿ ಬಳಸಲಾಗಿದೆ ಎಂದು ರಷ್ಯಾದ ಮಿಲಿಟರಿ ಬುಧವಾರ ಹೇಳಿದೆ.

ತಪ್ಪಿದ ವಿಮಾನಗಳ ಡಿಕ್ಕಿ

ಕೊಲಂಬೊ (ಪಿಟಿಐ): ಲಂಡನ್– ಕೊಲಂಬೊ ಮಾರ್ಗವಾಗಿ ತೆರಳುತ್ತಿದ್ದ ಶ್ರೀಲಂಕಾ ಏರ್‌ಲೈನ್ಸ್ ವಿಮಾನದ ಪೈಲಟ್‌ಗಳ ಸಮಯಪ್ರಜ್ಞೆಯಿಂದಾಗಿ ಟರ್ಕಿ ವಾಯು ಪ್ರದೇಶದಲ್ಲಿ ಬ್ರಿಟಿಷ್ ಏರ್‌ವೇಸ್ ವಿಮಾನಕ್ಕೆ ಡಿಕ್ಕಿ ಹೊಡೆಯುವುದು ತಪ್ಪಿದೆ.

ಇದೇ 13ರಂದು 275 ಪ್ರಯಾಣಿಕರಿದ್ದ ವಿಮಾನ ಹೀಥ್ರೂನಿಂದ ಕೊಲಂಬೊಗೆ ತೆರಳುವ ಮಾರ್ಗದಲ್ಲಿ ಟರ್ಕಿ ವಾಯುಪ್ರದೇಶ ಪ್ರವೇಶಿಸಿತ್ತು. ವಾಯು ಸಂಚಾರ ನಿಯಂತ್ರಣದಿಂದ ಶ್ರೀಲಂಕಾ ವಿಮಾನಕ್ಕೆ 33 ಸಾವಿರ ಅಡಿಗಳಿಂದ 35 ಸಾವಿರ ಅಡಿಗೇರಲು ಹೇಳಲಾಯಿತು. ಆದರೆ ಅದೇ ಎತ್ತರದಲ್ಲಿ ಎದುರಿನಿಂದ ಬ್ರಿಟಿಷ್ ಏರ್‌ವೇಸ್ ವಿಮಾನವೂ ಬರುತ್ತಿತ್ತು. ಶ್ರೀಲಂಕಾ ವಿಮಾನದ ಪೈಲಟ್‌ಗಳು 15 ಮೈಲು ದೂರದಲ್ಲೇ ಇದನ್ನು ಗಮನಿಸಿ ತಮ್ಮ ವಿಮಾನವನ್ನು 35 ಸಾವಿರ ಅಡಿಗೆ ಏರದಿರಲು ನಿರಾಕರಿಸಿದರು.

ಅಂಕಾರಾ ವಾಯು ಸಂಚಾರ ನಿಯಂತ್ರಣದಿಂದ ಎರಡು ಬಾರಿ ಸೂಚನೆ ಬಂದರೂ ಶ್ರೀಲಂಕಾ ಪೈಲಟ್‌ಗಳು ತಮ್ಮ ನಿರ್ಧಾರಕ್ಕೇ ಅಂಟಿಕೊಂಡರು ಹಾಗೂ ಎದುರುಗಡೆಯಿಂದ ವಿಮಾನ ಬರುತ್ತಿರುವ ಮಾಹಿತಿ ನೀಡಿದರು. ಬಳಿಕ ತುರ್ತಾಗಿ ಪ್ರತಿಕ್ರಿಯಿಸಿದ ವಾಯು ಸಂಚಾರ ನಿಯಂತ್ರಣ, 35,000 ಅಡಿಗಳ ಮೇಲೆ ಈಗಾಗಲೇ ಬ್ರಿಟಿಷ್ ಏರ್‌ವೇಸ್ ವಿಮಾನ ಇರುವುದರಿಂದ ಶ್ರೀಲಂಕಾದ ವಿಮಾನ ಏರದಂತೆ ತಿಳಿಸಿತು. ಆಗ ವಿಮಾನ 35 ಸಾವಿರ ಅಡಿ ಎತ್ತರಕ್ಕೇರಿದ್ದರೆ ವಿಮಾನಗಳು ಡಿಕ್ಕಿಹೊಡೆಯುತ್ತಿದ್ದವು ಎಂದು ಡೈಲಿ ಮಿರರ್ ವರದಿ ಮಾಡಿದೆ.

ಯುಎಇಯಿಂದ 4 ತಿಂಗಳು ಭಾರತದ ಗೋಧಿ ರಫ್ತು ಸ್ಥಗಿತ

ದುಬೈ (ರಾಯಿಟರ್ಸ್): ಭಾರತದಿಂದ ತರಿಸಿಕೊಂಡ ಗೋಧಿಯನ್ನು ಇತರ ದೇಶಗಳಿಗೆ ರಫ್ತು, ಪುನರ್ ರಫ್ತು ಮಾಡುವ ಪ್ರಕ್ರಿಯೆಯನ್ನು ನಾಲ್ಕು ತಿಂಗಳ ಮಟ್ಟಿಗೆ ಅರಬ್ ಸಂಯುಕ್ತ ಸಂಸ್ಥಾನ (ಯುಎಇ) ಸ್ಥಗಿತಗೊಳಿಸಿದೆ.

ಜಾಗತಿಕ ವ್ಯಾಪಾರ ವಹಿವಾಟಿನಲ್ಲಿ ಎದುರಾಗಿರುವ ಅಡ್ಡಿಗಳಿಂದಾಗಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ ಎಂದು ಸರ್ಕಾರಿ ಸ್ವಾಮ್ಯದ ಡಬ್ಲ್ಯುಎಎಂ ಸುದ್ದಿಸಂಸ್ಥೆ ತಿಳಿಸಿದೆ.

ಜಾಗತಿಕವಾಗಿ ಗೋಧಿಯನ್ನು ಬೆಳೆಯುವ ಎರಡನೇ ದೊಡ್ಡ ದೇಶವಾದ ಭಾರತದಿಂದ ಯುಎಇ ಗೋಧಿ ತರಿಸಿಕೊಳ್ಳುತ್ತದೆ. ಮೇ 14ರಂದು ಗೋಧಿ ರಫ್ತನ್ನು ನಿಷೇಧಿಸಿರುವ ಭಾರತವು, ಈ ದಿನಕ್ಕೂ ಮುನ್ನ ಗೋಧಿ ಖರೀದಿಗೆ ಸಂಬಂಧಿಸಿದಂತೆ 'ಲೆಟರ್ ಆಫ್ ಕ್ರೆಡಿಟ್' (ಎಲ್‌ಸಿ) ಪಡೆದಿರುವ ದೇಶಗಳಿಗೆ ಮಾತ್ರ ರಫ್ತು ಮಾಡುವುದಕ್ಕೆ ಅವಕಾಶ ಕಲ್ಪಿಸಿದೆ. ಆ ಬಳಿಕವೂ 4.69 ಲಕ್ಷ ಟನ್ ಗೋಧಿಯ ರಫ್ತಿಗೆ ಭಾರತ ಅವಕಾಶ ಕಲ್ಪಿಸಿದೆ.

ರಾಷ್ಟ್ರಪತಿ ಚುನಾವಣೆ: ಇದೇ 20–21ಕ್ಕೆ ವಿರೋಧ ಪಕ್ಷಗಳ ಮತ್ತೊಂದು ಸುತ್ತಿನ ಸಭೆ

ಪ್ರಸ್ತಾವ ಮತ್ತೊಮ್ಮೆ ತಿರಸ್ಕರಿಸಿದ ಪವಾರ್

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಬುಧವಾರ ಮತ್ತೊಮ್ಮೆ ನಿರಾಕರಿಸಿದ್ದಾರೆ. ಹೀಗಾಗಿ ಅಭ್ಯರ್ಥಿಯ ಆಯ್ಕೆ ಕುರಿತು ಇನ್ನೊಮ್ಮೆ ಚರ್ಚಿಸಲು ವಿರೋಧ ಪಕ್ಷಗಳು ಇದೇ 20– 21ರಂದು ಸಭೆ ಸೇರಲಿವೆ ಎಂದು ಹಿರಿಯ ನಾಯಕರೊಬ್ಬರು ತಿಳಿಸಿದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಬುಧವಾರ ಕರೆದಿದ್ದ ಮೊದಲ ಸಭೆಯಲ್ಲಿ 17 ವಿರೋಧ ಪಕ್ಷಗಳು ಭಾಗವಹಿಸಿದ್ದವು. 'ಪ್ರಜಾಪ್ರಭುತ್ವ ನೀತಿಯನ್ನು ಎತ್ತಿಹಿಡಿಯುವ ಸಾಮಾನ್ಯ ವ್ಯಕ್ತಿಯೊಬ್ಬರನ್ನು ವಿರೋಧ ಪಕ್ಷಗಳ ಅಭ್ಯರ್ಥಿಯನ್ನಾಗಿಸಲು' ಈ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಅವರು ಹೇಳಿದರು.

ಪವಾರ್ ಅವರು ನಿರಾಕರಿಸಿದ ಬಳಿಕ ಬ್ಯಾನರ್ಜಿ ಅವರು ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಮತ್ತು ಗೋಪಾಲಕೃಷ್ಣ ಗಾಂಧಿ ಅವರ ಹೆಸರನ್ನು ಪ್ರಸ್ತಾಪಿಸಿದರು. ಗೋಪಾಲಕೃಷ್ಣ ಗಾಂಧಿ ಅವರು ಮಹಾತ್ಮಾ ಗಾಂಧಿ ಮತ್ತು ಸಿ.ರಾಜಗೋಪಾಲಾಚಾರಿ ಅವರ ಮೊಮ್ಮಗ.

ಪಶ್ಚಿಮ ಬಂಗಾಳದ ಮಾಜಿ ರಾಜ್ಯಪಾಲರೂ ಆದ ಗೋಪಾಲಕೃಷ್ಣ ಗಾಂಧಿ ಅವರು 2017ರಲ್ಲಿ ಉಪರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿದ್ದರು. ಆ ಚುನಾವಣೆಯಲ್ಲಿ ಎಂ.ವೆಂಕಯ್ಯ ನಾಯ್ಡು ಆಯ್ಕೆಯಾಗಿದ್ದರು.

ಸುಮಾರು ಎರಡು ಗಂಟೆ ಕಾಲ ನಡೆದ ಸಭೆಯಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ, ಎನ್‌ಸಿಪಿ, ಟಿಎಂಸಿ, ಡಿಎಂಕೆ, ಆರ್‌ಜೆಡಿ, ಶಿವಸೇನೆ, ಸಿಪಿಐ, ಸಿಪಿಐ(ಎಂ), ಸಿಪಿಐ (ಎಂಎಲ್), ನ್ಯಾಷನಲ್ ಕಾನ್ಫರೆನ್ಸ್, ಪಿಡಿಪಿ, ಜೆಡಿಎಸ್, ಆರ್‌ಎಸ್‌ಪಿ, ಐಯುಎಂಎಲ್, ಆರ್‌ಎಲ್‌ಡಿ ಮತ್ತು ಜೆಎಂಎಂ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ಆದರೆ ಎಎಪಿ, ಅಕಾಲಿದಳ, ಎಐಎಂಐಎಂ, ಟಿಆರ್‌ಎಸ್ ಮತ್ತು ಒಡಿಶಾದ ಆಡಳಿತಾರೂಢ ಬಿಜೆಡಿ ನಾಯಕರು ಗೈರಾಗಿದ್ದರು.

ಸಭೆಯ ಆರಂಭದಲ್ಲೇ ಮಮತಾ ಅವರು ಪವಾರ್ ಹೆಸರನ್ನು ಪ್ರಸ್ತಾಪಿಸಿದರು. ಇತರ ನಾಯಕರೂ ಪವಾರ್ ಅವರ ಮನವೊಲಿಕೆಗೆ ಪ್ರಯತ್ನಿಸಿದರು. ಆದರೆ ಪ್ರಸ್ತಾವವನ್ನು ತಿರಸ್ಕರಿಸಿದ ಪವಾರ್, 'ನಾನು ಕೊನೆಯವರೆಗೂ ಸಕ್ರಿಯ ರಾಜಕಾರಣದಲ್ಲಿರಲು ಬಯಸುತ್ತೇನೆ' ಎಂದರು.

ಬಳಿಕ ಮಮತಾ ಅವರು ಫಾರೂಕ್ ಅಬ್ದುಲ್ಲಾ ಮತ್ತು ಗೋಪಾಲಕೃಷ್ಣ ಗಾಂಧಿ ಅವರನ್ನು ಸಂಭವನೀಯ ಅಭ್ಯರ್ಥಿಗಳೆಂದು ಉಲ್ಲೇಖಿಸಿದರು ಎಂದು ಮೂಲಗಳು ತಿಳಿಸಿವೆ. ಆದರೆ ಅಬ್ದುಲ್ಲಾ ಅವರ ಪುತ್ರ ಮತ್ತು ಎನ್‌ಸಿ ನಾಯಕ ಒಮರ್ ಅಬ್ದುಲ್ಲಾ ಅವರು ಈ ಹಂತದಲ್ಲಿ ಹೆಸರುಗಳನ್ನು ಚರ್ಚಿಸುವ ಅಗತ್ಯವಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು, 'ಕಾಂಗ್ರೆಸ್ ಮನದಲ್ಲಿ ಯಾವುದೇ ನಿರ್ದಿಷ್ಟ ಅಭ್ಯರ್ಥಿಯಿಲ್ಲ. ಎಲ್ಲರೂ ಕುಳಿತು ಸರ್ವಸಮ್ಮತ ಅಭ್ಯರ್ಥಿಯನ್ನು ಅಯ್ಕೆ ಮಾಡೋಣ' ಎಂದು ಸಭೆಯಲ್ಲಿ ಹೇಳಿದರು.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ನವದೆಹಲಿಯಲ್ಲಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರನ್ನು ಸ್ವಾಗತಿಸಿದರು. ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ ಇದ್ದಾರೆ – ಪಿಟಿಐ ಚಿತ್ರ

ಸರ್ವಸಮ್ಮತ ಅಭ್ಯರ್ಥಿಗೆ ಬಿಜೆಪಿ ಯತ್ನ

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ ಸಭೆ ನಡೆದ ಬೆನ್ನಲ್ಲೇ, ಆಡಳಿತಾರೂಢ ಬಿಜೆಪಿಯ ಹಿರಿಯ ನಾಯಕ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಾಷ್ಟ್ರಪತಿ ಹುದ್ದೆಗೆ ಸರ್ವಸಮ್ಮತ ಅಭ್ಯರ್ಥಿಯನ್ನು ಆಯ್ಕೆ ಮಾಡುವ ವಿಚಾರವಾಗಿ ಇತರ ಪಕ್ಷಗಳ ನಾಯಕರೊಂದಿಗೆ ಮಾತುಕತೆ ನಡೆಸಿದ್ದಾರೆ.

ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಕಾಂಗ್ರೆಸ್ ಮುಖಂಡ ಮಲ್ಲಿಕಾರ್ಜುನ ಖರ್ಗೆ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಒಡಿಶಾ ಮುಖ್ಯಮಂತ್ರಿ ಹಾಗೂ ಬಿಜೆಡಿ ಮುಖ್ಯಸ್ಥ ನವೀನ್ ಪಟ್ನಾಯಕ್ ಅವರೊಂದಿಗೆ ರಾಜನಾಥ್ ಚರ್ಚಿಸಿದ್ದಾರೆ.

ಅಲ್ಲದೆ, ಸಿಂಗ್ ಅವರು ಮಿತ್ರ ಪಕ್ಷ, ಜೆಡಿಯು ನಾಯಕ ನಿತೀಶ್ ಕುಮಾರ್, ಬಹುಜನ ಸಮಾಜ ಪಕ್ಷದ (ಬಿಎಸ್ಪಿ) ಮುಖ್ಯಸ್ಥೆ ಮಾಯಾವತಿ ಮತ್ತು ವೈಎಸ್‌ಆರ್ ಕಾಂಗ್ರೆಸ್ ನಾಯಕರೂ ಆದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಜಗನ್‌ಮೋಹನ್ ರೆಡ್ಡಿ ಅವರೊಂದಿಗೂ ಚರ್ಚೆ ನಡೆಸಿದ್ದಾರೆ.

ಆದರೆ ಸಿಂಗ್ ಅವರು ಮೇಲಿನ ಮುಖಂಡರ ಜೊತೆ ಚರ್ಚೆಯ ವೇಳೆ ಅಭ್ಯರ್ಥಿಯ ಹೆಸರನ್ನು ಬಹಿರಂಗ ಪಡಿಸಲಿಲ್ಲ ಎಂದು ಮೂಲಗಳು ತಿಳಿಸಿವೆ.

11 ನಾಮಪತ್ರ ಸಲ್ಲಿಕೆ

ನವದೆಹಲಿ: ರಾಷ್ಟ್ರಪತಿ ಚುನಾವಣೆಗೆ ಸಂಬಂಧಿಸಿದ ಅಧಿಸೂಚನೆಯನ್ನು ಚುನಾವಣಾ ಆಯೋಗ ಬುಧವಾರ ಹೊರಡಿಸಿದ್ದು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಮೊದಲ ದಿನ 11 ನಾಮಪತ್ರಗಳು ಸಲ್ಲಿಕೆಯಾಗಿದ್ದು ಈ ಪೈಕಿ ಒಂದು ನಾಮಪತ್ರವನ್ನು ಸೂಕ್ತ ದಾಖಲೆಗಳು ಒದಗಿಸದ ಕಾರಣ ತಿರಸ್ಕರಿಸಲಾಗಿದೆ.

ಜೂನ್ 29 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದ್ದು, 30ರಂದು ಪರಿಶೀಲನೆ ನಡೆಯಲಿದೆ. ಜುಲೈ 2 ನಾಮಪತ್ರ ಹಿಂಪಡೆಯಲು ಕೊನೆಯ ದಿನ. ಜುಲೈ 21ರಂದು ಚುನಾವಣೆ ನಡೆಯಲಿದೆ.

ಹೊರಟ್ಟಿ ಮರು ಆಯ್ಕೆ

ಒಂದನೇ ಪುಟದಿಂದ...

ರಾತ್ರಿ 9.35ರ ಹೊತ್ತಿಗೆ ಲಭ್ಯವಾಗಿರುವ ಮಾಹಿತಿಯಂತೆ ಹಣಮಂತ ನಿರಾಣಿ 16 ಸಾವಿರ ಮತಗಳ ಮುನ್ನಡೆ ಸಾಧಿಸಿದ್ದರು. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ ಮಾದೇಗೌಡ ಸುಮಾರು 3 ಸಾವಿರ ಮತಗಳ ಮುನ್ನಡೆ ಸಾಧಿಸಿದ್ದರು. ಈ ಕ್ಷೇತ್ರದಲ್ಲಿ ಬಿಜೆಪಿಯ ಮೈ.ವಿ. ರವಿಶಂಕರ್ ಸಮೀಪದ ಪ್ರತಿಸ್ಪರ್ಧಿಯಾಗಿದ್ದಾರೆ. ಜೆಡಿಎಸ್ ಪಕ್ಷವು ಶ್ರೀಕಂಠೇಗೌಡರ ಬದಲು ಎಚ್.ಕೆ. ರಾಮು ಅವರನ್ನು ಕಣಕ್ಕೆ ಇಳಿಸಿದೆ.

ದಾಖಲೆ ಗೆಲುವು: ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಸತತ ಎಂಟು ಬಾರಿ ಗೆದ್ದಿರುವ ದಾಖಲೆಯನ್ನು ಹೊರಟ್ಟಿ ನಿರ್ಮಿಸಿದ್ದಾರೆ. ಸತತ ಏಳು ಬಾರಿ ಆಯ್ಕೆಯಾಗಿದ್ದ ಹೊರಟ್ಟಿ, ಸಚಿವ ಹಾಗೂ ಸಭಾಪತಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಚುನಾವಣೆಗೆ ಮೊದಲು ಸಭಾಪತಿ ಹುದ್ದೆ ಹಾಗೂ ಜೆಡಿಎಸ್‌ಗೆ ರಾಜೀನಾಮೆ ಕೊಟ್ಟಿದ್ದ ಅವರು, ಬಿಜೆಪಿಯಿಂದ ಕಣಕ್ಕೆ ಇಳಿದಿದ್ದರು.

ಕಾಂಗ್ರೆಸ್‌ಗೆ ಲಾಭ:

ಚುನಾವಣೆ ಪೂರ್ವದಲ್ಲಿ ನಾಲ್ಕು ಕ್ಷೇತ್ರಗಳ ಪೈಕಿ ತಲಾ ಎರಡು ಸ್ಥಾನಗಳು ಬಿಜೆಪಿ ಮತ್ತು ಜೆಡಿಎಸ್ ಪಾಲಿನಲ್ಲಿದ್ದವು. ಕಾಂಗ್ರೆಸ್ ಪ್ರಾತಿನಿಧ್ಯವೇ ಇರಲಿಲ್ಲ.

ಹೊರಟ್ಟಿಯವರು ಬಿಜೆಪಿಯಿಂದ ಗೆದ್ದಿದ್ದರೂ ಅಲ್ಲಿ, ಪಕ್ಷದ ಪ್ರಭಾವಳಿಗಿಂತ ವೈಯಕ್ತಿಕ ಪ್ರಭಾವವೇ ಹೆಚ್ಚಿದೆ. ಆದರೆ, ಕಳೆದ ಬಾರಿಯ ಶೇಕಡಾವಾರು ಮತ ಗಳಿಕೆಯಲ್ಲಿ 50.07ರಷ್ಟು ಮತ ಗಳಿಸಿದ್ದ ಹೊರಟ್ಟಿ, ಈ ಬಾರಿ 59.47 ಮತ ಪಡೆದಿದ್ದಾರೆ. ಈ ಗೆಲುವಿನ ಮೂಲಕ ಹೆಚ್ಚುವರಿ ಒಂದು ಸ್ಥಾನವನ್ನು ಗೆದ್ದುಕೊಂಡ ತೃಪ್ತಿಯನ್ನು ಬಿಜೆಪಿ ಪಡೆಯಬಹುದಾದರೂ, ವಾಯವ್ಯ ಶಿಕ್ಷಕರ ಕ್ಷೇತ್ರದಲ್ಲಿ ಅರುಣ ಶಹಾಪುರ ಸೋಲಿನ ಮೂಲಕ ಒಂದು ಸ್ಥಾನವನ್ನು ಕಳೆದುಕೊಂಡಂತಾಗಿದೆ.

ಪ್ರಕಾಶ್ ಹುಕ್ಕೇರಿ ಗೆಲುವಿನ ಮುಖೇನ ಕಾಂಗ್ರೆಸ್ ಒಂದು ಸ್ಥಾನವನ್ನು ಗೆದ್ದುಕೊಂಡು, ಕಿತ್ತೂರು ಕರ್ನಾಟಕ ಭಾಗದ ಒಂದು ಮತ ಕ್ಷೇತ್ರದಲ್ಲಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. ಮತ ಮುನ್ನಡೆಯಲ್ಲಿರುವ ಹಣಮಂತ ನಿರಾಣಿ ಗೆದ್ದರೆ ಬಿಜೆಪಿ ಒಂದು ಸ್ಥಾನವನ್ನು ಉಳಿಸಿಕೊಂಡಂತಾಗುತ್ತದೆ.

ಜೆಡಿಎಸ್ ಪ್ರಾಬಲ್ಯ ಇರುವ ದಕ್ಷಿಣ ಪದವೀಧರ ಕ್ಷೇತ್ರವನ್ನು ಕಿತ್ತುಕೊಳ್ಳಲು ಬಿಜೆಪಿ–ಕಾಂಗ್ರೆಸ್ ನಾಯಕರು ಸಾಕಷ್ಟು ಯತ್ನ ಮಾಡಿದ್ದರು. ಆದರೆ, ಮಧು ಮಾದೇಗೌಡ ಮುನ್ನಡೆ ಸಾಧಿಸಿದ್ದು, ಅವರೇ ಗೆದ್ದರೆ ಕಾಂಗ್ರೆಸ್ ಒಟ್ಟಾರೆ ಎರಡು ಸ್ಥಾನವನ್ನು ಗಿಟ್ಟಿಸಿಕೊಂಡಂತಾಗುತ್ತದೆ. ಹಾಗಾದಲ್ಲಿ, ಆಡಳಿತಾರೂಢ ಬಿಜೆಪಿಗೆ ದೊಡ್ಡ ಮಟ್ಟದ ಹಿನ್ನಡೆಯೇ ಆಗಲಿದೆ.

ಈ ಚುನಾವಣೆಯನ್ನು ಅಷ್ಟು ಗಂಭೀರವಾಗಿ ಪರಿಗಣಿಸದ ಜೆಡಿಎಸ್, ಮೇಲ್ಮನೆಯಲ್ಲಿ ಎರಡು ಸ್ಥಾನವನ್ನು ಕಳೆದುಕೊಳ್ಳುವುದು ಬಹುತೇಕ ಖಚಿತವಾಗಿದೆ.

'ಅಗ್ನಿವೀರ'ರಿಗೆ ವಿಶೇಷ ಪದವಿ ಕೋರ್ಸ್

ತರಬೇತಿಗೆ ಶೇ 50ರಷ್ಟು ಕ್ರೆಡಿಟ್ • 'ಇಗ್ನೊ'ದಿಂದ ಆರಂಭವಾಗಲಿದೆ ಕೋರ್ಸ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ 'ಅಗ್ನಿಪಥ' ಯೋಜನೆ ಅಡಿಯಲ್ಲಿ ಸೇನೆಗೆ ಸೇರುವ 'ಅಗ್ನಿವೀರ'ರಿಗೆ ಕೌಶಲ ಆಧಾರಿತ ಮೂರು ವರ್ಷಗಳ ವಿಶೇಷ ಪದವಿ ಕೋರ್ಸ್ ಅನ್ನು ಕೇಂದ್ರ ಶಿಕ್ಷಣ ಸಚಿವಾಲಯ ಆರಂಭಿಸಲಿದೆ.

ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯ (ಇಗ್ನೊ) ಈ ಪದವಿ ಕೋರ್ಸ್ ಅನ್ನು ಆರಂಭಿಸಲಿದ್ದು, ಇದಕ್ಕೆ ಭಾರತ ಮತ್ತು ವಿದೇಶಗಳಲ್ಲಿ ಮಾನ್ಯತೆ ದೊರೆಯಲಿದೆ. ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಈ ಕಾರ್ಯಕ್ರಮ ಜಾರಿಗೆ 'ಇಗ್ನೊ' ಜತೆಗೆ ಒಡಂಬಡಿಕೆ ಮಾಡಿಕೊಳ್ಳಲಿವೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಅಗ್ನಿವೀರರು' ಪಡೆಯುವ ಸೇವಾ ತರಬೇತಿಯನ್ನು ಪದವಿ ಕೋರ್ಸ್‌ನಲ್ಲಿ 'ಕ್ರೆಡಿಟ್'ಗಳಾಗಿ ಗುರುತಿಸಲಾಗುತ್ತದೆ. ಈ ಮೂಲಕ ಅವರು ತಮ್ಮ ಭವಿಷ್ಯದಲ್ಲಿ ತಮಗಿಷ್ಟವಾದ ನಾಗರಿಕ ವೃತ್ತಿಜೀವನ ಆಯ್ಕೆ ಮಾಡಿಕೊಳ್ಳಲು ಅವಕಾಶ ದೊರೆಯುತ್ತದೆ. ಈ ಕಾರ್ಯಕ್ರಮದಡಿ ಪದವಿ ಕೋರ್ಸ್‌ಗೆ ಅಗತ್ಯವಿರುವ ಶೇ 50ರಷ್ಟು 'ಕ್ರೆಡಿಟ್'ಗಳನ್ನು 'ಅಗ್ನಿವೀರರು' ಕೌಶಲ ತರಬೇತಿ ಮೂಲಕ (ತಾಂತ್ರಿಕ ಮತ್ತು ತಾಂತ್ರಿಕೇತರ) ಪಡೆಯುತ್ತಾರೆ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಉಳಿದ ಶೇ 50ರಷ್ಟು 'ಕ್ರೆಡಿಟ್'ಗಳು ಪದವಿ ಕೋರ್ಸ್ ಒಳಗೊಂಡಿರುವ ಭಾಷಾ ವಿಷಯಗಳು, ಅರ್ಥಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರ, ಸಾರ್ವಜನಿಕ ಆಡಳಿತ, ಸಮಾಜಶಾಸ್ತ್ರ, ಗಣಿತ, ಶಿಕ್ಷಣ, ವಾಣಿಜ್ಯ, ಪ್ರವಾಸೋದ್ಯಮ, ವೃತ್ತಿಪರ ಅಧ್ಯಯನ, ಕೃಷಿ, 'ಜ್ಯೋತಿಷ', ಪರಿಸರ ಅಧ್ಯಯನ ಮತ್ತು ಇಂಗ್ಲಿಷ್ ಸಂವಹನ ಕೌಶಲದಿಂದ ದೊರೆಯಲಿವೆ ಎಂದು ಅವರು ಹೇಳಿದ್ದಾರೆ.

ಈ ಕೋರ್ಸನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ರೂಪಿಸಲಾಗಿದ್ದು, ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ), ರಾಷ್ಟ್ರೀಯ ಕ್ರೆಡಿಟ್ ಚೌಕಟ್ಟು ಹಾಗೂ ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ (ಎನ್‌ಎಸ್‌ಕ್ಯೂಎಫ್) ಮಾನದಂಡಗಳೊಂದಿಗೆ ಸಂಯೋಜಿಸಲ್ಪಟ್ಟಿದೆ. ಅಲ್ಲದೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (ಎಐಸಿಟಿಇ), ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಪರಿಷತ್ತು (ಎನ್‌ಸಿವಿಇಟಿ) ಇದನ್ನು ಮಾನ್ಯ ಮಾಡಿವೆ.

ಈ ಪದವಿ ಕೋರ್ಸ್ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಬಹು ಆಯ್ಕೆಗಳನ್ನು ನೀಡುತ್ತದೆ. ಅಂದರೆ ಒಂದು ವರ್ಷ ಯಶಸ್ವಿಯಾಗಿ ಪೂರೈಸಿದ ವಿದ್ಯಾರ್ಥಿಗೆ 'ಸರ್ಟಿಫಿಕೆಟ್', ಎರಡು ವರ್ಷಗಳನ್ನು ಪೂರೈಸಿದವರಿಗೆ ಡಿಪ್ಲೊಮಾ ಹಾಗೂ ಮೂರು ವರ್ಷಗಳನ್ನೂ ಯಶಸ್ವಿಯಾಗಿ ಪೂರೈಸಿದವರಿಗೆ ಪದವಿ ದೊರೆಯಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಯುಜಿಸಿ ನಿಯಮಗಳ ಪ್ರಕಾರ 'ಇಗ್ನೊ' ಬಿ.ಎ, ಬಿ.ಕಾಂ, ಬಿ.ಎ (ವೊಕೇಷನಲ್), ಬಿ.ಎ (ಪ್ರವಾಸೋದ್ಯಮ ನಿರ್ವಹಣೆ) ಪದವಿ ನೀಡಲಿದೆ. ಈ ಪದವಿಗಳಿಗೆ ಭಾರತ ಮತ್ತು ವಿದೇಶಗಳಲ್ಲಿ ಮಾನ್ಯತೆ ಇರುತ್ತದೆ ಎಂದು ಅವರು ಹೇಳಿದ್ದಾರೆ.

ಶೀಘ್ರವೇ 40 ಸಾವಿರ ಯೋಧರ ನೇಮಕ

ನವದೆಹಲಿ(ಪಿಟಿಐ): 'ಅಗ್ನಿಪಥ' ಯೋಜನೆಯಡಿ ಮುಂದಿನ ತಿಂಗಳುಗಳಲ್ಲಿ 40,000 ಯೋಧರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ನೌಕಾಪಡೆಗೂ ನೇಮಕ: 'ಅಗ್ನಿಪಥ' ಯೋಜನೆಯಡಿ ಈ ವರ್ಷ ನೌಕಾಪಡೆಗೆ 3 ಸಾವಿರ ಯೋಧರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಪಶ್ಚಿಮ ನೌಕಾ ಕಮಾಂಡ್‌ನ ಕಮಾಂಡರ್-ಇನ್-ಚೀಫ್ ವೈಸ್ ಅಡ್ಮಿರಲ್ ಅಜೇಂದ್ರ ಬಹದ್ದೂರ್ ಸಿಂಗ್ ಬುಧವಾರ ಹೇಳಿದ್ದಾರೆ.

ವಾಯುಪಡೆಯು 3,500 ಹುದ್ದೆಗಳ ನೇಮಕಾತಿ ಮಾಡಲಿದೆ' ಎಂದು ಹೇಳಿದರು.

'ಅಗ್ನಿವೀರ'ರಿಗೆ ಆದ್ಯತೆ

ನವದೆಹಲಿ: ಸೇನಾಪಡೆಗಳಲ್ಲಿ ಅಲ್ಪಾವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಗೊಳ್ಳುವ 'ಅಗ್ನಿವೀರ'ರಿಗೆ, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳು (ಸಿಎಪಿಎಫ್) ಹಾಗೂ ಅಸ್ಸಾಂ ರೈಫಲ್ಸ್‌ನ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುತ್ತದೆ ಎಂದು ಗೃಹ ಸಚಿವಾಲಯ ಬುಧವಾರ ಘೋಷಿಸಿದೆ.

ಈ ಕುರಿತು ಟ್ವೀಟ್ ಮಾಡಿರುವ ಗೃಹ ಸಚಿವಾಲಯ, 'ಈ ವಿಷಯಕ್ಕೆ ಸಂಬಂಧಿಸಿ ವಿಸ್ತೃತ ಯೋಜನೆ ರೂಪಿಸಿ, ಅನುಷ್ಠಾಗೊಳಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ' ಎಂದು ಹೇಳಿದೆ.

ದೆಹಲಿ ಪೊಲೀಸ್ ವರ್ತನೆಗೆ ಆಕ್ರೋಶ

ಒಂದನೇ ಪುಟದಿಂದ...

ಪೊಲೀಸರ ವಶದಲ್ಲಿದ್ದ ಪಕ್ಷದ ನಾಯಕ ಸಚಿನ್ ಪೈಲಟ್ ಅವರು ಠಾಣೆಯಿಂದಲೇ ಮಾಧ್ಯಮಗಳಿಗೆ ಕರೆ ಮಾಡಿ ಹೇಳಿಕೆ ನೀಡಿದ್ದಾರೆ. 'ಪೊಲೀಸರು ಗೂಂಡಾಗಳಂತೆ ವರ್ತಿಸಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಇ.ಡಿ. ಕಚೇರಿ ಎದುರು ಪ್ರತಿಭಟನೆ ನಡೆಸಲು ಮುಂದಾದ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದ್ದಾರೆ. ಪಕ್ಷದ ಕಚೇರಿಗೆ ತೆರಳಲು ಪೊಲೀಸರು ತಡೆ ಒಡ್ಡಿದ್ದರ ಬಗ್ಗೆ ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. 'ನಮ್ಮ ಪಕ್ಷದ ಕಚೇರಿಗೆ ತೆರಳಲು ನಮಗೆ ಅವಕಾಶ ನೀಡುತ್ತಿಲ್ಲ. ಇದೆಂತಹ ಪ್ರಜಾಪ್ರಭುತ್ವ? ಈ ರೀತಿ ಆಗುತ್ತಿರುವುದು ದೇಶದ ಇತಿಹಾಸದಲ್ಲಿ ಇದೇ ಮೊದಲು. ಎಲ್ಲದಕ್ಕೂ ಒಂದು ಮಿತಿ ಇರುತ್ತದೆ. ಸರ್ಕಾರ ಈಗ ಆ ಮಿತಿಯನ್ನು ಮೀರಿದೆ' ಎಂದು ಅವರು ಹರಿಹಾಯ್ದಿದ್ದಾರೆ.

'ದೇಶದಲ್ಲಿ ನಾಳೆ ಏನಾಗಲಿದೆ ಎಂಬುದು ಯಾರಿಗೂ ತಿಳಿಯುತ್ತಿಲ್ಲ. ಎಲ್ಲರಲ್ಲೂ ಆತಂಕ ಮನೆ ಮಾಡಿದೆ. ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿಯ ವರ್ತನೆ ಅಪಾಯಕಾರಿಯಾಗಿದೆ' ಎಂದು ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಕಳವಳ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಅರ್ಜಿ: ಇ.ಡಿ. ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರ ಅಧಿಕಾರದ ಅವಧಿ ವಿಸ್ತರಣೆ ವಿರುದ್ಧ ಕಾಂಗ್ರೆಸ್ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಮಿಶ್ರಾ ಅವರ ಅವಧಿ 2020ರ ನವೆಂಬರ್‌ನಲ್ಲಿ ಅಂತ್ಯವಾಗಬೇಕಿತ್ತು. ಆಗ ಅವಧಿಯನ್ನು ಒಂದು ವರ್ಷಕ್ಕೆ ವಿಸ್ತರಿಸಲಾಗಿತ್ತು. 2021ರ ನವೆಂಬರ್‌ನಲ್ಲಿ ಮತ್ತೆ ಅವರ ಅಧಿಕಾರದ ಅವಧಿಯನ್ನು ಸರ್ಕಾರ ವಿಸ್ತರಿಸಿತ್ತು. 'ಇದು ಸುಪ್ರೀಂ ಕೋರ್ಟ್‌ನ ಆದೇಶದ ಉಲ್ಲಂಘನೆ' ಎಂದು ಕಾಂಗ್ರೆಸ್ ತನ್ನ ಅರ್ಜಿಯಲ್ಲಿ ಆರೋಪಿಸಿದೆ

ಸರ್ಕಾರಕ್ಕೆ ಕಾಂಗ್ರೆಸ್ ನೋಟಿಸ್

ಇ.ಡಿ. ವಿಚಾರಣೆಯಲ್ಲಿ ರಾಹುಲ್ ಗಾಂಧಿ ಅವರು ಹೇಗೆ ಉತ್ತರ ನೀಡುತ್ತಿದ್ದಾರೆ ಎಂಬುದರ ಬಗ್ಗೆ ಆಯ್ದ ಕೆಲವು ಮಾಧ್ಯಮಗಳಿಗೆ ತಪ್ಪು ಮಾಹಿತಿಯನ್ನು ಸೋರಿಕೆ ಮಾಡಲಾಗುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ.

ಆಯ್ದ ಮಾಹಿತಿಗಳನ್ನು ಮಾಧ್ಯಮಗಳಿಗೆ ಸೋರಿಕೆ ಮಾಡುವುದನ್ನು ಸರ್ಕಾರ ತಕ್ಷಣವೇ ನಿಲ್ಲಿಸಬೇಕು ಎಂದು ನೋಟಿಸ್‌ನಲ್ಲಿ ಆಗ್ರಹಿಸಲಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಗೃಹ ಸಚಿವ ಅಮಿತ್ ಶಾ ಮತ್ತು ಕಾನೂನು ಸಚಿವ ಕಿರಣ್ ರಿಜಿಜು ಅವರಿಗೆ ನೋಟಿಸ್ ನೀಡಲಾಗಿದೆ. ಕಾಂಗ್ರೆಸ್ ರಾಜ್ಯಸಭಾ ಸದಸ್ಯ ವಿವೇಕ್ ತನ್ಖಾ ಅವರು ನೋಟಿಸ್ ನೀಡಿದ್ದಾರೆ. ವಿಚಾರಣೆಗೆ ಸಂಬಂಧಿಸಿದಂತೆ ಮೂರು ಸುದ್ದಿವಾಹಿನಿಗಳು ಪ್ರಸಾರ ಮಾಡಿರುವ ವರದಿಗಳ ಲಿಂಕ್‌ಗಳನ್ನು ನೋಟಿಸ್‌ನಲ್ಲಿ ಲಗತ್ತಿಸಲಾಗಿದೆ.

1ರಿಂದ 10ರವರೆಗೆ ತೆಲುಗು ವಿಷಯ ಕಡ್ಡಾಯ

ಹೈದರಾಬಾದ್ (ಪಿಟಿಐ): ತೆಲಂಗಾಣ ರಾಜ್ಯದಲ್ಲಿ ಸಿಬಿಎಸ್‌ಇ, ಐಸಿಎಸ್‌ಇ, ಐಬಿ ಮತ್ತು ಇತರ ಮಂಡಳಿಗಳಿಂದ ಮಾನ್ಯತೆ ಪಡೆದಿರುವ ಶಾಲೆಗಳು ಪ್ರಸಕ್ತ ಶೈಕ್ಷಣಿಕ ವರ್ಷದಿಂದ 1ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ತೆಲುಗು ಭಾಷೆಯನ್ನು ಎರಡನೇ ಭಾಷೆಯಾಗಿ ಕಡ್ಡಾಯವಾಗಿ ಕಲಿಸಬೇಕು ಎಂದು ತೆಲಂಗಾಣ ಸರ್ಕಾರ ಆದೇಶಿಸಿದೆ.

ತೆಲಂಗಾಣ (ಶಾಲೆಗಳಲ್ಲಿ ತೆಲುಗು ಭಾಷೆಯ ಕಡ್ಡಾಯ ಶಿಕ್ಷಣ ಮತ್ತು ಕಲಿಕೆ) ಕಾಯ್ದೆ 2018 ಅನ್ನು ಉಲ್ಲೇಖಿಸಿ ಅಲ್ಲಿನ ಶಾಲಾ ಶಿಕ್ಷಣ ಇಲಾಖೆ ಇತ್ತೀಚೆಗೆ ಸುತ್ತೋಲೆ ಹೊರಡಿಸಿದೆ. ಈ ಕಾಯ್ದೆ ಪ್ರಕಾರ ರಾಜ್ಯದಲ್ಲಿ ಯಾವುದೇ ಮಂಡಳಿಯಿಂದ ಮಾನ್ಯತೆ ಪಡೆದಿರುವ ಶಾಲೆಗಳು 1ರಿಂದ 10ನೇ ತರಗತಿವರೆಗೆ ತೆಲುಗು ಭಾಷೆಯನ್ನು ಕಡ್ಡಾಯವಾಗಿ ಕಲಿಸಬೇಕು.

ಕಾಂಗ್ರೆಸ್ ಮುಖಂಡನ ವಿರುದ್ಧ ಎಫ್‌ಐಆರ್

ನಾಗ್ಪುರ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಕಚೇರಿ ಬಳಿ ನಡೆದ ಪ್ರತಿಭಟನೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಮಹಾರಾಷ್ಟ್ರದ ನಾಗ್ಪುರ ಕಾಂಗ್ರೆಸ್ ಮುಖಂಡನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ವಲಯ –1ರ ಡಿಸಿಪಿ ಸಂದೀಪ್ ಪಖಲೆ ಅವರಿಗೆ ನಾಗ್ಪುರ ಪಶ್ಚಿಮ ಭಾಗದ ಬಿಜೆಪಿ ಘಟಕದ ಅಧ್ಯಕ್ಷ ವಿನೋದ ಕನ್ಹರೆ ನೀಡಿರುವ ದೂರು ಆಧರಿಸಿ, ಕಾಂಗ್ರೆಸ್‌ನ ನಾಗ್ಪುರ ಘಟಕದ ಮಾಜಿ ಅಧ್ಯಕ್ಷ ಶೇಖ್ ಹುಸೇನ್ ವಿರುದ್ಧ ಗಿಟ್ಟಿಖಾಡನ್ ಪೊಲೀಸ್ ಠಾಣೆಯಲ್ಲಿ ಮಂಗಳವಾರ ರಾತ್ರಿ ಪ್ರಕರಣ ದಾಖಲಾಗಿದೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 294 (ಅಶ್ಲೀಲ ಪದ ಬಳಕೆಗೆ ಶಿಕ್ಷೆ) ಮತ್ತು 504 (ಶಾಂತಿ ಭಂಗ ಉಂಟುಮಾಡಲು ಉದ್ದೇಶಪೂರ್ವಕ ಅವಮಾನ ಮಾಡಿದ್ದಕ್ಕೆ ಶಿಕ್ಷೆ) ಅಡಿಯಲ್ಲಿ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಆದರೆ, ಪೊಲೀಸರು ಶೇಖ್ ಅವರನ್ನು ಈವರೆಗೆ ಬಂಧಿಸಿಲ್ಲ.

ಪಿಸಿಐ ಅಧ್ಯಕ್ಷರಾಗಿ ನ್ಯಾ. ರಂಜನಾ ಪ್ರಕಾಶ್ ದೇಸಾಯಿ ಆಯ್ಕೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಅವರು ಭಾರತೀಯ ಪತ್ರಿಕಾ ಮಂಡಳಿ (ಪಿಸಿಐ) ಮುಖ್ಯಸ್ಥರಾಗಿ ಆಯ್ಕೆಯಾಗಿದ್ದಾರೆ.

ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಮತ್ತು ಪಿಸಿಐ ಸದಸ್ಯ ಪ್ರಕಾಶ್ ದುಬೆ ಅವರನ್ನು ಒಳಗೊಂಡ ಸಮಿತಿಯು ಪಿಸಿಐ ಅಧ್ಯಕ್ಷರ ನೇಮಕವನ್ನು ಅನುಮೋದಿಸಿದೆ.

ಮನೆ ನೆಲಸಮ: ಸುಪ್ರೀಂ ಕೋರ್ಟ್ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಪ್ರವಾದಿ ಮಹಮ್ಮದ್ ನಿಂದನೆ ವಿರೋಧಿಸಿ ಉತ್ತರ ಪ್ರದೇಶದಲ್ಲಿ ಗಲಭೆ ನಡೆಸಿದವರಿಗೆ ಸೇರಿದ ಮನೆಗಳನ್ನು ಧ್ವಂಸಗೊಳಿಸುವ ಮೊದಲು ಉತ್ತರ ಪ್ರದೇಶ ಸರ್ಕಾರವು ನಿಯಮಗಳನ್ನು ಪಾಲಿಸಬೇಕು. ಜೊತೆಗೆ, ಕಾನೂನು ಬಾಹಿರವಾಗಿ ಕಟ್ಟಡ ನೆಲಸಮ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಗುರುವಾರ ನಡೆಸುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಜಮೈತ್ ಉಲಾಮ–ಐ–ಹಿಂದ್ ಎಂಬ ಮುಸ್ಲಿಂ ಸಂಘಟನೆ ಈ ಅರ್ಜಿ ಸಲ್ಲಿಸಿತ್ತು. ಈ ರೀತಿ ಕಾನೂನೇತರ ಕ್ರಮಗಳನ್ನು ತೆಗೆದುಕೊಳ್ಳುವುದರಿಂದ ಸಹಜ ನ್ಯಾಯದ ಉಲ್ಲಂಘನೆ ಆಗುತ್ತದೆ. ಅದರಲ್ಲೂ ಪ್ರಕರಣದ ವಿಚಾರಣೆಯನ್ನು ಕೋರ್ಟ್ ನಡೆಸುತ್ತಿರುವಾಗ ಈ ರೀತಿಯ ಕ್ರಮ ತೆಗೆದುಕೊಳ್ಳುವುದು ಕಾನೂನು ಉಲ್ಲಂಘನೆ ಆಗುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

ಗಲಭೆಯ ಮುಖ್ಯ ಆರೋಪಿ, ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾದ ನಾಯಕ ಜಾವೇದ್ ಮೊಹಮ್ಮದ್ ಸೇರಿ ಗಲಭೆಯ ಹಲವು ಆರೋಪಿಗಳಿಗೆ ಸೇರಿರುವ ಅಕ್ರಮ ಕಟ್ಟಡಗಳನ್ನು ನೆಲಸಮ ಮಾಡುವಂತೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಆದೇಶ ನೀಡಿದ್ದರು. ಅದರಂತೆ ಸ್ಥಳೀಯ ಆಡಳಿತಗಳು ಬುಲ್ಡೋಜರ್ ಬಳಸಿ ಆರೋಪಿಗಳ ಮನೆಗಳನ್ನು ನೆಲಸಮ ಮಾಡಿದ್ದವು.

ಹೊಸ ಲೋಕಾಯುಕ್ತರ ಪ್ರಮಾಣವಚನ

ರಾಜ್ಯದ ನೂತನ ಲೋಕಾಯುಕ್ತರಾಗಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೂಗುಚ್ಛ ನೀಡಿ ಅಭಿನಂದಿಸಿದರು

ಪಿಎಸ್‌ಐ ಅಕ್ರಮ: ಜಾಮೀನು ಅರ್ಜಿ ತಿರಸ್ಕೃತ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಅಭ್ಯರ್ಥಿ ಶಾಂತಿಬಾಯಿ ಮತ್ತು ಅವರ ಪತಿ ಬಸ್ಯ ನಾಯಕ ಸಲ್ಲಿಸಿದ ಜಾಮೀನು ಅರ್ಜಿಯನ್ನು ಇಲ್ಲಿನ 3ನೇ ಜೆಎಂಎಫ್‌ಸಿ ನ್ಯಾಯಾಧೀಶ ಶ್ರೀನಿವಾಸ್ ಕೆ.ಆರ್. ಅವರು ಬುಧವಾರ ತಿರಸ್ಕರಿಸಿದರು. ದಂಪತಿಯನ್ನು ಮೇ 31ರಂದು ಸಿಐಡಿ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು.

ಚಿರಾಪುಂಜಿಯಲ್ಲಿ ದಾಖಲೆಯ ಮಳೆ

ನವದೆಹಲಿ (ಪಿಟಿಐ): ಮುಂಗಾರು ಮಳೆಯು ಈಶಾನ್ಯ ರಾಜ್ಯಗಳನ್ನು ಪ್ರವೇಶಿಸುತ್ತಿದ್ದಂತೆ ಮೇಘಾಲಯದ ಚಿರಾಪುಂಜಿಯಲ್ಲಿ ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ತಾಸುಗಳಲ್ಲಿ 811.6 ಮಿ.ಮೀ ಭಾರಿ ಮಳೆ ಸುರಿದಿದೆ.

1995ರ ಜೂನ್‌ನಿಂದ ಈವರೆಗೆ ಇಷ್ಟೊಂದು ಪ್ರಮಾಣದ ಮಳೆ ಒಂದೇ ದಿನದಲ್ಲಿ ಸುರಿದಿರಲಿಲ್ಲ. 27 ವರ್ಷಗಳ ನಂತರ ಅತಿ ಹೆಚ್ಚು ಮಳೆ ಬಿದ್ದಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ.

ಚಿರಾಪುಂಜಿಯಿಂದ 10 ಕಿ.ಮೀ ವೈಮಾನಿಕ ಅಂತರದಲ್ಲಿ, ದೇಶದ ಅತ್ಯಂತ ಆರ್ದ್ರ ಸ್ಥಳವಾದ ಮೌಸಿನ್ರಾಮ್‌ನಲ್ಲಿ ಇದೇ ಅವಧಿಯಲ್ಲಿ 710.6 ಮಿ.ಮೀ ಮಳೆ ದಾಖಲಾಗಿದೆ. ಇದು 1966ರ ಜೂನ್ ನಂತರ ಸುರಿದ ಗರಿಷ್ಠ ಪ್ರಮಾಣದ ಮಳೆ ಎನಿಸಿದೆ.

ಮಳೆಗೆ ಹತ್ತಿ ಬೆಳೆ ಜಲಾವೃತ

ಹಾಸನ/ಕೊಡಗು: ಹಾಸನ ಜಿಲ್ಲೆಯ ಹಳೇಬೀಡು ಹೊರವಲಯದ ಹಳ್ಳಿಗಳಲ್ಲಿ ಮಂಗಳವಾರ ರಾತ್ರಿ ಧಾರಾಕಾರ ಮಳೆ ಸುರಿದಿದ್ದು, ಹತ್ತಿ, ಜೋಳ, ಸೂರ್ಯಕಾಂತಿ ಬೆಳೆಗೆ ಹಾನಿಯಾಗಿದೆ. ಜಿ.ಸಾಣೇನಹಳ್ಳಿಯಲ್ಲಿ 20 ಎಕರೆ ಹತ್ತಿ ಬೆಳೆ ನೀರಿನಲ್ಲಿ ಮುಳುಗಿದೆ. 1 ಅಡಿ ಎತ್ತರ ಬೆಳೆದಿದ್ದ ಹತ್ತಿ ಗಿಡಗಳು ಸಂಪೂರ್ಣವಾಗಿ ಜಲಾವೃತಗೊಂಡಿವೆ. ಗ್ರಾಮದ ಹಳ್ಳ ತುಂಬಿ ಹರಿಯುತ್ತಿದ್ದು, ಕೆರೆಯಲ್ಲಿ ಎರಡು ಅಡಿ ನೀರು ಏರಿಕೆಯಾಗಿದೆ.

ಹಾಸನದಲ್ಲಿ ಬುಧವಾರ ಮಧ್ಯಾಹ್ನ ಆರಂಭವಾದ ಮಳೆ, ಸಂಜೆಯವರೆಗೆ ಸುರಿಯಿತು. ಹಿರೀಸಾವೆ, ಚನ್ನರಾಯಪಟ್ಟಣ, ನುಗ್ಗೇಹಳ್ಳಿಯಲ್ಲಿ ಹದವಾದ ಮಳೆಯಾಯಿತು.

ಮಡಿಕೇರಿ ನಗರದಲ್ಲಿ ಬುಧವಾರ ಮಧ್ಯಾಹ್ನ 15 ನಿಮಿಷ ಉತ್ತಮ ಮಳೆ ಸುರಿಯಿತು. ಬಳಿಕ, ತುಂತುರು ಮಳೆಯಾಗಿದೆ.

ಹುಬ್ಬಳ್ಳಿಯಲ್ಲಿ ತಂಪೆರೆದ ಮಳೆ

ಹುಬ್ಬಳ್ಳಿ: ನಗರದ ವಿವಿಧೆಡೆ ಬುಧವಾರ ಮಧ್ಯಾಹ್ನ ಸಾಧಾರಣ ಮಳೆ ಸುರಿಯಿತು. ಬೆಳಿಗ್ಗೆಯಿಂದ ಇದ್ದ ಮೋಡ ಕವಿದ ವಾತಾವರಣ ಮಧ್ಯಾಹ್ನ ಬದಲಾಗಿ, ಬಿಸಿಲಿನ ಝಳ ಹೆಚ್ಚಾಯಿತು.

ನಂತರ ಬಿಸಿಲಿನ ಅಬ್ಬರ ತಗ್ಗಿ, ಮಧ್ಯಾಹ್ನ 3ರ ಹೊತ್ತಿಗೆ ಸುಮಾರು ಹತ್ತು ನಿಮಿಷ ಮಳೆ ಸುರಿಯಿತು. ಏಕಾಏಕಿ ಸುರಿದ ಮಳೆಯಿಂದಾಗಿ ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರು ತೊಂದರೆ ಅನುಭವಿಸಿದರು.

₹90 ಲಕ್ಷ ಕೊಡಿಸಿದ್ದ 'ಮಧ್ಯವರ್ತಿ' ಪಿಎಸ್‌ಐ!

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ನಗರದ ಬ್ಯಾಡರಹಳ್ಳಿ ಠಾಣೆ ಪಿಎಸ್‌ಐ ಕೆ.ಹರೀಶ್ ಅವರನ್ನು ಬಂಧಿಸಿದ್ದಾರೆ.

ಪಿಎಸ್‌ಐ ಕೆ.ಹರೀಶ್

'ಮಾಗಡಿ ತಾಲ್ಲೂಕಿನ ಕೆ.ಹರೀಶ್ 2018ರಲ್ಲಿ ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ. ಇತ್ತೀಚೆಗೆ ನಡೆದ 545 ಪಿಎಸ್‌ಐ ಹುದ್ದೆಗಳ ನೇಮಕಾತಿಯಲ್ಲಿ ಇಬ್ಬರು ಅಭ್ಯರ್ಥಿಗಳು ಅಕ್ರಮವಾಗಿ ಆಯ್ಕೆಯಾಗುವಂತೆ ನೋಡಿಕೊಂಡಿದ್ದ. ಈ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಿ ಮಂಗಳವಾರ ಈತನನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಬುಧವಾರ ಹಾಜರುಪಡಿಸಿ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪಿಎಸ್‌ಐ ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿಗಳಾದ ಆರ್.ಮಧು ಹಾಗೂ ದಿಲೀಪ್‌ಕುಮಾರ್ ಅಕ್ರಮ ಆಯ್ಕೆ ಬಯಸಿ ಕೆ.ಹರೀಶ್ ಅವರನ್ನು ಸಂಪರ್ಕಿಸಿದ್ದರು. ತನ್ನದೇ ಊರಿನವರಾಗಿದ್ದರಿಂದ ಇಬ್ಬರನ್ನೂ ಪಿಎಸ್‌ಐ ಮಾಡಲು ಹರೀಶ್ ಒಪ್ಪಿಕೊಂಡಿದ್ದ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚಾಗುವುದೆಂದು ತಿಳಿಸಿದ್ದ. ಅದಕ್ಕೆಲ್ಲ ಅಭ್ಯರ್ಥಿಗಳು ಒಪ್ಪಿಕೊಂಡಿದ್ದರು.'

'ಪೊಲೀಸ್ ನೇಮಕಾತಿ ವಿಭಾಗದ ನೌಕರರ ಜೊತೆ ಒಡನಾಟ ಹೊಂದಿದ್ದ ಮೈಸೂರಿನ ರಿಸರ್ವ್ ಇನ್‌ಸ್ಪೆಕ್ಟರ್ (ಆರ್‌ಪಿಐ) ಮಧುರನ್ನು ಸಂಪರ್ಕಿಸಿದ್ದ ಹರೀಶ್, ಇಬ್ಬರೂ ಅಭ್ಯರ್ಥಿಗಳಿಂದ ಒಟ್ಟು ₹ 90 ಲಕ್ಷ ಕೊಡಿಸಿದ್ದ. ಅದರಲ್ಲಿ ತಾನೂ ಕಮಿಷನ್ ಪಡೆದಿದ್ದ. ಇದಾದ ನಂತರವೇ ಕೆಲ ನೌಕರರು, ಅಭ್ಯರ್ಥಿಗಳ ಒಎಂಆರ್ ಪ್ರತಿಗಳನ್ನು ತಿದ್ದಿ ಹುದ್ದೆಗೆ ಅಕ್ರಮವಾಗಿ ಆಯ್ಕೆಯಾಗುವಂತೆ ಮಾಡಿದ್ದರು' ಎಂದೂ ಸಿಐಡಿ ಮೂಲಗಳು ತಿಳಿಸಿವೆ.

ನೋಟಿಸ್ ನೀಡುತ್ತಿದ್ದಂತೆ ನಾಪತ್ತೆ: 'ಅಭ್ಯರ್ಥಿಗಳಾದ ಮಧು, ದಿಲೀಪ್‌ಕುಮಾರ್ ಹಾಗೂ ಆರ್‌ಪಿಐ ಮಧು ಅವರನ್ನು ಈ ಹಿಂದೆಯೇ ಬಂಧಿಸಲಾಗಿತ್ತು. ಅವರ ವಿಚಾರಣೆ ವೇಳೆ ಕೆ.ಹರೀಶ್ ಹೆಸರು ಕೇಳಿಬಂದಿತ್ತು. ಹೀಗಾಗಿ, ಆತನಿಗೆ ನೋಟಿಸ್ ನೀಡಲಾಗಿತ್ತು. ಅದರ ಪ್ರತಿ ತಲುಪಿದ ಮರುದಿನದಿಂದಲೇ ಹರೀಶ್ ನಾಪತ್ತೆಯಾಗಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ.

'ಮೂರು ಬಾರಿ ಹರೀಶ್‌ಗೆ ನೋಟಿಸ್ ಕಳುಹಿಸಿದರೂ ವಿಚಾರಣೆಗೆ ಬಂದಿರಲಿಲ್ಲ. ನೋಟಿಸ್ ಪ್ರಶ್ನಿಸಿದ್ದ ಹರೀಶ್, ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದ. ವಿಚಾರಣೆ ನಡೆಸಿದ್ದ ಹೈಕೋರ್ಟ್, ಕಾನೂನಿನಡಿ ಕ್ರಮ ಕೈಗೊಳ್ಳುವಂತೆ ಹೇಳಿ ಇತ್ತೀಚೆಗೆ ಆದೇಶ ನೀಡಿತ್ತು. ಕರ್ತವ್ಯ ನಿರ್ವಹಿಸುತ್ತಿದ್ದ ಬ್ಯಾಡರಹಳ್ಳಿ ಠಾಣೆಯಲ್ಲೇ ಪಿಎಸ್‌ಐ ಕೆ.ಹರೀಶ್‌ನನ್ನು ಬಂಧಿಸಲಾಯಿತು' ಎಂದೂ ತಿಳಿಸಿವೆ.

ಮೊದಲ ರ‍್ಯಾಂಕ್ ಪಡೆದಿದ್ದ ಕುಶಾಲ್ ಸಿಐಡಿ ಕಸ್ಟಡಿಗೆ

ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ಎಸಗಿದ್ದ ಆರೋಪದಡಿ ಬಂಧಿಸಲಾಗಿರುವ ಮೊದಲ ರ‍್ಯಾಂಕ್ ಅಭ್ಯರ್ಥಿ ಜೆ. ಕುಶಾಲ್‌ಕುಮಾರ್‌ನನ್ನು ವಿಚಾರಣೆಗಾಗಿ 10 ದಿನ ಸಿಐಡಿ ಕಸ್ಟಡಿಗೆ ಒಪ್ಪಿಸಲಾಗಿದೆ.

'ಮಾಗಡಿ ತಾಲ್ಲೂಕಿನ ಜುಟ್ಟನಹಳ್ಳಿ ಗ್ರಾಮದ ಕುಶಾಲ್‌ಕುಮಾರ್ ಒಎಂಆರ್ ತಿದ್ದುಪಡಿ ಮಾಡಿಸಿ ಅಕ್ರಮವಾಗಿ ಹುದ್ದೆಗೆ ಆಯ್ಕೆಯಾಗಿದ್ದ. ಈತನ ವಿರುದ್ಧ ಹಲಸೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಆತನನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಂಗ ಬಂಧನಕ್ಕೆ ನೀಡಿದ್ದರು. ಇದೀಗ, ಬಾಡಿ ವಾರೆಂಟ್ ಮೇಲೆ ಈತನನ್ನು ಕಸ್ಟಡಿಗೆ ಪಡೆಯಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

ಇಂಡೊನೇಷ್ಯಾ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿ

ಪ್ರಣಯ್‌ಗೆ ಮಣಿದ ಸೇನ್

ಎಚ್‌.ಎಸ್‌.ಪ್ರಣಯ್

ಜಕಾರ್ತ (ಪಿಟಿಐ): ಭಾರತದ ಇಬ್ಬರು ಬ್ಯಾಡ್ಮಿಂಟನ್ ಆಟಗಾರರ ನಡುವಿನ ಪೈಪೋಟಿಯಲ್ಲಿ ಎಚ್‌.ಎಸ್‌.ಪ್ರಣಯ್ ಗೆಲುವಿನ ನಗು ಬೀರಿದರೆ, ಲಕ್ಷ್ಯ ಸೇನ್ ಆಘಾತ ಅನುಭವಿಸಿದರು.

ಇಂಡೊನೇಷ್ಯಾ ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಬುಧವಾರ ಪ್ರಣಯ್ 21–10, 21–9 ರಲ್ಲಿ ಸೇನ್ ವಿರುದ್ಧ ಗೆದ್ದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಎಂಟನೇ ಸ್ಥಾನದಲ್ಲಿರುವ ಸೇನ್, ಹೆಚ್ಚಿನ ಪ್ರತಿರೋಧ ಒಡ್ಡದೆ 34 ನಿಮಿಷಗಳಲ್ಲಿ ಸೋಲು ಒಪ್ಪಿಕೊಂಡರು.

ಈ ವರ್ಷದ ಆರಂಭದಿಂದಲೂ ಅತ್ಯುತ್ತಮ ಆಟ ಪ್ರದರ್ಶಿಸುತ್ತಿರುವ ಸೇನ್, ತಮ್ಮ ಚೊಚ್ಚಲ ಸೂಪರ್ ಸೀರಿಸ್‌–500 ಟ್ರೋಫಿ ಜಯಿಸಿದ್ದರು. ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್‌ನ ಫೈನಲ್ ಪ್ರವೇಶಿಸಿದ್ದರಲ್ಲದೆ, ಥಾಮಸ್ ಕಪ್ ಗೆದ್ದ ಭಾರತ ಪುರುಷರ ತಂಡದ ಭಾಗವಾಗಿದ್ದರು.

ಮೊದಲ ಗೇಮ್‌ನಲ್ಲಿ 3–6 ರಲ್ಲಿ ಹಿನ್ನಡೆಯಲ್ಲಿದ್ದ ಪ್ರಣಯ್, ಆಕ್ರಮಣಕಾರಿ ಆಟದ ಮೂಲಕ ಮರುಹೋರಾಟ ನಡೆಸಿದರು. 21-10 ರಲ್ಲಿ ಗೆದ್ದು ಮುನ್ನಡೆ ಸಾಧಿಸಿದರು. ಎರಡನೇ ಗೇಮ್‌ನಲ್ಲಿ ಆರಂಭದಿಂದಲೇ ಶಿಸ್ತಿನ ಆಟವಾಡಿ 11–3ರ ಭಾರಿ ಮೇಲುಗೈ ಪಡೆದರು. ಸೇನ್ ಅವರಿಂದ ಮರುಹೋರಾಟ ನಿರೀಕ್ಷೆ ಮಾಡ-ಲಾಗಿತ್ತಾದರೂ, ಪ್ರಣಯ್ ಬಿರುಸಿನ ಕ್ರಾಸ್ ಕೋರ್ಟ್ ಸ್ಮ್ಯಾಷ್‌ಗಳ ಮೂಲಕ ಎದುರಾಳಿಯನ್ನು ನಿಬ್ಬೆರಗಾಗಿಸಿದರು. ಪ್ರಣಯ್ ಅವರಿಗೆ ಸೇನ್ ವಿರುದ್ಧ ದೊರೆತ ಮೊದಲ ಗೆಲುವು ಇದು.

ಅರ್ಜುನ್–ಧ್ರುವ್‌ಗೆ ಜಯ: ಪುರುಷರ ಡಬಲ್ಸ್ ವಿಭಾಗದಲ್ಲಿ ಭಾರತದ ಎಂ.ಆರ್‌.ಅರ್ಜುನ್ ಮತ್ತು ಧ್ರುವ್ ಕಪಿಲ ಜೋಡಿ 27–25, 18–25, 21–19 ರಲ್ಲಿ ರ‍್ಯಾಂಕಿಂಗ್‌ನಲ್ಲಿ ತಮಗಿಂತ ಮೇಲಿನ ಸ್ಥಾನದಲ್ಲಿರುವ ಜಪಾನ್‌ನ ಜೋಡಿ ಕೆಲಿಚಿರೊ ಮತ್ಸುಯ್–ಯೊಶಿನೊರಿ ತಕೆಯುಚಿ ವಿರುದ್ಧ ಜಯ ಸಾಧಿಸಿತು.

ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವಿನಿ ಭಟ್ ಮತ್ತು ಶಿಖಾ ಭಟ್ ಸೋತು ಹೊರಬಿದ್ದರು. ಅವರು 9–21, 10–21 ರಲ್ಲಿ ಚೀನಾದ ಜಾಂಗ್ ಶು ಕ್ಷಿಯಾನ್ ಹಾಗೂ ಜೆಂಗ್ ಯು ಕೈಯಲ್ಲಿ ಪರಾಭವಗೊಂಡರು. ಈ ಪಂದ್ಯ 28 ನಿಮಿಷಗಳಲ್ಲಿ ಕೊನೆಗೊಂಡಿತು.

ಹರಿತಾ ಹರಿನಾರಾಯಣ– ಅಶ್ನಾ ನೋಯ್ ಎರಡನೇ ಸುತ್ತಿನಲ್ಲಿ ಸೋಲು ಅನುಭವಿಸಿದರು.

ಮುಖ್ಯಾಂಶಗಳು

- ಸೇನ್ ಅವರನ್ನು ಪ್ರಣಯ್ ಮಣಿಸಿದ್ದು ಇದೇ ಮೊದಲು
- 21–10, 21–9ರಲ್ಲಿ ನೇರ ಗೇಮ್‌ಗಳಲ್ಲಿ ಗೆಲುವು
- ಪುರುಷರ ಡಬಲ್ಸ್‌ನಲ್ಲಿ ಅರ್ಜುನ್–ಧ್ರುವ್‌ಗೆ ಜಯ

ಶ್ರೀಕಾಂತ್ ಔಟ್

ಭಾರತದ ಭರವಸೆ ಎನಿಸಿದ್ದ ಶ್ರೀಕಾಂತ್ ಎರಡನೇ ಸುತ್ತಿನಲ್ಲೇ ನಿರ್ಗಮಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ ಅವರು 21–23, 10–21 ರಲ್ಲಿ ಫ್ರಾನ್ಸ್‌ನ ಬ್ರೈಸ್ ಲೆವರ್ಡೆಜ್ ಎದುರು ಅನಿರೀಕ್ಷಿತ ಸೋಲು ಅನುಭವಿಸಿದರು.

ಸೌಥ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೌಥ್ ಯುನೈಟೆಡ್ ಫುಟ್‌ಬಾಲ್ ಕ್ಲಬ್ (ಎಸ್‌ಯುಎಫ್‌ಸಿ) ಬುಧವಾರ ಉದ್ಘಾಟನೆಯಾಯಿತು.

ಹಲಸೂರು ಸಮೀಪ ತಲೆಎತ್ತಿರುವ ಕ್ಲಬ್‌ನಲ್ಲಿ ಉತ್ತಮ ಗುಣಮಟ್ಟದ ಟರ್ಫ್ ಇರುವ ಫುಟ್‌ಬಾಲ್ ಮೈದಾನ, ಜಿಮ್ನಾಷಿಯಂ, ಫಿಜಿಯೊಥೆರಪಿ ಸೌಲಭ್ಯಗಳು ಇವೆ.

ಕ್ಲಬ್ ಉದ್ಘಾಟಿಸಿದ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ ಅಧ್ಯಕ್ಷ ಎನ್‌.ಎ. ಹ್ಯಾರಿಸ್, 'ರಾಜ್ಯದಲ್ಲಿ ಈಗ ಫುಟ್‌ಬಾಲ್ ಉತ್ತಮವಾಗಿ ಬೆಳೆಯುತ್ತಿದೆ. ಸಾಕಷ್ಟು ಪ್ರತಿಭೆಗಳು ಇಲ್ಲಿದ್ದಾರೆ. ಸೌಥ್ ಯುನೈಟೆಡ್ ಕ್ಲಬ್‌ನಂತಹ ಸೌಲಭ್ಯಗಳು ಬಂದರೆ ಮಕ್ಕಳಿಗೆ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಯಲು ಅನುಕೂಲವಾಗುತ್ತದೆ' ಎಂದರು.

'ರಾಜ್ಯ ಸಂಸ್ಥೆಯು ಜಿಲ್ಲಾಮಟ್ಟದಲ್ಲಿ ಕ್ಲಬ್‌ಗಳ ಆರಂಭಕ್ಕೆ ಚಾಲನೆ ನೀಡಿದೆ. ಇದರಿಂದಾಗಿ ಗ್ರಾಮಾಂತರ ವಿಭಾಗದ ಮಕ್ಕಳಿಗೆ ಹೆಚ್ಚು ಪ್ರೋತ್ಸಾಹ ಸಿಗುತ್ತಿದೆ. ಮುಂದಿನ ಹಂತದಲ್ಲಿ ತಾಲ್ಲೂಕು ಮಟ್ಟದಲ್ಲಿಯೂ ಕ್ಲಬ್‌ಗಳನ್ನು ಆರಂಭಿಸಲಿದ್ದೇವೆ. ಗ್ರಾಮೀಣ ಭಾಗದ ಪ್ರತಿಭೆಗಳು ಬೆಳಕಿಗೆ ಬರಬೇಕಿದೆ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಸತ್ಯನಾರಾಯಣ, ಕ್ಲಬ್‌ನ ನಿರ್ದೇಶಕ ಶರತ್ ಪಾರೀಖ್, ಸಿಇಒ ಪ್ರಣವ್ ತೆಹರಾನ್ ಹಾಜರಿದ್ದರು.

‘ಕ್ರೀಡಾ ಸಚಿವ’ ತಿವಾರಿ ಆಸರೆ

ರಣಜಿ ಟ್ರೋಫಿ: ಮುನ್ನಡೆಗೆ ಬಂಗಾಳ ತಂಡ ಹೋರಾಟ

ಪ್ರಜಾವಾಣಿ ವಾರ್ತೆ

ಬಂಗಾಳದ ಬ್ಯಾಟರ್ ಮನೋಜ್ ತಿವಾರಿ –ಪ್ರಜಾವಾಣಿ ಸಂಗ್ರಹ ಚಿತ್ರ

ಬೆಂಗಳೂರು: ಕ್ರೀಡಾ ಸಚಿವ ಮನೋಜ್ ತಿವಾರಿ ಮತ್ತು ಶಾಬಾಜ್ ಅಹಮದ್ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಬಂಗಾಳ ತಂಡಕ್ಕೆ ಆಸರೆಯಾದರು.

ನಗರದ ಹೊರವಲಯದಲ್ಲಿರುವ ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಬುಧವಾರ ಮಧ್ಯಪ್ರದೇಶ ತಂಡವು ಮೊದಲ ಇನಿಂಗ್ಸ್‌ನಲ್ಲಿ 105.3 ಓವರ್‌ಗಳಲ್ಲಿ 341 ರನ್ ಗಳಿಸಿ ಆಲೌಟ್ ಆಯಿತು. ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಬಂಗಾಳ ತಂಡವು ದಿನದಾಟದ ಮುಕ್ತಾಯಕ್ಕೆ 66 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 197 ರನ್ ಗಳಿಸಿತು.

ಇನಿಂಗ್ಸ್ ಆರಂಭಿಸಿದ ಬಂಗಾಳಕ್ಕೆ ಮಧ್ಯಪ್ರದೇಶದ ಬೌಲರ್‌ಗಳಾದ ಕುಮಾರ್ ಕಾರ್ತಿಕೇಯ (43ಕ್ಕೆ2) ಮತ್ತು ಪುನೀತ್ ದಾತೆ (34ಕ್ಕೆ2) ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಇದರಿಂದಾಗಿ ತಂಡವು 54 ರನ್‌ಗಳಿಗೆ ಐದು ವಿಕೆಟ್‌ಗಳನ್ನು ಕಳೆದುಕೊಂಡಿತು. ಈ ಹಂತದಲ್ಲಿ ಜೊತೆಗೂಡಿದ ಮನೋಜ್ (ಬ್ಯಾಟಿಂಗ್ 84; 182ಎ, 4X9) ಮತ್ತು ಶಾಬಾಜ್ (ಬ್ಯಾಟಿಂಗ್ 72; 149ಎ, 4X9) ಕುಸಿತಕ್ಕೆ ತಡೆಯೊಡ್ಡಿದರು. ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 143 ರನ್ ಗಳಿಸಿ ಕ್ರೀಸ್‌ನಲ್ಲಿದ್ದಾರೆ.

ಬಂಗಾಳ ರಾಜ್ಯ ಸರ್ಕಾರದಲ್ಲಿ ಕ್ರೀಡಾ ಸಚಿವರಾಗಿರುವ ಮನೋಜ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಶತಕ ಗಳಿಸಿದ್ದರು. ಈ ಹಿಂದೆ ಭಾರತ ತಂಡದಲ್ಲಿ ಆಡಿರುವ ಅನುಭವಿಯೂ ಆಗಿರುವ 36 ವರ್ಷದ ಮನೋಜ್ ಎದುರಾಳಿ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡಿದರು. ಅಗ್ರಕ್ರಮಾಂಕದ ಬ್ಯಾಟರ್‌ಗಳೆಲ್ಲರೂ ಪೆವಿಲಿಯನ್ ಸೇರಿದ ಸಂದರ್ಭದಲ್ಲಿಯೂ ದಿಟ್ಟತನದಿಂದ ಆಡಿದರು.

ತಮೊರೆ ಶತಕ: ಹಾರ್ದಿಕ್ ತಮೊರೆ ಶತಕದ ಬಲದಿಂದ ಮುಂಬೈ ತಂಡ, ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ಉತ್ತರ ಪ್ರದೇಶ ವಿರುದ್ಧ ನಡೆಯುತ್ತಿರುವ ಇನ್ನೊಂದು ಸೆಮಿಫೈನಲ್‌ನಲ್ಲಿ ದೊಡ್ಡ ಮೊತ್ತ ಪೇರಿಸಿದೆ.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ: ಮೊದಲ ಇನಿಂಗ್ಸ್: 105.3 ಓವರ್‌ಗಳಲ್ಲಿ 341 (ಹಿಮಾಂಶು ಮಂತ್ರಿ 165, ಪುನೀತ್ ದಾತೆ 33, ಮುಖೇಶ್ ಕುಮಾರ್ 66ಕ್ಕೆ4, ಆಕಾಶದೀಪ್ 73ಕ್ಕೆ2, ಶಾಬಾಜ್ ಅಹಮದ್ 86ಕ್ಕೆ3) ಬಂಗಾಳ: 66 ಓವರ್‌ಗಳಲ್ಲಿ 5ಕ್ಕೆ197 (ಅಭಿಮನ್ಯು ಈಶ್ವರನ್ 22, ಮನೋಜ್ ತಿವಾರಿ ಬ್ಯಾಟಿಂಗ್ 84, ಶಾಬಾಜ್ ಅಹಮದ್ ಬ್ಯಾಟಿಂಗ್ 72, ಕುಮಾರ್ ಕಾರ್ತಿಕೇಯ 43ಕ್ಕೆ2, ದಾತೆ 34ಕ್ಕೆ2)

ಜಸ್ಟ್ ಕ್ರಿಕೆಟ್ ಮೈದಾನ: ಮೊದಲ ಇನಿಂಗ್ಸ್: ಮುಂಬೈ: 140.4 ಓವರ್‌ಗಳಲ್ಲಿ 393 (ಹಾರ್ದಿಕ್ ತಮೊರೆ 115, ಶಮ್ಸ್ ಮುಲಾನಿ 50, ತನುಷ್ ಕೋಟ್ಯಾನ್ 22, ಯಶ್ ದಯಾಳ್ 51ಕ್ಕೆ2, ಸೌರಭ್ ಕುಮಾರ್ 107ಕ್ಕೆ3, ಕರಣ್ ಶರ್ಮಾ 46ಕ್ಕೆ4) ಉತ್ತರಪ್ರದೇಶ: 12 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 25 (ಕೌಶಿಕ್ ಬ್ಯಾಟಿಂಗ್ 11, ಕರಣ್ ಬ್ಯಾಟಿಂಗ್ 10, ಧವಳ್ ಕುಲಕರ್ಣಿ 14ಕ್ಕೆ1, ತುಷಾರ್ ದೇಶಪಾಂಡೆ 10ಕ್ಕೆ1)

ಸಂಕ್ಷಿಪ್ತ ಸುದ್ದಿ

ಅಂಪೈರ್ ಸಂಸ್ಥೆಗೆ ಪ್ರಧಾನಕುಮಾರ್ ಅಧ್ಯಕ್ಷ

ಬೆಂಗಳೂರು: ಆರ್‌.ವಿ. ಪ್ರಧಾನಕುಮಾರ್ ಅರಸ್ ಅವರನ್ನು ಕರ್ನಾಟಕ ಕ್ರಿಕೆಟ್ ಅಂಪೈರ್‌ಗಳ ಸಂಸ್ಥೆಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಈಚೆಗೆ ನಡೆದ ಸಂಘದ ಸರ್ವಸದಸ್ಯರ ಸಭೆಯಲ್ಲಿ ಪದಾಧಿಕಾರಿಗಳು ಮತ್ತು ಆಡಳಿತ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಈ ಕುರಿತು ಕಾರ್ಯದರ್ಶಿ ಎನ್‌. ಆರ್‌.ಎಸ್‌. ಪ್ರಭು ಪ್ರಕಟಣೆ ನೀಡಿದ್ದಾರೆ.

ಪದಾಧಿಕಾರಿಗಳು: ಆರ್‌. ವಿ ಪ್ರಧಾನಕುಮಾರ್ ಅರಸ್ (ಅಧ್ಯಕ್ಷ), ಬಿ.ಎಸ್‌. ರಘೋತ್ತಮ (ಉಪಾಧ್ಯಕ್ಷ), ಎನ್‌.ಆರ್‌.ಎಸ್‌. ಪ್ರಭು (ಕಾರ್ಯದರ್ಶಿ), ಎ. ಆನಂದ್ (ಜಂಟಿ ಕಾರ್ಯದರ್ಶಿ), ಕೆ. ಮುರುಗಸುಂದರಂ (ಖಜಾಂಚಿ), ವಿವೇಕಾನಂದ ಕಿಣಿ (ನಿಕಟಪೂರ್ವ ಅಧ್ಯಕ್ಷ)

ಸದಸ್ಯರು: ಜೆ. ನಾಗರಾಜ್, ಜೆ. ರಾಹುಲ್ ರಾಜ್, ಎಂ.ಆರ್‌. ರವೀಂದ್ರನಾಥ್, ಎಂ.ಆರ್‌. ಯೋಗಾನರಸಿಂಹ

ಸೋನಿ ಟಿವಿಯಲ್ಲಿ ಆರ್ಕಿಟೆಕ್ಟ್ಸ್ ಇನ್ ವೈಟ್ಸ್

ಬೆಂಗಳೂರು: ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಜಯದ ಸಾಧನೆಯ ‘ಆರ್ಕಿಟೆಕ್ಟ್ಸ್ ಇನ್ ವೈಟ್ಸ್ –ಇಂಡಿಯಾ ಕ್ರಿಕೆಟ್ ಇನ್ ಇಂಗ್ಲೆಂಡ್’ ಸರಣಿಯನ್ನು ಗುರುವಾರದಿಂದ ನಾಲ್ಕು ದಿನಗಳವರೆಗೆ ಸೋನಿ ಟಿವಿ ಪ್ರಸಾರ ಮಾಡಲಿದೆ. ಸೋನಿ ಟೆನ್ 1 (ಇಂಗ್ಲಿಷ್), ಸೋನಿ ಟೆನ್ 3 (ಹಿಂದಿ) ಮತ್ತು ಸೋನಿ ಟೆನ್ 4 (ತಮಿಳು ಮತ್ತು ತೆಲುಗು) ವಾಹಿನಿಗಳ ಮತ್ತು ಸೋನಿ ಲಿವ್ ಒಟಿಟಿಯಲ್ಲಿ ಪ್ರಸಾರವಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಥ್ರೋಬಾಲ್: ಶ್ರೀರೇಖಾ, ರೇವಂತ್ ನೇತೃತ್ವ

ಬೆಂಗಳೂರು: ಶ್ರೀರೇಖಾ ಮತ್ತು ಎಂ. ರೇವಂತ್ ಅವರನ್ನು ಕ್ರಮವಾಗಿ ಆಂಧ್ರಪ್ರದೇಶದ ತೆನಾಲಿಯಲ್ಲಿ ಇದೇ 17ರಿಂದ 19ರವರೆಗೆ ನಡೆಯಲಿರುವ 30ನೇ ರಾಷ್ಟ್ರೀಯ ಜೂನಿಯರ್ ಥ್ರೋಬಾಲ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ಬಾಲಕಿ ಮತ್ತು ಬಾಲಕರ ತಂಡಗಳ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

ಮಂಗಳವಾರ ಸೇಂಟ್ ಜೋಸೆಫ್ ವಾಣಿಜ್ಯ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಾಚಾರ್ಯ, ಫಾದರ್ ಚಾರ್ಲ್ಸ್ ಎಲ್ಲ ಆಟಗಾರರಿಗೂ ಪೋಷಾಕುಗಳ ಕಿಟ್ ವಿತರಿಸಿದರು ಎಂದು ಕರ್ನಾಟಕ ರಾಜ್ಯ ಅಮೇಚೂರ್ ಥ್ರೋಬಾಲ್ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತಂಡಗಳು: ಬಾಲಕಿಯರು: ಶ್ರೀರೇಖಾ (ನಾಯಕಿ), ಪ್ರಿಯದರ್ಶಿನಿ, ಸಾಮ್ಯಾ ಜೈನ್, ತನುಜಾ, ತನಿಷ್ಕಾ, ನಿವೇದಿತಾ, ಮನೀಷಾ ಸುತಾರ್, ಎಸ್‌. ಛವಿ, ಗಾನವಿ, ಶ್ರೇಯಾ ಶೆಟ್ಟಿ, ಆರ್‌. ಚೈತನ್ಯ, ಎಚ್‌.ಎಸ್‌. ಸುಷ್ಮಾ, ಶ್ರಾವಣಿ, ವರ್ಷಿಣಿ

ಕೋಚ್: ಆರ್‌. ನಿತಿನ್ ಕುಮಾರ್, ಮ್ಯಾನೇಜರ್: ಪದ್ಮಿನಿ

ಬಾಲಕರು: ಎಂ. ರೇವಂತ್ (ನಾಯಕ), ಬಿ. ಪವನ್, ಎಸ್‌. ಮೌರ್ಯೇಶ್, ಎಚ್‌.ಎಸ್‌. ಮಂಜು, ಎಸ್‌. ಸಂತೋಷ್, ಎಂ. ಬಿಜಿನಿ, ಆರ್‌. ದರ್ಶನ್, ಪಿ. ಚೇತನ್, ಎಂ. ಪ್ರೀತಂ, ಎಂ. ಚೇತನ್, ಡಿ. ಚಂದನ್, ಎಸ್‌. ಸಂಜಯ್‌ಕಾಂತ್, ಎಚ್‌. ಮಹೇಂದ್ರ, ಜಿ. ಶಶಾಂಕ್

ಕೋಚ್: ಎಸ್‌. ನಾಗರಾಜ್, ಮ್ಯಾನೇಜರ್: ಅಜಯ್.

ಫಿನ್ಲೆಂಡ್‌ನಲ್ಲಿ ನಡೆದ ಕೂಟದಲ್ಲಿ 89.30 ಮೀ. ಸಾಧನೆ

ದಾಖಲೆ ಉತ್ತಮಪಡಿಸಿದ ನೀರಜ್


ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಒಲಿಂಪಿಕ್ ಚಿನ್ನದ ಪದಕ ವಿಜೇತ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ, ತಮ್ಮದೇ ಹೆಸರಿನಲ್ಲಿರುವ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ಫಿನ್ಲೆಂಡ್‌ನಲ್ಲಿ ನಡೆಯುತ್ತಿರುವ ಪಾವೊ ನೂರ್ಮಿ ಅಥ್ಲೆಟಿಕ್ ಕೂಟದಲ್ಲಿ ಅವರು ಮಂಗಳವಾರ 89.03 ಮೀ. ಸಾಧನೆಯೊಂದಿಗೆ ಎರಡನೇ ಸ್ಥಾನ ಗಳಿಸಿದರು.

ಸುಮಾರು 10 ತಿಂಗಳ ಬಿಡುವಿನ ಬಳಿಕ ಮೊದಲ ಸ್ಪರ್ಧೆಯಲ್ಲಿ ಪಾಲ್ಗೊಂಡ ಚೋಪ್ರಾ ಅಸಾಮಾನ್ಯ ಪ್ರದರ್ಶನ ನೀಡಿದರು. 90 ಮೀ. ಸಾಧನೆಯನ್ನು ಅಲ್ಪ ಅವಕಾಶದಲ್ಲಿ ಕಳೆದುಕೊಂಡರು.

ಅವರ ಈ ಹಿಂದಿನ ರಾಷ್ಟ್ರೀಯ ದಾಖಲೆ ಕಳೆದ ವರ್ಷ ಮಾರ್ಚ್‌ನಲ್ಲಿ ಪಟಿಯಾಲದಲ್ಲಿ ನಡೆದಿದ್ದ ಕೂಟದಲ್ಲಿ (88.07 ಮೀ.) ಮೂಡಿಬಂದಿತ್ತು. ಕಳೆದ ಆಗಸ್ಟ್‌ನಲ್ಲಿ ಟೋಕಿಯೊದಲ್ಲಿ ನಡೆದಿದ್ದ ಒಲಿಂಪಿಕ್ಸ್‌ನಲ್ಲಿ ಅವರು 87.58 ಮೀ. ಸಾಧನೆಯೊಂದಿಗೆ ಚಿನ್ನ ಜಯಿಸಿದ್ದರು.

ಚೋಪ್ರಾ ಮೊದಲ ಪ್ರಯತ್ನದಲ್ಲಿ 86.92 ಮೀ. ಸಾಧನೆ ಮಾಡಿದರು. ಎರಡನೇ ಪ್ರಯತ್ನದಲ್ಲಿ ದಾಖಲೆಯನ್ನು ಮುರಿದರು. ಬಳಿಕದ ಮೂರು ಅವಕಾಶಗಳು ಫೌಲ್ ಆದವು. ಆರನೇ ಹಾಗೂ ಅಂತಿಮ ಪ್ರಯತ್ನದಲ್ಲಿ 85.85 ಮೀ. ದೂರ ಎಸೆದರು.

ಫಿನ್ಲೆಂಡ್‌ನ ಅಲಿವರ್ ಹೆಲೆಂಡರ್ (89.83) ಚಿನ್ನ ಗೆದ್ದರೆ, ಗ್ರೆನಾಡದ ಆ್ಯಂಡರ್ಸನ್ ಪೀಟರ್ಸ್ (86.60) ಕಂಚು ಜಯಿಸಿದರು. ಆ್ಯಂಡರ್‌ಸನ್ ಅವರು ಕಳೆದ ತಿಂಗಳು ನಡೆದಿದ್ದ ದೋಹಾ ಡೈಮಂಡ್ ಲೀಗ್‌ನಲ್ಲಿ 93.07 ಮೀ. ಸಾಧನೆಯೊಂದಿಗೆ ಚಿನ್ನ ಜಯಿಸಿದ್ದರು.

’ಈ ಋತುವಿನ ಮೊದಲ ಸ್ಪರ್ಧೆಯಲ್ಲೇ ಉತ್ತಮ ಪ್ರದರ್ಶನ ನೀಡಲು ಸಾಧ್ಯವಾಗಿರುವುದು ಸಂತಸ ಉಂಟುಮಾಡಿದೆ. ಈ ಸಾಧನೆ ನನ್ನ ಆತ್ಮವಿಶ್ವಾಸ ಹೆಚ್ಚಿಸಿದೆ‘ ಎಂದು ನೀರಜ್ ಪ್ರತಿಕ್ರಿಯಿಸಿದ್ದಾರೆ.

ಐಸಿಸಿ ರ‍್ಯಾಂಕಿಂಗ್: ಏಳನೇ ಸ್ಥಾನಕ್ಕೇರಿದ ಇಶಾನ್

ಇಶಾನ್ ಕಿಶನ್

ದುಬೈ (ಪಿಟಿಐ): ಭಾರತದ ಆರಂಭಿಕ ಆಟಗಾರ ಇಶಾನ್ ಕಿಶನ್ ಅವರು ಐಸಿಸಿ ಟಿ20 ಕ್ರಿಕೆಟ್ ಬ್ಯಾಟರ್‌ಗಳ ರ‍್ಯಾಂಕಿಂಗ್ ಪಟ್ಟಿಯಲ್ಲಿ 68 ಸ್ಥಾನಗಳಷ್ಟು ಮೇಲಕ್ಕೇರಿ, ಏಳನೇ ಸ್ಥಾನ ಗಳಿಸಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ ನಡೆಯುತ್ತಿರುವ ಟಿ20 ಸರಣಿಯಲ್ಲಿ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿರುವ ಇಶಾನ್, ಮೂರು ಪಂದ್ಯಗಳಿಂದ 164 ರನ್ ಕಲೆಹಾಕಿದ್ದಾರೆ. ಇದರಿಂದ ರ‍್ಯಾಂಕಿಂಗ್ ಪಟ್ಟಿಯಲ್ಲಿ ಅಗ್ರ 10 ರಲ್ಲಿ ಕಾಣಿಸಿಕೊಂಡಿದ್ದಾರೆ.

ಭಾರತದ ಬೇರೆ ಯಾವುದೇ ಬ್ಯಾಟರ್‌ಗಳು ’ಟಾಪ್–10‘ ಸ್ಥಾನದಲ್ಲಿಲ್ಲ. ಕೆ.ಎಲ್‌.ರಾಹುಲ್ 14, ರೋಹಿತ್ ಶರ್ಮ 16, ಶ್ರೇಯಸ್ ಅಯ್ಯರ್ 17 ಹಾಗೂ ವಿರಾಟ್ ಕೊಹ್ಲಿ 21ನೇ ಸ್ಥಾನದಲ್ಲಿದ್ದಾರೆ.

ಭಾರತದ ಬೌಲರ್‌ಗಳಾದ ಭುವನೇಶ್ವರ್ ಕುಮಾರ್ ಮತ್ತು ಯಜುವೇಂದ್ರ ಚಾಹಲ್ ಅವರೂ ಅಲ್ಪ ಸ್ಥಾನ ಮೇಲಕ್ಕೇರಿದ್ದಾರೆ. ಏಳು ಕ್ರಮಾಂಕ ಮೇಲಕ್ಕೇರಿರುವ ಭುವನೇಶ್ವರ್, 11ನೇ ಸ್ಥಾನದಲ್ಲಿದ್ದಾರೆ. ಚಾಹಲ್ 26ನೇ ಸ್ಥಾನ ಹೊಂದಿದ್ದಾರೆ.

ಟೆಸ್ಟ್ ಕ್ರಿಕೆಟ್ ರ‍್ಯಾಂಕಿಂಗ್‌ನ ಬೌಲರ್‌ಗಳ ಪಟ್ಟಿಯಲ್ಲಿ ಭಾರತದ ಆರ್‌.ಅಶ್ವಿನ್ ಎರಡನೇ ಹಾಗೂ ಜಸ್‌ಪ್ರೀತ್ ಬೂಮ್ರಾ ಮೂರನೇ ಸ್ಥಾನ ಹೊಂದಿದ್ದಾರೆ.

ಬ್ಯಾಟಿಂಗ್‌ನಲ್ಲಿ ರೋಹಿತ್ ಮತ್ತು ಕೊಹ್ಲಿ ಕ್ರಮವಾಗಿ ಏಳು ಹಾಗೂ 10ನೇ ಸ್ಥಾನ ಉಳಿಸಿಕೊಂಡಿದ್ದಾರೆ.

ಐರ್ಲೆಂಡ್ ಚುಟುಕು ಸರಣಿಗೆ ಭಾರತ ತಂಡ

ಹಾರ್ದಿಕ್ ಪಾಂಡ್ಯಗೆ ನಾಯಕ ಪಟ್ಟ

ಹಾರ್ದಿಕ್ ಪಾಂಡ್ಯ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಹದಿನೈದನೇ ಆವೃತ್ತಿಯ ವಿಜೇತ ಗುಜರಾತ್ ಟೈಟನ್ಸ್ ತಂಡದ ನಾಯಕತ್ವ ವಹಿಸಿದ್ದ ಹಾರ್ದಿಕ್ ಪಾಂಡ್ಯ ಅವರಿಗೆ ಈಗ ಭಾರತ ಟಿ20 ತಂಡದ ನಾಯಕಪಟ್ಟವೂ ಒಲಿದಿದೆ.

ಇದೇ 26 ಮತ್ತು 28ರಂದು ಡಬ್ಲಿನ್‌ನಲ್ಲಿ ಐರ್ಲೆಂಡ್ ಎದುರು ನಡೆಯಲಿರುವ ಟಿ20 ಪಂದ್ಯಗಳಲ್ಲಿ ಆಡುವ ಭಾರತ ತಂಡವನ್ನು ಪಾಂಡ್ಯ ಮುನ್ನಡೆಸುವರು. ಈ ಸರಣಿಗೆ ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಅವರನ್ನು ಉಪನಾಯಕರನ್ನಾಗಿ ನೇಮಕ ಮಾಡಲಾಗಿದೆ. ಸದ್ಯ ದಕ್ಷಿಣ ಆಫ್ರಿಕಾ ವಿರುದ್ಧದ ಟಿ20 ಸರಣಿಯಲ್ಲಿ ನಾಯಕತ್ವ ವಹಿಸಿರುವ ರಿಷಭ್ ಪಂತ್ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಕೇರಳದ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಮತ್ತೆ ರಾಷ್ಟ್ರೀಯ ತಂಡಕ್ಕೆ ಮರಳಿದ್ದಾರೆ. ಮಹಾರಾಷ್ಟ್ರದ ಬಲಗೈ ಬ್ಯಾಟರ್ ರಾಹುಲ್ ತ್ರಿಪಾಠಿಗೆ ಮೊದಲ ಸಲ ಭಾರತ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಬಿಸಿಸಿಐ ಬುಧವಾರ ಪ್ರಕಟಿಸಿರುವ ತಂಡ ಇಂತಿದೆ; ಹಾರ್ದಿಕ್ ಪಾಂಡ್ಯ (ನಾಯಕ), ಭುವನೇಶ್ವರ್ ಕುಮಾರ್ (ಉಪ ನಾಯಕ), ಋತುರಾಜ್ ಗಾಯಕವಾಡ್, ಸಂಜು ಸ್ಯಾಮ್ಸನ್, ಸೂರ್ಯಕುಮಾರ್ ಯಾದವ್, ವೆಂಕಟೇಶ್ ಅಯ್ಯರ್, ದೀಪಕ್ ಹೂಡಾ, ರಾಹುಲ್ ತ್ರಿಪಾಠಿ, ದಿನೇಶ್ ಕಾರ್ತಿಕ್ (ವಿಕೆಟ್ ಕೀಪರ್), ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಆರ್‌. ಬಿಷ್ಣೋಯಿ, ಹರ್ಷಲ್ ಪಟೇಲ್, ಆವೇಶ್ ಖಾನ್, ಅರ್ಷದೀಪ್ ಸಿಂಗ್, ಉಮ್ರಾನ್ ಮಲಿಕ್.

ಮಹಿಳಾ ಕೋಚ್ ಕಡ್ಡಾಯ: ಸಾಯ್

ನವದೆಹಲಿ (ಪಿಟಿಐ): ದೇಶದ ವಿವಿಧ ಭಾಗಗಳಿಗೆ ಅಥವಾ ವಿದೇಶ ಪ್ರವಾಸಕ್ಕೆ ತೆರಳುವ ಕ್ರೀಡಾ ತಂಡದಲ್ಲಿ ಮಹಿಳಾ ಸ್ಪರ್ಧಿಗಳಿದ್ದರೆ, ಆ ತಂಡದ ಜತೆ ಮಹಿಳಾ ಕೋಚ್‌ವೊಬ್ಬರು ಕಡ್ಡಾಯವಾಗಿ ಇರಬೇಕು ಎಂದು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ), ವಿವಿಧ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ಸೂಚಿಸಿದೆ.

ಮಹಿಳಾ ಸೈಕ್ಲಿಸ್ಟ್ ಮತ್ತು ಸೇಲಿಂಗ್ ಸ್ಪರ್ಧಿಯೊಬ್ಬರು ತಮ್ಮ ಕೋಚ್‌ಗಳ ವಿರುದ್ಧ ಲೈಂಗಿಕ ಕಿರುಕುಳ ಆರೋಪ ಮಾಡಿರುವ ಬೆನ್ನಲ್ಲೇ, ಸಾಯ್ ಈ ತೀರ್ಮಾನ ತೆಗೆದುಕೊಂಡಿದೆ.

ಸಾಯ್ ಪ್ರಧಾನ ನಿರ್ದೇಶಕ ಸಂದೀಪ್ ಪ್ರಧಾನ್, 15ಕ್ಕೂ ಅಧಿಕ ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಅಧಿಕಾರಿಗಳ ಜತೆ ಈ ಸಂಬಂಧ ಸೋಮವಾರ ಸಭೆ ನಡೆಸಿದ್ದಾರೆ. ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ತಂಡವನ್ನು ಕಳುಹಿಸುವಾಗ ಹೊಸ ನಿಯಮ ಪಾಲಿಸಬೇಕು ಎಂಬ ಸೂಚನೆ ನೀಡಿದ್ದಾರೆ.

‘ದೇಶ ಮತ್ತು ವಿದೇಶ ಪ್ರವಾಸಕ್ಕೆ ತೆರಳುವ ತಂಡದಲ್ಲಿ ಮಹಿಳಾ ಸ್ಪರ್ಧಿಗಳಿದ್ದರೆ, ಮಹಿಳಾ ಕೋಚ್ ಕೂಡಾ ಕಡ್ಡಾಯವಾಗಿ ತೆರಳಬೇಕು‘ ಎಂದು ಸಾಯ್ ಹೊರಡಿಸಿದ ಪ್ರಕಟಣೆ ತಿಳಿಸಿದೆ.

ಇಂಗ್ಲೆಂಡ್ ಸರಣಿ: ರಾಹುಲ್ ಇಲ್ಲ?

ನವದೆಹಲಿ (ಪಿಟಿಐ): ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಕೆ.ಎಲ್‌. ರಾಹುಲ್ ಮುಂಬರುವ ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಆಡುವ ಅವಕಾಶವನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.

ದಕ್ಷಿಣ ಆಫ್ರಿಕಾ ಎದುರು ನಡೆಯುತ್ತಿರುವ ಟಿ20 ಸರಣಿಯಲ್ಲಿ ಅವರು ಭಾರತ ತಂಡವನ್ನು ಮುನ್ನಡೆಸಬೇಕಿತ್ತು. ಆದರೆ ಸರಣಿಯ ಮೊದಲ ಪಂದ್ಯಕ್ಕೂ ಮುನ್ನವೇ ತೊಡೆಸ್ನಾಯುವಿನ ಗಾಯದಿಂದ ಬಳಲಿದ್ದರು.

‘ರಾಹುಲ್ ಅವರು ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲ. ಇಂಗ್ಲೆಂಡ್‌ನಲ್ಲಿ ನಡೆಯುವ ಟೆಸ್ಟ್ ಸರಣಿಯಲ್ಲಿ ಆಡುವ ತಂಡವು ಮುಂಬೈನಿಂದ ಗುರುವಾರ ಬೆಳಗಿನ ಜಾವ ಲಂಡನ್‌ಗೆ ಪ್ರಯಾಣಿಸಲಿದೆ. ಈ ಬಳಗದೊಂದಿಗೆ ರಾಹುಲ್ ತೆರಳುತ್ತಿಲ್ಲ. ಅವರು ಇನ್ನಷ್ಟು ಕಾಲ ಇಲ್ಲಿ ಆರೈಕೆ ಪಡೆಯುವರು. ವಾರಾಂತ್ಯದಲ್ಲಿ ಫಿಟ್‌ನೆಸ್ ಪರೀಕ್ಷೆಗೊಳಪಟ್ಟ ನಂತರವಷ್ಟೇ ಅವರು ತೆರಳುವ ಕುರಿತು ನಿರ್ಧಾರವಾಗಲಿದೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ವೆಹಿಕಲ್ಸ್ ಎಫ್‌ಸಿ ಜಯಭೇರಿ

ಬೆಂಗಳೂರು: ಸೊಗಸಾದ ಆಟವಾಡಿದ ವೆಹಿಕಲ್ಸ್ ಎಫ್‌ಸಿ ತಂಡದವರು ಬಿ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಜಯ ಸಾಧಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ರೋಚಕ ಪೈಪೋಟಿ ಕಂಡುಬಂದ ಪಂದ್ಯದಲ್ಲಿ ವೆಹಿಕಲ್ಸ್ ಎಫ್‌ಸಿ 3–2 ಗೋಲುಗಳಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ತಂಡವನ್ನು ಮಣಿಸಿತು.

ಎರಡು ಗೋಲುಗಳನ್ನು ತಂದಿತ್ತ ಆರ್‌.ಸತೀಶ್ (15 ಮತ್ತು 58ನೇ ನಿ.) ಅವರು ವೆಹಿಕಲ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಇನ್ನೊಂದು ಗೋಲನ್ನು ಮುರಳಿ (22) ಗಳಿಸಿದರು.

ಎರಡನೇ ಅವಧಿಯಲ್ಲಿ ಮರುಹೋರಾಟ ನಡೆಸಿದ ಮೊಹಮ್ಮಡನ್ ಸ್ಪೋರ್ಟಿಂಗ್ ಪರ ಶೆಲ್ಡನ್ (66) ಮತ್ತು ಗೌತಮ್ (70+1) ಅವರು ಚೆಂಡನ್ನು ಗುರಿ ಸೇರಿಸಿದರು.

ಶುಕ್ರವಾರ ನಡೆಯುವ ಪಂದ್ಯದಲ್ಲಿ ಆರ್‌.ಎಸ್‌.ಸ್ಪೋರ್ಟ್ಸ್ ಮತ್ತು ವೆಹಿಕಲ್ಸ್ ಎಫ್‌ಸಿ ಪೈಪೋಟಿ ನಡೆಸಲಿವೆ.

ಎಐಎಫ್‌ಎಫ್ ಗೊಂದಲ: ಟೀಕೆ

ಕೋಲ್ಕತ್ತ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ಆಡಳಿತದಲ್ಲಿ ಗೊಂದಲ ಮುಂದುವರಿದಿರುವುದಕ್ಕೆ ರಾಷ್ಟ್ರೀಯ ಫುಟ್‌ಬಾಲ್ ತಂಡದ ಮುಖ್ಯ ಕೋಚ್ ಇಗರ್ ಸ್ಟಿಮ್ಯಾಕ್ ಅಸಮಾಧಾನ ಹೊರಹಾಕಿದ್ದಾರೆ.

ಭಾರತ ತಂಡ ಏಷ್ಯಾ ಕಪ್‌ಗೆ ಅರ್ಹತೆ ಪಡೆದ ಮರುದಿನವೇ ಈ ಬೆಳವಣಿಗೆ ನಡೆದಿದೆ. ಎಐಎಫ್‌ಎಫ್ ಆಡಳಿತ ನೋಡಿಕೊಳ್ಳಲು ಸುಪ್ರೀಂ ಕೋರ್ಟ್ ಇತ್ತೀಚೆಗೆ ಆಡಳಿತ ಸಮಿತಿಯನ್ನು ನೇಮಿಸಿತ್ತು.

‘ಪ್ರಮುಖ ಟೂರ್ನಿಯ ವೇಳೆ ಈ ಬದಲಾವಣೆ ಅವಶ್ಯಕತೆಯಿತ್ತೇ? ತಪ್ಪು ಯಾರದ್ದು, ಸರಿ ಯಾರದ್ದು ಎಂಬುದನ್ನು ಹೇಳುತ್ತಿಲ್ಲ. ಅದು ನನ್ನ ಕೆಲಸವೂ ಅಲ್ಲ. ಆದರೆ ಇಂತಹ ಬದಲಾವಣೆ ಮಾಡುವಾಗ ಅದು ಆಟಗಾರರ ಮೇಲೆ ಬೀರುವ ಪರಿಣಾಮದ ಬಗ್ಗೆಯೂ ಯೋಚನೆ ಮಾಡಬೇಕು‘ ಎಂದು ಸ್ಟಿಮ್ಯಾಕ್ ಹೇಳಿದ್ದಾರೆ.